# ಅಧ್ಯಾಯ–೧

## ಪ್ರಾಸ್ತಾವಿಕ

**ಹ**ರಪನಹಳ್ಳಿ ತಾಲ್ಲೂಕು, ಕರ್ನಾಟಕ ರಾಜ್ಯದ ಕೇಂದ್ರ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದು. ಇದು ಮೊದಲು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಪ್ರದೇಶವಾಗಿದ್ದಿತು. ೧೫–೮–೧೯೯೭ ರಂದು ಹೊಸದಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಂಡಿತು. ಸರ್ಕಾರವು ೨೦೧೮ ರಲ್ಲಿ ಹರಪನಹಳ್ಳಿ ತಾಲೂಕನ್ನು ಪುನ: ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಿದೆ. ಶಾತವಾಹನರ ಕಾಲದಿಂದ ವಿಜಯನಗರದ ರಾಯರ ಕಾಲದವರೆಗೂ ಅಸ್ತಿತ್ವದಲ್ಲಿದ್ದ ಕೋಗಳಿ ೫೦೦ ರಲ್ಲಿ ಇದ್ದಿತೆಂದು ಹೇಳುವರು. ಆದರೆ ಶಾತವಾಹನರ ಶಾಸನಗಳು ಹರಪನಹಳ್ಳಿ ತಾಲ್ಲೂಕಿನಲ್ಲಿ ಈವರೆಗೂ ದೊರೆತಿಲ್ಲ. ರಾಷ್ಟ್ರಕೂಟರ ಶಾಸನಗಳು ದೊರಕುತ್ತವೆ. ನೊಳಂಬವಾಡಿ ೩೨ ಸಾವಿರ ರಾಜ್ಯದ ಶಾಸನಗಳಲ್ಲಿ ಹೆಚ್ಚಾಗಿ ಕೋಗಳಿ ನಾಡಿನ ಪ್ರಸ್ತಾಪವಿದೆ.

### ಹರಪನಹಳ್ಳಿ ಹೆಸರಿನ ಮೂಲ

ಬಾಗಳಿಯ ಒಂದು ಶಾಸನವು ರಾಷ್ಟ್ರಕೂಟರ ಇಂದ್ರವಲ್ಲಭನ ಕಾಲದ್ದು. ಇವನ ಕಾಲದಲ್ಲಿ ಬಾಗಳಿ ಕೋಗಳಿ ೫೦೦ ರಲ್ಲಿ ಇತ್ತು. ಇಂದ್ರವಲ್ಲಭವನ ಸಾಮಂತ ರೊಟ್ಟ ಎಂಬುವನು ಕ್ರಿ.ಶ. ೯೪೪–೪೫ ರಲ್ಲಿ ಮಾಸಿವಾಡಿ ನೂರಾನಲ್ವತ್ತನ್ನು ಕೋಗಳಿ ೫೦೦ ನ್ನು ಆಳುತ್ತಿದ್ದನು. ಕೋಗಳಿ ೫೦೦ ಎಂಬುದು ಈಗಿನ ಪೂರ್ಣ ಹಡಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಮತ್ತು ಕೂಡ್ಲಿಗಿ ತಾಲ್ಲೂಕುಗಳ ಪಶ್ಚಿಮ ಭಾಗದ ಕೆಲವು ಹಳ್ಳಿಗಳನ್ನೊಳಗೊಂಡು ಹರಿಹರದವರೆಗೂ ವಿಸ್ತರಿಸಿತ್ತು.

ಈಗಿನ ಹರಪನಹಳ್ಳಿಯ ದಕ್ಷಿಣ ದಿಕ್ಕಿನಲ್ಲಿರುವ ಅರಸಿಕೆರೆಯನ್ನು ಕ್ರಿ.ಶ. ೧೦೨೪ ರಿಂದ ೧೦೩೭ ರವರೆಗೂ ಉದಯಾದಿತ್ಯನು ಬಳ್ಳಾರಿ ಜಿಲ್ಲೆಯ ಕಂಪಲಿಯಿಂದ ಆಳಿದನು. ಆಲೂರು ಶಾಸನದ ಪ್ರಕಾರ ಇರಿವನೊಳಂಬ–೧ ಅರ್ಥಾತ್ ಘಟೆಯಂಕಾರನು ಕಲ್ಯಾಣ ಚಾಲುಕ್ಯರ ಮಾಂಡಳಿಕನಾಗಿದ್ದನು. ೬ನೆಯ ವಿಕ್ರಮಾದಿತ್ಯನ ಕಿರಿಯ

ಸೋದರಿಯು ಆಗಿದ್ದ ಮಹಾದೇವಿಯನ್ನು ವಿವಾಹವಾಗಿದ್ದನು. ಅವನ ಮಗನೇ ಉದಯಾದಿತ್ಯದೇವ. ಮಹಾದೇವಿ ಹೆಸರಿನಿಂದ ಗ್ರಾಮ ಮತ್ತು ಕೆರೆಗಳು ನಿರ್ಮಾಣವಾಗಿರುತ್ತವೆ. ವಿಜಯನಗರ ಆಳಿದ್ದು ಹರಿಹರನಿರಬಹುದೆಂದು ಕೆಲವರು ಹೇಳಬಹುದು. ವಿಜಯನಗರ ಸ್ಥಾಪನೆಯಾಗಿದ್ದು ಕ್ರಿ.ಶ.೧೩೩೬ ರಲ್ಲಿ, ಆದ್ದರಿಂದ ಇದಕ್ಕೆ ಸಂಬಂಧವಿಲ್ಲ ಎನ್ನಬಹುದು.

ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿ ಹರಪನಹಳ್ಳಿ ಪಟ್ಟಣ ಪ್ರದೇಶದಲ್ಲಿ ಅರಣ್ಯ ಬೆಳೆದು ಗುಡ್ಡ ಕಣಿವೆಗಳಿಂದ ಆವೃತವಾಗಿದ್ದಿತು. ಕಲ್ಯಾಣ ಚಾಲುಕ್ಯರ ಆಡಳಿತದ ಆರಂಭದಲ್ಲಿ ಹರಪನಹಳ್ಳಿ ಅಸ್ತಿತ್ವದ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಹಿಂದಿನ ಕಾಲದಲ್ಲಿ ಜನರು ಕುದುರೆ, ಎತ್ತಿನಗಾಡಿ, ಕಾಲು ನಡಿಗೆಯಿಂದ ಪ್ರಯಾಣಿಸುತ್ತಿದ್ದರು. ಬಾಗಳಿಯಿಂದ ಅರಸಿಕೆರೆ, ಉಚ್ಚಂಗಿದುರ್ಗ, ಚಿಕ್ಕಿಗನೆಳ್ಳತ್ತರ್, ಚಿಗಟೇರಿ, ನೀರಗುಂದ ಕೋಟೆಗಳಿಗೆ ಸರಿಯಾದ ಮಾರ್ಗಗಳಿರಲಿಲ್ಲ. ಕಾಡಿನ ಮರಗಿಡಗಳ ಮಧ್ಯದಲ್ಲಿಯೇ ಪ್ರಯಾಣಿಸಬೇಕಿದ್ದಿತು. ಜನರು ಕಳ್ಳರಿಗೆ, ಕಾಡು ಪ್ರಾಣಿಗಳಿಗೆ ಹೆದರಿ ಗುಂಪು-ಗುಂಪಾಗಿ ದೊಣ್ಣೆ, ಖಡ್ಗಗಳನ್ನು ಹೊತ್ತು ಊರೂರಿಗೆ ಚಲಿಸುತ್ತಿದ್ದರೆಂದು ತಿಳಿದುಬರುತ್ತದೆ.

ಹರಪನಹಳ್ಳಿಯ ದಕ್ಷಿಣ ದಿಕ್ಕಿಗೆ ಸುಮಾರು ೧೪ ಕಿ.ಮೀ. ಅಂತರದಲ್ಲಿ ಅರಸಿಕೆರೆಯಿ ದ್ದರೆ, ಉತ್ತರ ದಿಕ್ಕಿನಲ್ಲಿ ೮.೫ ಕಿ.ಮೀ. ಅಂತರದಲ್ಲಿ ಬಾಗಳಿಯಿರುತ್ತದೆ. ಇವುಗಳ ಮಧ್ಯ ಇರುವುದೇ ಹರಪನಹಳ್ಳಿ ಪಟ್ಟಣ. ಒಂದು ಬಾರಿ ಮಸಲ್ವಾಡದ ಅರಸ ಬೊಪ್ಪಯ್ಯ ಹೊಳಲು ಕೋಟೆಯ ಮೇಲೆ ದಾಳಿ ಮಾಡಿ, ಅಲ್ಲಿರುವ ಬ್ರಾಹ್ಮಣರನ್ನು ಕೊಂದನು. ಆಗ ಹೊಳಲು ಕೋಟೆಯವರು ಚಕ್ರವರ್ತಿ ತ್ರಿಭುವನ ಮಲ್ಲನಿಗೆ ದೂರು ಕೊಟ್ಟರು ಆಗ ಚಾಲುಕ್ಯ ಅರಸ ಹಿರೇಕುರುವತ್ತಿಯ ಸುತ್ತಲ ಅರಸರನ್ನು ಕುರುವತ್ತಿಗೆ ಬರಲು ತಿಳಿಸಿದನು. ಆ ಸಭೆಗೆ ನೊಳಂಬವಾಡಿ ೩೨೦೦೦, ಅರಸರಾದ ಬೆನ್ನವುರು-೧೨, ನೀರುಗುಂದ, ಎರಡೂ ಹಡಂಗಿಲೆಗಳು, ಮಾಂಗೊಳ, ಬಿದಿರಹಳ್ಳಿ, ಹ.ಹನೂರು (ಈಗಿನ ಹಾವನೂರು) ಹೊಂನವತಿ, ಕುರುವತ್ತಿ, ಬಾಳ್ಗುಳಿಯ ಅರಸರು ಪಾಲ್ಗೊಂಡಿದ್ದರು. ಆದರೆ ಹರಪನಹಳ್ಳಿಯವರು ಬಂದಿರಲಿಲ್ಲ. ಇವರ ಸಮ್ಮುಖದಲ್ಲಿ ಮಸಲ್ವಾಡದ ಬೊಪ್ಪಯ್ಯನ ತಪ್ಪನ್ನು ಒಪ್ಪಿಸಿ, ಇನ್ನು ಮುಂದೆ ಹಾಗೆ ಮಾಡಕೂಡದೆಂದು ಹೇಳಿ ಶಾಸನ ಬರೆದು ಅದನ್ನು ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ನೆಡಿಸಿದನು. ಹರಪನಹಳ್ಳಿಯವರು ಯಾಕೆ ಬರಲಿಲ್ಲ ಎಂದರೆ, ಆಗ ಹರಪನಹಳ್ಳಿಯ ಕೋಟೆ ಇರಲಿಲ್ಲ. ಬಳಿಕ ಅದು ಒಂದು ಅಗ್ರಹಾರವಾಗಿ ಸ್ಥಾಪನೆಯಾಗಿ ಮೂವತ್ತರ ಮುತ್ತಿಗೆ ಗ್ರಾಮಕ್ಕೆ ಸೇರಿದ್ದಿತು.

ಮುತ್ತಿಗೆ ಶ್ರೀ ಕುಮಾರಸ್ವಾಮಿ ದೇವಾಲಯದ ಕ್ರಿ.ಶ. ೧೨೧೪ರ ಶಾಸನದಲ್ಲಿ ಮುತ್ತಿಗೆ ಕೋಗಳಿ ನಾಡಿನ ಒಂದು ಉಪ ವಿಭಾಗವಾಗಿದ್ದಿತು. ಇದು ಈಗಿನ

ಹರಪನಹಳ್ಳಿಯಿಂದ ಪೂರ್ವ ದಿಕ್ಕಿಗೆ ಸುಮಾರು ಹದಿಮೂರು ಕಿ.ಮೀ. ಅಂತರದಲ್ಲಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಕೆಲವು ಐತಿಹಾಸಿಕ ನೆಲೆಗಳಿರುತ್ತವೆ. ಅವುಗಳ ಪ್ರಾಚೀನತೆ ಹರಪನಹಳ್ಳಿ ಪಟ್ಟಣಕ್ಕಿಂತ ಹಿರಿದು. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಿದೆ. ೧).ಉಚ್ಚಂಗಿದುರ್ಗ ೨) ಅರಸೀಕೆರೆ ೩) ಬಾಗಳಿ ೪) ಬಿಕ್ಕಿಕಟ್ಟಿ ೫) ಮುತ್ತಿಗೆ ೬) ಚಿರಸ್ತಹಳ್ಳಿ ೭) ಚಿಗಟೇರಿ ೮) ಹಲುವಾಗಿಲು ೯) ಕುಂಚೂರು ೧೦) ನೀಲಗುಂದ ೧೧) ಬೆಣ್ಣಿಹಳ್ಳಿ ೧೨) ಕಡತಿ ೧೩) ನಿಟ್ಟೂರು ೧೪) ಗುಂಡಗತ್ತಿ ೧೫) ಗರ್ಭಗುಡಿ.

## ಹೆಸರಿನ ಹಿನ್ನಲೆ

ಬೆಣ್ಣಿಹಳ್ಳಿ ಪಂಪಾಪತಿ ದೇವಾಲಯದ ಶಾಸನ ಕ್ರಿ.ಶ. ೨೦–೪–೧೧೪೮ ರ ಪ್ರಕಾರ ಬ್ರಹ್ಮಪುರಿಯ ೧೨ ಬ್ರಾಹ್ಮಣರಿಗೆ ವೃತ್ತಿಗಳನ್ನು ನೀಡಿದ್ದರು ಎಂದಿದ್ದು, ಕ್ರಿ.ಶ. ೨೨–೪–೧೨೧೩ ರಲ್ಲಿ ವಿಷ್ಣುನಾಯಕನ ಮಗ ಹರಿಯಣ್ಣ (ಹರಿಹರ) ಮುತ್ತಿಗೆ ಹೆಗ್ಗಡೆತನ ಮಾಡುತ್ತಿದ್ದನು. ಅವನ ಹೆಸರಿನಲ್ಲಿ ಆದ ಅಗ್ರಹಾರವೇ ಹರಪನಹಳ್ಳಿಯಾಗಿರಲು ಸಾಧ್ಯ. ಮುತ್ತಿಗೆಯ ಶಾನುಭೋಗರು ಹರಪನಹಳ್ಳಿಯವರು. ಹರಿಯಪ್ಪನ ವಂಶಜರು ಈಗಲೂ ಹೊಸಪೇಟೆಯಲ್ಲಿರುವರು. ಆಗ ಮುಂದೆ ಈ ಅಗ್ರಹಾರ ಬಾಗಳಿಗೆ ಸೇರಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ಸಿ.ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ೧೯೪೭ ರಲ್ಲಿ ನಡೆಯಿತು. ಶ್ರೀ ವೈ ನಾಗೇಶ ಶಾಸ್ತ್ರಿಗಳು ಬಳ್ಳಾರಿಯಿಂದ ಆಗಮಿಸಿ, ಒಂದು ಪ್ರಬಂಧವನ್ನು ಮಂಡಿಸಿದ್ದರು. ಅದರಲ್ಲಿ ಹರಪನಹಳ್ಳಿ ಹರಿಪುರ ಎಂದು ಕರೆದಿದ್ದರು. ಕವಿ ಲಿಂಗಣ್ಣ ವಿರಚಿತ ಕೆಳದಿ ನೃಪ ವಿಜಯದಲ್ಲಿ ಹರಪನಹಳ್ಳಿಯ ಮೊದಲ ಸೋಮಶೇಖರ ನಾಯಕರಿಗೆ 'ಹರಪುರಾಧೀಶ್ವರ' ಎಂದು ಸಂಬೋಧಿಸಲಾಗಿದೆ. ಡಾ॥ ಎಂ.ಎಂ. ಕಲಬುರ್ಗಿಯವರು ಸಂಪಾದಿಸಿರುವ ಬಳ್ಳಾರಿ ಜಿಲ್ಲೆಯ ಕೈಫಿಯತ್ತಿನಲ್ಲಿ ೧) ಹಾರಪ್ಪನಹಳ್ಳಿ ೨) ಹರಪ್ಪನಹಳ್ಳಿ ೩) ಹರಪನಹಳ್ಳಿ ಸೀಮೆ ಎಂದಿದೆ. ಹರಪನಹಳ್ಳಿ ಸುತ್ತ ಗ್ರಾಮಗಳ ಶಾಸನಗಳಲ್ಲಿ ಹರಿಹರ ಅರಸನ ವಿಚಾರ ಬರುವುದು. ಹರಪನಹಳ್ಳಿ ಪೂರ್ವಕ್ಕೆ ಹೊಂಬಳಗಟ್ಟಿ, ಪಶ್ಚಿಮಕ್ಕೆ ಹೂಲಿಕಟ್ಟೆ, ಹಾರ್ಕನಹಾಳು, ಉತ್ತರ ದಿಕ್ಕಿಗೆ ಹಡಗಲಿ, ದಕ್ಷಿಣ ದಿಕ್ಕಿಗೆ ಹರಿಹರ ಪಟ್ಟಣಗಳು ಬರುತ್ತವೆ. ಬ್ರಹ್ಮಪುರಿಯ ೧೨ ಜನ ಬ್ರಾಹ್ಮಣರು ಬಂದ ಸಂಕೇತವೆಂಬಂತೆ, ಊರಿಗೆ ೧೨ ಅಗಸಿಗಳು, ೧೨ ಗರಡಿ ಮನೆಗಳು, ೧೨ ಹನುಮಂತ ದೇವರುಗಳು ಕಂಡುಬರುತ್ತವೆ.

## ಮೇರೆಗಳು

ಉತ್ತರ ದಿಕ್ಕಿಗೆ ಹೂವಿನ ಹಡಗಲಿ ತಾಲ್ಲೂಕಿನ ನಾಗತಿಬಸಾಪುರ, ದಕ್ಷಿಣ ದಿಕ್ಕಿಗೆ ದಾವಣಗೆರೆ ಮತ್ತು ಹರಿಹರ ತಾಲ್ಲೂಕಿನ ಗ್ರಾಮಗಳು, ಪೂರ್ವ ದಿಕ್ಕಿಗೆ ಕೂಡ್ಲಿಗಿ

ತಾಲ್ಲೂಕಿನ ಹಗರಿಹಳ್ಳ, ಪಶ್ಚಿಮ ದಿಕ್ಕಿಗೆ ತುಂಗಭದ್ರಾ ನದಿ ಮತ್ತು ಶಿವಶಿದ್ದಾಪುರ ಗ್ರಾಮ ಬರುತ್ತವೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ:** ಹರಪನಹಳ್ಳಿ ತಾಲ್ಲೂಕು ೧೪°,೧೩'.೨೫'' ಮತ್ತು ೧೪°, ೫೬''. ೩೦" ಅಕ್ಷಾಂಶ ಹಾಗೂ ೭೫°, ೪೪° ೧೫" ಮತ್ತು ೭೬°'. ೧೨'.೧೫'' ರೇಖಾಂಶದ ನಡುವೆ ಹರಡಿಕೊಂಡಿದೆ. ಸಮುದ್ರ ಮಟ್ಟದಿಂದ ೬೧೦ ಮೀಟರ್ ಎತ್ತರದಲ್ಲಿದೆ. ತಾಲ್ಲೂಕಿನ ವಿಸ್ತೀರ್ಣವು ೧,೪೩೫.೦೦ ಚ.ಕಿ.ಮೀ (೨೦೧೧) ಹೊಂದಿದ್ದು ದಾವಣಗೆರೆ ಜಿಲ್ಲೆಯಲ್ಲೇ ದೊಡ್ಡ ತಾಲ್ಲೂಕಾಗಿರುತ್ತದೆ. ಅದರಂತೆ ತಾಲ್ಲೂಕಿನ ಒಟ್ಟು ಜನಸಂಖ್ಯೆ ೩,೦೨,೦೦೩ ಆಗಿದ್ದು, ಅವರಲ್ಲಿ ೧,೫೪,೨೮೯ ಗಂಡು, ೧,೪೭,೭೧೪ ಮಹಿಳೆಯರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ೨,೫೪,೯೬೪ ಮತ್ತು ನಗರ ಪ್ರದೇಶದಲ್ಲಿ ೪೭,೦೩೯ ಜನಸಂಖ್ಯೆಯಿದ್ದು, ಇದರಲ್ಲಿ ಪುರುಷರ ಜನಸಂಖ್ಯೆ ಅಧಿಕವಾಗಿರುತ್ತದೆ. ಜಿಲ್ಲೆಯಲ್ಲಿರುವ ೧೯,೪೫,೪೯೭ ಜನಸಂಖ್ಯೆಯಲ್ಲಿ ೩,೦೨,೦೦೩ ರಷ್ಟು ಜನಸಂಖ್ಯೆ ಹೊಂದಿ ತೃತೀಯ ಸ್ಥಾನ ಹೊಂದಿರುವ ತಾಲ್ಲೂಕು ಆಗಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಲಿಂಗಾನುಪಾತವು ೯೫೭ ಆಗಿದ್ದು, ಜಿಲ್ಲೆಯ ಅನುಕ್ರಮಣಿಕೆಯಲ್ಲಿ ೬ನೇ ಸ್ಥಾನದಲ್ಲಿದೆ. ೨೦೦೧ ರಿಂದ ೨೦೧೧ ದಶಕಗಳ ಬೆಳವಣಿಗೆಯ ಪ್ರಮಾಣ ಪ್ರತಿಶತ ೧೨.೩೬ ಆಗಿರುತ್ತದೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ ಹರಪನಹಳ್ಳಿ**

| | | | ೨೦೧೧ರ ಜನಗಣತಿ ಪ್ರಕಾರ |
|---|---|---|---|
| ೧) | **ಭೌಗೋಳಿಕ ವಿಸ್ತೀರ್ಣ (ಚ.ಕಿಮೀ)** | | ೧,೪೩೫.೦೦ |
| ೨) | | ಜನಸಂಖ್ಯೆ (೨೦೧೧ರ ಜನಗಣತಿ) | |
| | ೨.೧) | ಗಂಡಸರು | ೧೫,೪೨೮೯ |
| | ೨.೨) | ಹೆಂಗಸರು | ೧,೪೭,೭೧೪ |
| | ೨.೩) | ಒಟ್ಟು | ೩,೦೨,೦೦೩ |
| ೩) | **ದಶಕದ ಬೆಳವಣಿಗೆ ಪ್ರಮಾಣ (ಪ್ರತಿಶತ) – ೨೦೧೦–೨೦೧೧** | | ೧೨.೩೬ |
| ೪) | | ಲಿಂಗಾನುಪಾತ | |
| | ೪.೧) | ನಗರ | ೯೬೯ |
| | ೪.೨) | ಗ್ರಾಮೀಣ | ೯೫೫ |
| | ೪.೩) | ಒಟ್ಟು | ೯೫೭ |

**ಮಾಹಿತಿ ಮೂಲ:–೨೦೧೧ರ ಜನಗಣತಿ ಪ್ರಕಾರ**

## ಪ್ರಾಸ್ತಾವಿಕ

೨೦೧೧ರ ಜನಗಣತಿ ಪ್ರಕಾರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೭೪,೨೯೦ ಆಗಿದ್ದು, ಅವರಲ್ಲಿ ನಗರ ಪ್ರದೇಶದಲ್ಲಿ ೪,೭೯೨ ಮತ್ತು ಗ್ರಾಮೀಣ ಪ್ರದೇಶದಲ್ಲಿ ೬೯,೪೯೮ ನೆಲೆಸಿರುತ್ತಾರೆ. ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಪರಿಶಿಷ್ಟ ಜಾತಿಯವರಂತೆಯೇ ಪರಿಶಿಷ್ಟ ಪಂಗಡದವರೂ ಸಹ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿಗೆ ನೆಲೆಸಿರುತ್ತಾರೆ. ಇವರ ಒಟ್ಟು ಸಂಖ್ಯೆ ೫೦,೩೦೮, ಇವರಲ್ಲಿ ೪೩,೪೧೭ ಗ್ರಾಮೀಣ ಪ್ರದೇಶದಲ್ಲಿ, ೬,೮೯೧ ನಗರ ಪ್ರದೇಶದಲ್ಲಿ ನೆಲೆಸಿರುತ್ತಾರೆ.

### ತಾಲ್ಲೂಕಿನ ಭೂಶಿಲಾ ಲಕ್ಷಣ

ಹರಪನಹಳ್ಳಿ ತಾಲ್ಲೂಕಿನ ಬಹುತೇಕ ಗುಡ್ಡಗಳು ಗಟ್ಟಿ ಕಲ್ಲುಗಳಿಂದ ಕೂಡಿವೆ. ಇವು ಹೆಚ್ಚಾಗಿ ಮೂರು ರೀತಿಯಲ್ಲಿರುತ್ತವೆ.

೧) ದುಂಡು ಕಲ್ಲು.
೨) ಗಟ್ಟಿ ಪದರ ಕಲ್ಲು.
೩) ಬಳಪದ ಕಲ್ಲು.

ದುಂಡು ಕಲ್ಲು ಬಹಳ ಗಟ್ಟಿಯಾಗಿರುತ್ತದೆ. ಇದು ಎಲ್ಲಾ ಕಡೆ ದೊರಕುತ್ತದೆ ಹಾಗೂ ಗಟ್ಟಿ ಪದರ ಕಲ್ಲು ತಾಲ್ಲೂಕಿನ ಕಂಚಿಕೇರಿ ಭಾಗದಲ್ಲಿ ಯರಬಳ್ಳಿ ಗುಡ್ಡದಲ್ಲಿ, ಸಾಸ್ವಿಹಳ್ಳಿಯಲ್ಲಿ ಬಂಡ್ರಿ ಗ್ರಾಮದಲ್ಲಿ ದೊರಕುತ್ತವೆ. ಹರಪನಹಳ್ಳಿ ಗುಡ್ಡದಲ್ಲಿ ಇದರಿಂದ ಮನೆ ಮತ್ತು ದೇವಾಲಯ ನಿರ್ಮಾಣಕ್ಕೆ ತೊಲೆ ಕಂಬಗಳಿಗೆ ಮತ್ತು ಮನೆಗಳ ಗೋಡೆಗಳಿಗೆ ಇದನ್ನು ಪುಡಿ ಮಾಡಿ ಸಿಮೆಂಟ್ ಸೇರಿಸಿ ಕಾಂಕ್ರೀಟ್‌ಗೆ ಉಪಯೋಗಿಸುವರು, ಸೈಜು ಕಲ್ಲುಗಳನ್ನು ಮನೆಗಳಿಗೆ ಅರೆಕಲ್ಲು ಸಪೂರವಾಗಿರುತ್ತದೆ. ಇದು ಹರಪನಹಳ್ಳಿಯಿಂದ ಬೇರೆ ಕಡೆ ಸಾಗುತ್ತದೆ. ಬಳಪದ ಕಲ್ಲು, ದೋಸೆ ಹೆಂಚು– ಮುಂತಾದುವುಗಳಿಗೆ ಹಾಗೂ ಮಕ್ಕಳ ಆಟಿಕೆ ಸಾಮಾನುಗಳ ತಯಾರಿಕೆಗೆ ಬಳಸುತ್ತಾರೆ.

### ಆಡಳಿತಾತ್ಮಕ ಘಟಕವಾಗಿ ತಾಲ್ಲೂಕಿನ ಇತಿಹಾಸ

ಸುಮಾರು ಶಾತವಾಹನರ ಕಾಲದಿಂದ ವಿಜಯನಗರದ ಅರಸರ ಕಾಲದವರೆಗೂ ಅಸ್ತಿತ್ವದಲ್ಲಿದ್ದ ಕೋಗಳಿ ಐನೂರು ರಾಜ್ಯಕ್ಕೆ ಸೇರಿದ್ದ ಹರಪನಹಳ್ಳಿ ತಾಲ್ಲೂಕು, ಪ್ರಸಿದ್ಧಿಯನ್ನು ಪಡೆದದ್ದು, ಪಾಳೆಯಗಾರರ ಕಾಲದಿಂದ, ಆದರೆ ಈ ತಾಲ್ಲೂಕಿನ ೧) ಉಚ್ಚಂಗಿದುರ್ಗ ೨) ಅರಸೀಕೆರೆ ೩) ಮುತ್ತಿಗೆ ೪) ಚಿಕ್ಕಿಕಟ್ಟಿ ೫) ಗರ್ಭಗುಡಿ

೭) ಹಲುವಾಗಿಲು ೭) ಕುಂಚೂರು ೮) ನೀಲಗುಂದ ೯) ಚಿರಸ್ತಹಳ್ಳಿ ೧೦) ಕಡಬಗೆರೆ ೧೧) ಬೆಣ್ಣಿಹಳ್ಳಿ ೧೨) ಚಿಗಟೇರಿ ೧೩) ಬಾಗಳಿ–ಗ್ರಾಮಗಳು ಪ್ರಾಚೀನ ನೆಲೆಗಳಾಗಿರುತ್ತವೆ, ಈ ಗ್ರಾಮಗಳಲ್ಲಿ ಕದಂಬರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ, ಅವರ ಸಾಮಂತರಾದ ನೊಳಂಬಪಲ್ಲವರ, ಉಚ್ಚಂಗಿಪಾಂಡ್ಯರ ಹೊಯ್ಸಳರ ಯಾದವರ ಶಾಸನಗಳು ದೊರೆತಿವೆ, ಈ ಅರಸರ ಆಳ್ವಿಕೆಯ ನಂತರ ಹರಪನಹಳ್ಳಿಗೆ ಸೇರಿದ ಉಚ್ಚಂಗಿ ದುರ್ಗವು ಚಿತ್ರದುರ್ಗದ ನಾಯಕರ ಆಳ್ವಿಕೆಗೆ ಒಳಗಾಗಿದ್ದಿತು, ಬಳಿಕ ಹರಪನಹಳ್ಳಿ ಪಾಳೆಯಗಾರರ ಆಳ್ವಿಕೆಗೆ ಒಳಗಾಯಿತು. ಪಾಳೆಯಗಾರರು ಹರಪನಹಳ್ಳಿ ಮುಖ್ಯ ಪಟ್ಟಣದಿಂದ ಬಳ್ಳಾರಿ ಜಿಲ್ಲೆಯ ಪಶ್ಚಿಮದ ನಾಲ್ಕೈದು ತಾಲ್ಲೂಕುಗಳನ್ನು ಒಟ್ಟಿಗೆ ಹದಿನಾರು ಜನರು ಕ್ರಿ.ಶ. ೧೫೬೫ ರಿಂದ ೧೮೦೦ ಅಂದರೆ ೨೩೩ ವರ್ಷಗಳ ಕಾಲ ಆಳಿದರು. ಆಗ ಹರಪನಹಳ್ಳಿ ರಾಜ್ಯದ ಮುಖ್ಯ ಪಟ್ಟಣವಾಗಿ ಬೆಳೆಯಲು ಕಾರಣವಾಯಿತು. ಪಾಳೆಯಗಾರರಿಗೂ ಪೂರ್ವದಲ್ಲಿ ನೊಳಂಬ, ಪಲ್ಲವರ ಕಾಲದಲ್ಲಿ ನೊಳಂಬವಾಡಿ ೩೨ ಸಾವಿರವಾಗಿ ಬಳ್ಳಾರಿ ಜಿಲ್ಲೆಯ ಬಹುತೇಕ ಶಾಸನಗಳಲ್ಲಿ ಕೋಗಳ ನಾಡಿನ ವಿಚಾರ ಪದೇ ಪದೇ ಪ್ರಸ್ತಾಪವಾಗುವುದನ್ನು ಕಾಣಬಹುದು.

### ತಾಲ್ಲೂಕಿನ ಮೇಲ್ಮೈ ಲಕ್ಷಣ

ತಾಲ್ಲೂಕು ಪ್ರದೇಶವು ದಕ್ಷಿಣ ಪ್ರಸ್ಥಭೂಮಿಯ ಭಾಗವಾಗಿದ್ದು, ಬಯಲು ಪ್ರದೇಶವಾಗಿದ್ದರೂ ಏರು ತಗ್ಗುಗಳು ಹಾಗೂ ಚಿಕ್ಕ ಗುಡ್ಡಗಳಿಂದ ಕೂಡಿದೆ. ಸಮುದ್ರ ಮಟ್ಟದಿಂದ ಸುಮಾರು ೬೨೫ ಮೀಟರ್ ಎತ್ತರದಲ್ಲಿದೆ.

### ಬೆಟ್ಟ–ಗುಡ್ಡಗಳು

ಹರಪನಹಳ್ಳಿ ತಾಲ್ಲೂಕು ಉತ್ತಮ ಮರಗಿಡಗಳನ್ನು ಹೊಂದಿದ್ದು ಹೆಚ್ಚು ಕುರುಚಲು ಗಿಡಗಳು ಕಂಡು ಬರುವುವು. ಇಲ್ಲಿ ಕಮರು, ಸೋಮು, ಉದಯ ತುಂಬಿರು ಬಿಳಿಮತ್ತಿ, ಪಚ್ಚಾಲಿ, ಮುತ್ತಗ, ಹೊಂಗೆ, ಮಲೆ–ವಾಳ, ತರೇದು, ಡಿಂಡಿಲ ಗಿಡಗಳು ಬೆಳೆದಿವೆ. ಸೋಗಿ, ಜಾಜಿ ಕಲ್ಲು, ಅಲಗಿಲವಾಡ, ಹ್ಯಾರಡ ಪ್ರದೇಶ ಎತ್ತರದ ಗುಡ್ಡಗಳನ್ನು ಹೊಂದಿದೆ. ಈ ಗುಡ್ಡಗಳ ಮೇಲೆ ವೇಗವಾಗಿ ಗಾಳಿ ಬೀಸುವುದು. ಸುಜಲಾನ್ ಕಂಪನಿಯವರು ಎತ್ತರವಾದ ಕಂಬಗಳನ್ನು ಸ್ಥಾಪಿಸಿ ಗಾಳಿ ವಿದ್ಯುತ್ ಉತ್ಪಾದಕ ಘಟಕಗಳನ್ನು ಸ್ಥಾಪಿಸಿರುವರು. ಈ ಪ್ರದೇಶಗಳಿಂದ ಸ್ಥಳೀಯರು ಅಂಟು, ಬೀಡಿ ಎಲೆ, ಪತ್ರವಾಳ ಎಲೆ ಗಿಡಮೂಲಿಕೆ ಮತ್ತು ಒಣಗಿದ ಹುಲ್ಲನ್ನು ತಮ್ಮ ಗುಡಿಸಲು, ಚಪ್ಪರಗಳಿಗೆ ಸಂಗ್ರಹಿಸುವರು. ರೈತರು, ಗೋವಳರು, ದನ, ಕುರಿ, ಮೇಕೆಗಳನ್ನು ಮೇಯಿಸುವರು.

ಈ ಅರಣ್ಯದಲ್ಲಿ ಚಿರತೆ, ಸೀಳುನಾಯಿ, ನರಿ, ತೋಳ, ಕಾಡು ಬೆಕ್ಕು, ಕೊಂಡಕುರಿ, ಉಡ, ಮೊಲ, ನವಿಲು, ಜಿಂಕೆ, ಹಾವು, ಕರಡಿ, ಪಶು ಪಕ್ಷಿಗಳು ಕಂಡುಬರುವುವು. ಹರಪನಹಳ್ಳಿ ತಾಲ್ಲೂಕಿನಲ್ಲಿ ೧೨ ಕಾಯ್ದಿಟ್ಟ ಅರಣ್ಯಗಳಿರುತ್ತವೆ. ಹರಪನಹಳ್ಳಿ ಪಕ್ಕದ ಗೋಸಾಯಿಗುಡ್ಡದ ಮಧ್ಯದಲ್ಲಿ ಪರ್ವತ ರಾಮೇಶ್ವರ, ಕಲ್ಲಹಳ್ಳಿ ಪರ್ವತದ ಮೇಲೆ ಶಿಖರ ಸಿದ್ದೇಶ್ವರ, ನೀಲಗುಂದ ಗುಡ್ಡದ ಮೇಲೆ ತಿಮ್ಮಪ್ಪ, ಕಂಚಿಕೇರಿ ಮರಡಿಯ ಮೇಲೆ ಸಿದ್ದೇಶ್ವರ, ಚಿಗಟೇರಿ ಜಾಜಿಕಲ್ ಗುಡ್ಡದ ತುದಿಗೆ ವೀರಭದ್ರ ಹರಪನಹಳ್ಳಿ ಪಕ್ಕದ ಗುಡ್ಡದ ಮೇಲೆ ಉಚ್ಚೆಂಗೆಮ್ಮ, ಹೀಗೆ ಹಲವಾರು ದೇವರ ದೇವಾಲಯಗಳಿರುತ್ತವೆ.

**ನದಿ–ಹಳ್ಳಗಳು**

'ಗಂಗಾಸ್ನಾನ–ತುಂಗಾಪಾನ' ಎಂದು ಹೇಳುವ ಹಳ್ಳಿಗರ ಮಾತಿನಂತೆ ಸಿಹಿ ಜಲವಾದ ತುಂಗಭದ್ರಾ ನದಿಯು ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಶೃಂಗೇರಿ ಬಳಿ ಭದ್ರಾ ನದಿಯನ್ನು ಸೇರಿ, ಹರಿಹರದ ಮುಂದೆ ಸಾಗಿ ವಟ್ಲಹಳ್ಳಿ ಬಳಿ ಹರಪನಹಳ್ಳಿ ತಾಲ್ಲೂಕನ್ನು ಸೇರಿ ಹರಪನಹಳ್ಳಿ ಮತ್ತು ರಾಣೇಬೆನ್ನೂರು ತಾಲ್ಲೂಕುಗಳ ಮಧ್ಯ ಹರಿಯುತ್ತದೆ. ಇದು ಈ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತದೆ. ಈ ನದಿಯಿಂದ ಕುಡಿಯುವ ನೀರನ್ನು ಹರಪನಹಳ್ಳಿ ಪಟ್ಟಣದವರು, ಕುಂಚೂರಿನವರು ಉಪಯೋಗಿಸುವರು. ತಾಲ್ಲೂಕಿನ ಪಶ್ಚಿಮ ಭಾಗದ ರೈತರು ತಮ್ಮ ಪಂಪುಗಳಲ್ಲಿ ಹಾಯಿಸಿ ಹೊಲಗಳ ಪೈರುಗಳಿಗೆ ನೀರುಣಿಸುವರು, ಪೂರ್ವಕ್ಕೆ ಹರಿದ ಹಗರಿಗೆ ನದಿಯೆಂದು ಕರೆಯುವರು. ಅದರಲ್ಲಿ ಬೇಸಿಗೆ ಕಾಲದಲ್ಲಿ ನೀರು ದೊರೆಯುವುದಿಲ್ಲ.

**ಅಂತರ್ಜಲ**

ಹಿಂದಿನ ಕಾಲದಲ್ಲಿ ಬಾವಿಗಳನ್ನು ತೋಡಿ, ಏತ, ಕಪಿಲೆಗಳಿಂದ ಬಾವಿಯ ನೀರನ್ನು ಮೇಲಕ್ಕೆ ಎತ್ತಿ ತಮ್ಮ ಹೊಲದ ಪೈರುಗಳಿಗೆ ಹರಿಸುತ್ತಿದ್ದರು. ಈಗ ೧೦೦ ಅಡಿಗಳಿಗೂ ಹೆಚ್ಚು ಪ್ರಮಾಣದಲ್ಲಿ ಭೂಮಿಯನ್ನು ಕೊರೆದು ಅದಕ್ಕೆ ಕೊಳವೆಗಳನ್ನು ಜೋಡಿಸಿ ನೀರು ಪಡೆಯುವರು. ಕೆಲವು ಕಡೆ ಅಂತರ್ಜಲ ಸಮೃದ್ಧವಾಗಿದ್ದರೆ, ಕೆಲವು ಕಡೆ ಇದು ಕಡಿಮೆ ಮಟ್ಟದಲ್ಲಿದೆ. ಇದರಿಂದ ಕೆಲ ರೈತರು ತುಂತುರು ನೀರಾವರಿ ಬೆಳೆ ಮತ್ತು ಹೂವು ತರಕಾರಿ ಬೆಳೆಗಳನ್ನು ಬೆಳೆಯುವರು. ಆದ್ದರಿಂದ ಅಂತರ್ಜಲ ಕಡಿಮೆಯಾಗುತ್ತಿದೆ. ಆದರೂ ಈ ತಾಲ್ಲೂಕಿನಲ್ಲಿ ೩೧,೭೮೮ ಹೆಕ್ಟೇರಿಗೆ ಕೊಳವೆ ಬಾವಿಗಳಿಂದ ನೀರು ಒದಗಿಸುತ್ತಿರುವರು. ಹಿಪ್ಪು ನೇರಳೆ ಬೆಳೆಯನ್ನು ೧೫೦.೨೦ ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ.

## ವಾಯುಗುಣ ಮತ್ತು ಮಳೆ

ತಾಲ್ಲೂಕಿನ ವಾರ್ಷಿಕ ವಾಡಿಕೆ ಮಳೆ ೭೬೯ ಮಿ.ಮೀ. ಇದ್ದು ೨೦೧೫–೧೬ನೇ ಸಾಲಿನಲ್ಲಿ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ೫೪೨ ಮಿ.ಮೀ ಮಳೆಯಾಗಿರುತ್ತದೆ. ಕೃಷಿ ಇಲಾಖೆಯ ಮಾಹಿತಿಯನ್ವಯ ೨೦೧೫–೧೬ ರಲ್ಲಿ ಮುಂಗಾರು ಹಂಗಾಮಿನಲ್ಲಿ ೮೩೦.೨೭ ಹೆ. ವಿಸ್ತೀರ್ಣದ ಬಿತ್ತನೆ ಪ್ರದೇಶದ ಗುರಿಗೆ ೮೩೦.೨೭ (ಶೇ.೧೦೦) ಹೆಕ್ಟೇರಿನಲ್ಲಿ ಹಿಂಗಾರು ಹಂಗಾಮಿನಲ್ಲಿ ೯೩.೫೦ ಹೆಕ್ಟೇರು ಗುರಿಗೆ ೫೦.೮೨ ಹೆ (ಶೇ.೫೪.೩೫) ವಿಸ್ತೀರ್ಣ ಬಿತ್ತನೆಯಾಯಿತು.

### ಹರಪನಹಳ್ಳಿ ತಾಲ್ಲೂಕು

| | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ |
|---|---|---|---|---|---|---|---|---|---|---|---|---|
| ಸರಾಸರಿ ತಾಪಮಾನ(ಡಿಗ್ರಿ ಸೆಲ್ಸಿಯಸ್) | ೨೩.೩ | ೨೫.೬ | ೨೮.೩ | ೨೯.೯ | ೨೯.೪ | ೨೬.೫ | ೨೫ | ೨೫ | ೨೫.೧ | ೨೫.೩ | ೨೩.೮ | ೨೨.೬ |
| ಕನಿಷ್ಟ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೧೬.೬ | ೧೮.೫ | ೨೧ | ೨೩ | ೨೩.೧ | ೨೨.೨ | ೨೧.೬ | ೨೧.೩ | ೨೦.೮ | ೨೦.೬ | ೧೮.೪ | ೧೬.೩ |
| ಗರಿಷ್ಠ ತಾಪಮಾನ (ಡಿಗ್ರಿ ಸೆಲ್ಸಿಯಸ್) | ೩೦ | ೩೨.೭ | ೩೫.೬ | ೩೬.೮ | ೩೫.೭ | ೩೦.೯ | ೨೮.೫ | ೨೮.೭ | ೨೯.೫ | ೩೦.೧ | ೨೯.೩ | ೨೮.೯ |
| ಸರಾಸರಿ ಮಳೆ ಪ್ರಮಾಣ (ಮಿ.ಮೀ) | ೦ | ೦ | ೩ | ೪೦ | ೮೨ | ೭೪ | ೮೬ | ೭೪ | ೧೨೩ | ೧೨೮ | ೨೪ | ೮ |

ಮೂಲ: *https://en.climate-data.org/location/484599/*

## ಪ್ರಾಸ್ತಾವಿಕ

ತಾಲ್ಲೂಕಿನಲ್ಲಿ ೨೦೧೫-೧೬ರ ಅಂಕಿ ಅಂಶಗಳ ಪ್ರಕಾರ ವಾಡಿಕೆ ಮಳೆಯ ಪ್ರಮಾಣ ೭೬೯ ಮೀ ಮೀ ಆಗಿದೆ. ತಾಲ್ಲೂಕಿನಲ್ಲಿರುವ ಏಳು ಮಳೆ ಮಾಪನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

| **ಮಳೆಮಾಪನ ಕೇಂದ್ರಗಳು** | **೨೦೧೫-೧೬** |
|---|---|
| ಕಾರ್ಯನಿರ್ವಹಿಸುತ್ತಿರುವ | ೭ |
| **ವಾರ್ಷಿಕ ವಾಡಿಕೆ ಮಳೆ (೧೯೪೧ - ೧೯೯೦)** | |
| ಮಳೆದಿನಗಳು | ೬೩ |
| ವಾಡಿಕೆಮಳೆ | ೭೬೯ |
| ಮಳೆ (ಮಿ.ಮಿ.) ೨೦೦೫ ರಿಂದ ೨೦೧೫ ರವರೆಗೆ ವಾರ್ಷಿಕ ವಾಸ್ತವಿಕ ಮಳೆ (ಮಿ.ಮಿ) | |
| ೧) ೨೦೦೫ | ೬೫೫ |
| ೨) ೨೦೦೬ | ೫೦೯ |
| ೩) ೨೦೦೭ | ೮೪೭ |
| ೪)೨೦೦೮ | ೫೭೭ |
| ೫)೨೦೦೯ | ೮೮೧ |
| ೬)೨೦೧೦ | ೮೬೦ |
| ೭) ೨೦೧೧ | ೪೯೭ |
| ೮) ೨೦೧೨ | ೫೬೫ |
| ೯) ೨೦೧೩ | ೬೪೪ |
| ೧೦) ೨೦೧೪ | ೯೧೫ |
| ೧೧) ೨೦೧೫ | ೫೪೨ |

**ಮೂಲ: ದಾವಣಗೆರೆ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬..**

**ಖನಿಜ ಸಂಪತ್ತು** : ತಾಲ್ಲೂಕಿನ ಕುಲುಮರ ಕಲ್ಲಹಳ್ಳಿಯಲ್ಲಿ ಕಬ್ಬಿಣದ ಅದಿರು ದೊರಕುತ್ತದೆ. ಆದರೆ ಅದರ ಪ್ರಮಾಣ ಅಲ್ಪ, ಚಿಗಟೇರಿ ಗುಡ್ಡಗಳಲ್ಲಿ ಚಿನ್ನದ ನಿಕ್ಷೇಪ ಕಂಡು ಬರುತ್ತದೆ. ಬಹಳ ಖರ್ಚು ಮಾಡಿದರೆ ಕಡಿಮೆ ಚಿನ್ನ ದೊರಕುವುದೆಂದು ಭೂಗರ್ಭ ಶೋಧಕರ ಅಭಿಪ್ರಾಯವಾಗಿದೆ. ಹರಪನಹಳ್ಳಿ ಅರಣ್ಯ ಪ್ರದೇಶದಲ್ಲಿ ಮ್ಯಾಂಗನೀಸ್ ಅದಿರು ದೊರಕುವುದು. ಆದರೆ ಅದರ ಪ್ರಮಾಣವು ಕಡಿಮೆ.

ಅಲಗಿಲವಾಡ, ಕಡತಿ, ಸೋಗಿ, ಜಾಜಿಕಲ್ಲು ಗುಡ್ಡಗಳಲ್ಲಿಯೂ ಸಹ ಮ್ಯಾಂಗನೀಸ್ ಅದಿರು ದೊರೆಯುವುದೆಂದು ತಿಳಿದು ಬಂದಿದೆ.

**ಸಸ್ಯ ಸಂಪತ್ತು** : ತಾಲ್ಲೂಕಿನ ಬೇರೆ-ಬೇರೆ ಪ್ರದೇಶದಲ್ಲಿ ಸಾಕಷ್ಟು ಗಿಡಮರಗಳು ಇದ್ದು ಮಾವು, ಬೇವು, ಹುಣಸೆ, ಅತ್ತಿ, ಆಲ, ನೇರಳೆ, ತಾಳೆ, ಹಲಸು, ಅರಳಿ ಮರಗಳು, ಗಿಡ ಮರ, ಉಗ್ನಿ ಬಳ್ಳಿ ವಿವಿಧ ಫಲ-ಪುಷ್ಪ ಕಾಯಿಗಳು ದೊರೆಯುತ್ತವೆ.

**ಪ್ರಾಣಿ ಸಂಪತ್ತು** : ಚಿರತೆ, ಕರಡಿ, ನರಿ, ತೋಳ, ಜಿಂಕೆ, ಕೆಂಪು ಮತ್ತು ಕಪ್ಪು ಕೋತಿ, ಕಾಡು ಹಂದಿ, ವಿವಿಧ ಹಾವು, ಬೆಕ್ಕು, ನಾಯಿ, ದನ, ಎಮ್ಮೆ, ಕುದುರೆ, ಕತ್ತೆ, ಹಂದಿ, ಕೋಳಿ, ಕುರಿ, ಆಡು, ಪಕ್ಷಿಗಳು ಬಗೆ ಬಗೆಯ ಚಿಟ್ಟೆಗಳು, ಕಾಗೆ, ಗುಬ್ಬಿ, ಪಾರಿವಾಳ, ದುಂಬಿ, ಮೀನುಗಳು ಕಂಡು ಬರುವುವು.

# ಅಧ್ಯಾಯ–೨

## ಇತಿಹಾಸ

**ದಾ**ವಣಗೆರೆ ಜಿಲ್ಲೆಯಲ್ಲಿ ಹೆಚ್ಚು ಶಾಸನಗಳಿರುವ ತಾಲ್ಲೂಕು ಹರಪನಹಳ್ಳಿ. ಈ ವರೆಗೂ ಕದಂಬರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಯಾದವರು, ವಿಜಯನಗರದ ಅರಸರು, ಕಲ್ಯಾಣ ಚಾಲುಕ್ಯರ ಸಾಮಂತರಾದ ನೊಳಂಬ ಪಲ್ಲವರು, ಉಚ್ಚಂಗಿ ಪಾಂಡ್ಯರು, ಕೋಗಳಿ ಐನೂರನ್ನು ಆಳಿದ ಸಾಮಂತ ಅರಸರು, ವಿಜಯನಗರದ ಅರಸರ ಸಾಮಂತರೂ, ಚಿತ್ರದುರ್ಗ ಮತ್ತು ಹರಪನಹಳ್ಳಿಯ ಪಾಳೆಯಗಾರರು ಆಂಗ್ಲರ ಕಮಿಷನರ್‌ಗಳ, ಅವರ ಆಳ್ವಿಕೆಕಾಲದ ೨೨೬ ಶಾಸನಗಳು ತಾಲ್ಲೂಕಿನಲ್ಲಿ ದೊರಕಿರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿದ್ದಾಗಲು ಹರಪನಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚು ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

**ಪೌರಾಣಿಕೆ ಹಿನ್ನೆಲೆ**: ಹರಪನಹಳ್ಳಿ ತಾಲ್ಲೂಕು ಉಚ್ಚಂಗಿ ದುರ್ಗದ ಹೊಲವೊಂದರಲ್ಲಿ ಸಿಕ್ಕಿರುವ ಶಾಸನದಲ್ಲಿ (ಕ್ರಿ.ಶ. ೧೦೭೦) ಉಚ್ಚಂಗಿ ದುರ್ಗವನ್ನು ಕೃತಯುಗದಲ್ಲಿ ಮೇಘನಾದ, ತ್ರೇತಾಯುಗದಲ್ಲಿ ಹಿರಣ್ಯ ನಿವಾಸ, ದ್ವಾಪರ ಯುಗದಲ್ಲಿ ಕನಕಗಿರಿ, ಕಲಿಯುಗದಲ್ಲಿ ಉಚ್ಚಂಗಿ ಪರ್ವತವೆಂದು ಕರೆಯಲಾಗಿದೆ.

**ಇತಿಹಾಸ ಕಾಲ**: ಕದಂಬರ ಒಂದು ಶಾಖೆ ಬನವಾಸಿಯನ್ನು ಆಳಿದರೆ, ಮತ್ತೊಂದು ಶಾಖೆ ಉಚ್ಚಂಗಿದುರ್ಗವನ್ನು ಆಳಿದ್ದು ತಿಳಿದುಬರುತ್ತದೆ. ಇದಕ್ಕೆ ದಾವಣಗೆರೆ ಹತ್ತಿರದ ಅಣಜಿ ಶಾಸನದಲ್ಲಿ ನಣಕ್ಕಸ ಪಲ್ಲವನಿಗೂ ಕೃಷ್ಣವರ್ಮ ರಾಜನಿಗೂ ಯುದ್ಧ ನಡೆದ ಉಲ್ಲೇಖವಿದೆ. ಕೃಷ್ಣವರ್ಮ ರಾಜ ಕದಂಬ ವಂಶದವನು. ಅವನು ಉಚ್ಚಂಗಿ ಕೋಟೆಯಲ್ಲೇ ಆಳ್ವಿಕೆ ನಡೆಸಿದನು, ಕದಂಬರ ಏಳ್ಗೆಯಿಂದ ಪಲ್ಲವರ ಆಡಳಿತ ಕೊನೆಗೊಳ್ಳುತ್ತದೆ. ಹರಪನಹಳ್ಳಿ ತಾಲ್ಲೂಕು ಪೂರ್ವ ಕಾಲದಿಂದಲೂ ಕೋಗಳಿ ನಾಡಿಗೆ ಸೇರಿದೆ. ಕೋಗಳಿ ಐನೂರು ಶಾತವಾಹನರಿಂದ ವಿಜಯನಗರದ ಅರಸರ ಕಾಲದವರೆಗೂ ಅಸ್ತಿತ್ವ ಹೊಂದಿದ್ದಿತು ಎಂದು ಹೇಳಲಾಗಿದೆ.

ಬಾಗಳಿ (ಕ್ರಿ.ಶ. ೯೭೨) ಶಾಸನದಲ್ಲಿ ಖೊಟ್ಟಿಗ ಹೆಸರಿನ ಸಾಮಂತ ಗಂಗಪೆರ್ಮಾನಡಿಯ ಹೆಸರಿದೆ. ಈ ಪೆರ್ಮಾನಡಿಯ ಗಂಗ ಮಾರಸಿಂಹನಿರಬೇಕು. ಕ್ರಿ.ಶ. ೯೨೨ರ ಕಡಬಗೇರೆಯ ವೀರಗಲ್ಲಿನಲ್ಲಿ ಇಂದ್ರ ವಲ್ಲಭನ ಮಹಾ ಸಾಮಂತ ಬಿಜ್ಜನು ಕೋಗಳಿ–೫೦೦ ಆಳಿದ ಉಲ್ಲೇಖವಿದೆ. ರಾಷ್ಟ್ರಕೂಟರ ಶಾಸನಗಳು ತಾಲ್ಲೂಕಿನ ಬಾಗಳಿ, ಕಡಬಗೆರೆ, ಚಿರಸ್ತಹಳ್ಳಿ ಗ್ರಾಮಗಳಲ್ಲಿ ದೊರಕುವುವು. ನೊಳಂಬ ಪಲ್ಲವರು ಕಪಿಲೆಗೆ ಬಂದ ಬಳಿಕ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಆಳ್ವಿಕೆ ನಡೆಸಿದರು.

**ನೊಳಂಬ ಪಲ್ಲವರು**

ಅಯ್ಯಪ್ಪ

↓

ಅಣ್ಣಿಗ ಕ್ರಿ.ಶ.೯೨೨

↓

ನನ್ನಿ ನೊಳಂಬ ಕ್ರಿ.ಶ.೯೬೭

↓

ವೀರನೊಳಂಬ ಹೆಂ ದೇವಲ ದೇವಿಯಕ್ಕ ಕ್ರಿ.ಶ.೯೮೧

↓

ತ್ರೈಲೋಕ್ಯಮಲ್ಲ ಇ ನ ನೊಳಂಬ ನರಸಿಂಘ ದೇವ (ಘಟೆಯಂಕಾರ) ಕ್ರಿ.ಶ. ೯೯೮–೧೯೧೮

↓

ಜಗದೇಕಮಲ್ಲ ನೊಳಂಬನಡಿ ಉದಯಾದಿತ್ಯ ಕ್ರಿ.ಶ.೧೦೧೭–೧೦೪೪

ರೇವಲದೇವಿ (ಪತಿ–ಎರಡನೆಯ ಜಯಸಿಂಹ)

↓

ತ್ರೈಲೋಕ್ಯಮಲ್ಲ ನನ್ನಿನೊಳಂಬಾಧಿ ರಾಜ ಕ್ರಿ.ಶ.೧೦೪೪

ಜಗದೇಕ ಮಲ್ಲ ನೊಳಂಬ ಪೆರ್ಮಾನಡಿ ಕ್ರಿ.ಶ.೧೦೫೪

**ಮೂಲ:ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಬಳ್ಳಾರಿ ಜಿಲ್ಲೆ**

ಪ್ರಾಚೀನ ಕಾಲದಲ್ಲಿ ಬಾದಾಮಿ ಚಾಲುಕ್ಯರಿಗೂ, ಕಂಚಿಯ ಪಲ್ಲವರಿಗೂ ಸತತ ಕದನಗಳು ನಡೆಯುತ್ತಿದ್ದುವು. ಆಗ ಸಂಭವಿಸಿದ ಸೋಲು ಗೆಲುವುಗಳಿಂದ ರಾಜ್ಯದ ಗಡಿಗಳಲ್ಲಿ ಹೆಚ್ಚು ಕಡಿಮೆಯಾಗುತ್ತಿದ್ದುವು. ಇದರ ಸದುಪಯೋಗಪಡಿಸಿಕೊಂಡು ಪಲ್ಲವರ ಕೆಲ ಸೇನಾಧಿಕಾರಿಗಳು ಕರ್ನಾಟಕ ಪ್ರದೇಶಕ್ಕೆ ನುಗ್ಗಿ ಚಾಲುಕ್ಯರ ರಾಜ್ಯದ ಗಡಿಗಳಲ್ಲಿ ಒಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿದರು. ಇದೇ ನೊಳಂಬಳಿಗೆ ೧೦೦೦ ವೆಂದು ಕರೆಯಲ್ಪಟ್ಟಿದ್ದಿತು. ಈ ನೊಳಂಬಳಿಗೆ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಆಸುಪಾಸು ಪ್ರದೇಶವಾಗಿತ್ತು. ಕಾಲ ಕಳೆದಂತೆ ೯-೧೦ನೇ ಶತಮಾನಗಳ ಹೊತ್ತಿಗೆ ವರ್ಧಿಸಿ ನೊಳಂಬವಾಡಿ ೩೨,೦೦೦ ವಿಸ್ತರಿಸಿದ್ದಿತು, ಇದು ಈಗಿನ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ ಮತ್ತು ಆಗ್ನೇಯ ದಿಕ್ಕಿನ ತಮಿಳುನಾಡಿನ ಧರ್ಮಪುರ ನೈಋುತ್ಯದಲ್ಲಿ ಮಂಡ್ಯ ಜಿಲ್ಲೆಯ ತಾಯೂರುವರೆಗೆ ವಿಸ್ತರಿಸಿದ್ದಿತು. ಇವರ ವಂಶವೃಕ್ಷ ಅನಂತಪುರ ಜಿಲ್ಲೆಯ ಮಡಕಸಿರಾ ತಾಲ್ಲೂಕಿನ ಹೆಂಜೇರು-ಹೇಮಾವತಿ, ಸಿದ್ದೇಶ್ವರ ಕಂಬದಲ್ಲಿದೆ. ಆದರೆ ಇವರಿಗೆ ಮಹಾರಾಜರು, ಚಕ್ರವರ್ತಿಗಳಾಗುವ ಅವಕಾಶಗಳು ದೊರಕಲಿಲ್ಲ. ಕಾಲ ಕಳೆದಂತೆ ಗಂಗರ ಕೈಕೆಳಗೆ ತಮ್ಮ ಆಳ್ವಿಕೆ ಆರಂಭಿಸಿ ರಾಷ್ಟ್ರಕೂಟರ ಚಾಲುಕ್ಯರ ವಂಶಗಳೊಂದಿಗೆ ತಮ್ಮ ವೈವಾಹಿಕ ಸಂಬಂಧಗಳನ್ನು ಬೆಳೆಸಿ ಬಹುಕಾಲ ಕರ್ನಾಟಕ ರಾಜ್ಯವನ್ನು ಆಳಿದರು. ಇವರ ಅನೇಕ ಶಾಸನಗಳು ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈಗಲೂ ಕಂಡು ಬರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿಯ ನೊಳಂಬವಾಡಿ ೩೨೦೦೦ ಶಾಸನಗಳಲ್ಲಿ 'ಕೋಗಳಿ ಐನೂರು ರಾಜ್ಯ' ಪ್ರಸ್ತಾಪವಾಗಿದೆ. ಕ್ರಿ.ಶ. ೭೫೦ ರಿಂದ ೧೦೫೫-೫೭ ರ ವರೆಗೂ ನೊಳಂಬವಾಡಿ-೩೨೦೦೦ ರಾಜ್ಯವನ್ನು ಆಳಿದರು. ನಂತರ ಇವರ ರಾಜ್ಯ ಚಾಲುಕ್ಯ ಅರಸರ ನೇರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ.೧೦೬೪ ರಲ್ಲಿ ಚಾಲುಕ್ಯ ತ್ರೈಲೋಕ್ಯ ಮಲ್ಲನ ಮಗ ವಿಷ್ಣುವರ್ಧನ ವಿಜಯಾದಿತ್ಯ ಆಳ್ವಿಕೆಗೆ ಒಳಪಟ್ಟಿದ್ದು ತಿಳಿಯುತ್ತದೆ.

ಇದರ ನಂತರ ಅಧಿಕಾರಕ್ಕೆ ಬಂದ ಅರಸರು ಉಚ್ಚಂಗಿಪಾಂಡ್ಯರು. ಇವರು ಮೊದಲು ಶಿಶುಗಲಿಯಿಂದ ತಮ್ಮ ರಾಜ್ಯವನ್ನು ಆರಂಭಿಸಿ ಬೆಳ್ತೂರಿಗೆ ಬಂದರು. ಅಲ್ಲಿಂದ ಉಚ್ಚಂಗಿಯನ್ನು ಮುಖ್ಯ ರಾಜಧಾನಿಯನ್ನಾಗಿ, ಬಾಗಳಿಯನ್ನು ಉಪರಾಜಧಾನಿಯನ್ನಾಗಿ ಕೆಲ ಅವಧಿ ಆಳ್ವಿಕೆ ನಡೆಸಿ ಬಳಿಕ ಸ್ವತಂತ್ರ ಆಳ್ವಿಕೆಯನ್ನು ರಾಯಪಾಂಡ್ಯನು ನಡೆಸಿದನು. ಸೊರಟೂರು ಕದನದಲ್ಲಿ ರಾಯಾಪಾಂಡ್ಯ ಮಡಿದಿರಬೇಕು ಎಂದು ಕೆಲ ಇತಿಹಾಸಕಾರರ ಹೇಳಿಕೆ. ಆದರೆ ಕೆಲ ಶಾಸನಗಳಲ್ಲಿ ಅವನು ಅಜೇಯನೆಂದು ತಿಳಿಸಿರುತ್ತಾರೆ. ಆರನೆಯ ವಿಕ್ರಮನಂತೆ ರಾಯಪಾಂಡ್ಯನು ಐವತ್ತು ವರ್ಷ ರಾಜ್ಯಭಾರ ಮಾಡಿದನು. ಆರನೇ ವಿಕ್ರಮ ರಾಯಪಾಂಡ್ಯನ ನೆರವಿನಿಂದ ಉತ್ತರ ಭಾರತಕ್ಕೆ ದಿಗ್ವಿಜಯವನ್ನು ಕೈಗೊಂಡು ಯಶಸ್ಸನ್ನು ಪಡೆದು ಹಿಂದಿರುಗಿದನು. ಕಾಲವಿಲ್ಲದ ಒಂದು ಸಂಸ್ಕೃತ ಶಾಸನ ಬಾಗಳಿಯಲ್ಲಿ ಇದೆ.

**ಸಾಮ್ರಾಜ್ಯ**

**ಮಕ್ಕಳು**

೧) ಚೇದಿರಾಜೋ　　೧) ಪಂಡಿತ ಪಾಂಡ್ಯದೇವ

೨) ಪಾಂಡಿ ಭೂಪಃ　　೨) ವೀರಪಾಂಡ್ಯ ನೃಪಂ

೩) ಇರುಕ್ಕವೇಳೋ　　೩) ವಿಜಯಪಾಂಡ್ಯಸ್ಯನೂನಂ

೪) ಶ್ರೀರಾಯಪಾಂಡೋ ಸೋಮದೇವಿ–ಮಡದಿ

**ಶ್ರವಣಬೆಳಗೊಳ ಶಾಸನದಲ್ಲಿ ೧೨೪; ೩೨೪; ಕ್ರಿ.ಶ. ೧೧೬.**

೧) ಫಲಮಾಮಡ ಪಾಂಡ್ಯ

೨) ಫಲಕ ಪಾಂಡ್ಯ

೩) ಸೊಂಚಿ ಪಾಂಡ್ಯ

೪) ರಾಯ ಪಾಂಡ್ಯ

೫) ಗೊಲೆಯ ಪಾಂಡ್ಯ

೬) ಕುಮಾರ ವಿಜಯ ಪಾಂಡ್ಯ

**ಕರ್ನಾಟಕ ಪರಂಪರೆ ಸಂಪುಟ–೧ ರಲ್ಲಿ**

೧) ಮಂಗಯ್ಯ–ಆದಿತ್ಯದೇವ.

೨) ಚೇದಿರಾಜ.

೩) ಪಾಂಡ್ಯ

೪) ಪಲಂತನು.

೫) ಇರುಕ್ಕವೇಲ್ (ತ್ರಿಭುವನ ಮಲ್ಲಪಾಂಡ್ಯ) ಮಕ್ಕಳು

೬) ರಾಯ ಪಾಂಡ್ಯ, ಪಂಡಿತಪಾಂಡ್ಯ, ವೀರಪಾಂಡ್ಯ, ವಿಜಯ–ಕಾಮದೇವ

**ಹುಲ್ಲೂರು ಶ್ರೀನಿವಾಸ ಜೋಯಿಸರ ಪ್ರಕಾರ :**

೧) ಪಳತ ಪಾಂಡ್ಯ (ಕ್ರಿ.ಶ. ೧೦೭೬–೧೦೮೩)

೨) ಇರುಕ್ಕ ವೇಲ್ (ಕ್ರಿ.ಶ. ೧೦೮೩–೧೧೨೭)

೩) ತ್ರಿಭುವನ ಮಲ್ಲ ರಾಯಪಾಂಡ್ಯ (ಕ್ರಿ.ಶ. ೧೧೨೪–೧೧೩೮)

೪) ಪಂಡಿತ ಪಾಂಡ್ಯ (ಕ್ರಿ.ಶ. ೧೧೩೮–೧೧೪೩).

೫) ವೀರಪಾಂಡ್ಯ (ಕ್ರಿ.ಶ.೧೧೪೩–೧೧೬೮).

೬) ವಿಜಯ ಪಾಂಡ್ಯ.

**Some feudatory families of medieval Karnataka – A study by Z.K. Ansari**

೧) ಆದಿತ್ಯ ದೇವ

೨) ಚೇದಿ ರಾಜ.

೩) ಪಲಮಾಂದ ಪಾಂಡ್ಯ–೧

೪) ಇರುಕ್ಕವೇಲ್

೫) ರಾಯಪಾಂಡ್ಯ ಅವನ ಮಡದಿ ಸೋಮದೇವಿ, ಅರ್ಥಾತ್ ಸೋವಲದೇವಿ.

**ರಾಯಪಾಂಡ್ಯನ ಮಕ್ಕಳು** :

೧) ಪಂಡಿತ ಪಾಂಡ್ಯ–ಮಗತೈಲಪ

೨) ವೀರಪಾಂಡ್ಯ–ಮಡದಿಯರು ೧. ಗಂಗಾದೇವಿ ೨. ವಿಜಯದೇವಿ.

೩) ವಿಜಯಪಾಂಡ್ಯ ಅಥವಾ ಕಾಮದೇವ ಅವನ ಮಕ್ಕಳು.

೧. ಒಡೆಯ ಅಥವಾ ಉದಯ ೨.ಪಂಡಿತ ಪಾಂಡ್ಯ–೨, ೩.ವಿಜಯಪಾಂಡ್ಯ–೨.

**ಪ್ರಸ್ತುತ ಈ ಲೇಖಕರ ಪ್ರಕಾರ** :

೧) ಆದಿತ್ಯ ದೇವ–ಮಂಗಯ್ಯ ಪಾಂಡ್ಯ ದೇವ.

೨) ಚೇದಿರಾಜ.

೩) ಪಲಮಾಂದ ದೇವಪಾಂಡ್ಯ–೧.

೪) ಇರುಕ್ಕವೇಲ್–ಅರ್ಥಾತ್ ಪಲಿತಪಾಂಡ್ಯ–೨.

೫) ರಾಯಪಾಂಡ್ಯ–ಮಡದಿ–ಸೋಮದೇವಿ ಅರ್ಥಾತ್ ಸೋವಲದೇವಿ.

ವಿಜಯಪಾಂಡ್ಯನ ಮಕ್ಕಳು :

೧) ಒಡೆಯ –ಉದಯ.

೨) ಪಂಡಿತಪಾಂಡ್ಯ.

೩) ಕುಮಾರ ವಿಜಯ ಪಾಂಡ್ಯ.

ಚಾಲುಕ್ಯ ರಾಜ ತ್ರಿಭುವನಮಲ್ಲನು ಕಲ್ಯಾಣಪುರ ನೆಲೆ ವೀಡಿನಿಂದ ಆಳುತ್ತಿದ್ದಾಗ, ಅವನ ಮಹಾಮಂಡಳೇಶ್ವರ ಪಅತ ಪಾಂಡ್ಯನು ಬ್ರಾಹ್ಮಣರಿಗೆ ನೀರ್ಗುಂದವನ್ನು ದಾನ ನೀಡಿದನು. ಈ ಊರು ಕೋಗಳಿ ಐನೂರು ಬಿಕ್ಕಿಗ-೭೦ ರಲ್ಲಿದ್ದಿತು. (ಕನ್ನಡ ವಿ.ವಿ. ಹಂಪಿ ಸಂಪುಟ ೧ ರಿಂದ). ಕ್ರಿ.ಶ. ೧೧೭೦ ವರೆಗೂ ಈ ಭಾಗವನ್ನು ಉಚ್ಚಂಗಿ ಪಾಂಡ್ಯರು ಆಳಿದರು.

## ಹೊಯ್ಸಳರು

ಹೊಯ್ಸಳರು ಮೊದಲು ಗಂಗರ ನಂತರ ಕಲ್ಯಾಣ ಚಾಲುಕ್ಯರ ಮಾಂಡಲಿಕ ರಾಗಿದ್ದರು. ಸ್ವತಂತ್ರನಾಗಲು ವಿಷ್ಣುವರ್ಧನ ಪ್ರಯತ್ನಿಸುತ್ತಿದ್ದನು. ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ಇದು ಸಾಧ್ಯವಾಗಲಿಲ್ಲ. ಮುಂದೆ ಕಲಚೂರಿಗಳ ಕಾಲದಲ್ಲಿ ಪ್ರಯತ್ನ ಯಶ ಕಂಡಿರಬೇಕು. ಕ್ರಿ.ಶ. ೧೧೮೯ ರ ಶಾಸನದ ಪ್ರಕಾರ ಉಚ್ಚಂಗಿ ಪಾಂಡ್ಯರು ಹೊಯ್ಸಳರ ಸಾಮಂತರಾಗಿದ್ದುದು ಕ್ರಿ.ಶ.೧೧೯೩ ರ ಬಾಗಳಿ ಶಾಸನದಿಂದ ಗೊತ್ತಾಗುತ್ತದೆ. ಆಗ ವೀರ ಬಲ್ಲಾಳನು ಬಾಗಳಿಗೆ ಬಂದಿರುವನು. ಕ್ರಿ.ಶ.೧೨೨೪ ರ ನೀಲಗುಂದ ಶಾಸನವು ಬಲ್ಲಾಳನು ಸೇವುಣರನ್ನು ಬೆನ್ನಟ್ಟಿ ಓಡಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ.೧೨೨೮ ರ ಬಾಗಳಿಯ ಮತ್ತೊಂದು ಶಾಸನವು ಬಾಗಳಿಯ ಕಲಿದೇವರಿಗೆ ನರಸಿಂಹನು ದಾನ ನೀಡಿದ್ದನ್ನು ಪ್ರಸ್ತಾಪಿಸುತ್ತದೆ.

## ಯಾದವರು

ಕ್ರಿ.ಶ.೧೨೫೦ ರಲ್ಲಿ ಬಾಗಳಿಯಲ್ಲಿ ಸಿಂಘಣನ ಮೊಮ್ಮಗ ಕಂಧರ ದೇವನ ಶಾಸನವು ದೊರಕಿರುತ್ತದೆ. ಕ್ರಿ.ಶ.೧೨೫೮ ಇವರ ಶಾಸನದಲ್ಲಿ ನೊಳಂಬವಾಡಿ ಮತ್ತು ಕೋಗಳಿಯ ವರ್ಣನೆಯಿದೆ. ಕ್ರಿ.ಶ. ೧೨೭೯ ರ ಕುಂಚೂರು ಕ್ರಿ.ಶ.೧೨೮೦ ರ ಬೆಣ್ಣೆಹಳ್ಳಿಯಲ್ಲಿಯ ಶಾಸನಗಳಲ್ಲಿ ಮಹಾದೇವ ಅಣ್ಣಕಂಧರನ ಮಗ ರಾಮಚಂದ್ರನ ಉಲ್ಲೇಖವಿದೆ. ಕ್ರಿ.ಶ.೧೨೫೧ ರ ಕಡತಿ ಮತ್ತು ಹಲುವಾಗಲು ಶಾಸನಗಳಲ್ಲಿ ರಾಮಚಂದ್ರನನ್ನು ಹೆಸರಿಸುತ್ತದೆ. ಅರಸನಾಳು, ಕುಂಚೂರು, ಹಲುವಾಗಲು, ಯರಬಾಳು, ಮತ್ತೂರು, ಮಾಚಿಹಳ್ಳಿ, ಬೈರಾಪುರ, ಗುರುಶಾಂತನಹಳ್ಳಿಗಳಲ್ಲಿ, ಕೃಷ್ಣಗೌಡ, ಹನುಮಂತಗೌಡ, ಬಸವನಗೌಡ, ಹನುಮನಗೌಡ ಮುಂತಾದವರು ಯಾದವ ಜಾತಿಗೆ ಸೇರಿದ ಗೌಡರುಗಳು ಇದ್ದರು.

## ವಿಜಯನಗರದ ಅರಸರು (೧೩೩೬ ರಿಂದ ೧೫೬೫)

ಕ್ರಿ.ಶ. ೧೩೩೬ ರಿಂದ ವಿದ್ಯಾನಗರ – ವಿಜಯನಗರ ಸಾಮ್ರಾಜ್ಯ ಉದಯಿಸಿ ೧) ಸಂಗಮ ೨) ಸಾಳುವ ೩) ತುಳು ೪) ಅರವೀಡು ಮನೆತನಗಳಿಂದ ೧೭ನೇ

ಶತಮಾನದವರೆಗೂ ೨೪ ಜನ ಪ್ರಮುಖ ಅರಸರಿಂದ ದಕ್ಷಿಣ ಭಾರತದಲ್ಲಿ ವಿಜೃಂಭಿಸಿತು. ಕ್ರಿ.ಶ.೧೫೬೫ ರಲ್ಲಿ ತಾಳೆಕೋಟೆ ಕಾಳಗದಲ್ಲಿ ಸೋಲು ಅನುಭವಿಸಿ ಮುಂದಿನ ದಿನಗಳಲ್ಲಿ ೧) ಆನೆಗೊಂದಿ ೨) ಚಂದ್ರಗಿರಿ ೩) ಪೆನುಗೊಂಡ ಕೇಂದ್ರಗಳಿಂದ ಆಳ್ವಿಕೆ ನಡೆಸಿತು.

೧) ಶೃಂಗೇರಿಯ ಬಳಿಯ ಕಲಾಸ ಹಳ್ಳಿಯೇ ಸಂಗಮ ರಾಯರ ಮೂಲಸ್ಥಳ ವಿರಬೇಕೆಂದು ಪಿ.ಬಿ.ದೇಸಾಯಿ ಅವರ ಊಹೆಯಾಗಿದೆ.

೨) ಕನಕಗಿರಿ ಗೋಪುರದ ಕೆಳಗೆ ಇರುವ ಶಾಸನದಲ್ಲಿ ಸಂಗಮನು ಯದುವಂಶದವನೆಂದು ಹೇಳಿ ಅವನ ಮಕ್ಕಳು ಹರಿಹರ, ಬುಕ್ಕರು ಎಂದು ಉಲ್ಲೇಖವಾಗಿದೆ.

೩) ಹರಿಹರ, ಬುಕ್ಕರು ಭದ್ರಾ ನದಿ ಸಂಗಮ ಕೂಡ್ಲಿಗಿಯಿಂದ ಹರಿಹರದವರೆಗಿನ ಪ್ರದೇಶದವರೆಂದೂ, ಹೊಯ್ಸಳರ ದುಸ್ಥಿತಿಯಲ್ಲಿ ಆಡಳಿತ ಸೂತ್ರಗಳನ್ನು ಕೈಗೆತ್ತಿಕೊಂಡಿರಲು ಸಾಧ್ಯ ಎಂದು ಡಾ॥ ದೇವರ ಕೊಂಡಾರೆಡ್ಡಿಯವರ ಅಭಿಪ್ರಾಯವಾಗಿರುತ್ತದೆ.

೪) ಪಿ.ಬಿ.ದೇಸಾಯಿ ಅವರ ಪ್ರಕಾರ ಸಂಗಮನ ಮಡದಿ ಶಾರದೆಯವರಿಗೆ ಐದು ಜನ ಗಂಡು ಮಕ್ಕಳು ಅವರು ೧) ಹರಿಹರ ೨) ಕಂಪಣ್ಣ ೩) ಬುಕ್ಕ ೪) ಮಾರಪ್ಪ ೫) ಮುದ್ದಣ್ಣ.

ಚಾಮರಾಜನಗರ ಬೊಮ್ಮು ಶಾಸನದ ಪ್ರಕಾರ ಸಂಗಮನ ತಂದೆ ಬುಕ್ಕ ಭೂಪಾಲಿ ತಾಯಿ ಕಾಮಾಯು ಈ ದಂಪತಿಗಳಿಂದ ೧) ಹರಿಹರ ೨) ಕಂಪಣ್ಣ ೩) ಬುಕ್ಕ ೪) ಮಾರಪ್ಪ ೫) ಮುದ್ದಣ್ಣ. ಇಮ್ಮಡಿ ಹರಿಹರನ (ಮಾರಪ್ಪ) ಗದುಗಿನ ತಾಮ್ರ ಶಾಸನದಂತೆ ಶಕೆ ೧೩೦೧ ರಾಯನು ಅಲ್ಪಕಾಲದಲ್ಲಿಯೇ ರಾಜ್ಯ ವಿಸ್ತರಿಸಿದನು ಎಂದಿದೆ.

**ಸಂಗಮ ಮನೆತನ**

| | | | |
|---|---|---|---|
| ೧) | ಹರಿಹರ ರಾಯ. | ೨) | ಬುಕ್ಕರಾಯ |
| ೩) | ಇಮ್ಮಡಿ ಹರಿಹರ ರಾಯ | ೪) | ಇಮ್ಮಡಿ ಬುಕ್ಕರಾಯ |
| ೫) | ಇಮ್ಮಡಿ ವಿರೂಪಾಕ್ಷ | ೬) | ದೇವರಾಯ |
| ೭) | ವೀರ ವಿಜಯರಾಯ | ೮) | ಇಮ್ಮಡಿ ದೇವರಾಯ |
| ೯) | ಮಲ್ಲಿಕಾರ್ಜುನ | ೧೦) | ಮುಮ್ಮಡಿ ವಿರೂಪಾಕ್ಷ |

**ಸಾಳುವ ಮನೆತನ**

೧) ನರಸಿಂಹರಾಯ ೨) ಇಮ್ಮಡಿ ನರಸಿಂಹರಾಯ

**ತುಳು ಮನೆತನ**

೧) ನರಸನಾಯಕರಾಯ ೨) ವೀರನರಸಿಂಹರಾಯ

೩) ಶ್ರೀ ಕೃಷ್ಣದೇವರಾಯ ೪) ಅಚ್ಯುತ ದೇವರಾಯ

೫) ಸದಾಶಿವರಾಯ–ಅಳಿಯ ರಾಮರಾಯ.

**ಅರವೀಡು ಮನೆತನ**

೧) ತಿರುಮಲರಾಯ – i) ಶ್ರೀ ರಂಗರಾಯ ii) ಮುಮ್ಮಡಿ ಶ್ರೀರಂಗರಾಯ

೨) ವೆಂಕಟಪತಿ ದೇವರಾಯ ೩) ಇಮ್ಮಡಿ ವೆಂಕಟಪತಿರಾಯ.

೪) ನಾಲ್ವಡಿ ರಾಮದೇವರಾಯ.

ಅರವೀಡು ಮನೆತನಕ್ಕೆ ಕರ್ನಾಟಕ ಮನೆತನವೆಂದು ಕರೆದರು. ಈ ಮನೆತನದಲ್ಲಿ ಏಳು ಜನರು ಒಟ್ಟು ೧೧೨ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ವಿಜಯನಗರದ ಪ್ರಮುಖ ಅರಸರು ೨೪ ಜನರು. ಅವರಲ್ಲಿ ಐದು ಜನರನ್ನು ಹೊರತುಪಡಿಸಿದರೆ ಉಳಿದವರು ಹೆಚ್ಚು ಸಮರ್ಥರು. ಈ ಪಟ್ಟಣವು (ಹಂಪಿ) ರೋಮನ್ ನಗರದಂತೆ ಭವ್ಯವಾಗಿದ್ದಿತೆಂದು ಯಾತ್ರಿಕರ ಹೇಳಿಕೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಇದುವರೆಗೂ ವಿಜಯನಗರದ ಅರಸರ ಎಂಟು ಶಾಸನಗಳು ದೊರಕಿವೆ. ೧) ಚಟ್ನಿಹಳ್ಳಿ ೨) ನೀಲಗುಂದ ೩) ಬಾಗಳಿ ೪) ಮೈದೂರು ೫) ಕೆರೆಗುಡಿಹಳ್ಳಿ ೬) ಕಸವನಹಳ್ಳಿ ೭) ಅರಸೀಕೆರೆಗಳಲ್ಲಿ ಒಂದೊಂದು.

ಪ್ರಾಚೀನ ಕಾಲದಿಂದಲೂ ಹರಪನಹಳ್ಳಿ ಗರಡಿ ಮನೆ ಮತ್ತು ಕುಸ್ತಿಗೆ ಹೆಸರು ಮಾಡಿದೆ. ನ್ಯೂನಿಜ್‌ನ ಪ್ರಕಾರ "ವಿಜಯನಗರದ ಅರಸರು ಮಹಾನವಮಿ ಉತ್ಸವ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದ ಮಲ್ಲಯುದ್ಧ, ಕುಸ್ತಿಗಳಿಗಾಗಿ ಒಂದು ಸಾವಿರ ಜಟ್ಟಿಗಳನ್ನು ಅರಸ ಹೊಂದಿದ್ದರು" ಎಂದಿರುವನು. ವಿಜಯನಗರದವರ ಜಟ್ಟಿ ಕಾಳಗ ಕುಸ್ತಿ ವ್ಯವಸ್ಥೆಗಳನ್ನು ಅವರ ಸಾಮಂತ ಅರಸರಾದ ಹರಪನಹಳ್ಳಿ ಪಾಳೆಯಗಾರರು ಮುಂದುವರಿಸಿದರು. ಅದರಂತೆ ಹರಪನಹಳ್ಳಿಯ ಪಾಳೆಯಗಾರರು ಪೈಲ್ವಾನರಿಗೆ ಪ್ರೋತ್ಸಾಹಿಸುತ್ತಿದ್ದರು. ತಾವೂ ಗರಡಿ ಮನೆಗಳಿಗೆ ಹೋಗಿ ಕುಸ್ತಿಯಾಟದಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. ಒಳ್ಳೆಯ ದೇಹ ಬೆಳೆಸಿದ ಶಕ್ತಿವಂತರನ್ನು ತಮ್ಮ ಸೈನ್ಯಕ್ಕೆ ಭರ್ತಿ ಮಾಡಿಕೊಳ್ಳುತ್ತಿದ್ದರು.

ಗ್ರಾಮಗಳ ಕೆಲವೊಂದು ಗರಡಿ ಮನೆಗಳು ದೇವಾಲಯಗಳ ಆವರಣಗಳಲ್ಲಿರುತ್ತಿದ್ದುವು. ಗರಡಿ ಮನೆಗೆ ಒಂದು ಸಂಘವಿರುತ್ತಿದ್ದಿತು. ಗ್ರಾಮಗಳಲ್ಲಿ ನಡೆಯುವ ಹಬ್ಬ, ಉತ್ಸವಗಳಲ್ಲಿ ಈ ಸಂಘಗಳು ಹೆಚ್ಚು ಆದ್ಯತೆ ಪಡೆದಿದ್ದುವು. ಗರಡಿ ಮನೆಯ ಬಾಗಿಲು ಕಿರಿದಾಗಿ, ಒಳಗೆ ಆಂಜನೇಯ ಅಥವಾ ಮೌಲಾಲಿ ಮೂರ್ತಿಗಳನ್ನು ಇಡುತ್ತಿದ್ದರು. ಮಹಮದ್ ಪೈಗಂಬರರ ಕಿರಿಯ ಸೋದರ, ಇವನೊಬ್ಬ ಜಟ್ಟಿಯಾಗಿದ್ದನೆಂದು ತಿಳಿದು ಬರುತ್ತದೆ. ಮೊದಮೊದಲು ಶಾಲಾ–ಕಾಲೇಜುಗಳಲ್ಲಿ ಕುಸ್ತಿ ಮಾಸ್ಟರ್ ಎಂದು ನೇಮಕವಾಗುತ್ತಿದ್ದರು. ಕಾಲ ಕಳೆದಂತೆ ಕುಸ್ತಿ ಆಡಿಸುವ ಶಿಕ್ಷಕರೇ ದೈಹಿಕ ಶಿಕ್ಷಕರಾದರು. ಹರಪನಹಳ್ಳಿ ತಾಲ್ಲೂಕಿನ ದೊಡ್ಡ ಗ್ರಾಮದಲ್ಲಿ ಎರಡು ಗರಡಿ ಮನೆಗಳಿದ್ದುವು. ಕುಸ್ತಿಯಾಟಗಳಲ್ಲಿ ಉತ್ಸವ–ಪಂದ್ಯಗಳಲ್ಲಿ ಗೆದ್ದು ಬಂದವರಿಗೆ ಗ್ರಾಮದಲ್ಲಿ ಮೆರವಣಿಗೆ ಮಾಡುತ್ತಿದ್ದರು, ಅಷ್ಟೇ ಏಕೆ ಒಂದು ಓಣಿ ಇಲ್ಲವೇ ಇಡೀ ಗ್ರಾಮವೇ ಒಬ್ಬ ಪೈಲ್ವಾನನಿಗೆ ಖರ್ಚು ಕೊಟ್ಟು ಬೆಳೆಸುತ್ತಿದ್ದರು.

ಈಗಲೂ ಹರಪನಹಳ್ಳಿ ಪಟ್ಟಣದಲ್ಲಿ ಕೆಲವು ಗರಡಿ ಮನೆಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ, ಚಿತ್ತಾರಗೇರಿ ಗರಡಿ, ಬಾಣಗೇರಿ ಗರಡಿ, ಹುಲಿ ಬೆಂಚಿ ಉಕ್ಕಡ ಗರಡಿ, ಹುಲ್ಲು ಗರಡಿ, ಗೌಳೇರ ಕೇರಿ ಗರಡಿ, ದೊಡ್ಡ ಗರಡಿ, ತೆಕ್ಕೇದಕೇರಿ ಗರಡಿ, ಸೈತಾನ ಗರಡಿ, ಗೌಡರ ಗರಡಿ, ಕಾತರಕಿ ಗರಡಿ, ಕುರುಬರ ಕೇರಿ ಗರಡಿ, ಗುಡೇಕೋಟೆ ಗರಡಿ.

**ಕುಸ್ತಿ ಆಟದಲ್ಲಿ ಎರಡು ಪ್ರಮುಖ ಅಂಶಗಳು**:

೧) ಪಟ್ಟುಗಳನ್ನು ಹಾಕುವುದು (ಹಿಡಿತ)

೨) ಪಟ್ಟು ಬಿಡಿಸಿಕೊಳ್ಳುವಿಕೆ (ತೋಡುಗಳು)

**ಪಟ್ಟುಗಳಿಗೆ ಹೀಗೆ ಹೆಸರಿಸುವರು**

**ಸಂಸ್ಕೃತದಲ್ಲಿ–ಉರ್ದು ಭಾಷೆಯಲ್ಲಿ–ಕನ್ನಡದಲ್ಲಿ**

೧) ಸುಪ್ರತೀತ – ಟಾಂಗ್ – ಜನಿವಾರ.

೨) ಅರಿರುದ್ರ – ಬಿಹಾರ್‌ಟಾಂಗ – ಉಲ್ಟಾ ಜನಿವಾರ.

೩) ಯಕ್ಷಬಂಧ – ಕೊಕ್ಕರೆ.

೪) ವಾಲಿ ಪ್ರಹಾರ್ – ಕಲಾರ ಜಂಗ್ – ಕಲಾರ್ ಜಂಗ್.

೫) ಮಹಾಶಂ – ಕಮ್ಚಿ – ಕಮಚಿ

೬) ಕೀಚಕ ಬಂಧ – ತಳಹತ್ತ – ತಳಹತ್ತ.

೭) ಪಕ್ಷಿಸಿಂಹ – ಉಖಾಡ್ – ಮಲ್ಲಗಂಟು

೮) ಮಲ್ಲಚಕ್ರ – ಗಿರ್ರ ಮಲ್ಲಚಕ್ರ.

೯) ಅನಂತ ವಿಜಯ – ದುವಲಿಂಗ – ಚಪ್ಪಡಿ

೧೦) ಏಕಪಾದ ಬಂಧ – ಅರಲಗಡಿ

೧೧) ಹನುಮಬಂಧ – ಕುಹರ.

೧೨) ಬಾಹು ಜಟ – ಸಾಂಡಿ – ಸಿರಲಗಡಿ.

ಕುಸ್ತಿಗಳು ನಡೆಯುವ ಮೈದಾನಕ್ಕೆ 'ಅಖಾಡ' ಎಂದು ಕರೆಯಲಾಗಿದೆ. ಕುಸ್ತಿವೀರರು ಬಿಗಿಯಾಗಿ ಕಾಸೆಯನ್ನು ಕಟ್ಟಿ ಅದರ ಮೇಲೆ ಚಡ್ಡಿಯನ್ನು ಧರಿಸುತ್ತಿದ್ದರು. ಕಾಸೆಯ ಮೇಲೆ ಕಿರುಪಂಚೆಯನ್ನು ಉಡುತ್ತಿದ್ದರು ತಲೆಗೆ ಕುಲಾಯಿ (ಹಟ್ಟಿ) ಬಿಗಿದುಕೊಳ್ಳುವರು. ನಡಕ್ಕೆ ಜರತಾರಿ ನಡಪಟ್ಟಿ ಇರುವುದು. ಹಣೆಗೆ ಕುಂಕುಮ ಕಸ್ತೂರಿ ತಿಲಕ ಕೊರಳಲ್ಲಿ ಹೂಮಾಲೆ ಧರಿಸುತ್ತಿದ್ದರು. ಕುಸ್ತಿಯಲ್ಲಿ ಪ್ರಸಿದ್ಧರಿಗೆ ಮಲ್ಲರೆಂದು ಕರೆಯುತ್ತಿದ್ದರು. ಹರಪನಹಳ್ಳಿಯಲ್ಲಿ ಗೊರವಿನ ತೋಟ ಕುಸ್ತಿಯಾಟದ ಮೈದಾನವಾಗಿದ್ದಿತು.

## ಹರಪನಹಳ್ಳಿಯ ಸ್ವಾತಂತ್ರ್ಯ ಯೋಧರು

ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದರಲ್ಲಿ ಪಾಲ್ಗೊಂಡ ಹರಪನಹಳ್ಳಿ ಸ್ವಯಂ ಸೇವಕರು ಹರ್ಡೀಕರ್ ಮಂಜಪ್ಪನವರಿಂದ ಪ್ರಶಂಸಿಸಲ್ಪಟ್ಟರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂದಿನ ಬಳ್ಳಾರಿ ಜಿಲ್ಲೆಯ ತಾಲ್ಲೂಕುವಾರು ಜೈಲು ಶಿಕ್ಷೆ ಅನುಭವಿಸಿದವರಲ್ಲಿ ಹರಪನಹಳ್ಳಿಯವರೇ ಪ್ರಮುಖರು ಮತ್ತು ಅಧಿಕ. ಸುಮಾರು ೭೧ ಕ್ಕೂ ಹೆಚ್ಚು ಜನರು. ಅವರಲ್ಲಿ ಕೆಲವರ ಬಗ್ಗೆ ಇಲ್ಲಿ ತಿಳಿಸಿದೆ.

| ಸ್ವಾತಂತ್ರ್ಯ ಹೋರಾಟಗಾರರು | ಶಿಕ್ಷೆ ಪಡೆದ ಸಂವತ್ಸರ ಮತ್ತು ಅವಧಿ |
|---|---|
| 1. ಇಜಾರಿ ವಸುಪಾಲಪ್ಪನವರು | 1941ರಲ್ಲಿ ವ್ಯಕ್ತಿ ಸತ್ಯಾಗ್ರಹದಲ್ಲಿ 6 ತಿಂಗಳು, ೮೦೦ ರೂ.ದಂಡ |
| 2. ಇಜಾರಿ ಸಿರಸಪ್ಪನವರು | 1942–44 (2 ವರ್ಷ ಸ್ಥಾನಬದ್ಧತೆ) ವೆಲ್ಲೂರು, ತಂಜಾವೂರು, ಮಧುರೈ ಜೈಲುಗಳಲ್ಲಿ |

| | |
|---|---|
| 3. ಇಜಾರಿ ವರ್ಧಮಾನಪ್ಪ | 1947 ಮೈಸೂರು ಚಲೋ ಸತ್ಯಾಗ್ರಹ ಸೆಪ್ಟೆಂಬರ್ ಮತ್ತು ಅಕ್ಟೋಬರ್ |
| 4. ಸೆಟ್ರ ಚೂಡಪ್ಪ | 28-8-1930 ಈಚಲ ಗಿಡ ಕಡಿಯುವ ಚಳವಳಿ 3 ತಿಂಗಳು, ರೂ. 30/- ದಂಡ |
| | 1930-31 ಉಪ್ಪಿನ ಸತ್ಯಾಗ್ರಹ 3 ತಿಂಗಳು ಶಿಕ್ಷೆ, ಕರಪತ್ರ ಹಂಚಿದ್ದಕ್ಕಾಗಿ |
| 5. ಕಂಚಿನಕೋಟೆ ಬೊಮ್ಮಪ್ಪ | 28-8-1930 ಈಚಲಗಿಡ ಕಡಿಯುವ ಚಳವಳಿ 3 ತಿಂಗಳು, ರೂ. 30/- ದಂಡ |
| 6. ಅರಳಿಕಟ್ಟಿ ಪೂರ್ಣಾಚಾರ್ | 28-8-1930 ಈಚಲಗಿಡ ಕಡಿಯುವ ಚಳವಳಿ 3 ತಿಂಗಳು, ರೂ. 30/- ದಂಡ |
| 7. ಆರ್. ಹಯವದನರಾವ್ | 28-8-1930 ಈಚಲಗಿಡ ಕಡಿಯುವ ಚಳವಳಿ |
| 8. ತಾಂಬ್ರಪರ್ಣಿವೆಂಕೋಬರಾವ್ | 28-8-1930 ಈಚಲಗಿಡ ಕಡಿಯುವ ಚಳವಳಿ 3 ತಿಂಗಳು, ರೂ. 30/- ದಂಡ |
| 9. ಕೊಪ್ಪಳ ರುದ್ರಪ್ಪ | 10-2-1932 ರಲ್ಲಿ 6 ತಿಂಗಳು ಶಿಕ್ಷೆ, ಕರಪತ್ರ ಹಂಚಿದ್ದಕ್ಕೆ |
| | 28-8-1930ರಲ್ಲಿ 6 ವಾರ ಶಿಕ್ಷೆ ರೂ. 10/- ದಂಡ. 1932 ರಲ್ಲಿ 15 ದಿವಸ ರಿಮ್ಯಾಂಡ್ ಹೋಂನಲ್ಲಿ ಇದ್ದರು. ರೂ. 30/- ದಂಡ 1945 ರಲ್ಲಿ ಸ್ಥಾನಬದ್ಧತೆ-ನೀಲಗುಂದ ಅಡ್ಡ ರಸ್ತೆಯಲ್ಲಿ ಟಪಾಲು ದರೋಡೆ ಮಾಡಿದ್ದಕ್ಕೆ |
| 10. ಬಣಗಾರ್ ಹೊನ್ನಪ್ಪ | 1942ರಲ್ಲಿ ಸ್ಥಾನಬದ್ಧತೆ-ಭಾರತ ಬಿಟ್ಟು ತೊಲಗಿ ಚಳವಳಿ, 6 ತಿಂಗಳು ಶಿಕ್ಷೆ ಕರಪತ್ರ ಹಂಚಿದ್ದಕ್ಕೆ |
| 11. ಡಾ॥ ದಂಡಿನರಾಮರಾವ್ | 10-2-1932ರಲ್ಲಿ 6 ತಿಂಗಳು ಶಿಕ್ಷೆ ಕರಪತ್ರ ಹಂಚಿದ್ದಕ್ಕೆ |
| 12. ಬೂದಿ ಬ್ರಹ್ಮಪ್ಪ (ತಿಮ್ಮಣ್ಣ) | 10-2-1932 1 ವರ್ಷ ಶಿಕ್ಷೆ ಕರಪತ್ರ ಹಂಚಿದ್ದಕ್ಕೆ |

| | |
|---|---|
| 13. ತಾಂಬ್ರಪರ್ಣಿ ಗೋಪಾಲಕೃಷ್ಣಾಚಾರ್ | 1932 ಜುಲೈ ತಿಂಗಳಲ್ಲಿ 1 ವರ್ಷ ಶಿಕ್ಷೆ ಕರಪತ್ರ ಹಂಚಿದ್ದಕ್ಕೆ |
| 14. ಮುದುಗಲ್ ನಾಗಪ್ಪ | 1942 ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿಸಿರಿ ವೆಲ್ಲೂರು, ತಂಜಾವೂರು ಮತ್ತು ಮಧುರೆ ಜೈಲುಗಳಲ್ಲಿ. |
| 15. ನೆಲ್ಕುದ್ರಿ ಮುಕ್ಕಣ್ಣ | 1940–42 ರಲ್ಲಿ ವ್ಯಕ್ತಿ ಸತ್ಯಾಗ್ರಹ 6 ತಿಂಗಳು ಶಿಕ್ಷೆ 1,000/– ರೂ. ದಂಡ. |
| 16. ಕಟ್ಟಿ ಸೇತೂರಾಮಚಾರ್ | 1942 ರಲ್ಲಿ ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿ 8 ತಿಂಗಳು ಸ್ಥಾನಬದ್ಧತೆ. |
| 17. ಹೆಚ್.ಎಂ. ಚಂದ್ರಯ್ಯ | 1942 ಸ್ಥಾನಬದ್ಧತೆ–ಭಾರತ ಬಿಟ್ಟು ತೊಲಗಿರಿ, 15 ತಿಂಗಳು ವೆಲ್ಲೂರು, ತಂಜಾವೂರು ಜೈಲುಗಳಲ್ಲಿ. |
| 18. ಕೋ. ಸಿದ್ದಲಿಂಗಯ್ಯ | 1942 ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿರಿ |
| 19. ತಾಂಬ್ರಪರ್ಣಿ ಪೂರ್ಣಪ್ರಜ್ಞಾಚಾರ್ | 1942 ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿರಿ |
| 20. ಹೊನ್ನಾಳಿ ಹೆಚ್.ವಿ.ರಂಗಪ್ಪ | 1942 ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿರಿ |
| 21. ಹೊನ್ನಾಳಿ ಸಿ. ಈಶ್ವರಪ್ಪ | ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿರಿ |
| 22. ಲಕ್ಕುಂಡಿ ಶ್ಯಾಮರಾವ್ | 16–8–1930 ರಲ್ಲಿ 3 ತಿಂಗಳು ಶಿಕ್ಷೆ, ರೂ.10/– ದಂಡ ಈಚಲ ಮರ ಕಡಿದುದ್ದಕ್ಕೆ |
| 23. ಲಕ್ಕುಂಡಿ ಅನಂತರಾವ್ | 16–8–1930 ರಲ್ಲಿ 3 ತಿಂಗಳು ಶಿಕ್ಷೆ, ರೂ.10/– ದಂಡ ಈಚಲ ಮರ ಕಡಿದುದ್ದಕ್ಕೆ |
| 24. ಬಿದರಹಳ್ಳಿ ಜಗನ್ನಾಥರಾವ್ | 16–8–1930 ರಲ್ಲಿ 3 ತಿಂಗಳು ಶಿಕ್ಷೆ, ರೂ.10/– ದಂಡ ಈಚಲ ಮರ ಕಡಿದುದ್ದಕ್ಕೆ. |
| 25. ಇಜಾರಿ ಶ್ರೀಧರಪ್ಪ | 1930 ಉಪ್ಪಿನ ಸತ್ಯಾಗ್ರಹ 3 ತಿಂಗಳು ಕಠಿಣ ಶಿಕ್ಷೆ, ರೂ.30/– ದಂಡ. |

| | |
|---|---|
| 26. ಟಿ.ಬಿ.ಕೇಶವರಾವ್ (ಹರಪನಹಳ್ಳಿ) | 1932 ಬಿಜಾಪುರ ಜೈಲು 3 ತಿಂಗಳು ಕಠಿಣ ಶಿಕ್ಷೆ. 1931 ಬೆಳಗಾವಿ ಜೈಲು 4 ತಿಂಗಳು ಕಠಿಣ ಶಿಕ್ಷೆ. 1942–44 ಸ್ಥಾನಬದ್ಧತೆ 1 ವರ್ಷ 8 ತಿಂಗಳು ವೆಲ್ಲೂರು ಮತ್ತು ತಾಂಜವೂರು. |
| 27. ಟಿ.ಬಿ.ಜಯಲಕ್ಷ್ಮೀ ದೇವಿ(ಹರಪನಹಳ್ಳಿ) | 1932 ರಲ್ಲಿ 6 ತಿಂಗಳು ಶಿಕ್ಷೆ, ರೂ.150/– ದಂಡ ವೆಲ್ಲೂರು ಮಹಿಳೆಯರ ಜೈಲು |
| 28. ಅರೆಮಲ್ಲಾಪುರದ ರತ್ನಕಟ್ಟಿ ಚನ್ನವೀರಪ್ಪ | 1930 ರ ಕಾಯ್ದೆ ಭಂಗ ಚಳವಳಿ 1 1/2 ವರ್ಷ ಶಿಕ್ಷೆ |
| 29. ರತ್ನಕಟ್ಟಿ ಚನ್ನಬಸಮ್ಮ ಗಂಡ ಚನ್ನಪ್ಪ | 1040 ರ ಕಾಯ್ದೆ ಭಂಗ ಚಳವಳಿ ಜೈಲು ಶಿಕ್ಷೆ |
| 30. ಕೆ.ಬಿ. ಕುಲಕರ್ಣಿ | 28–4–1930 ರಲ್ಲಿ ಈಚಲಗಿಡ ಕಡಿದುದ್ದಕ್ಕೆ 3 ತಿಂಗಳು ಶಿಕ್ಷೆ, ರೂ.30/– ದಂಡ. |
| 31. ಆನಂದರಾವ್ ತಂದೆ ಶ್ರೀನಿವಾಸರಾವ್ | 1930 ರಲ್ಲಿ ಈಚಲಗಿಡ ಚಳವಳಿ 3 ತಿಂಗಳ ಶಿಕ್ಷೆ |
| 32. ಕಾಳಪ್ಪ ಅಕ್ಕಸಾಲಿ | 1930 ರಲ್ಲಿ ಈಚಲಗಿಡ ಚಳವಳಿ 3 ತಿಂಗಳ ಶಿಕ್ಷೆ |
| 33. ಭೀಮಪ್ಪ ಡಿ. | 1932 ಪಾನ ಪ್ರತಿಬಂಧ ಚಳವಳಿ ಸೆರೆವಾಸ |
| 34. ಬೂದಿಹಾಳ್ ಅನಂತ ಆಚಾರ್ಯ ವಕೀಲರು, ಹೊಸಪೇಟೆ (ವಾಸ) | 1940–41 ವ್ಯಕ್ತಿ ಸತ್ಯಾಗ್ರಹ 6 ತಿಂಗಳ ಶಿಕ್ಷೆ ರೂ.300/– ದಂಡ |
| | 1942–44 ಭಾರತ ಬಿಟ್ಟು ತೊಲಗಿರಿ 2 ವರ್ಷ ಸ್ಥಾನಬದ್ಧತೆ. |

| | |
|---|---|
| 35. ಅಸುಂಡಿ ತಿರುಮಲರಾವ್ | 1930–31 ಮದ್ಯ ನಿಷೇದ ಚಳವಳ 3 ತಿಂಗಳು 3 ವಾರ ಶಿಕ್ಷೆ 1942–44 ಸ್ಥಾನಬದ್ಧತೆ ಭಾರತ ಬಿಟ್ಟು ತೊಲಗಿರಿ. |
| 36. ಮತ್ತಿಹಳ್ಳಿ ರಾಘವೇಂದ್ರರಾವ್ ವಕೀಲರು ಮತ್ತು ಪತ್ರಿಕೋದ್ಯಮಿ ಹೊಸಪೇಟೆ | 1930–31 ಮದ್ಯ ನಿಷೇಧ ಚಳವಳ 1 ವರ್ಷ ಶಿಕ್ಷೆ. |
| | 1930 ರಲ್ಲಿ ಜನ ಧನ ಸಂಗ್ರಹ ಕಾರ್ಯ |
| 37. ಅನಂತರಾವ್ | 1930–31 ಮದ್ಯಪಾನ ನಿಷೇಧ ಚಳವಳ 3 ತಿಂಗಳು ಒಂದು ವಾರ ಕಠಿಣ ಶಿಕ್ಷೆ. |
| 38. ಬಸವನಗೌಡ | 1930–31 ಮದ್ಯ ನಿಷೇಧ ಚಳವಳ 6 ತಿಂಗಳು ಕಠಿಣ ಶಿಕ್ಷೆ |
| 39. ಲಿ.ಲಿಂಗಪ್ಪ | 1930–31 ಮದ್ಯ ನಿಷೇಧ ಚಳವಳ 6 ತಿಂಗಳು ಕಠಿಣ ಶಿಕ್ಷೆ |
| 40. ಕನಕಾಪುರದ ಗುರುಜಾರಾಯರು ವಕೀಲರು, ಬಳ್ಳಾರಿಯಲ್ಲಿ ವಾಸ | 1930 ರಲ್ಲಿ ತೆರೆಯಮರೆಯಲ್ಲಿ ಜನಧನ ಸಂಗ್ರಹ |
| 41. ತಟ್ಟಿ ಕೃಷ್ಣರಾವ್ ವಕೀಲರು ಹೊಸಪೇಟೆ ವಾಸ | 1930 ರಲ್ಲಿ ತೆರೆಯಮರೆಯಲ್ಲಿ ಕಾರ್ಯಾಚರಣೆ. |
| 42. ಬೂದಿ ರಾಮಭಟ್‌ರು | 1932 ರಲ್ಲಿ ಪಾನಪ್ರತಿಬಂಧ ಚಳವಳಯಲ್ಲಿ ಸೆರೆವಾಸ |
| 43. ಹೆಚ್. ಎಂ.ಸಿದ್ದಲಿಂಗಯ್ಯನವರು | 1932 ರಲ್ಲಿ ಸ್ಥಾನಬದ್ಧತೆ |
| 44. ಶ್ಯಾನುಬೋಗರ ವೀರಪ್ಪ | 1947–45 ಭಾರತ ಬಿಟ್ಟು ತೊಲಗಿರಿ 6 ತಿಂಗಳು ಮತ್ತು 8 ತಿಂಗಳು ಮೈಸೂರು ಚಲೋ ಚಳವಳಯಲ್ಲಿ ಶಿಕ್ಷೆ. |

| | |
|---|---|
| 45. ಸೆಟ್ರ ಪರಮೇಶ್ವರಪ್ಪ | 1942–45 ಭಾರತ ಬಿಟ್ಟು ತೊಲಗಿರಿ 6 ತಿಂಗಳ ಶಿಕ್ಷೆ |
| 46. ಅಕ್ಕಸಾಲಿ ಬಸಿಕೆರಪ್ಪ | 1942–45 ಭಾರತ ಬಿಟ್ಟು ತೊಲಗಿರಿ 3 ತಿಂಗಳ ಶಿಕ್ಷೆ |
| 47. ಸಿದ್ದಪ್ಪ ಬಿ. | 1940–41 ರಲ್ಲಿ ವ್ಯಕ್ತಿ ಸತ್ಯಾಗ್ರಹ. |
| 48. ಪಿ. ಸಿದ್ದಪ್ಪ | 1942–45 ಭಾರತ ಬಿಟ್ಟು ತೊಲಗಿರಿ 15 ದಿನಗಳ ಶಿಕ್ಷೆ |
| 49. ಅಕ್ಕಸಾಲಿ ಭಾಸ್ಕರಾಚಾರಿ | 1942ರ ಮೈಸೂರು ಚಲೋ ಚಳವಳಿಯಲ್ಲಿ ಶಿಕ್ಷೆ. |
| 50. ಅಕ್ಕಸಾಲಿ ಪೂರ್ವಾಚಾರಿ | 1942ರ ಮೈಸೂರು ಚಲೋ ಚಳವಳಿಯಲ್ಲಿ ಶಿಕ್ಷೆ. |
| 51. ಎಸ್. ನಿಜಲಿಂಗಪ್ಪನವರು | 1930–42–44–47 ರಾಜಕೀಯ ಚಟುವಟಿಕೆಗಳಿಗಾಗಿ ಜೈಲು ವಾಸ. |
| 52. ಬ್ರಹ್ಮಾನಂದಗೌಡ | ವಿಚಾರಣೆ ಇಲ್ಲದೆ ಹೊಸಪೇಟೆ ಸಬ್ ಜೈಲಿನಲ್ಲಿ 5–6 ತಿಂಗಳು ಇದ್ದರು. |
| 53. ಅಕ್ಕಸಾಲಿ ಚಿದಾನಂದಪ್ಪ | ವಿಚಾರಣೆ ಇಲ್ಲದೆ ಹೊಸಪೇಟೆ ಸಬ್ ಜೈಲಿನಲ್ಲಿ 5–6 ತಿಂಗಳು ಇದ್ದರು. |
| 54. ಮತ್ತಿಹಳ್ಳಿ ಅಜ್ಜಪ್ಪ | ವಿಚಾರಣೆ ಇಲ್ಲದೆ ಹೊಸಪೇಟೆ ಸಬ್ ಜೈಲಿನಲ್ಲಿ 5–6 ತಿಂಗಳು ಇದ್ದರು. |
| 55. ಮತ್ತಿಹಳ್ಳಿ ದ್ಯಾಮಪ್ಪ | 4–4–1942 ರಂದು 6 ತಿಂಗಳು ಶಿಕ್ಷೆ ಮತ್ತು ರೂ.50/– ದಂಡ ಹೊಸರಿತ್ತಿಯಲ್ಲಿ ಚಳವಳಿ ಮಾಡಿದ್ದಕ್ಕೆ |
| 56. ಹುಳ್ಳಿ ಬಾನಪ್ಪ | 1942 ರಲ್ಲಿ ಭಾರತ ಬಿಟ್ಟು ತೊಲಗಿರಿ ಸೆರೆಮನೆ ವಾಸ |
| 57. ಗುರುಸಿದ್ದಯ್ಯ | ವಿಚಾರಣೆ ಇಲ್ಲದೆ ಹೊಸಪೇಟೆ ಸಬ್ ಜೈಲಿನಲ್ಲಿ 5–6 ತಿಂಗಳು ಇದ್ದರು. |

| | |
|---|---|
| 58. ನೇವಾರ ಸಣ್ಣ ಕೊಟ್ರಪ್ಪ | ವಿಚಾರಣೆ ಇಲ್ಲದೆ ಹೊಸಪೇಟೆ ಸಬ್ ಜೈಲಿನಲ್ಲಿ 5-6 ತಿಂಗಳು ಇದ್ದರು. |
| 59. ಎನ್. ಸಿದ್ದಪ್ಪ | 1942 ರಲ್ಲಿ ಸ್ಥಾನಬದ್ಧತೆ, ವೆಲ್ಲೂರು ಜೈಲಿನಲ್ಲಿ 18 ತಿಂಗಳು |
| 60. ಎ.ಬಿ.ಆರ್.ಕೊಟ್ರಗೌಡ | 1942 ರಲ್ಲಿ ಅನಂತಪುರ ಕಾಲೇಜಿನಲ್ಲಿ ವಿಧ್ವಂಸಕ ಕೃತ್ಯಕ್ಕೆ ಬಂಧನ 3 ತಿಂಗಳು 5 ದಿನ ಜೈಲುವಾಸ 1942 ರಲ್ಲಿ ಸ್ಥಾನಬದ್ಧತೆ. |
| 61. ಕೆ. ವೆಂಕಾರೆಡ್ಡಿ | 1942 ರಲ್ಲಿ ಸ್ಥಾನಬದ್ಧತೆ |
| 62. ಬೆಣ್ಣೆಹಳ್ಳ ಚನ್ನಗೌಡರು | 1942-44 ಸ್ಥಾನಬದ್ಧತೆ ಒಂದು ತಿಂಗಳು |
| 63. ಬಣಕಾರ ಬಸವಲಿಂಗಪ್ಪ | 1932 ರಲ್ಲಿ ಸ್ವದೇಶಿ ಚಳವಳ ವಿದೇಶಿ ಬಟ್ಟೆಹೋಳ ಎರಡು ವಾರ ರಿಮ್ಯಾಂಡ್ ಹೊಸಪೇಟೆಯಲ್ಲಿ ರೂ.30/- ದಂಡ. 1932 ರಲ್ಲಿ ತಂತಿ ಕತ್ತರಿಸಿದ್ದಕ್ಕೆ 1 ತಿಂಗಳು ಹರಪನಹಳ್ಳಿ ಸಬ್ ಜೈಲಿನಲ್ಲಿ. |
| 64. ನಿಂಗಪ್ಪ ಹೊಳೆಯಪ್ಪ | 1932 ರಲ್ಲಿ ಪಾನಪ್ರತಿಬಂಧ ಚಳವಳ ಸೆರೆಮನೆ ವಾಸ |
| 65. ಗುರುಸಿದ್ದಯ್ಯ ಆರ್.ಎಂ. | 1942-45 ರ ವರೆಗೆ ಭಾರತ ಬಿಟ್ಟು ತೊಲಗಿರಿ ಸ್ಥಾನಬದ್ಧತೆ |
| 66. ಪಾಟೀಲ ರೇವಣಸಿದ್ದನಗೌಡರು | 1942 ರಲ್ಲಿ ಸ್ಥಾನಬದ್ಧತೆ |
| 67. ಪಿ.ಎಲ್. ಭೋಜಾನಾಯ್ಕ | 1942 ರಲ್ಲಿ ಸ್ಥಾನಬದ್ಧತೆ |
| 68. ಕೆ. ಕೊಟ್ರಗೌಡರು | 1942 ರಲ್ಲಿ |
| 69. ಹಿರೇಮಠದ ವೀರಭದ್ರಯ್ಯ ವಕೀಲರು | ಭೂಗತ ಚಟುವಟಿಕೆಗಳು 1942 |
| 70. ಶಾಸ್ತ್ರಿ ಕರೀಮ್ ಸಾಹೇಬ್ ತಂದೆ ಹಯಾತ್ ಶಾಸ್ತ್ರಿ | 1942 ರಲ್ಲಿ |
| 71. ಇಟಗಿ ತೀರ್ಥಪ್ಪ | 1942 ರಲ್ಲಿ |

## ಸ್ವಾತಂತ್ರ್ಯ ಸಂಗ್ರಾಮ

ಭಾರತ ದೇಶದ ಮೂಲೆ ಮೂಲೆಗಳಿಂದ ಜನರು ಆಂಗ್ಲ ಆಡಳಿತದ ವಿರುದ್ಧ ಹೋರಾಟವನ್ನು ೧೮ನೇಯ ಶತಮಾನದಿಂದ ನಡೆಸುತ್ತ ಬಂದರು. ಕರ್ನಾಟಕ ಪ್ರದೇಶ ದಕ್ಷಿಣ ಭಾರತದಲ್ಲಿ ಕಿತ್ತೂರು, ಕೊಡಗು, ಸುರಪುರ ಮುಂತಾದ ಭಾಗಗಳಲ್ಲಿ ಹೋರಾಟ ಚುರುಕುಗೊಂಡಿತು. ಅದು ೧೯ನೆಯ ಶತಮಾನದವರೆಗೂ ಮುಂದುವರಿಯಿತು. ಕ್ರಿ.ಶ.೧೮೮೩ ರಲ್ಲಿ ಎ.ಓ.ಹ್ಯೂಂ ಕಲ್ಕತ್ತ (ಕೋಲ್ಕತ) ವಿಶ್ವವಿದ್ಯಾಲಯದ ಪದವೀಧರರನ್ನು ಕುರಿತು ಉಪನ್ಯಾಸವಿತ್ತರು.

"ದೇಶವು ಅಂಧಕಾರದ ಸ್ಥಿತಿಯಲ್ಲಿದೆ. ಅದನ್ನು ಸರಿಪಡಿಸಿ ಏಳಿಗೆಯತ್ತ ತರಲು ನಿಸ್ವಾರ್ಥ ಸೇವೆ ಸಲ್ಲಿಸುವ ದೃಢ ಸಂಕಲ್ಪವಿರುವ ಐವತ್ತು ಮಂದಿ ತರುಣರು ಬೇಕು" ಎಂಬುದಾಗಿ ವಿನಂತಿಸಿದರು. ಇದರ ಪರಿಣಾಮ ೧೮೮೫ ರಲ್ಲಿ ಹ್ಯೂಂ ಮತ್ತು ವೆಡ್ಡರ್ ಬರ್ನರ್ ಕೂಡಿ ಒಂದು ಸಂಸ್ಥೆಯನ್ನು ಹುಟ್ಟು ಹಾಕಿದರು. ಅದೇ ರಾಷ್ಟ್ರೀಯ ಕಾಂಗ್ರೆಸ್. ಅದರ ಮೊದಲ ಅಧಿವೇಶನ ಡಬ್ಲ್ಯೂ. ಸಿ. ಬ್ಯಾನರ್ಜಿ ಅವರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ೧೮೮೫ ರಲ್ಲಿ ನಡೆಯಿತು. ಈ ಸಭೆಗೆ ದೇಶದ ಬೇರೆ ಬೇರೆ ಭಾಗಗಳಿಂದ ೭೨ ಜನ ಪ್ರತಿನಿಧಿಗಳು ಆಗಮಿಸಿದ್ದರು. ಇದರಲ್ಲಿ ಬಳ್ಳಾರಿಯ ಕೋಲಾಚಲ ವೆಂಕಟರಾವ್ ಮತ್ತು ಸಭಾಪತಿ ಮೊದಲಿಯಾರ್. ನಂತರ ಮದರಾಸು, ಹೈದರಾಬಾದ್, ಕೊಡಗು ಮತ್ತು ಇತರೆ ಸಂಸ್ಥಾನಗಳ ಪ್ರತಿನಿಧಿಗಳು ಕಾಂಗ್ರೆಸ್ ಸಂಸ್ಥೆ ಸೇರಿ, ಅದನ್ನು ವಿಸ್ತರಿಸಿದರು. ೧೯೧೯ ರಿಂದ ಗಾಂಧೀಜಿಯವರ ನೇತೃತ್ವದಲ್ಲಿ ಆಂದೋಲನ ಮುಂದುವರಿಯಿತು. ಚಳವಳಿ ತೀವ್ರಗೊಂಡು ೧೯೪೭ ಆಗಸ್ಟ್ ೧೫ಕ್ಕೆ ದೇಶವು ಸ್ವತಂತ್ರವಾಯಿತು.

## ಚುನಾವಣೆಗಳು

ಭಾರತ ಒಕ್ಕೂಟವಾಗಿ ಮೊದಲ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಸಾರ್ವತ್ರಿಕ ಚುನಾವಣೆಗಳು ೧೯೫೨ ರಲ್ಲಿ ನಡೆದವು. ಅವುಗಳ ವಿವರ ಕೆಳಗಿನಂತೆ ಇರುತ್ತದೆ. ತಾಲ್ಲೂಕಿನಿಂದ ಆಯ್ಕೆ ಆದ ವಿಧಾನಸಭೆ ಅಭ್ಯರ್ಥಿಯ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ, ಎರಡನೆಯ ಸ್ಥಾನ ಪಡೆದ ಪಕ್ಷ ಗಳಿಸಿದ ಮತಗಳನ್ನು ಕೆಳಗೆ ಕೊಟ್ಟಿದೆ.

## ದಾವಣಗೆರೆ ತಾಲ್ಲೂಕಿನ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶ – (೨೦೦೪–೨೦೧೮)

| ವರ್ಷ | ವಿಧಾನ ಸಭಾ ಕ್ಷೇತ್ರ | ಕ್ಷೇತ್ರದ ಹೆಸರು | ವರ್ಗ | ವಿಜೇತರು | ಲಿಂಗ | ಪಕ್ಷ | ಮತಗಳು | ಎರಡನೇಸ್ಥಾನ | ಲಿಂಗ | ಪಕ್ಷ | ಮತಗಳು |
|---|---|---|---|---|---|---|---|---|---|---|---|
| ೧೯೫೭ | ೮೩ | ಹರಪನಹಳ್ಳಿ | (ಎಸ್‌ಸಿ) | ಎಂ.ಎಂ.ಜೆ. ಸದ್ಯೋಜಾತಪಯ್ಯ | ಪು | ಪಿಎಸ್‌ಪಿ | ೩೮೫೫೦ | ಇಜಾರಿ ಸಿರಸಪ್ಪ | ಪು | ಐಎನ್‌ಸಿ | ೩೩೯೮೮ |
| ೧೯೫೭ | ೮೩ | ಹರಪನಹಳ್ಳಿ | (ಎಸ್‌ಸಿ) | ಎಂ. ದಾನಪ್ಪ | ಪು | ಪಿಎಸ್‌ಪಿ | ೩೬೧೬೨ | ಎಂ. ಮುನಿಯಾನಾಯಕ್ | ಪು | ಐಎನ್‌ಸಿ | ೩೨೮೬೦ |
| ೧೯೬೨ | ೯೧ | ಹರಪನಹಳ್ಳಿ | (ಸಾಮಾನ್ಯ) | ಸಿರಸಪ್ಪ ಇಜರಿ | ಪು | ಐಎನ್‌ಸಿ | ೨೮೪೪೦ | ಸಂಗಣ್ಣ ಮುದೆನೂರ್ | ಪು | ಪಿಎಸ್‌ಪಿ | ೨೧೬೨೦ |
| ೧೯೬೭ | ೩೭ | ಹರಪನಹಳ್ಳಿ | (ಎಸ್‌ಸಿ) | ವೈ. ನಾಯಕ್ | ಪು | ಐಎನ್‌ಸಿ | ೨೨೨೦೧ | ವಿ. ಶಿವಣ್ಣ | ಪು | ಐಎನ್‌ಡಿ | ೧೪೭೧೬ |
| ೧೯೭೨ | ೩೭ | ಹರಪನಹಳ್ಳಿ | (ಎಸ್‌ಸಿ) | ದಿನರಾಯನದ | ಪು | ಐಎನ್‌ಸಿ | ೨೮೦೩೩ | ಬಿ.ವೈ. ನೇಮನಾಯಕ್ | ಪು | ಎನ್‌ಸಿಒ | ೧೬೯೩೯ |
| ೧೯೭೮ | ೩೯ | ಹರಪನಹಳ್ಳಿ | (ಎಸ್‌ಸಿ) | ಡಿ. ನಾರಾಯಣದಾಸ್ | ಪು | ಐಎನ್‌ಸಿ (ಐ) | ೨೬೨೪೪ | ಬಿ.ವೈ. ನೇಮನಾಯಕ್ | ಪು | ಜೆಎನ್‌ಪಿ | ೨೦೧೫೧ |
| ೧೯೮೩ | ೩೯ | ಹರಪನಹಳ್ಳಿ | (ಎಸ್‌ಸಿ) | ಬಿ.ಹೆಚ್. ಯಂಕನಾಯಕ್ | ಪು | ಐಎನ್‌ಸಿ | ೨೯೨೪೯ | ಡಿ. ಸೀಲ್ಯನಾಯಕ್ | ಪು | ಜೆಎನ್‌ಪಿ | ೧೫೫೩೨ |
| ೧೯೮೫ | ೩೯ | ಹರಪನಹಳ್ಳಿ | (ಎಸ್‌ಸಿ) | ಬಿ.ಹೆಚ್. ಯಂಕನಾಯಕ್ | ಪು | ಐಎನ್‌ಸಿ | ೨೯೨೦೬ | ಡಿ. ನಾರಾಯಣದಾಸ್ | ಪು | ಜೆಎನ್‌ಪಿ | ೨೩೬೬೨ |
| ೧೯೮೯ | ೩೯ | ಹರಪನಹಳ್ಳಿ | (ಎಸ್‌ಸಿ) | ಬಿ.ಹೆಚ್. ಯಂಕನಾಯಕ್ | ಪು | ಐಎನ್‌ಸಿ | ೩೬೮೧೮ | ಚಂದ್ರನಾಯ್ಕ್ | ಪು | ಜೆಡಿ | ೩೨೪೯೨ |

| | | | | | | | | | | | |
|---|---|---|---|---|---|---|---|---|---|---|---|
| **೧೯೯೪** | ೩೯ | ಹರಪನಹಳ್ಳಿ | (ಎಸ್‌ಸಿ) | ಡಿ. ನಾರಾಯಣದಾಸ್ | ಪು | ಐಎನ್‌ಡಿ | ೨೧೭೯೮ | ಬಿ.ಹೆಚ್.ಯಂಕನಾಯಕ್ | ಪು | ಐಎನ್‌ಸಿ | ೧೭೫೧೪ |
| **೧೯೯೯** | ೩೯ | ಹರಪನಹಳ್ಳಿ | (ಎಸ್‌ಸಿ) | ಪಿ.ಟಿ. ಪರಮೇಶ್ವರನಾಯ್ಕ್ | ಪು | ಐಎನ್‌ಸಿ | ೩೦೩೧೬ | ಬಿ.ಹೆಚ್.ಯಂಕನಾಯಕ್ | ಪು | ಐಎನ್‌ಡಿ | ೧೯೭೭೯ |
| **೨೦೦೪** | ೩೯ | ಹರಪನಹಳ್ಳಿ | (ಎಸ್‌ಸಿ) | ಪಿ.ಟಿ. ಪರಮೇಶ್ವರನಾಯ್ಕ್ | ಪು | ಐಎನ್‌ಸಿ | ೩೮೧೫೮ | ಡಿ. ನಾರಾಯಣದಾಸ್ | ಪು | ಐಎನ್‌ಡಿ | ೩೦೧೬೪ |
| **೨೦೦೮** | ೧೦೪ | ಹರಪನಹಳ್ಳಿ | (ಸಾಮಾನ್ಯ) | ಜಿ. ಕರುಣಾಕರರೆಡ್ಡಿ | ಪು | ಬಿಜೆಪಿ | ೬೯೨೩೫ | ಎಂ.ಪಿ ಪ್ರಕಾಶ್ | ಪು | ಐಎನ್‌ಸಿ | ೪೪೦೧೭ |
| **೨೦೧೩** | ೧೦೪ | ಹರಪನಹಳ್ಳಿ | (ಸಾಮಾನ್ಯ) | ಎಂ. ಪ್ರವಿಂದ್ರ | ಪು | ಐಎನ್‌ಸಿ | ೫೬೯೫೪ | ಜಿ. ಕರುಣಾಕರರೆಡ್ಡಿ | ಪು | ಬಿಜೆಪಿ | ೪೮೫೪೮ |
| **೨೦೧೮** | | ಹರಪನಹಳ್ಳಿ | (ಸಾಮಾನ್ಯ) | ಜಿ. ಕರುಣಾಕರರೆಡ್ಡಿ | ಪು | ಬಿಜೆಪಿ | ೬೭೬೦೩ | ಎಂ.ಪಿ. ರವೀಂದ್ರ | ಪು | ಐಎನ್‌ಸಿ | ೫೭೯೫೬ |

## ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೧೯೫೨ ರಿಂದ ೨೦೦೯ ರ ವರೆಗೆ ಚುನಾಯಿತರಾದ ಸಂಸದರ ವಿವರ

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧೯೫೨ ಬಳ್ಳಾರಿ | ಟಿ.ಕೆ. ಸುಬ್ರಮಣ್ಯಂ, ರಾ.ಕಾಂಗ್ರೆಸ್, ೧,೨೪,೯೭೬ (೫೬.೧೧%) | ವೈ.ಮಹಾಭಲೇಶ್ವರಪ್ಪ, ಐಎನ್‌ಓ ೯೪,೬೧೫ (೪೩.೦೯%) |
| ೧೯೫೭ ಬಳ್ಳಾರಿ | ಟಿ.ಕೆ. ಸುಬ್ರಮಣ್ಯಂ, ರಾ.ಕಾಂಗ್ರೆಸ್, ೧,೪೬,೬೭೦ (೫೪.೯೨%) | ವೈ.ಮಹಾಭಲೇಶ್ವರಪ್ಪ, ಐಎನ್‌ಓ ೧,೨೦,೩೮೨ (೪೫.೦೮%) |
| ೧೯೬೧ ಬಳ್ಳಾರಿ | ವಿ.ಕೆ.ಆರ್.ಯು.ರಾವ್, ರಾ.ಕಾಂಗ್ರೆಸ್, ೧,೭೩,೪೦೨ (೫೩,೭೮%) | ವೈ.ಮಹಾಭಲೇಶ್ವರಪ್ಪ, ಐಎನ್‌ಓ ೧,೪೯,೦೨೨,(೪೬.೨೨%) |
| ೧೯೬೨ ಬಳ್ಳಾರಿ | ಟಿ.ಕೆ. ಸುಬ್ರಮಣ್ಯಂ, ರಾ.ಕಾಂಗ್ರೆಸ್, ೧,೪೮,೭೬೫ (೫೧.೯೮%) | ಎ.ಸಂಗಣ್ಣ ಅಂದಾನಪ್ಪ ಅಗಡಿ, ಎಸ್‌ಡಬ್ಲ್ಯೂಎ, ೧,೩೭,೪೪೮ (೪೮.೦೨%) |
| ೧೯೭೭ ಬಳ್ಳಾರಿ | ಎಂ.ಎಸ್.ವೀರಭದ್ರಪ್ಪ ರಾ.ಕಾಂಗ್ರೆಸ್, ೨,೫೮,೫೮೯, (೬೯.೮೮%) | ಎನ್.ತಿಪ್ಪಣ್ಣ ಬಿಸಿಡಿ, ೧,೧೦,೩೪೫ (೩೦.೪೨%) |
| ೧೯೮೦ ಬಳ್ಳಾರಿ | ಆರ್.ವೈ.ಘೋರ್ಪಡೆ, ರಾ.ಕಾಂಗ್ರೆಸ್, ೨,೩೪,೭೯೨, (೬೪.೨೨%) | ಎಂ.ವೈ.ಘೋರ್ಪಡೆ, ಐಎನ್‌ಸಿ (ಯು) ೯,೮೭,೫೫ (೨೭.೦೧%) |
| ೧೯೮೪ ಬಳ್ಳಾರಿ | ಬಸವರಾಜೇಶ್ವರಿ, ರಾ.ಕಾಂಗ್ರೆಸ್, ೨,೭೬,೬೪೦ (೫೬.೦೫%) | ಎಂ.ಪಿ.ಪ್ರಕಾಶ, ಜೆಎನ್‌ಪಿ, ೨,೦೪,೩೫೪ (೪೧.೪೦%) |
| ೧೯೮೯ ಬಳ್ಳಾರಿ | ಬಸವರಾಜೇಶ್ವರಿ, ರಾ.ಕಾಂಗ್ರೆಸ್, ೩,೩೬,೩೩೭ (೫೧.೯೨%) | ಎನ್.ತಿಪ್ಪಣ್ಣ ಜೆಡಿ |
| ೧೯೯೧ ಬಳ್ಳಾರಿ | ಬಸವರಾಜೇಶ್ವರಿ, ರಾ.ಕಾಂಗ್ರೆಸ್ ೨,೩೪,೮೧೨ (೪೫.೯೨%) | ವೈ. ನೇಟಿಕಲ್ಲಪ್ಪ, ಜೆಡಿ, ೧,೬೫,೮೩೧ (೩೩.೦೨%) |

| | | |
|---|---|---|
| ೧೯೯೮ ಬಳ್ಳಾರಿ | ಕೆ.ಸಿ.ಕೊಂಡಯ್ಯ, ರಾ.ಕಾಂಗ್ರೆಸ್, ೨,೭೩,೫೮೪ (೪೩.೮೯%) | ಎನ್.ತಿಪ್ಪಣ್ಣ ಜೆಡಿ ೨,೬೯,೦೬೫ (೪೩.೧೬%) |
| ೧೯೯೭ ಬಳ್ಳಾರಿ | ಕೆ.ಸಿ.ಕೊಂಡಯ್ಯ, ರಾ.ಕಾಂಗ್ರೆಸ್, ೨,೮೪,೯೦೯ (೩೯.೭೬%) | ಎನ್.ತಿಪ್ಪಣ್ಣ ಯುಎಸ್ ೨,೨೧,೧೭೧ (೩೦.೮೬%) |
| ೧೯೯೯ ಬಳ್ಳಾರಿ | ಸೋನಿಯಾಗಾಂಧಿ, ರಾ.ಕಾಂಗ್ರೆಸ್ ೪,೧೪,೬೫೦ (೫೧.೭೦%) | ಸುಷ್ಮಸ್ವರಾಜ್ ೩,೫೮,೫೫೦ (೪೬.೭೦%) |
| ೧೯೯೯ ಬಳ್ಳಾರಿ | ಕೋಳೂರುಬಸವನಗೌಡ, ರಾ.ಕಾಂಗ್ರೆಸ್, ೨,೫೯,೮೫೧ (೫೩.೦೫%) | ಕೆ.ಎಸ್.ವೀರಭದ್ರಪ್ಪ ಬಿಜೆಪಿ ೧,೬೩,೮೩೧ (೩೩.೪೫%) |
| ೨೦೦೪ ಬಳ್ಳಾರಿ | ಜಿ. ಕರುಣಾಕರರೆಡ್ಡಿ ಬಿಜೆಪಿ ೧,೩೮,೯೭೮ | ಕೊಂಡಯ್ಯ ಕೆ.ಸಿ. ಐಎನ್‌ಸಿ ೨,೮೭,೨೯೯ |
| ೨೦೦೯ ದಾವಣಗೆರೆ | ಜಿ.ಎಂ.ಸಿದ್ದೇಶ್ವರ ಬಿಜೆಪಿ ೩,೭೦,೪೯೯ | ಮಲ್ಲಿಕಾರ್ಜುನ ಎಸ್.ಎಸ್. ಭಾ.ರಾ. ಕಾಂಗ್ರೆಸ್ ೩,೩೭,೮೨೩ |

ಸೋನಿಯಾ ಗಾಂಧಿ ಅಮೇಥಿ ಕ್ಷೇತ್ರ ಉಳಿಸಿಕೊಂಡು ಬಳ್ಳಾರಿ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದರು. ಮರು ಚುನಾವಣೆ ಬಳ್ಳಾರಿ ಕ್ಷೇತ್ರಕ್ಕೆ ೨೦೦೦ ಮಾರ್ಚ್‌ನಲ್ಲಿ ನಡೆಯಿತು.

**ಹರಪನಹಳ್ಳಿ ಪಾಳೆಯಗಾರರು (೧೫೬೫–೧೭೯೮ ರವರೆಗೆ)**

ಕೃಷ್ಣದೇವರಾಯನ ನಂತರದ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿ ಸಾಗಿದ್ದಿತು. ವಿಜಯನಗರಕ್ಕೆ ನೆರವಾಗಿದ್ದ ಚಿಕ್ಕ–ಚಿಕ್ಕ ಸೇನಾ ನಾಯಕರು ಸ್ವತಂತ್ರ ಪಾಳೆಯಗಾರರಾಗಿ ದಕ್ಷಿಣ ಭಾರತದಲ್ಲಿ ಗುರುತಿಸಿಕೊಂಡರು. ಕೆಳದಿ, ನಾಯಕನಹಟ್ಟಿ, ಮತ್ತೋಡು ಚಿತ್ರದುರ್ಗ, ಹಾಗಲವಾಡಿ, ಹರಪನಹಳ್ಳಿ, ಗುಡೇಕೋಟೆ, ಜರ್ಮಲಿ, ಸುರಪುರ, ಬಳ್ಳಾರಿ, ಸವಣೂರು, ಕನಕಗಿರಿ, ರಾಯದುರ್ಗ – ಮೊದಲಾದವು. ವಿಜಯನಗರ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಮಾಚೀ ನಾಯಕನ ಮಗ ದಾದೇ ನಾಯಕ ಕೆಲ ಜನ ಬೇಡರನ್ನು ಒಂದುಗೂಡಿಸಿ, ಕಾನಳ–ಬಾಗಳಿ ಪ್ರದೇಶದಲ್ಲಿದ್ದ ಹಲವು ಹಳ್ಳಿಗಳ ಗೌಡರನ್ನು ಹೆದರಿಸಿ, ಮೊದಲು ಮೂವತ್ತು ಮೂರು ಹಳ್ಳಿಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು.

ಈ ಹಿಂದೆ ವಿಜಯನಗರ ಅರಸರಲ್ಲಿ ಏನೋ ತಪ್ಪು ಎಸಗಿ, ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕ ಮತ್ತು ದಾದಾನಾಯಕ ಇಬ್ಬರೂ ಸೆರೆ ಸೇರಿದ್ದರು. ಆಗ ಮತ್ತಿ ತಿಮ್ಮಣ್ಣನಿಗೆ ದಾದಾ ನಾಯಕ ಸೆರೆಯಲ್ಲಿ ನೆರವಾಗಿದ್ದನೆಂಬುದು ಪ್ರತೀತಿ. ಒಂದು

ಬಾರಿ ಬಸವಾ ಪಟ್ಟಣದ ಕೆಂಗಣ್ಣ ನಾಯಕನು ಚಿತ್ರದುರ್ಗದ ಮೇಲೆ ಯುದ್ಧ ಸಾರಿದ್ದನು. ಆಗ ಬಾಗಳಿಯ ದಾದಾ ನಾಯಕ ತನ್ನ ಚಿಕ್ಕ ಸೇನೆಯೊಡಗೂಡಿ ಚಿತ್ರದುರ್ಗವನ್ನು ತಲುಪಿ ಕೆಂಗಣ್ಣನನ್ನು ಎದುರಿಸಿ ಮತ್ತಿ ತಿಮ್ಮಣ್ಣನಿಗೆ ವಿಜಯ ತಂದು ಕೊಟ್ಟನು. ಈ ಎರಡೂ ಕಾರಣಗಳಿಂದ ಮತ್ತಿ ತಿಮ್ಮಣ್ಣ ನಾಯಕ ತನ್ನ ಮಗಳು ಹೊನ್ನಾನಾಗತಿಯನ್ನು ದಾದೇ ನಾಯಕರಿಗೆ ಕೊಟ್ಟು ವಿವಾಹವನ್ನು ಜರುಗಿಸಿದನು. ವರದಕ್ಷಿಣೆಯೆಂದು ಉಚ್ಚಂಗಿದುರ್ಗ ಕೋಟೆಯನ್ನು ಕೊಟ್ಟನು. ಹೀಗೆ ಸ್ಥಾಪಿಸಿದ ರಾಜ್ಯ ವಿಸ್ತರಿಸುತ್ತ ೪೬೦ ಕಂದಾಯದ ಹಳ್ಳಿಗಳಾದವು.

ಹರಪನಹಳ್ಳಿ ಸೀಮೆಯಾಗಿ ಪೂರ್ವ ದಿಕ್ಕಿಗೆ ಹುಲಿಗಿ–ಹೊಸೂರು–ಬಸಾಪುರ ಪಶ್ಚಿಮಕ್ಕೆ ಮೈಲಾರ, ಹಿರೇಕುರುವತ್ತಿ, ಉತ್ತರ ದಿಕ್ಕಿಗೆ ಮೊದಲಗಟ್ಟಿ, ದಕ್ಷಿಣ ದಿಕ್ಕಿಗೆ ದಾವಣಗೆರೆ ಹತ್ತಿರದ ಮಾಗಾನಹಳ್ಳಿ ಗ್ರಾಮ ಮೇರೆಗಳಾಗಿ ೩೬೪೦ ಚದುರ ಮೈಲುಗಳ ವಿಸ್ತೀರ್ಣವಾಗಿ ಬೆಳೆಯಿತು. ಹದಿನೈದು ಪುರುಷರು ಒಬ್ಬ ಸ್ತ್ರೀ ಒಟ್ಟಿಗೆ ಹದಿನಾರು ಜನರು ಕ್ರಿ.ಶ. ೧೫೬೫ ರಿಂದ ೧೮೦೦ ರವರೆಗೆ ರಾಜ್ಯವಾಳಿದರು. ಮಧ್ಯ–ಮಧ್ಯ ರಾಜ್ಯ ಅಸ್ತಿರವೂ ಹೊಂದಿದ್ದಿತು, ಕಾರಣ ಕೊನೆ ಅರಸ ಪೂನಾ ಶ್ರೀರಂಗಪಟ್ಟಣದಲ್ಲಿದ್ದನು. ಕೊಪ್ಪಳ ಮತ್ತು ಲಕ್ಷ್ಮೇಶ್ವರಗಳನ್ನು ಈ ಅರಸರು ಗೆದ್ದರು. ಅವರಿಂದ ಪ್ರತಿ ವರ್ಷ ಕಪ್ಪ ಕಾಣಿಕೆ ಪಡೆದರು. ಆದರೆ ಅಲ್ಲಿಯೇ ಆಳ್ವಿಕೆಯನ್ನು ಮುಂದುವರಿಸಲಿಲ್ಲ. ಹರಪನಹಳ್ಳಿ ಪಾಳೆಯಗಾರರ ರಾಜ್ಯಕ್ಕೆ ನಾಲ್ಕು ಮುಖ್ಯ ಪಟ್ಟಣಗಳು ೧) ಬಾಗಳಿ ೨) ಹರಪನಹಳ್ಳಿ ೩) ಉಚ್ಚಂಗಿದುರ್ಗ ೪) ನಾರಾಯಣದೇವರ ಕೆರೆ.

**ಹರಪನಹಳ್ಳಿ ಪಾಳೆಯಗಾರರ ವಂಶಾವಳಿ**

**ದಾದಾಯ್ಯನಾಯಕ (ದಾದೇನಾಯಕ)**

**೧೪೮೮–೧೫೧೪ ಶಾ.ಶ.**

೧) ಹೊನ್ನಾನಾಗತಿ ೨) ಜಂಪಾನಾಗತಿ ೩) ಭರ್ಮಾನಾಗತಿ ೪) ಹನುಮನಾಗತಿ

ಧರ್ಮನಾಗತಿ

ರಂಗಣ್ಣ ನಾಯಕ (ರಂಗನಾಯಕ) ಜಂಪಾನಾಗತಿ
೧೫೧೪–೧೫೩೮ (ಪಟ್ಟಣದ ರಾಣಿ) (ಧರ್ಮಪತ್ನಿ)
ಬಾಗಳಿ ಮೊದಲ ಬಸಪ್ಪನಾಯಕ ಅಥವಾ ಭರ್ಮಣ್ಣನಾಯಕ
(೧೫೩೮–೧೫೭೦) ಶಾ.ಶ.
ಹೊಂಬಣ್ಣ ನಾಯಕ (ಓಬಣ್ಣ ನಾಯಕ)
(೧೫೭೨–೧೫೭೭) ಶಾ.ಶ.

ವೀರಮುಮ್ಮಡಿನಾಯಕ
( ೧೫೭೭–೧೫೮೯)

ಮುಮ್ಮಡಿನಾಯಕ
(೧೫೮೬–೧೬೦೯) ಶಾ.ಶ.

ಬಸವಂತನಾಯಕ (ಕೊಟ್ರಪ್ಪನಾಯಕ)
(೧೬೦೯–೧೬೨೭) ಶಾ.ಶ.
ಮಡದಿ ಹರಿಯಮ್ಮಾಜಿ ನಾಗತಿ
(೧೬೩೮–೧೬೪೩) ಶಾ.ಶ.

ಮರಿಕೊಟ್ರಪ್ಪನಾಯಕ
(೧೬೨೭–೧೬೩೭) ಶಾ.ಶ.

ಎರಡನೇ ಬಸವಂತನಾಯಕ
(೧೬೩೭–೧೬೩೮) ಶಾ.ಶ.

(ದತ್ತುಪುತ್ರ) ಮುದಿಬಸಪ್ಪನಾಯಕ (ಗೋಣೆಪ್ಪನಾಯಕ)
(೧೬೪೩–೧೬೬೩) ಶಾ.ಶ.

ಮೊದಲ ವೀರಬಸಪ್ಪನಾಯಕ
(೧೬೬೩–೧೬೬೪) ಶಾ.ಶ.

ಪುತ್ರ ಹೆಸರು–ಜಂಬಣ್ಣ ೧ನೇ ಸೋಮಶೇಖರನಾಯಕ ಪತ್ನಿ ಸೋಮಮ್ಮಾಜಿ
ಪ್ರೀತಿ ಹೆಸರು–ಪುಟ್ಟರಸ (೧೬೬೪–೧೬೮೮) ಶಾ.ಶ. (ಪಟ್ಟದ ರಾಣಿ)
ಹೆಂಡತಿ ಹೆಸರು–ರೇವಕ್ಕ ಪ್ರಾಯ ೧೮ ರಲ್ಲಿ ಮೈಲಬೇನೆಯಿಂದ ಮೃತನಾದನು.

೨ನೇ ವೀರಬಸಪ್ಪನಾಯಕ (ಅಡವಿಬೊಮ್ಮಣ್ಣ ನಾಯಕ)
(೧೬೮೮–೧೬೯೦) ಶಾ.ಶ.

೨ನೇ (ದತ್ತುಪುತ್ರ) ಬಾಗುಳಿ ಬಸಪ್ಪನಾಯಕ
(೧೬೯೦–೧೭೦೯) ಶಾ.ಶ.

ಅಯ್ಯಪ್ಪನಾಯಕ
(೧೭೦೯–೧೭೧೨) ಶಾ.ಶ.

ಎರಡನೇ ಸೋಮಶೇಖರನಾಯಕ
(೧೭೦೯–೧೭೨೧) ಶಾ.ಶ.

೧) ಪತ್ನಿ ಬಸಮ್ಮಾಜಿ ೨) ನೀಲಮ್ಮಾಜಿ ೩) ಹಿರೆಬಸಮ್ಮಾಜಿ ೪) ಸೋಮಮ್ಮಾಜಿ

ಈ ನಾಯಕರಲ್ಲಿ ಬಾಗಳಿ ಬಸಪ್ಪನಾಯಕ, ಶ್ರೀಕರ ಬಸಪ್ಪನಾಯಕ, ಮುಮ್ಮಡಿ ಬಸಪ್ಪನಾಯಕ, ಕೊಟ್ರಬಸಪ್ಪನಾಯಕ, ಮರಿಕೊಟ್ರಪ್ಪ ನಾಯಕ, ವೀರಬಸಪ್ಪನಾಯಕ, ಮೊದಲ ಬಸವಂತನಾಯಕ ಅಥವಾ ಬಾಗಳಿ ಬಸಪ್ಪನಾಯಕ, ಎರಡನೇ ಬಸವಂತನಾಯಕ. ಹೀಗೆ ಬಹುಜನ ಬಸವಪ್ಪನಾಯಕರು ಕಂಡು ಬರುವರು. ಇವರೆಲ್ಲ ಬಾಗಳಿಯಿಂದ ಬಂದ ನಾಯಕರಾಗಿರುವರು. ಈ ನಾಯಕರು ಮೊದ ಮೊದಲು ಸ್ವತಂತ್ರ ಅರಸರಾಗಿದ್ದು, ಕಾಲಾನಂತರ ದೊಡ್ಡ ಅರಸರ ಅಧೀನ ಅರಸರಾಗಿದ್ದರು. ಆಯಾ ಅರಸರಿಗೆ ಪ್ರತಿ ವರ್ಷ ಕೆಳಗಿನಂತೆ (ಕಪ್ಪವನ್ನು) ಹಣವನ್ನು ಅರ್ಪಿಸುತ್ತಿದ್ದರು.

| | | |
|---|---|---|
| ೧) ಪೇಶ್ವೆಗಳಿಗೆ | = | ೨,೦೦,೦೦೦ ಪಗೋಡಗಳು |
| ೨) ಹೈದರಾಬಾದ್ ನವಾಬರಿಗೆ | = | ೧೨,೦೦೦ ಪಗೋಡಗಳು |
| ೩) ಹೂಟಿ ಮುರಾರಿರಾವ್‌ಗೆ | = | ೬,೦೦೦ ಪಗೋಡಗಳು |
| ೪) ಸೈನ್ಯದ ಖರ್ಚು ವರ್ಷಕ್ಕೆ | = | ೮,೦೦೦ ಪಗೋಡಗಳು |
| ೫) ಅರಮನೆ ಖರ್ಚು ವರ್ಷಕ್ಕೆ | = | ೧,೦೦೦ ಪಗೋಡಗಳು |
| ೬) ರಾಜ್ಯದ ಪ್ರಮುಖ ದೇವಾಲಯಗಳ ದುರಸ್ಥಿಗೆ | = | ೮೦ ಪಗೋಡಗಳು |
| ೭) ಕೆರೆಕಾಲುವೆಗಳ ದುರಸ್ಥಿಗೆ | = | ೨೫೦ ಪಗೋಡಗಳು |
| ೮) ರಾಜ್ಯದ ಒಟ್ಟು ವಾರ್ಷಿಕ ಆದಾಯ (ಪಗೋಡ-ಚಿನ್ನದ ನಾಣ್ಯ) | = | ೮,೦೦,೦೦೦ ಪಗೋಡಗಳು |

(ಈ ನಾಯಕರಿಗೆ ಬಾಗಳ ಭೂಪರೆಂದು ಕೊಟ್ಟೂರೇಶ್ವರ ಪುರಾಣದಲ್ಲಿ ತಿಳಿಸಿದೆ).

# ಅಧ್ಯಾಯ–೩

# ಜನತೆ

**ಒಂ**ದು ಪ್ರದೇಶದ ಸಮಗ್ರ ಅಧ್ಯಯನಕ್ಕೆ ಅಲ್ಲಿಯ ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳಂತಹ ಅಂಶಗಳ ಪರಿಶೀಲನೆಯೂ ಅವಶ್ಯವಾಗಿರುತ್ತವೆ. ಈ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುವುದು ಸಹಜವಾಗಿರುತ್ತದೆ. ಹರಪನಹಳ್ಳಿ ತಾಲ್ಲೂಕಿನಲ್ಲಿಯೂ ವಿವಿಧ ಜಾತಿ ಮತ್ತು ಬುಡಕಟ್ಟು, ಮತ–ಧರ್ಮ, ಆಚಾರ–ವಿಚಾರ, ನಂಬಿಕೆ, ಆಹಾರಾಭ್ಯಾಸ, ವೇಷ–ಭೂಷಣ, ಭಾಷೆಗಳು ಮೊದಲಾದವುಗಳನ್ನು ಕುರಿತ ಸಂಕ್ಷಿಪ್ತ ಪರಿಚಯವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಕರ್ನಾಟಕ ಏಕೀಕರಣವಾಗುವ ಪೂರ್ವದಲ್ಲಿ ಮಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳು ಹಿಂದಿನ ಮದ್ರಾಸು ಪ್ರಾಂತ್ಯಕ್ಕೆ ಒಳಪಟ್ಟಿದ್ದವು. ಮದ್ರಾಸ್ ಪ್ರಾಂತ್ಯದಲ್ಲಿ ಕೆಲವು ಜಿಲ್ಲೆಗಳನ್ನು ಅತ್ಯಂತ ಹಿಂದುಳಿದವುಗಳೆಂದು ಪರಿಗಣಿಸಲಾಗಿತ್ತು. ಬಳ್ಳಾರಿ ಜಿಲ್ಲೆ ಬೋಳುಗುಡ್ಡ ಬಯಲು ಪ್ರದೇಶದಿಂದ ಕೂಡಿದ್ದು, ಆಡಳಿತ ಕೇಂದ್ರ ಪಟ್ಟಣ ಮದ್ರಾಸಿನಿಂದ ಬಹುದೂರದಲ್ಲಿತ್ತು. ಆಗಿನ ಕಾಲದಲ್ಲಿ ಬಳ್ಳಾರಿ ಪಟ್ಟಣದಲ್ಲಿ ಒಂದೂ ಕಾಲೇಜೂ ಇರಲಿಲ್ಲ. ಈ ಭಾಗದ ಮಕ್ಕಳು ಉಚ್ಚಶಿಕ್ಷಣ ಪಡೆಯಲು ಮದನಪಲ್ಲಿ, ಬೆಂಗಳೂರು, ಮೈಸೂರು ಹಾಗೂ ಮದ್ರಾಸಗಳಿಗೆ ಹೋಗಬೇಕಿತ್ತು. ಶಿಕ್ಷಣ ಪಡೆಯುವುದು ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಮಾತ್ರ ಸಾಧ್ಯವಿತ್ತು.

ಜಿಲ್ಲೆಯ ಉತ್ತರ ದಿಕ್ಕಿಗಿರುವ ಈ ತಾಲ್ಲೂಕು ಪ್ರದೇಶ ಬಹುಪಾಲು ಬಯಲುಸೀಮೆಯಾಗಿದ್ದು, ಕೆಲ ಭಾಗಗಳು ಗುಡ್ಡಗಳಿಂದ ಆವೃತವಾದ ಅರಣ್ಯ ಪ್ರದೇಶಗಳಿಂದ ಕೂಡಿತ್ತು. ಇಲ್ಲಿ ಕಪ್ಪು, ಕೆಂಪು, ಕಲ್ಲು, ಮರಳು ಜಿನುಗು ಭೂಮಿಯಿಂದ ಕೂಡಿದ್ದು, ಹೆಚ್ಚಾಗಿ ಕೃಷಿ ಪ್ರಧಾನವಾಗಿದೆ. ಒಣಬೇಸಾಯ ಇಲ್ಲಿ ಹೆಚ್ಚು ಪ್ರಾಧಾನ್ಯತೆ

ಪಡೆದಿದೆ. ಕೃಷಿ ಕಾರ್ಮಿಕರು ಪಾರಂಪರಿಕವಾಗಿ ಬಂದ ಸಾಂಪ್ರದಾಯಿಕ ವೃತ್ತಿಯನ್ನೇ ತಮ್ಮ ಜೀವನೋಪಾಯಕ್ಕೆ ಹೊಂದಿಸಿಕೊಂಡಿರುವರು. ಕೆಲವರು ಪಶುಪಾಲನೆ, ಕುರಿ-ಮೇಕೆ, ಎಮ್ಮೆ, ಹೈನುಗಾರಿಕೆಯಲ್ಲಿ ತೊಡಗಿರುವರು. ಇತ್ತೀಚೆಗೆ ಸರ್ಕಾರದ ಮೀಸಲಾತಿ ನಿಯಮಗಳಂದ ಶಿಕ್ಷಣದಿಂದ ವಂಚಿತರಾಗಿದ್ದ ಗ್ರಾಮೀಣ ಪರಿಸರದ ಬಡಮಕ್ಕಳಿಗೆ ವಿಶೇಷ ಪ್ರೋತ್ಸಾಹ ದೊರಕಿದ್ದುದರಿಂದ, ಇಂದಿನ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಗಳು ಕಂಡುಬಂದಿವೆ. ಜಾತಿ ಸಮುದಾಯ, ಸಾಮಾಜಿಕ ಜೀವನ, ಧಾರ್ಮಿಕ ಆಚರಣೆ ಮತ್ತು ಸಾಂಸ್ಕೃತಿಕ ಪದ್ಧತಿಗಳಲ್ಲಿ ಸಾಕಷ್ಟು ವಿಫುಲ ಬದಲಾವಣೆಗಳು ಕಂಡುಬರುತ್ತಿವೆ. ಇವುಗಳನ್ನು ಪರಿಚಯಿಸುವುದೇ ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿರುತ್ತದೆ.

## ಜನಸಂಖ್ಯೆ

ಹರಪನಹಳ್ಳಿ ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ೨,೩೪,೦೯೨ (೧,೧೯,೬೮೯ ಮಂದಿ ಪುರುಷರು ಮತ್ತು ೧,೧೪,೪೦೩ ಮಂದಿ ಮಹಿಳೆಯರು)ಜನಸಂಖ್ಯೆ ಇದ್ದು, ಇದರಲ್ಲಿ ಒಟ್ಟು ೩೪,೧೪೬ (೧೭,೭೦೭ ಮಂದಿ ಪುರುಷರು ಮತ್ತು೧೬,೪೩೯ ಮಂದಿ ಮಹಿಳೆಯರು) ನಗರ ಪ್ರದೇಶದಲ್ಲಿ ಹಾಗೂ ೧,೯೯,೯೪೬ (೧,೦೧,೯೮೨ ಮಂದಿ ಪುರುಷರು ಮತ್ತು ೯೭,೯೬೪ ಮಂದಿ ಮಹಿಳೆಯರು) ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಹೆಚ್ಚಿನ ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

**೨೦೦೧ ಹಾಗೂ ೨೦೧೧ ರ ಜನಗಣತಿಯಂತೆ ಹರಪನಹಳ್ಳಿ ತಾಲ್ಲೂಕಿನ ಜನಸಂಖ್ಯಾ ವಿವರ.**

| ಕ್ರ. ಸಂ. | ವಿವರ | ೨೦೦೧ | | | ೨೦೧೧ | | |
|---|---|---|---|---|---|---|---|
| | | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| ೧ | ಗ್ರಾಮೀಣ ಪ್ರದೇಶದಲ್ಲಿ | ೧,೧೫,೭೨೦ | ೧,೧೧,೧೬೬ | ೨,೨೬,೮೮೬ | ೧,೩೦,೩೯೮ | ೧,೨೪,೫೬೬ | ೨,೫೪,೯೬೪ |
| ೨ | ನಗರ ಪ್ರದೇಶದಲ್ಲಿ | ೨೧,೮೮೮ | ೨೦,೦೧೯ | ೪೧,೯೦೭ | ೨೩,೮೯೧ | ೨೩,೧೪೮ | ೪೭,೦೩೯ |
| ಒಟ್ಟು | | ೧,೩೭,೬೦೮ | ೧,೩೧,೧೮೫ | ೨,೬೮,೭೯೩ | ೧,೫೪,೨೮೯ | ೧,೪೭,೭೧೪ | ೩,೦೨,೦೦೩ |

ಆಧಾರ: ಭಾರತದ ಜನಗಣತಿಯಂತೆ.

೨೦೧೧ರ ಜನಗಣತಿಯಂತೆ ೦-೬ ವರ್ಷದೊಳಗಿನ ಒಟ್ಟು ೩೯,೫೫೪ ಮಕ್ಕಳಿದ್ದು, ಅದರಲ್ಲಿ ೨೦,೩೦೪ ಮಂದಿ ಗಂಡು, ೧೯,೨೫೦ ಮಂದಿ ಹೆಣ್ಣು ಮಕ್ಕಳಿದ್ದರು. ಅದರಲ್ಲಿ ೩೩,೪೩೮ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ೧೭,೨೨೨ ಮಂದಿ ಗಂಡು, ೧೬,೨೧೬ ಮಂದಿ ಹೆಣ್ಣು ಮಕ್ಕಳಿದ್ದರು. ಹಾಗೂ ೬,೧೧೬ ನಗರ ಪ್ರದೇಶದ ಮಕ್ಕಳಲ್ಲಿ ೩,೦೮೨ ಮಂದಿ ಗಂಡು, ೩,೦೩೪ ಮಂದಿ ಹೆಣ್ಣು ಮಕ್ಕಳಿದ್ದರು.

**ಜನಸಾಂದ್ರತೆ**

ಒಂದು ಪ್ರದೇಶದ ಪ್ರತಿ ಚ.ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಜನ ಸಾಂದ್ರತೆಯು ನಗರ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿರುತ್ತದೆ. ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ಒಂದು ಚದರ ಕಿ.ಮೀನಲ್ಲಿ ೧೬೨ ಜನಸಾಂದ್ರತೆ ಇತ್ತು. ಇದು ೨೦೦೧ರಲ್ಲಿ ೧೮೭ ಕ್ಕೂ ಹಾಗೂ ೨೦೧೧ ರಲ್ಲಿ ೨೧೦ಕ್ಕೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ೨೦೦೧ ರ ಜನಗಣತಿಯಂತೆ ಜಿಲ್ಲೆಯಲ್ಲಿ ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲ್ಲೂಕು (೧೬೫) ಜಗಳೂರು ಆಗಿದ್ದರೆ, ಅತಿ ಹೆಚ್ಚು ಜನಸಾಂದ್ರತೆ (೬೪೪) ಹೊಂದಿರುವ ತಾಲ್ಲೂಕು ದಾವಣಗೆರೆ ಆಗಿರುತ್ತದೆ. ಹಾಗೆಯೇ ೨೦೧೧ ರ ಜನಗಣತಿಯಂತೆ ಜಿಲ್ಲೆಯಲ್ಲಿ ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲ್ಲೂಕು (೧೭೭) ಜಗಳೂರು ಆಗಿದ್ದರೆ, ಅತಿ ಹೆಚ್ಚು ಜನಸಾಂದ್ರತೆ (೭೧೨) ಹೊಂದಿರುವ ತಾಲ್ಲೂಕು ದಾವಣಗೆರೆ ಆಗಿರುತ್ತದೆ.

**ಮನೆಗಳು ಹಾಗೂ ಕುಟುಂಬಗಳು**

ಜನಗಣತಿಯ ವ್ಯಾಖ್ಯಾನದ ಪ್ರಕಾರ, ವಾಸದ ಮನೆಯೆಂದರೆ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕುಟುಂಬಗಳು ವಾಸಿಸುವ ಪೂರ್ತಿ ಅಥವಾ ಭಾಗಶಃ ಕಟ್ಟಡ ಎಂದರ್ಥ. ಕುಟುಂಬವೆಂದರೆ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಜನರು ಒಟ್ಟಿಗೆ ವಾಸಿಸುತ್ತಿದ್ದು, ಒಂದೇ ಅಡುಗೆ ಮನೆಯಲ್ಲಿ ತಯಾರಿಸಿದ ಅಡುಗೆಯನ್ನು (ಅನೇಕ ಸಂದರ್ಭಗಳಲ್ಲಿ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟ ಮಾಡುವ ಜನಸಮೂಹ ಎಂದರ್ಥ. ಕೆಲವು ಕುಟುಂಬಗಳಿಗೆ ವಾಸದ ಮನೆಗಳಿರುವುದಿಲ್ಲ. ಅಂತಹ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳೆಂದು ಕರೆಯುತ್ತಾರೆ. ತಾಲ್ಲೂಕಿನಲ್ಲಿ ೨೦೦೧ರ ಜನಗಣತಿಯಂತೆ ೪೭,೭೪೯ ಒಟ್ಟು ಕುಟುಂಬಗಳಿದ್ದು, ೪೦,೫೧೬ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲೂ, ೭,೨೩೩ ಕುಟುಂಬಗಳು ನಗರ ಪ್ರದೇಶದಲ್ಲಿದ್ದವು. ಹಾಗೆಯೇ ೨೦೧೧ರಲ್ಲಿ ೫೮,೫೬೧ ಕುಟುಂಬಗಳಿದ್ದು, ೪೯,೫೪೭ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲೂ, ೯,೦೧೪ ಕುಟುಂಬಗಳು ನಗರ ಪ್ರದೇಶದಲ್ಲಿದ್ದವು.

**ವಯೋಮಾನದಂತೆ ವಿಂಗಡಣೆ**

ವಯೋಮಾನದಂತೆ ಜನತೆಯನ್ನು ವಿಂಗಡಿಸುವುದು ಜನತೆಯ ಲಕ್ಷಣವನ್ನು ಸೂಚಿಸುವ ಒಂದು ಮುಖ್ಯ ಸಾಮಾಜಿಕ ಪ್ರಕ್ರಿಯೆ. ಈ ವಿಂಗಡಣೆಯಿಂದ ದುಡಿಯುವ ವಯಸ್ಸಿನವರನ್ನೂ ಹಾಗೂ ದುಡಿಯಲು ಸಾಧ್ಯವಿಲ್ಲದವರ ಸಂಖ್ಯೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ದೇಶದ ಜನಶಕ್ತಿಯನ್ನು ತಿಳಿಯಲು ಸಹ ಇದು ನೆರವಾಗುತ್ತದೆ. ಸಾಮಾನ್ಯವಾಗಿ ೧೫ ವರ್ಷಗಳಿಗಿಂತ ಕಡಿಮೆ ಹಾಗೂ ೬೦ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ವೃತ್ತಿ ಯೋಗ್ಯರೆಂದು ಪರಿಗಣಿಸುವುದಿಲ್ಲ.

**ಸಾಂಸ್ಥಿಕ ಜನಸಂಖ್ಯೆ**

ಜನಗಣತಿಯ ಪ್ರಕಾರ ವಿದ್ಯಾರ್ಥಿನಿಲಯ, ಭೋಜನ ಗೃಹ, ಸೆರೆಮನೆ, ಆಶ್ರಮ ಮುಂತಾದವುಗಳಲ್ಲಿ ವಾಸಿಸುವ ಜನಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದು ಕರೆಯಲಾಗುತ್ತದೆ.

**ನಿರ್ವಸಿತರು**

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ನಿರ್ದಿಷ್ಟವಾದ ವಾಸದ ಮನೆಗಳನ್ನು ಹೊಂದಿರದೆ ಸಾಮಾನ್ಯವಾಗಿ ಬಸ್‌ನಿಲ್ದಾಣ, ರೈಲ್ವೆನಿಲ್ದಾಣ, ಹಳೇಕಟ್ಟಡ, ಮಂಟಪ, ರಸ್ತೆಬದಿಯಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂಥವರನ್ನು ಜನಗಣತಿಯ ಪ್ರಕಾರ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳು ಎಂದು ಕರೆಯಲಾಗುತ್ತದೆ.

**ಗ್ರಾಮೀಣ ಜನಸಂಖ್ಯೆ**

ಹಳ್ಳಿಗಳಲ್ಲಿ ವಾಸಮಾಡುವ ಜನರನ್ನು ಗ್ರಾಮೀಣ ಜನತೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯು ಪಟ್ಟಣ ಪ್ರದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೆ.

ತಾಲ್ಲೂಕಿನಲ್ಲಿ ೧೯೮೧ ರ ಜನಗಣತಿಯಂತೆ ೭೪ ಜನವಸತಿ ಗ್ರಾಮಗಳಿದ್ದು, ಒಟ್ಟು ೧,೫೬,೨೯೩ ಗ್ರಾಮೀಣ ಜನಸಂಖ್ಯೆ ಇತ್ತು. ತಾಲ್ಲೂಕಿನಲ್ಲಿ ೨೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ೧ ಗ್ರಾಮವಿದ್ದು, ೧೧೦ ಜನವಾಸವಾಗಿದ್ದರು. ೨೦೦ ರಿಂದ ೪೯೯ ಜನಸಂಖ್ಯೆಯುಳ್ಳ ೮ ಗ್ರಾಮಗಳಿದ್ದು, ಇವುಗಳಲ್ಲಿ ೨,೪೮೦ ಜನಸಂಖ್ಯೆ ಇತ್ತು. ೫೦೦ ರಿಂದ ೯೯೯ ಜನಸಂಖ್ಯೆಯುಳ್ಳ ೯ ಗ್ರಾಮಗಳಿದ್ದು, ೬,೯೨೮ ಜನಸಂಖ್ಯೆ, ೧,೦೦೦ ದಿಂದ

೧,೯೯೯ ರವರೆಗಿನ ಜನಸಂಖ್ಯೆಯುಳ್ಳ ೧೭ ಗ್ರಾಮಗಳಿದ್ದು, ೨೫,೮೯೨ ಜನಸಂಖ್ಯೆ, ೨,೦೦೦ ದಿಂದ ೪,೯೯೯ ರವರೆಗಿನ ಜನಸಂಖ್ಯೆಯುಳ್ಳ ೩೬ ಗ್ರಾಮಗಳಿದ್ದು, ಇದರಲ್ಲಿ ೧,೦೦,೭೫೯ ಜನಸಂಖ್ಯೆ, ೫,೦೦೦ ದಿಂದ ೯,೯೯೯ ರ ವರೆಗಿನ ಜನಸಂಖ್ಯೆಯುಳ್ಳ ೩ ಗ್ರಾಮಗಳಿದ್ದು, ೨೦,೧೨೪ ಜನಸಂಖ್ಯೆ ಹಾಗೂ ೧೦,೦೦೦ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಯಾವುದೇ ಗ್ರಾಮಗಳು ಇರುವುದಿಲ್ಲ.

ತಾಲ್ಲೂಕಿನಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೭೯ ಜನವಸತಿ ಗ್ರಾಮಗಳಿದ್ದು, ಒಟ್ಟು ೩,೦೨,೦೦೩ ಜನಸಂಖ್ಯೆಯಿದ್ದು, ೨,೫೪,೯೬೪ ಮಂದಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದರು. ಇವರಲ್ಲಿ ೧,೩೦,೩೯೮ ಮಂದಿ ಪುರುಷರು, ಹಾಗೂ ೧,೨೪,೫೬೬ ಮಂದಿ ಮಹಿಳೆಯರು ಸೇರಿದ್ದರು.

ತಾಲ್ಲೂಕಿನಲ್ಲಿ ೨೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಯಾವುದೇ ಗ್ರಾಮಗಳಿರುವುದಿಲ್ಲ. ೨೦೦ ರಿಂದ ೪೯೯ ಜನಸಂಖ್ಯೆಯುಳ್ಳ ೩(ಶೇ.೪) ಗ್ರಾಮಗಳಿದ್ದು, ಇವುಗಳಲ್ಲಿ ೧,೦೬೦ ಜನಸಂಖ್ಯೆ ಇದ್ದರೆ, ೫೦೦ ರಿಂದ ೯೯೯ ಜನಸಂಖ್ಯೆಯುಳ್ಳ ೯ (ಶೇ.೧೧) ಗ್ರಾಮಗಳಿದ್ದು, ೬,೬೧೯ ಜನಸಂಖ್ಯೆ, ೧,೦೦೦ ದಿಂದ ೧,೯೯೯ ರವರೆಗಿನ ಜನಸಂಖ್ಯೆಯುಳ್ಳ ೧೩ (ಶೇ.೧೬) ಗ್ರಾಮಗಳಿದ್ದು, ೨೦,೫೬೮ ಜನಸಂಖ್ಯೆ, ೨,೦೦೦ ದಿಂದ ೪,೯೯೯ ರ ವರೆಗಿನ ಜನಸಂಖ್ಯೆಯುಳ್ಳ ೪೩(ಶೇ.೫೪) ಗ್ರಾಮಗಳಿದ್ದು, ಇದರಲ್ಲಿ ೧,೫೧,೨೫೩ ಜನಸಂಖ್ಯೆ, ೫,೦೦೦ ದಿಂದ ೯,೯೯೯ ರವರೆಗಿನ ಜನಸಂಖ್ಯೆಯುಳ್ಳ ೧೦ (ಶೇ.೧೩) ಗ್ರಾಮಗಳಿದ್ದು, ೬೫,೨೬೯ ಜನಸಂಖ್ಯೆ, ೧೦,೦೦೦ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಒಂದು (ಶೇ.೧) ಗ್ರಾಮವಿದ್ದು, ೧೦,೧೯೫ ಜನಸಂಖ್ಯೆಯನ್ನು ಹೊಂದಿತ್ತು.

## ಪಟ್ಟಣ ಜನಸಂಖ್ಯೆ

ಪಟ್ಟಣ ಮತ್ತು ನಗರಗಳ ಬೆಳವಣಿಗೆಯನ್ನು ನಗರೀಕರಣ ಎಂದು ಕರೆಯುತ್ತಾರೆ. ನಗರೀಕರಣವು ಒಂದು ಪ್ರಮುಖ ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುವ ಅಂಶವೂ ಆಗಿದೆ. ಪಟ್ಟಣವನ್ನು ಗ್ರಾಮೀಣ ಪ್ರದೇಶದಿಂದ ಪ್ರತ್ಯೇಕಿಸಲು ಜನಗಣತಿಯಲ್ಲಿ ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಅದರಂತೆ ಪಟ್ಟಣಗಳ ಕನಿಷ್ಟ ಜನಸಂಖ್ಯೆ ಐದು ಸಾವಿರ ಇರಬೇಕು. ಶೇ.೭೫ರಷ್ಟು ಜನ ಕೃಷಿಯೇತರ ಉದ್ಯೋಗವನ್ನು ಅವಲಂಬಿಸಿರಬೇಕು ಮತ್ತು ಜನಸಾಂದ್ರತೆಯು ಚ.ಕಿ.ಮೀ.ಗೆ ಕನಿಷ್ಟ ೪೦೦ ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡುಪ್ರದೇಶ, ಅಧಿಸೂಚಿತ (ನೋಟಿಫೈಡ್) ಪ್ರದೇಶಗಳು ಪಟ್ಟಣದ ವ್ಯಾಪ್ತಿಗೆ ಬರುತ್ತವೆ. ತಾಲ್ಲೂಕಿನಲ್ಲಿ ೧೯೮೧ರ ಜನಗಣತಿಯಂತೆ ೨೭,೩೦೮ ಜನಸಂಖ್ಯೆಯನ್ನು ಹೊಂದಿದ್ದರೆ. ೧೯೯೧ ರಲ್ಲಿ ೩೪,೧೪೬, ೨೦೦೧ ರಲ್ಲಿ ೪೧,೯೦೭,

೨೦೧೧ರಲ್ಲಿ ೪೭,೦೩೯ಮಂದಿ ನಗರ ಪ್ರದೇಶದಲ್ಲಿ ವಾಸವಾಗಿದ್ದು, ಇವರಲ್ಲಿ ೨೩,೮೯೧ ಪುರುಷರು ಹಾಗೂ ೨೩,೧೪೮ ಮಹಿಳೆಯರು ಸೇರಿದ್ದರು.

### ಸ್ತ್ರೀ ಪುರುಷರ ಪ್ರಮಾಣ

ಸ್ತ್ರೀ-ಪುರುಷರ ಪ್ರಮಾಣವೆಂದರೆ ಪ್ರತಿಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆ. ಸ್ತ್ರೀ-ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿನ ಸಂಪ್ರದಾಯ, ವೈವಾಹಿಕ ಸ್ಥಾನಮಾನ, ಜನರ ವಲಸೆ, ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ೨೦೦೧ರ ಜನಗಣತಿಯಂತೆ ತಾಲ್ಲೂಕಿನಲ್ಲಿ ೧೦೦೦ ಗಂಡಸರಿಗೆ ೯೫೩ ಮಹಿಳೆಯರಿದ್ದರು. ಹಾಗೆಯೇ ೨೦೧೧ರಲ್ಲಿ ಈ ಸಂಖ್ಯೆ ೯೫೭ಕ್ಕೆ ವೃದ್ಧಿಗೊಂಡಿರುವುದು ಗಮನಾರ್ಹವಾಗಿದೆ.

### ಅಂಗವಿಕಲರು

ಅಂಗವಿಕಲ ಜನರ ಗಣತಿಯನ್ನು ಕೆಲಕಾಲ ಸ್ಥಗಿತಗೊಳಿಸಲಾಗಿತ್ತು. ಮುಂದೆ ೧೯೮೧ ರಿಂದ ಪುನಃ ಪ್ರಾರಂಭಿಸಿತು. ಇವರಿಗೆ ಸರ್ಕಾರ ದಿ.೧೩.೩.೨೦೧೮ ರಿಂದ ಜಾರಿಗೆ ಬರುವಂತೆ ಶೇ. ೪೦ ರಿಂದ ೭೫ ರಷ್ಟು ಅಂಗವೈಕಲ್ಯವಿರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.೫೦೦ ರಿಂದ ರೂ.೬೦೦ ಕ್ಕೆ ಹೆಚ್ಚಿಸಲಾಗಿದೆ. ಶೇ. ೭೫ ಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ. ೧೨೦೦ ರಿಂದ ರೂ.೧೪೦೦ ಕ್ಕೆ ಹೆಚ್ಚಿಸಲಾಗಿದೆ. ಅಂಗವಿಕಲತೆಯ ಪ್ರಮಾಣವನ್ನು ಸರ್ಕಾರಿ ವೈದ್ಯರು ಗುರುತಿಸಿ ಸರ್ಟಿಫಿಕೇಟನ್ನು ನೀಡಿದಲ್ಲಿ, ಅವರ ಊನವಾದ ದೇಹದ ಭಾವಚಿತ್ರವನ್ನು ಲಗತ್ತಿಸಿದ ಸರ್ಟಿಫಿಕೇಟನ್ನು ಗಮನಿಸಿ, ಅಂಥವರಿಗೆ ಮಾಸಿಕ ವೇತನವನ್ನು ಮಂಜೂರು ಮಾಡಲಾಗುತ್ತದೆ.

### ಪರಿಶಿಷ್ಟ ಜಾತಿ

ಭಾರತೀಯ ಸಂವಿಧಾನದ ೩೪೧ನೇ ಪರಿಚ್ಛೇದದಲ್ಲಿ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿ ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಗಿದೆ. ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ೧೯೭೬ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಆದಿಕರ್ನಾಟಕ, ಆದಿದ್ರಾವಿಡ, ಬೋವಿ, ಮಾದಿಗ, ಮೋಚಿ, ಹೊಲೆಯ, ಕೊರಮ, ಲಂಬಾಣಿ, ಹಂದಿಜೋಗಿ, ಜಾಂಬವ, ಚಮ್ಮಾರ, ಮಾದರು ಮುಂತಾದವರನ್ನು ಪರಿಶಿಷ್ಟ ಜಾತಿಯವರೆಂದು ಗುರುತಿಸಲಾಗಿದೆ.

ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೫೩,೯೦೨ ಪರಿಶಿಷ್ಟ ಜಾತಿ ಜನಸಂಖ್ಯೆ ಇದ್ದು, ಇವರಲ್ಲಿ ೨೭,೪೯೬ ಪುರುಷರು, ೨೬,೪೦೬ ಮಹಿಳೆಯರು ಸೇರಿದ್ದರು. ೫೦,೮೩೩ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ೨೫,೮೬೯ ಪುರುಷರು, ೨೪,೯೬೪ ಮಹಿಳೆಯರಿದ್ದರು. ಹಾಗೆಯೇ ನಗರ ಪ್ರದೇಶದಲ್ಲಿ ೩,೦೬೯ ಮಂದಿ ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ೧,೬೨೭ ಪುರುಷರು ಹಾಗೂ ೧,೪೪೨ ಮಹಿಳೆಯರಿದ್ದರು.

೨೦೦೧ರ ಜನಗಣತಿಯಂತೆ ಒಟ್ಟು ೫೭,೩೮೪ ಪರಿಶಿಷ್ಟ ಜಾತಿ ಜನಸಂಖ್ಯೆ ಇದ್ದು, ಇವರಲ್ಲಿ ೨೯,೫೪೯ ಪುರುಷರು, ೨೭,೮೩೫ ಮಹಿಳೆಯರು ಸೇರಿದ್ದರು. ೫೩,೯೦೧ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ೨೭,೫೫೬ ಪುರುಷರು, ೨೬,೩೪೫ ಮಹಿಳೆಯರಿದ್ದರು. ಹಾಗೆಯೇ ನಗರ ಪ್ರದೇಶದಲ್ಲಿ ೩,೪೮೩ ಮಂದಿ ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ೧,೯೯೩ ಪುರುಷರು ಹಾಗೂ ೧,೪೯೦ ಮಹಿಳೆಯರಿದ್ದರು.

೨೦೧೧ರ ಜನಗಣತಿಯಂತೆ ಒಟ್ಟು ೭೪,೨೯೦ ಪರಿಶಿಷ್ಟ ಜಾತಿ ಜನಸಂಖ್ಯೆ ಇದ್ದು, ಇವರಲ್ಲಿ ೩೭,೮೯೩ ಪುರುಷರು, ೩೬,೩೯೭ ಮಹಿಳೆಯರು ಸೇರಿದ್ದರು. ೬೯,೪೯೮ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರಿದ್ದರು. ಇವರಲ್ಲಿ ೩೫,೪೧೩ ಪುರುಷರು, ೩೪,೦೮೫ ಮಹಿಳೆಯರು ಹಾಗೆಯೇ ನಗರ ಪ್ರದೇಶದಲ್ಲಿ ೪,೭೯೨ ಮಂದಿ ಪರಿಶಿಷ್ಟ ಜಾತಿಯವರಿದ್ದರು. ಇವರಲ್ಲಿ ೨,೪೮೦ ಪುರುಷರು ಹಾಗೂ ೨,೩೧೨ ಮಹಿಳೆಯರಿದ್ದರು.

**ಪರಿಶಿಷ್ಟ ಪಂಗಡ**

ಭಾರತ ಸಂವಿಧಾನದ ೩೪೨ನೇ ಪರಿಚ್ಛೇದದ ಪ್ರಕಾರ ಇರುಳಿಗ, ಹಕ್ಕಿಪಿಕ್ಕಿ, ಜೇನು ಕುರುಬ, ಕಾಡು ಕುರುಬ, ಕೊಂಡ ಕಾಪು, ಗೌಡಲು, ಡೋಲಿಗ ಕೊರಗ, ಕಣಿಯ, ಕುರುಮ ಮುಂತಾದ ಬುಡಕಟ್ಟಿನ ಜನರನ್ನು ಪರಿಶಿಷ್ಟ ಪಂಗಡದವರೆಂದು ಪರಿಗಣಿಸಿದರು.

ತಾಲ್ಲೂಕಿನಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ೧೮,೮೨೪ ಪರಿಶಿಷ್ಟ ಪಂಗಡದ ಜನಸಂಖ್ಯೆ ಇದ್ದು, ಇವರಲ್ಲಿ ೯,೫೬೫ ಪುರುಷರು, ೯,೨೫೯ ಮಹಿಳೆಯರು ಸೇರಿದ್ದರು. ೧೫,೩೩೦ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ೭,೭೫೧ ಪುರುಷರು, ೭,೫೭೯ ಮಹಿಳೆಯರಿದ್ದರು. ಹಾಗೆಯೇ ನಗರ ಪ್ರದೇಶದಲ್ಲಿ ೩,೪೯೪ ಮಂದಿ ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ೧,೮೧೪ ಪುರುಷರು ಹಾಗೂ ೧,೬೮೦ ಮಹಿಳೆಯರಿದ್ದರು.

೨೦೦೧ರ ಜನಗಣತಿಯಂತೆ ಒಟ್ಟು ೪೩,೦೫೦ ಪರಿಶಿಷ್ಟ ಪಂಗಡದ ಜನಸಂಖ್ಯೆ ಇದ್ದು, ಇವರಲ್ಲಿ ೨೧,೯೯೧ ಪುರುಷರು, ೨೧,೦೫೯ ಮಹಿಳೆಯರು ಸೇರಿದ್ದರು. ೩೭,೧೬೪ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ೧೮,೮೮೧

ಪುರುಷರು, ೧೮,೨೮೩ ಮಹಿಳೆಯರಿದ್ದರು.  ಹಾಗೆಯೇ ನಗರ ಪ್ರದೇಶದಲ್ಲಿ ೫,೮೮೬ ಮಂದಿ ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ೩,೧೧೦ ಪುರುಷರು ಹಾಗೂ ೨,೭೭೬ ಮಹಿಳೆಯರಿದ್ದರು.

೨೦೧೧ ರ ಜನಗಣತಿಯಂತೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು ೫೦,೩೦೮ ಜನಸಂಖ್ಯೆ ಇದ್ದು, ಇವರಲ್ಲಿ ೨೫,೭೧೭ ಪುರುಷರು, ೨೪,೫೯೧ ಮಹಿಳೆಯರು ಸೇರಿದ್ದರು. ಇವರಲ್ಲಿ ೪೩,೪೧೭ ಮಂದಿ ಗ್ರಾಮೀಣ ಪ್ರದೇಶದಲ್ಲಿದ್ದು, ೨೨,೧೫೦ ಪುರುಷರು, ೨೧,೨೬೭ ಮಹಿಳೆಯರು ಹಾಗೂ ೬,೮೯೧ ಮಂದಿ  ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಜನರಿದ್ದು, ಇವರಲ್ಲಿ ೩,೫೬೭ ಪುರುಷರು, ೩,೩೨೪ ಮಹಿಳೆಯರಿದ್ದರು.

**ಸಾಕ್ಷರತೆ**

೧೯೯೧ರ ಜನಗಣತಿಯಂತೆ ಒಟ್ಟು ೮೦,೯೦೩ ಮಂದಿಯಲ್ಲಿ ೫೩,೪೯೮ ಮಂದಿ ಪುರುಷರು, ೨೭,೪೦೫ ಮಂದಿ ಮಹಿಳಾ ಸಾಕ್ಷರಸ್ಥರಿದ್ದರು. ಇವರಲ್ಲಿ ೬೬,೪೫೫ (೪೪,೬೪೧ ಮಂದಿ ಪುರುಷರು ಮತ್ತು ೨೧,೮೧೪ ಮಂದಿ ಮಹಿಳೆಯರು) ಮಂದಿ ಗ್ರಾಮೀಣ ಸಾಕ್ಷರಸ್ಥರು, ೧೪,೪೪೮ (೮,೮೫೭ಮಂದಿ ಪುರುಷರು ಮತ್ತು ೫,೫೯೧ ಮಂದಿ ಮಹಿಳೆಯರು) ಮಂದಿ ನಗರ ಸಾಕ್ಷರಸ್ಥರಿದ್ದರು.

೨೦೦೧ರ ಜನಗಣತಿಯಂತೆ ಒಟ್ಟು ೧,೨೭,೭೯೩ ಮಂದಿಯಲ್ಲಿ ೭೮,೪೯೩ ಮಂದಿ ಪುರುಷರು, ೪೯,೩೦೦ ಮಂದಿ ಮಹಿಳಾ ಸಾಕ್ಷರಸ್ಥರಿದ್ದರು. ಇವರಲ್ಲಿ ೧,೦೫,೧೬೪(೬೫,೨೯೩ ಮಂದಿ ಪುರುಷರು ಮತ್ತು ೩೯,೮೭೧ ಮಂದಿ ಮಹಿಳೆಯರು) ಮಂದಿ ಗ್ರಾಮೀಣ ಸಾಕ್ಷರಸ್ಥರು, ೨೨,೬೨೯ (೧೩,೨೦೦ ಮಂದಿ ಪುರುಷರು ಮತ್ತು ೯,೪೨೯ ಮಂದಿ ಮಹಿಳೆಯರು) ಮಂದಿ ನಗರ ಸಾಕ್ಷರಸ್ಥರಿದ್ದರು.

೨೦೧೧ರ ಜನಗಣತಿಯಂತೆ ಒಟ್ಟು ೧,೭೮,೮೦೩ ಮಂದಿಯಲ್ಲಿ ೧,೦೨,೮೫೩ ಮಂದಿ ಪುರುಷರು, ೭೫,೯೫೦ ಮಂದಿ ಮಹಿಳಾ ಸಾಕ್ಷರಸ್ಥರಿದ್ದರು. ಇವರಲ್ಲಿ ೧,೪೯,೩೨೫ (೮೬,೮೯೦ ಮಂದಿ ಪುರುಷರು ಮತ್ತು ೬೨,೪೩೫ ಮಂದಿ ಮಹಿಳೆಯರು) ಮಂದಿ ಗ್ರಾಮೀಣ ಸಾಕ್ಷರಸ್ಥರು, ೨೯,೪೭೮ (೧೫,೯೬೩ ಮಂದಿ ಪುರುಷರು ಮತ್ತು ೧೩,೫೧೫ ಮಂದಿ ಮಹಿಳೆಯರು) ಮಂದಿ ನಗರ ಸಾಕ್ಷರಸ್ಥರಿದ್ದರು.

**ಭಾಷೆಗಳು**

ತಾಲ್ಲೂಕಿನಲ್ಲಿ ಬೇರೆ ಬೇರೆ ಭಾಷೆಗಳನ್ನು ಆಡುವ ಜನರಿದ್ದರು. ಒಟ್ಟು ಜನಸಂಖ್ಯೆಯಲ್ಲಿ ಕನ್ನಡ ಮಾತೃ ಭಾಷೆಯನ್ನಾಡುವವರ ಸಂಖ್ಯೆ ಹೆಚ್ಚಾಗಿದ್ದಾರೆ. ತಾಲ್ಲೂಕಿನಲ್ಲಿದ್ದ ವಿವಿಧ ಭಾಷೆಗಳನ್ನಾಡುವವರ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

## ಹರಪನಹಳ್ಳಿ ತಾಲ್ಲೂಕಿನಲ್ಲಿದ್ದ ೨೦೧೧ ಜನಗಣತಿಯಂತೆ ವಿವಿಧ ಭಾಷೆಗಳನ್ನಾಡುವವರ ವಿವರ

| ಮಾತೃ ಭಾಷೆಗಳ ಹೆಸರು | ಒಟ್ಟು | | | ಗ್ರಾಮೀಣ | | | ನಗರ | | |
|---|---|---|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ಕನ್ನಡ | ೨೪೬೧೩೬ | ೧೨೫೭೬೩ | ೧೨೦೩೭೩ | ೨೧೯೦೫೨ | ೧೧೨೦೪೪ | ೧೦೭೦೦೮ | ೨೭೦೮೪ | ೧೩೭೧೯ | ೧೩೩೬೫ |
| ಉರ್ದು | ೨೬೬೦೭ | ೧೩೪೯೬ | ೧೩೧೧೧ | ೯೨೮೪ | ೪೭೪೫ | ೪೫೩೯ | ೧೭೩೨೩ | ೮೭೫೧ | ೮೫೭೨ |
| ಹಿಂದಿ | ೨೩೦೪೩ | ೧೧೮೬೯ | ೧೧೧೭೪ | ೨೨೧೭೮ | ೧೧೩೪೦ | ೧೦೮೩೮ | ೮೬೫ | ೫೨೯ | ೩೩೬ |
| ತೆಲಗು | ೫೦೮೫ | ೨೫೮೩ | ೨೫೦೨ | ೪೧೨೯ | ೨೧೦೫ | ೨೦೨೪ | ೯೫೬ | ೪೭೮ | ೪೭೮ |
| ಬೆಂಗಾಲಿ | ೩ | ೧ | ೨ | ೦ | ೦ | ೦ | ೩ | ೧ | ೨ |
| ಗುಜರಾತಿ | ೩೨ | ೧೪ | ೧೮ | ೦ | ೦ | ೦ | ೩೨ | ೧೪ | ೧೮ |
| ಕೊಂಕಣಿ | ೪೪ | ೨೨ | ೨೨ | ೧೫ | ೭ | ೮ | ೨೯ | ೧೫ | ೧೪ |
| ಮಲೆಯಾಳಂ | ೨೫ | ೯ | ೧೬ | ೧೦ | ೨ | ೮ | ೧೫ | ೭ | ೮ |
| ಮರಾಠಿ | ೬೨೫ | ೩೨೪ | ೩೦೧ | ೧೪೦ | ೭೮ | ೬೨ | ೪೮೫ | ೨೪೬ | ೨೩೯ |
| ನೇಪಾಳಿ | ೮ | ೬ | ೨ | ೦ | ೦ | ೦ | ೮ | ೬ | ೨ |
| ಒಡಿಯಾ | ೧೮ | ೯ | ೯ | ೧೪ | ೮ | ೬ | ೪ | ೧ | ೩ |
| ತಮಿಳು | ೩೦೨ | ೧೫೦ | ೧೫೨ | ೧೩೨ | ೬೩ | ೬೯ | ೧೭೦ | ೮೭ | ೮೩ |
| ಭಿಲ್ಲ/ಭಿಲ್ಲೋಡಿ | ೩ | ೧ | ೨ | ೩ | ೧ | ೨ | ೦ | ೦ | ೦ |
| ಕೂರ್ಗಿ/ಕೊಡಗು | ೨ | ೧ | ೧ | ೦ | ೦ | ೦ | ೨ | ೧ | ೧ |
| ಇಂಗ್ಲೀಷ್ | ೭ | ೪ | ೩ | ೩ | ೨ | ೧ | ೪ | ೨ | ೨ |
| ತುಳು | ೬೩ | ೩೭ | ೨೬ | ೪ | ೩ | ೧ | ೫೯ | ೩೪ | ೨೫ |

**ಆಧಾರ: ೨೦೧೧ರ ಜನಗಣತಿ**

## ಧರ್ಮಗಳು

ತಾಲ್ಲೂಕಿನಲ್ಲಿ ಹಿಂದು, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳು ಆಚರಣೆಯಲ್ಲಿವೆ. ಈ ಧರ್ಮಗಳು ಸಹಬಾಳ್ವೆ, ಸಾಮರಸ್ಯದಿಂದ ಪ್ರಾಚೀನ ಕಾಲದಿಂದಲೂ ಇದ್ದು, ಹಿಂದುಗಳು ಬಹುಸಂಖ್ಯಾತರಾಗಿದ್ದಾರೆ. ಇವರ ಮಾತೃಭಾಷೆ ಕನ್ನಡ ಆಗಿರುತ್ತದೆ. ಇಸ್ಲಾಂ ಧರ್ಮದವರು ಹೆಚ್ಚಾಗಿ ತಾಲ್ಲೂಕಿನ ಮುಖ್ಯ ಪಟ್ಟಣದಲ್ಲಿದ್ದು, ಹಳ್ಳಿಗಳಲ್ಲಿ ಅಲ್ಪ ಪ್ರಮಾಣದಲ್ಲಿರುವರು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

## ೨೦೧೧ ರ ಜನಗಣತಿಯಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿದ್ದ ವಿವಿಧ ಧರ್ಮಿಯರ ವಿವರ

| | ಧರ್ಮ | ಒಟ್ಟು ಜನಸಂಖ್ಯೆ | ಪುರುಷ | ಮಹಿಳೆ |
|---|---|---|---|---|
| ಒಟ್ಟು | ಒಟ್ಟು | ೩೦೨೦೦೩ | ೧೫೪೨೮೯ | ೧೪೭೭೧೪ |
| | ಹಿಂದೂ | ೨೭೧೬೫೮ | ೧೩೮೯೧೦ | ೧೩೨೭೪೮ |
| | ಮುಸ್ಲಿಂ | ೨೮೦೫೮ | ೧೪೨೩೩ | ೧೩೮೨೫ |
| | ಕ್ರೈಸ್ತ | ೧೫೬ | ೭೮ | ೭೮ |
| | ಸಿಖ್ | ೩೦ | ೧೫ | ೧೫ |
| | ಬೌದ್ಧ | ೨೨ | ೧೦ | ೧೨ |
| | ಜೈನ್ | ೫೪೮ | ೨೮೩ | ೨೬೫ |
| | ಇತರೆ ಧರ್ಮಗಳು | ೧೮೬ | ೯೫ | ೯೧ |
| | ಧರ್ಮವನ್ನು ತಿಳಿಸದವರು | ೧೩೪೫ | ೬೬೫ | ೬೮೦ |
| ಗ್ರಾಮೀಣ | ಒಟ್ಟು | ೨೫೪೯೬೪ | ೧೩೦೩೯೮ | ೧೨೪೫೬೬ |
| | ಹಿಂದೂ | ೨೪೨೯೮೮ | ೧೨೪೩೦೩ | ೧೧೮೬೮೫ |
| | ಮುಸ್ಲಿಂ | ೧೦೫೭೪ | ೫೪೦೨ | ೫೧೭೨ |
| | ಕ್ರೈಸ್ತ | ೬೭ | ೩೬ | ೩೧ |
| | ಸಿಖ್ | ೨೬ | ೧೪ | ೧೨ |
| | ಬೌದ್ಧ | ೧೪ | ೭ | ೭ |
| | ಜೈನ್ | ೧೧೫ | ೬೨ | ೫೩ |
| | ಇತರೆ ಧರ್ಮಗಳು | ೧೫೯ | ೮೧ | ೭೮ |
| | ಧರ್ಮವನ್ನು ತಿಳಿಸದವರು | ೧೦೨೧ | ೪೯೩ | ೫೨೮ |
| | ಒಟ್ಟು | ೪೭೦೩೯ | ೨೩೮೯೧ | ೨೩೧೪೮ |

| | | | | |
|---|---|---|---|---|
| ನಗರ | ಹಿಂದೂ | ೨೮೬೭೦ | ೧೪೬೦೭ | ೧೪೦೬೩ |
| | ಮುಸ್ಲಿಂ | ೧೭೪೮೪ | ೮೮೩೧ | ೮೬೫೩ |
| | ಕ್ರೈಸ್ತ | ೮೯ | ೪೨ | ೪೭ |
| | ಸಿಖ್ | ೪ | ೧ | ೩ |
| | ಬೌದ್ಧ | ೮ | ೩ | ೫ |
| | ಜೈನ್ | ೪೩೩ | ೨೨೧ | ೨೧೨ |
| | ಇತರೆ ಧರ್ಮಗಳು | ೨೭ | ೧೪ | ೧೩ |
| | ಧರ್ಮವನ್ನು ತಿಳಿಸದವರು | ೩೨೪ | ೧೭೨ | ೧೫೨ |

**ಆಧಾರ: ೨೦೧೧ ರ ಜನಗಣತಿ**

## ಹಿಂದೂ ಧರ್ಮ

ಸರ್ವ ಧರ್ಮಗಳಿಗೆ ಆಶ್ರಯ ನೀಡಿದ ಪ್ರದೇಶ ಕರ್ನಾಟಕ. ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಹಿಂದೂಗಳು ನೆಲೆಸಿರುವರು. ಹಿಂದೂ ಪದವು ಸಿಂಧೂ ಪದದ ಮೂಲದಿಂದ ಉಗಮವಾಗಿದ್ದು, ಜಗತ್ತಿನ ಸರ್ವ ಧರ್ಮಗಳಲ್ಲಿ ಹೆಚ್ಚು ಇತಿಹಾಸವುಳ್ಳದ್ದು ಮತ್ತು ಜನಪ್ರಿಯವೂ ಹೌದು. ಇತಿಹಾಸಕಾರ ವಿಲ್‌ಡ್ಯೂರಾಂಟ್‌ರ ಪ್ರಕಾರ ಹಿಂದೂ ಧರ್ಮ ಎಲ್ಲಾ ಧರ್ಮಗಳಿಗೆ ಮಾತೃ ಸ್ಥಾನದಲ್ಲಿದ್ದು, ಇದನ್ನು ಪ್ರತಿ ಪಾದಿಸಿದ ಹಲವು ಋಷಿವರ್ಯರ ಅನುಭವದ ಫಲವಾಗಿದೆ. ಕೆಲ ವಿದ್ವಾಂಸರ ಹೇಳಿಕೆಯಂತೆ ಮಾನವ ಕುಲದ ಆದರ್ಶಗಳೇ ಮಾನವರ ಜೀವನ ಮಾರ್ಗವಾಗಿದೆ.

ಈ ಧರ್ಮದ ಪ್ರಮುಖ ಪಂಥಗಳಲ್ಲಿ ೧) ಅದ್ವೈತ ೨) ವಿಶಿಷ್ಟಾದ್ವೈತ ೩) ದ್ವೈತ ಸಿದ್ಧಾಂತಗಳು ಪ್ರಮುಖವಾಗಿವೆ. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಆದಿಶಂಕರರು ಕೇರಳದ ಕಾಲಟಿಯಲ್ಲಿ ಜನ್ಮ ತಾಳಿದರು. ಕ್ರಿ.ಶ.೧೧ ರಲ್ಲಿ ತಮಿಳುನಾಡಿನ ಪೆರಂಬೂರು ಸ್ಥಳದಲ್ಲಿ ಜನ್ಮ ತಾಳಿದ ರಾಮಾನುಜಾಚಾರ್ಯರು ಬೋಧಿಸಿದ ಮತಕ್ಕೆ ವಿಶಿಷ್ಟಾದ್ವೈತವೆಂದು ಕರೆದರು. ಕರ್ನಾಟಕದ ಉಡುಪಿಯ ಬಳಿಯ ಪಾಜಕದಲ್ಲಿ ಜನ್ಮ ತಾಳಿದ್ದ ಮಧ್ವಾಚಾರ್ಯರು ದ್ವೈತವನ್ನು ಬೋಧಿಸಿದರು. ಅದ್ವೈತ, ವಿಶಿಷ್ಟಾದ್ವೈತ, ದ್ವೈತಪಂಥಗಳು ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ, ಭಗವದ್ಗೀತೆ ಮೊದಲಾದವು ಹಿಂದೂ ಧರ್ಮದ ಪ್ರಕಾಶಮಾನ ಬೆಳಕಾಗಿವೆ.

**ಶಕ್ತಿ ಪಂಥ**

ಕರ್ನಾಟಕ ಪ್ರದೇಶದಲ್ಲಿ ಮಾತೃ ದೇವತಾ ಆರಾಧನೆ ಪ್ರಾಚೀನ ಧಾರ್ಮಿಕ ಪದ್ಧತಿಯಾಗಿದೆ. ಇದನ್ನು ಶಿಲ್ಪ, ಕಟ್ಟಿಗೆ ಭಾವಚಿತ್ರಗಳಲ್ಲಿ ರೂಪಿಸಿ, ದೇವಾಲಯ ಇಲ್ಲವೇ ಅರಳಿಕಟ್ಟೆಗಳ ಮೇಲೆ ಸ್ಥಾಪಿಸಿ ಪೂಜಿಸುವರು. ಗ್ರಾಮೀಣ ಪ್ರದೇಶಗಳಲ್ಲಿ ಊರ ದೇವತೆ ದೇವಾಲಯವಿದ್ದು, ವರ್ಷಕ್ಕೊಮ್ಮೆ, ಎರಡು, ಮೂರು ವರ್ಷಗಳಿಗೆ ಒಂದಾವರ್ತೆ ಹಬ್ಬ ಆಚರಿಸುವರು. ಹಬ್ಬವನ್ನು ಊರವರೆಲ್ಲ ಒಟ್ಟಾಗಿ ಸೇರಿ, ಆಚರಿಸುವ ಪದ್ಧತಿಯು ಬಹಳ ಗ್ರಾಮಗಳಲ್ಲಿ ನಡೆಯುತ್ತಿದೆ. ಪ್ರತಿವರ್ಷ ದಸರಾ ಹಬ್ಬದಲ್ಲಿ ಒಂಬತ್ತು ದಿನಗಳ ಕಾಲ ನವರಾತ್ರಿಯನ್ನು ಆಚರಿಸುವರು.

**ವೈಷ್ಣವ ಪಂಥ**

ವಿಷ್ಣು ದೇವರನ್ನು ರಾಮ, ಕೃಷ್ಣ, ನರಸಿಂಹ, ಜನಾರ್ಧನ, ನಾರಾಯಣ, ಚೆನ್ನಕೇಶವ ಮೊದಲಾದ ನಾಮಗಳಿಂದ ಕರೆದು ಪ್ರಾಚೀನರು ಪೂಜಿಸುತ್ತಾ ಬಂದಿರುವರು. ಅದರಂತೆ ವಿಷ್ಣುವನ್ನು ಮಧ್ವ, ವೈಷ್ಣವ ಮತ್ತು ಶ್ರೀ ವೈಷ್ಣವ ಪಂಥದವರು ಆಯಾ ರೀತಿಯಲ್ಲಿ ಆರಾಧಿಸುವರು.

**ಶೈವ ಪಂಥ**

ಇದು ಪ್ರಾಚೀನ ಹರಪ್ಪ – ಮೊಹೆಂಜೋದಾರೋ ಸಂಸ್ಕೃತಿಯಷ್ಟು ಪ್ರಾಚೀನವಾಗಿದೆ. ಶಿವಲಿಂಗ ಟೆರ್ರಕೋಟದ ಪ್ರತಿಮೆಗಳು ಈ ಅಂಶವನ್ನು ಸಾಕ್ಷೀಕರಿಸುತ್ತವೆ. ಕರ್ನಾಟಕದಲ್ಲಿಯ ಶೈವಪಂಥ ಪ್ರಾಚೀನದಾಗಿದ್ದು, ಪಂಚ ಪೀಠಗಳ ಆಚಾರ್ಯರು ಇದಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿರುವರು. ತಮಿಳುನಾಡಿನಲ್ಲಿ ಬೆಳೆದು ಬಂದ ಶಿವಭಕ್ತಿ ಸಂಪ್ರಾದಾಯಕ್ಕೆ ಶ್ರೀ ಬಸವೇಶ್ವರರು ಮತ್ತು ಶರಣರು ವ್ಯವಸ್ಥಿತವಾದ ವೈಜ್ಞಾನಿಕ ಚೌಕಟ್ಟನ್ನು ನೀಡಿದರು.

**ಜೈನ ಧರ್ಮ**

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಜೈನ ಧರ್ಮ ಪ್ರಬಲವಾಗಿತ್ತು. ಆತ್ಮವು ತನ್ನ ಸಹಜ ಶುದ್ಧತೆಯನ್ನು ಮರಳಿ ಪಡೆದು ಕೇವಲ ಜ್ಞಾನವನ್ನು ಪಡೆಯುವುದೇ ಜೀವನದ ಧ್ಯೇಯ. ಜೈನ ತತ್ವದಲ್ಲಿ ನಂಬಿಕೆ ಸಮ್ಯಗ್ ದರ್ಶನ, ಇದಕ್ಕೆ ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರಗಳೇ ಪೋಷಕವಾಗಿ ಬಂದಾಗ ನಿರ್ವಾಣ (ಮುಕ್ತಿ) ಲಭಿಸುವುದು. ಇವುಗಳಿಗೆ ತ್ರಿರತ್ನಗಳೆಂದು ಕರೆಯುವರು. ಅಜೀವದ ಪ್ರಬೇಧವಾದ ಕರ್ಮದಿಂದ ಬಿಡುಗಡೆಯನ್ನು ಹೊಂದುವುದೇ ಅದರ ಗುರಿ. ಬಾಗಳಿ, ಅರಸೀಕೆರೆ, ಉಚ್ಚೆಂಗಿ ದುರ್ಗಗಳಿಂದ ಕೂಡಿದ ಹರಪನಹಳ್ಳಿ ಭಾಗವು ಪ್ರಾಚೀನದಲ್ಲಿ ಹಲವು ಅರಸರ

ಆಳ್ವಿಕೆಗೆ ಒಳಗಾಗಿದೆ. ಎಲ್ಲಾ ಅರಸರೂ ಈ ಧರ್ಮ ಪೋಷಕರಾಗಿದ್ದರು. ಹೊಯ್ಸಳರು ಜೈನಧರ್ಮಿಯರೇ ಆಗಿದ್ದರು. ಅವರ ಶಾಸನಗಳು ಅಲ್ಲಲ್ಲಿ ದೊರೆಯುತ್ತವೆ. ಬೋಳರ ಉಳಿಯೇ ಬೋಳ್ಗುಳ-ಬಾಳ್ಗುಳ-ಬಾಗಳ ಎಂಬುವ ಹೆಸರಿಗೆ ಕಾರಣವಾಗಿದೆ. ಹರಪನಹಳ್ಳಿ ಪಟ್ಟಣದ ಬೋಗಾರ್ ಓಣಿಯಲ್ಲಿ ಜೈನರ ಒಂದೊಂದು ಬಸದಿಗಳಿವೆ. ಹರಿಹರಕ್ಕೆ ಹೋಗುವ ಮಾರ್ಗದಲ್ಲಿ ಒಂದು ಬ್ರಹ್ಮ ದೇವರ ದೇವಾಲಯವಿರುವುದು. ಹರಪನಹಳ್ಳಿ ಭಾಗದಲ್ಲಿ ಹಲವು ಜನ ಸಾಧುಗಳು, ಅರಸೀಕೆರೆ ಕೋಲಶಾಂತರು, ಕೊಟ್ಟೂರು ಗುರುಬಸವರಾಜರು, ಕೆಗ್ಗಲ್‌ಪುರದ ಮರುಳಸಿದ್ಧರು. ಶ್ರೀ ಚಿಗಟೇರಿಯ ನಾರಪ್ಪ ಇವರೆಲ್ಲರೂ ಸೇರಿ ಈ ಭಾಗದ ಜೈನರನ್ನು ವೀರಶೈವ ಧರ್ಮಕ್ಕೆ ಮತಾಂತರಗೊಳಿಸಿದರು. ಮತಾಂತರಗೊಳಿಸಿದವರೆಲ್ಲ ಸಾಧುಗಳಾಗಿದ್ದರಿಂದ ಮತಾಂತರಗೊಂಡ ಈ ಜೈನರಿಗೆ ಸಾಧು ವೀರಶೈವರೆಂದು ಕರೆಯುವರು.

ಹರಪನಹಳ್ಳಿ ಪಾಳೆಯಗಾರರು ಬೇಡ ಕುಲದವರು. ಪಾಳೆಯಗಾರ ಮೊದಲ ಬಸವಂತ ನಾಯಕನು ಕ್ರಿ.ಶ. ೧೭೧೪ರಲ್ಲಿ ಲಿಂಗಧರ್ಮವನ್ನು ಸ್ವೀಕರಿಸಿ ಕೊಟ್ರಪ್ಪನಾಯಕನೆಂದು ಕರೆದುಕೊಂಡನು. ಹೀಗಾಗಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಧುಲಿಂಗವಂತರು ಹೆಚ್ಚು ಪ್ರಮಾಣದಲ್ಲಿದ್ದರು.

### ಮಠಗಳು

ಹರಪನಹಳ್ಳಿಯಲ್ಲಿ ಹತ್ತು ಮಠಗಳು ಇರುವುದಾಗಿ ಹೇಳಿದರೂ ಪ್ರಮುಖವಾದವು ಕೆಳಗಿನಂತಿರುತ್ತವೆ.

೧. ಶ್ರೀ ತೆಗ್ಗಿನ ಹಿರೇಮಠ ೨. ಶ್ರೀ ಗುರುಪಾದ ದೇವರ ಮಠ ೩. ಶ್ರೀ ಸುರಪಾಲ ದೇವರ ಮಠ ೪. ಶ್ರೀ ಕಲ್ಲು ಮಠ ೫. ಶ್ರೀ ಕೋಲಶಾಂತರ ಮಠ, ಅರಸೀಕೆರೆ ೬. ಶ್ರೀ ಗುಡ್ಡದ ಕಳ್ಳೀ ಮಠ, ನೀಲಗುಂದ ೭. ಹರಿಯಮ್ಮನಹಳ್ಳಿ ಮಠ ೮. ಶ್ರೀ ಮದ್ದಾನಸ್ವಾಮಿ ಮಠ, ಕೂಲಹಳ್ಳಿಯಲ್ಲಿ ೯.ಕೆಂಪೇಶ್ವರ ಮಠ, ಹರಪನಹಳ್ಳಿಯ ಕೆಲ ಓಣಿಗಳಲ್ಲಿ ಅರಸು ಮಠಗಳು ಕಾಣುತ್ತವೆ. ಪಾಳೆಯಗಾರರು ನಿಧನರಾದರೆ ಅವರನ್ನು ಹೂಳಿ ಮೇಲೆ ಕಟ್ಟೆ ಕಟ್ಟಿ ನಿರ್ಮಿಸಿ ಬಸವಣ್ಣನನ್ನು ಕೂಡಿಸುತ್ತಿದ್ದರು.

### ಶಂಕರಾಚಾರ್ಯರ ಮಠ

ಪಟ್ಟಣದ ಹೊಸಪೇಟೆ ರಸ್ತೆಯಲ್ಲಿ ಆದಿಶಂಕರಾಚಾರ್ಯರ ಮಠವಿದೆ. ಈ ಮಠದಲ್ಲಿ ಶಂಕರರ ಆರಾಧನೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಇದೂ ಅಲ್ಲದೆ ಬಡವರಿಗಾಗಿ ಒಂದು ಕಲ್ಯಾಣ ಮಂಟಪವನ್ನು ನಿರ್ಮಿಸಿರುವರು.

**ಮಾಧ್ವರ ಮಠ**

ಇದು ಹೊಸಪೇಟೆ ರಸ್ತೆ ಎಡ ಭಾಗದಲ್ಲಿರುವುದು. ಇದರಲ್ಲಿ ಬ್ರಾಹ್ಮಣರು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವರು.

**ವಾದಿರಾಜರ ಮಠ**

ಇದು ಕೂಡಾ ಮಾಧ್ವ ಮಠದ ಪಕ್ಕದಲ್ಲಿಯೇ ಇರುವುದು. ಮಠದ ಸ್ವಾಮಿಗಳು ಹರಪನಹಳ್ಳಿಗೆ ಆಗಮಿಸಿದಾಗ ಇದರಲ್ಲಿ ವಿಶ್ರಾಂತಿ ಪಡೆಯುವರು. ಮಠಕ್ಕೆ ಸಂಬಂಧಿಸಿದಂತೆ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

**ರಾಘವೇಂದ್ರ ಸ್ವಾಮಿಗಳ ಮಠ**

ಇದು ಹಳೇ ಬಸ್ಸು ನಿಲ್ದಾಣದ ವೀರಭದ್ರ ದೇವಸ್ಥಾನಕ್ಕೆ ಹತ್ತಿರವಿದೆ. ಇಲ್ಲಿಯೂ ಸಹಾ ನಿತ್ಯಪೂಜೆ ನಡೆಯುವುದು. ಅನೇಕ ಭಕ್ತರು ನಿತ್ಯ ಸೇವೆ ಸಲ್ಲಿಸುವರು.

**ಕ್ರೈಸ್ತ ಧರ್ಮ**

ಕ್ರೈಸ್ತರಲ್ಲಿ ೧) ರೋಮನ್ ಕೆಥೋಲಿಕ್ ೨) ಪ್ರಾಟೆಸ್ಟಂಟ್ ಎಂಬ ಎರಡು ಪಂಥಗಳಿವೆ. ಮೊದಲು ಕರಾವಳಿಯ ಮಂಗಳೂರು, ಕುಂದಾಪುರ, ಉಡುಪಿ ಮತ್ತು ಇತರೆ ಪ್ರದೇಶಗಳಲ್ಲಿ ಈ ಧರ್ಮವು ಪ್ರಚಾರ ಮತ್ತು ಪ್ರಭಾವ ಪಡೆಯಿತು. ಬಳ್ಳಾರಿ ಪಟ್ಟಣದಲ್ಲಿ ಮೊದಲೇ ಆಂಗ್ಲರು ಬೀಡು ಬಿಟ್ಟಿದ್ದರು. ಧರ್ಮ ಪ್ರಚಾರ ಪ್ರಾರಂಭಿಸಿದರು. ಒಂದು ಮುದ್ರಣಾಲಯವನ್ನು ಸ್ಥಾಪಿಸಿ, ಅದರಲ್ಲಿ ಬೈಬಲನ್ನು ಕನ್ನಡಕ್ಕೆ ಅನುವಾದಿಸಿದರು. ಇದು ಹರಪನಹಳ್ಳಿ ತಾಲ್ಲೂಕಿನ ಮೇಲೆ ಯಾವ ಪ್ರಭಾವ ಬೀರಲಿಲ್ಲ. ೧೯೩೦–೩೧ ರಲ್ಲಿ ಹರಪನಹಳ್ಳಿಯ ಹಡಗಲಿ ಮಾರ್ಗದಲ್ಲಿ ಕ್ಯಾಥೋಲಿಕ್ ಚರ್ಚ್ ಸ್ಥಾಪಿಸಿದರು. ಪ್ರೊಟೆಸ್ಟೆಂಟ್ ಚರ್ಚು ಹೊಸಪೇಟೆ ಮಾರ್ಗದಲ್ಲಿ ಸ್ಥಾಪನೆಯಾಗಿದೆ.

**ಜಾತಿ ಹಾಗೂ ಬುಡಕಟ್ಟು ಪಂಗಡಗಳು**

ಜಾತಿ ಪದ್ಧತಿಯು ಸಮಾಜದ ಒಂದು ವಿಶಿಷ್ಟ ಲಕ್ಷಣವಾಗಿದ್ದು, ಇತರ ಕಡೆಗಳಲ್ಲಿ ಕಂಡುಬರುವ ಈ ತಾಲ್ಲೂಕಿನಲ್ಲಿ ಅನೇಕ ಜಾತಿ ಹಾಗೂ ಉಪಜಾತಿಗಳನ್ನು ಕಾಣಬಹುದು. ರಿಸ್ಲೆಯವರ ಪ್ರಕಾರ ಜಾತಿ ಎಂದರೆ ಒಬ್ಬ ಮಾನವ ಅಥವಾ ದೈವ ಸಂಭೂತನಾದ ಕಾಲ್ಪನಿಕ ಪೂರ್ವಜರಿಂದ ತಮ್ಮ ವಂಶಗಳನ್ನು ಗುರುತಿಸುವ ಕೆಲವು ವೈವಿಧ್ಯಮಯ ಗುಂಪುಗಳಾಗಿದ್ದು, ವಿವಾಹ ಸಂಬಂಧಗಳು ಆಯಾ

ಗುಂಪುಗಳ ಪರಿಮಿತಿಯಲ್ಲಿಯೇ ನಡೆಯುತ್ತವೆ. ಆಯಾ ಜಾತಿಯು ಬಹುಮಟ್ಟಿಗೆ ವಂಶಪಾರಂಪರ್ಯವಾಗಿ ಅನುಸರಿಸುವುದಾದರೂ ಇತ್ತೀಚಿನ ದಿನಗಳಲ್ಲಿ ಅದು ಕೆಲವು ಬದಲಾವಣೆಗಳಿಗೂ ಒಳಗಾಗಿದೆ. ಉಡುಗೆ-ತೊಡುಗೆ, ಆಹಾರಾಭ್ಯಾಸ, ವಿವಾಹ, ಅಂತ್ಯಕ್ರಿಯೆ ಮೊದಲಾದ ಧಾರ್ಮಿಕಾಚರಣೆಗಳು ಹಾಗೂ ರೂಢಿ-ಪದ್ಧತಿಗಳು ಜಾತಿಯಿಂದ ಜಾತಿಗೆ ಭಿನ್ನವಾಗಿವೆ.

ಜಾತಿವಾರು ಜನಗಣತಿಯನ್ನು ೧೯೪೦ ರ ವರೆಗೆ ನಡೆಸಿ ನಂತರ ಕೈಬಿಟ್ಟಿತು. ನಂತರ ರಚನೆಗೊಂಡಿದ್ದ ಹಿಂದುಳಿದ ವರ್ಗಗಳ ಆಯೋಗಗಳು ಸಮೀಕ್ಷೆ ನಡೆಸಿ ಜಾತಿವಾರು ಜನಸಂಖ್ಯಾ ವಿವರಗಳನ್ನು ಕೊಟ್ಟಿರುತ್ತದೆ. ತಾಲ್ಲೂಕಿನಲ್ಲಿ ವಾಸ ಮಾಡಿರುವ ಜಾತಿಯ ಮತ್ತು ಬುಡಕಟ್ಟುಗಳಿಗೆ ಸೇರಿದ ಜನರ, ನೀತಿ, ರೀತಿ, ಜೀವನ ನಡೆಸುವ ಪದ್ಧತಿಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

### ಅಗಸ

ಇವರಿಗೆ ಮಡಿವಾಳ, ಧೋಬಿ ಎಂದು ಗ್ರಾಮೀಣರು ಮತ್ತು ಪಟ್ಟಣಿಗರು ಕರೆಯುವರು. ಸಮಾಜದ ವಿವಿಧ ವರ್ಗಗಳ ಜನರಿಗೆ ಬಟ್ಟೆ ಒಗೆದು ಕೊಡುವುದು; ಗ್ರಾಮ ಹಬ್ಬಗಳಲ್ಲಿ, ದೇವರ ಉತ್ಸವ ಕಾರ್ಯದಲ್ಲಿ ಪಾಲಿಕೆ ಹೊತ್ತು ಹೋಗುವವರ ಅಡಿಯಲ್ಲಿ ಮಡಿ ಸೀರೆ, ಪಂಚೆ ಹಾಸುವರು. ಇವರಲ್ಲಿ ಬೆಳ್ಳಿ-ನಾಗರ, ಸಿದ್ದೇಶ್ವರ, ಹೆಬ್ಬೆ ಮುಂತಾದ ಒಳಪಂಗಡಗಳಿದ್ದು, ಬಹು ಜನರು ಕನ್ನಡ ಭಾಷೆಯಲ್ಲಿ ಮಾತನಾಡುವರು. ಕೆಲವರು ಸಸ್ಯಹಾರಿಗಳು ಮತ್ತೆ ಕೆಲವರು ಮಾಂಸಹಾರಿಗಳು. ಇವರಲ್ಲಿ ಹೆಣ್ಣಿಗೆ ತೆರ ಕೊಡುವ ಪದ್ಧತಿ ಒಂದು ಕಾಲದಲ್ಲಿತ್ತು. ಈಗ ಅದು ವರದಕ್ಷಿಣೆಗೆ ತಿರುಗಿದೆ. ಇವರ ವಿವಾಹಗಳಲ್ಲಿ ಕಾರ್ಯಕ್ರಮಗಳನ್ನು ಬ್ರಾಹ್ಮಣರು ನಡೆಸಿಕೊಡುವರು. ಹನುಮಂತ, ಹುಲುಗಮ್ಮ, ಗೌರಮ್ಮ ದೇವರುಗಳನ್ನು ಆರಾಧಿಸುವರು. ವಿವಾಹಕ್ಕೆ ಪೂರ್ವದಲ್ಲಿ ತಮ್ಮ ಮನೆದೇವರ ಪೂಜೆ ಮಾಡಿ ವಿವಾಹ ಮಾಡುವರು. ಇವರು ಮಡಿವಾಳ ಮಾಚಿದೇವರನ್ನು ಸ್ಮರಿಸುವರು. ಸತ್ತವರನ್ನು ನೆಲದಲ್ಲಿ ಹೂಳುವರು. ವರ್ಷಕ್ಕೊಂದು ದಿನ ಮಹಾಲಯ ಅಮವಾಸ್ಯೆಯ ದಿನ ತಮ್ಮ ಹಿರಿಯರಿಗೆ ಎಡೆ ನೈವೇದ್ಯ ಮಾಡಿ ಪೂಜಿಸುವರು. ಈಗ ಸಮಾಜದ ಇತರರಂತೆ ಅವರು ಇತರ ದೇವರನ್ನು ಪೂಜಿಸುವರು.

### ಕುರುಬ

ಈ ತಾಲ್ಲೂಕಿನಲ್ಲಿ ಕಂಡುಬರುವ ಕುರುಬರಿಗೆ ಹಾಲು ಮತಸ್ಥರು ಎಂದು ಕರೆಯುವರು. ಇವರ ಕುಲ ಕಸುಬು ಕುರಿ ಸಾಕಣೆಯಾಗಿದೆ. ಕರ್ನಾಟಕದ ಕುರುಬರ ಒಳಪಂಗಡಗಳು ಕೆಳಗಿನಂತಿವೆ.

೧. ಕಾಡು ಕುರುಬರು (ಜೇನು ಕುರುಬರು) ೨.ಅಲೆಮಾರಿ ಕುರುಬರು ೩.ಒಡೆಯರು ೪.ಹತ್ತಿ ಕಂಕಣ ೫.ಉಣ್ಣೆ ಕಂಕಣ ೬.ಹಂಡೆ ಕುರುಬರು ೭.ದನಗರ ಗವಳಿಗರ ೮.ಹೆಗ್ಗಡೆಯವರು ೯.ಗೊಂಡ ಕುರುಬರು ೧೦.ಕ್ರೈಸ್ತ ಕುರುಬರು ೧೧. ಸಾದ ಕುರುಬರು ೧೨.ದಾಸ ಕುರುಬರು ೧೩.ಝುಂಡೆ ಕುರುಬರು ೧೪.ಹೆಳವ ಕುರುಬರು ೧೫.ಗೊಂಡ ಕುರುಬರು ೧೬.ಲಾಳಗೊಂಡರು ಮುಂತಾದವರು.

ಹರಪನಹಳ್ಳಿ ತಾಲ್ಲೂಕಿನ ಪಟ್ಟಣದಲ್ಲಿ ಮತ್ತು ಅನೇಕ ಗ್ರಾಮಗಳಲ್ಲಿ ಹೆಚ್ಚು ಕುರುಬ ಜನಾಂಗದವರಿದ್ದು, ಹೆಚ್ಚಾಗಿ ಉಣ್ಣೆ ಕಂಕಣ ಮತ್ತು ಹತ್ತಿ ಕಂಕಣದ ಪಂಗಡದವರಾಗಿರುವರು.

ಇವರ ಮೂಲ ಕಸಬು ಕುರಿ ಸಾಕಣೆಯಾಗಿದ್ದು, ಹೊದ್ದುಕೊಳ್ಳುವ ಕಂಬಳಿಗಳನ್ನು ಸಹಾ ನೇಯುತ್ತಿದ್ದರು. ಈಗ ನೇಯುವುದನ್ನು ನಿಲ್ಲಿಸಿರುವರು. ಹಿಂದೆ ವಿವಾಹ ಸಂದರ್ಭದಲ್ಲಿ ಹೆಣ್ಣಿಗೆ ೪೦ ರೂ. ತೆರಕೊಡುವ ಪದ್ಧತಿಯಿತ್ತು. ಈಗ ಅದು ನಿಂತು ಹೋಗಿದೆ.

ಇವರಲ್ಲಿ ಕಲಹವುಂಟಾದರೆ ಕುಲದ ತಮ್ಮ ಕುಲಗುರುಗಳನ್ನು ಕೂಡಿಸಿ ಅವರ ಸಮ್ಮುಖದಲ್ಲಿ ಚರ್ಚಿಸಿ ಕಲಹ ಬಗೆಹರಿಸಿಕೊಳ್ಳುವರು. ಇವರು ಬೇರೆ ಬೇರೆ ದೇವರನ್ನು ಆರಾಧಿಸಿದರೂ, ಮೈಲಾರ ಮತ್ತು ಬೀರ ದೇವರುಗಳನ್ನು ಪೂಜಿಸುವರು. ಹರಪನಹಳ್ಳಿ ಮತ್ತು ಮಣ್ಣು ಮೈಲಾರಗಳಿಗೆ ತೆರಳಿ ಗೊರವ ಟೊಪ್ಪಿಗೆ ಧರಿಸಿ ಕಂಬಳಿ ಹೊದ್ದು ಕೈಯಲ್ಲಿ ತ್ರಿಶೂಲ ಡಮರುಗ ಹಿಡಿದು ಡೊಳ್ಳು ಬಾರಿಸುತ್ತಾ ಕುಣಿಯುವರು. ಡೊಳ್ಳಿನ ಕುಣಿತವು ಜಾನಪದ ಕಲೆಗಳಲ್ಲಿ ಒಂದು.

### ಕುಂಬಾರ

ಇವರು ಗ್ರಾಮೀಣ ಪ್ರದೇಶದಲ್ಲಿರುವ ಪ್ರಮುಖವಾದವರಾಗಿದ್ದಾರೆ. ಮಡಿಕೆ, ಕುಡಿಕೆ ಹೆಂಚು, ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಮನೆಯಲ್ಲಿ ಮಣ್ಣಿನ ಪಾತ್ರೆಗಳನ್ನು ನೀರು ಸಂಗ್ರಹಿಸಲು ದೊಡ್ಡ ದೊಡ್ಡ ಹರಿವಾಣ-ಹಂಡೆಗಳನ್ನು ಮಾಡಿ ಕೊಡುತ್ತಿದ್ದರು. ಹೊಸ ಲೋಹಗಳ ಶೋಧದಿಂದ ಸ್ಟೀಲು, ಅಲ್ಯೂಮಿನಿಯಂ, ಇಂಡಾಲಿಯಂ ಪಾತ್ರೆಗಳ ಬಳಕೆಯಿಂದ ಕುಂಬಾರ ವೃತ್ತಿಗೆ ಧಕ್ಕೆಯಾಗಿದೆ. ಕುಂಬಾರ ಗುಂಡಯ್ಯ, ಗುಂಡ ಬ್ರಹ್ಮಯ್ಯ, ಸಾಲೆ ಸರ್ವಜ್ಞ ಇವರು ತಮ್ಮ ವಂಶಜರೆಂದು ಹೇಳುವರು. ಇವರಲ್ಲಿ ಸಸ್ಯಹಾರಿ ಹಾಗೂ ಮಾಂಸಹಾರಿಗಳಿಬ್ಬರು ಇರುವರು. ತುಂಗಭದ್ರಾ ನದಿ ದಾಟಿದರೆ ಹಾವೇರಿ, ಧಾರವಾಡ ಪ್ರದೇಶಗಳು ಬರುತ್ತವೆ. ಈ ಪ್ರದೇಶದ ಕುಂಬಾರರು ಲಿಂಗವಂತರು. ಇವರು ಸಸ್ಯಹಾರಿಗಳು. ಚಿತ್ರದುರ್ಗ ಮತ್ತು ಬಳ್ಳಾರಿ ಕುಂಬಾರರು ಮಾಂಸಹಾರಿಗಳು. ಅವರಿಗೂ ಇವರಿಗೂ ಬಂಧುತ್ವ ಬೆಳೆಯುವುದಿಲ್ಲ. ಹರಪನಹಳ್ಳಿ ತಾಲ್ಲೂಕಿನಲ್ಲಿ ಈಗಲೂ ಅಡವಿಹಳ್ಳಿ, ಹರಪನಹಳ್ಳಿ, ತೆಲಗಿ, ಸಿಂಗ್ರಿಹಳ್ಳಿ

ಕುಂಬಾರರು ಕುಡಿಕೆ, ಮಡಿಕೆಗಳನ್ನು ತಯಾರಿಸುವರು. ಕುಂಬಾರರು ಗೌರಿ–ಗಣೇಶ ಮೂರ್ತಿಗಳನ್ನು ಮಾಡಿ ಅವುಗಳಿಗೆ ಬಣ್ಣ ಹಾಕಿ ತಯಾರಿಸುವರು. ಇತರರಂತೆ ವಿವಾಹ ವಿಧಿಗಳನ್ನು ನಡೆಸುವರು.

**ಗಾಣಿಗ**

ಗಾಣದಿಂದ ಎಣ್ಣೆಯನ್ನು ಪಡೆಯುತ್ತಿದ್ದ ಇವರು ಈಗ ಎಣ್ಣೆ ತೆಗೆಯುವುದನ್ನು ನಿಲ್ಲಿಸಿರುವರು. ಇತರರಂತೆ ಬೇಸಾಯ, ಅಂಗಡಿ ವ್ಯಾಪಾರ ಮಾಡುವರು. ತಾಲ್ಲೂಕಿನಲ್ಲಿ ಸಜ್ಜನ ಗಾಣಿಗರು, ಜ್ಯೋತಿ ಗಾಣಿಗರು ಕಂಡು ಬರುವರು. ಹರಪನಹಳ್ಳಿ ತಾಲ್ಲೂಕಿನ ತೆಲಗಿ, ಚಿಗಟೇರಿ, ಸಾಸ್ವೆಹಳ್ಳಿ, ನೀಲಗುಂದ, ಹರಪನಹಳ್ಳಿಗಳಲ್ಲಿ ಇವರು ಹೆಚ್ಚಾಗಿ ಕಂಡುಬರುವರು. ಇವರು ಸಸ್ಯಾಹಾರಿಗಳು ಮತ್ತು ಲಿಂಗಧರಿಸಿ ಈಶ್ವರನನ್ನು ಆರಾಧಿಸುವರು.

**ದೇವಾಂಗ ಮತ್ತು ಲಿಂಗವಂತ ನೇಕಾರರು**

ಇವರ ವೃತ್ತಿ ನೇಕಾರಿಕೆಯಾಗಿದ್ದು, ಕನ್ನಡ–ತೆಲುಗು ಮಾತೃಭಾಷೆಯರಿರುವರು. ಹರಪನಹಳ್ಳಿ ತಾಲ್ಲೂಕಿನಲ್ಲಿ ಲಿಂಗಾಯತ ಹಾಗೂ ದೇವಾಂಗ ಎಂಬುವ ಎರಡು ಪಂಗಡದವರು ಇರುವರು. ಇವರು ಬಟ್ಟೆಯನ್ನು ನೇಯುತ್ತಿದ್ದರು. ಮನೆಗಳಲ್ಲಿ ಮಗ್ಗಗಳಿದ್ದುವು. ತಾಲ್ಲೂಕಿನ ಚಿಗಟೇರಿ, ಹರಪನಹಳ್ಳಿ, ಕುಂಚೂರುಗಳಲ್ಲಿ ಈ ಜನಾಂಗದವರು ಕಂಡುಬರುವರು. ಲಿಂಗವಂತ ನೇಕಾರರು ಚಿಗಟೇರಿ, ಹರಪನಹಳ್ಳಿಗಳಲ್ಲಿದ್ದರೆ, ಕುಂಚೂರಲ್ಲಿ ದೇವಾಂಗದವರು ಇರುವರು. ಇವರು ಜನಿವಾರ ಧರಿಸುವರು ಹಾಗೂ ಸಸ್ಯಹಾರಿಗಳಾಗಿರುವರು.

**ಕ್ಷೌರಿಕ**

ಇವರಿಗೆ ಕೆಲಸಿ, ಹಜಾಮ, ನಾಯಿಂದ, ನಾಪಿತ ಎಂದೂ ಕರೆಯುತ್ತಾರೆ. ಹಳ್ಳಿಗಳಲ್ಲಿ ಲಿಂಗವಂತ ಕ್ಷೌರಿಕರು ಕಂಡು ಬಂದರೆ, ಹರಪನಹಳ್ಳಿ ಪಟ್ಟಣದಲ್ಲಿ ತೆಲುಗು ಕ್ಷೌರಿಕರು ಕಾಣಸಿಗುತ್ತಾರೆ. ತೆಲುಗು ಕ್ಷೌರಿಕರು ಕನ್ನಡ–ತೆಲುಗು ಎರಡೂ ಭಾಷೆಗಳನ್ನು ಆಡುವರು. ಭಜಂತ್ರಿ, ಡೋಲು, ನಾದಸ್ವರ ಮೊದಲಾದ ವಾದ್ಯಗಳನ್ನು ವಿವಾಹ ಸಂದರ್ಭಗಳಲ್ಲಿ ನುಡಿಸುವರು. ಲಿಂಗವಂತ ಕ್ಷೌರಿಕರು ಈಶ್ವರನನ್ನು, ತೆಲುಗು ಕ್ಷೌರಿಕರು ರಾಮ, ತಿರುಪತಿ ವೆಂಕಟೇಶನನ್ನು ಆರಾಧಿಸುವರು. ತೆಲುಗರ ವಿವಾಹಗಳಲ್ಲಿ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸಲಾಗುತ್ತದೆ. ಇವರಲ್ಲಿ ನಿಧನರಾದವರನ್ನು ಹೂಳುತ್ತಾರೆ.

**ಒಕ್ಕಲಿಗ**

ಇವರಿಗೆ ಗೌಡರು ಎಂದೂ ಕರೆಯುವರು. ಇಲ್ಲಿ ಒಕ್ಕಲಿಗರ ಸಂಖ್ಯೆ ಕಡಿಮೆ. ಇವರು ಬಿದಿರಿನ ಪೆಟ್ಟಿಗೆ, ಬಿದಿರಿನ ಬುಟ್ಟಿಗಳನ್ನು ತಯಾರಿಸುವರು. ಇವರನ್ನು ವೀಳ್ಯದ ಗುಂಪು, ಧಾರೆ ಗುಂಪು ಎಂದು ಕರೆಯುವರು. ನಿಧನರಾದವರನ್ನು ಹೂಳುವರು.

**ಉಪ್ಪಾರ**

ಈ ಜನಾಂಗ ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಕಷ್ಟು ಇದೆ. ಮೊದಲು ಇವರು ಮಣ್ಣುಪ್ಪು ತಯಾರಿಸುತ್ತಿದ್ದರು. ಕೆಲವು ಕೆರೆಗಳ ಪಕ್ಕದಲ್ಲಿ ಉಪ್ಪಿನ ಮಾಳಗಳು ಇರುವವು. ಈಗ ಇವರು ಇತರರಂತೆ ಕೃಷಿ, ತೋಟಗಾರಿಕೆ, ಅಂಗಡಿ, ನೌಕರಿ ಹುದ್ದೆಗಳಲ್ಲಿರುವರು. ಹರಪನಹಳ್ಳಿ, ಶೃಂಗಾರದೋಟ, ಎಡೆತ್ತಿನಹಳ್ಳಿ, ಓಬಳಾಪುರ, ಶಂಕರನಹಳ್ಳಿಗಳಲ್ಲಿ ವಾಸಿಸುತ್ತಿರುವರು.

**ಬ್ರಾಹ್ಮಣ**

ಈ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರ ಅಸ್ತಿತ್ವವಿದೆ. ಪಾಳೆಯಗಾರರಿಗೆ ದಿವಾನರಾಗಿದ್ದವರು ಬ್ರಾಹ್ಮಣರು. ನಾಯಕರು ಯುದ್ಧಕ್ಕೆ ಹೊರಟಾಗ ಅವರಿಗೆ ಜಯ ದೊರಕಲಿ ಎಂದು ಅವರ ಕೈಗೆ ಕೈ ಒಲೆ ಬರೆದು ಕಟ್ಟುತ್ತಿದ್ದರು. ಅವರಿಗೆ ಜಯ ದೊರೆತಾಗ ಒಂದೊಂದು ಎಕರೆ ಗದ್ದೆ (ನೀರಾವರಿ) ಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಳ್ಳುತ್ತಿದ್ದರು. ಹರಪನಹಳ್ಳಿಯು ಒಂದು ಬ್ರಾಹ್ಮಣರ ಅಗ್ರಹಾರ. ಇವರು ಎಲ್ಲಾ ಹಳ್ಳಿಗಳಲ್ಲಿದ್ದು ಸರ್ವ ಜನಾಂಗದವರಿಗೆ ಪುರಾಣ ಓದಿ ಹೇಳುತ್ತಿದ್ದರು. ಪುರಾಣ ಓದಿದರೆ ಮಳೆಯಾಗುವುದೆಂಬ ನಂಬಿಕೆ. ವಿವಾಹಗಳಲ್ಲಿ ದೇವಾತಾ ಕಾರ್ಯಗಳಿಗೆ ಪೌರೋಹಿತ್ಯಗಳನ್ನು ನಡೆಸಿಕೊಡುತ್ತಿದ್ದರು. ಈಗ ಹಳ್ಳಿಗಳನ್ನು ತೊರೆದು ತಾಲ್ಲೂಕು ಪಟ್ಟಣವನ್ನು ಸೇರಿರುವರು. ಇದರಲ್ಲಿ ಮಾಧ್ವರು. ಭಟ್ಟರು (ಶಂಕರಾಚಾರ್ಯರ ಭಕ್ತರು) ಮತ್ತು ವೈಷ್ಣವರು (ಶ್ರೀ ರಾಮಾನುಜಾಚಾರ್ಯರ ಶಿಷ್ಯರು) ಹೀಗೆ ಮೂರು ಬಗೆಯವರು. ಈಗ ಮಾಧ್ವರು ಮತ್ತು ಸ್ಮಾರ್ತರು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವರು. ಇವರು ಮಕ್ಕಳಿಗೆ ಶಿಕ್ಷಣ ಕೊಡಿಸಿ ಬೇರೆ ಬೇರೆ ಪಟ್ಟಣಗಳಲ್ಲಿ ನೌಕರಿಗೆ ಸೇರಿಸಿ ಅಲ್ಲಲ್ಲಿಯೇ ಉಳಿದಿರುವರು. ಹೀಗಾಗಿ ಕೆಲವರು ತಮ್ಮ ಭೂಮಿಗಳನ್ನು ಕೋರು-ಲಾವಣಿಗಳಿಗೆ ರೈತರಿಗೆ ಕೊಟ್ಟು ಹರಪನಹಳ್ಳಿಯಲ್ಲಿಯೇ ನೆಲೆಸಿರುವರು. ಇತರ ಜನಾಂಗಗಳಲ್ಲಿ ವಯಸ್ಸಿಗೆ ಬಂದ ಯುವಕರಿಗೆ ಕನ್ಯೆ ನೋಡಲು ಹೆಣ್ಣಿನ ಮನೆಗೆ ತೆರಳುವುದು ಸಾಂಪ್ರದಾಯವಾಗಿದೆ. ಆದರೆ ಬ್ರಾಹ್ಮಣರಲ್ಲಿ ಹೆಣ್ಣನ್ನು ಜೊತೆಗೆ ಕರೆದುಕೊಂಡು ಗಂಡಿನ ಮನೆಗೆ ತೆರಳುವರು.

**ಮಾದಿಗ**

ಈ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಮತ್ತು ಪಟ್ಟಣದಲ್ಲಿ ಇವರು ಹರಡಿರುವರು. ಇವರಿಗೆ ಆದಿ ಜಾಂಬುವ, ಬೇಗಾರ ಎಡಗೈಯವರೆಂದು ಕರೆಯಲಾಗಿದೆ. ಇವರಲ್ಲಿ ದೇವದಾಸಿಯರನ್ನು ದೇವರಿಗೆ ಬಿಡುವ ಪದ್ಧತಿಯೂ ಇತ್ತು. ಈಗ ಅದು ಕಡಿಮೆಯಾಗುತ್ತಿದೆ. ಇವರಲ್ಲಿ ನಿಧನರಾದವರನ್ನು ಹೂಳುವ ಪದ್ಧತಿಯಿದೆ. ಮೂರು ಅಥವಾ ಹತ್ತು ದಿನಗಳ ಸೂತಕವನ್ನು ಆಚರಿಸುವರು. ಯುಗಾದಿ, ವಿನಾಯಕ ಚತುರ್ಥಿಯ ದಿನ ಸ್ಮಶಾನಕ್ಕೆ ತೆರಳಿ ಸತ್ತವರ ಗದ್ದಿಗೆಗೆ ಪೂಜೆ ಸಲ್ಲಿಸುವರು. ರೈತರ ಉಪಕರಣಗಳು, ಎತ್ತಿನ ಪಟಗಾಣಿ, ಚರ್ಮದ ಹಗ್ಗ, ಪಾದರಕ್ಷೆಗಳು, ಬಂಡಿಗೆ ಬೇಕಾದುದು ಮುಂತಾದವುಗಳನ್ನು ಮಾಡಿಕೊಡುತ್ತಿದ್ದರು. ಕೆಲವರು ಕೃಷಿ ಕೆಲಸದಲ್ಲಿ ತೊಡಗಿರುವವರು. ಇವರಲ್ಲಿ ನಿಧನರಾದರೆ ಅವರ ಮನೆ ಮುಂದೆ ಹಲಗೆ ಬಾರಿಸುವರು. ದೇವರ ಕಾರ್ಯ ಮತ್ತು ಊರ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಹಲಗೆ ಬಾರಿಸಿ ಡಂಗೂರ ಸಾರಿಸುತ್ತಿದ್ದರು.

**ಬೇಡರು**

ಇವರಿಗೆ ವಾಲ್ಮೀಕಿ, ತಳವಾರ, ನಾಯಕ, ಕಿರಾತ ಎಂದು ಕರೆಯುವರು. ಇವರಲ್ಲಿ ಎರಡು ಪಂಗಡಗಳು ಕಂಡುಬರುತ್ತವೆ. ಊರ ಬೇಡರು ಮತ್ತು ಮ್ಯಾಸ ಬೇಡರು.

ವಿಜಯನಗರ ಅರಸರ ಸೈನ್ಯದಲ್ಲಿ ಬೇಡ ಪಡೆಯಿದ್ದಿತು. ವಿಜಯನಗರ ರಾಜ್ಯ ಪತನಗೊಂಡ ಬಳಿಕ ಬೇಡ ಪಡೆಯ ಜನ ಹೊಸಪೇಟೆ, ಕೂಡಲಗಿ, ಹರಪನಹಳ್ಳಿಗಳಿಗೆ ವಲಸೆ ಬಂದರು ಎಂದು ಹೇಳುವರು. ಹರಪನಹಳ್ಳಿಯನ್ನಾಳಿದ ಪಾಳೆಯಗಾರರು ಬೇಡರು. ಅವರ ಸಂತತಿಯು ಇಲ್ಲ. ಹರಪನಹಳ್ಳಿ ಪಟ್ಟಣ ಮತ್ತು ಬಹುತೇಕ ಹಳ್ಳಿಗಳಲ್ಲಿ ಇವರ ಸಂಖ್ಯೆ ಹೆಚ್ಚಾಗಿದೆ. ಬೇಟೆಯಾಡುವುದರಲ್ಲಿ ಇವರು ಪ್ರಸಿದ್ಧರು. ರಾಜ ಮಹಾರಾಜರ ಕಾಲದಲ್ಲಿ ರಾತ್ರಿ ಗಸ್ತು ತಿರುಗುವ ಕಾರ್ಯದಲ್ಲಿಯೂ ಇರುತ್ತಿದ್ದರು. ಇವರು ಹೆಚ್ಚಾಗಿ ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿರುವರು. ಸರ್ಕಾರ ಇವರನ್ನು ಪರಿಶಿಷ್ಟ ಜಾತಿಗೆ ಸೇರಿಸಿದ ಬಳಿಕ ಇವರ ಮಕ್ಕಳು ಹೆಚ್ಚಿನ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿರುವರು. ವಾಲ್ಮೀಕಿ ಋಷಿಗಳು ತಮ್ಮ ವಂಶಜರೆಂದು ಹೇಳಿಕೊಳ್ಳುವರು. ಸರ್ಕಾರ ವಾಲ್ಮೀಕಿ ಜಯಂತಿಯನ್ನು ಪ್ರತಿವರ್ಷ ಆಚರಿಸುತ್ತದೆ. ಇದರಲ್ಲಿಯೂ ಬೆಡಗುಗಳಿರುತ್ತವೆ. ಬೇರೆ ಬೆಡಗಿನಲ್ಲಿ ಕನ್ಯೆಯರನ್ನು ಸ್ವೀಕರಿಸಿ ವಿವಾಹ ನಡೆಸುವರು.

**ಗಂಗಾಕುಲ**

ಗಂಗೆ ಮಕ್ಕಳು, ಅಂಬಿಗರು, ಗಂಗಾಕುಲ, ಬೆಸ್ತ, ಬೋಯಿ, ಕಬ್ಬಲಿಗ, ಕಬ್ಬೇರ, ಜಾಲಗಾರ, ಮೀನುಗಾರ, ಬಾರಿಕ, ದೋಣಿಗಾರ, ಕೋಲಿ ಜನಾಂಗ ಹೀಗೆ ಸುಮಾರು

೩೯ ಉಪ ಪಂಗಡಗಳಿಂದ ಈ ಜಾತಿಯವರನ್ನು ಕರೆಯುವರು. ಇವರ ಮೂಲ ಉದ್ಯೋಗ ನದಿಗಳಲ್ಲಿ ಮೀನು ಹಿಡಿಯುವುದು. ಪಯಣಿಗರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸೇರಿಸುವುದು, ಹಾಗಾಗಿ ಇವರು ಹೆಚ್ಚಾಗಿ ನದಿ ದಡದ ಹಳ್ಳಿಗಳಲ್ಲಿ ವಾಸಿಸುವರು. ಇನ್ನು ಕೆಲವರು ಹಳ್ಳಿಗಳಲ್ಲಿರುವರು. ಹಳ್ಳಿಯ ಗೌಡ, ಶ್ಯಾನುಭೋಗ, ವಾಲಿಕಾರ, ಅಣಕಾರ ಮತ್ತು ಬಣಕಾರರಂತೆ ಬಾಬುದಾರರಾಗಿ, ಪ್ರತಿ ಮನೆಯ ಲಗ್ನಗಳಲ್ಲಿ ಪ್ರಮುಖರಾಗಿ ವೀಳ್ಯ ಪಡೆಯುವರು. ಕೆರೆಗಳಿದ್ದಲ್ಲಿ ಕೆರೆ ನೀರನ್ನು ರೈತರ ಪೈರಿಗೆ ಸರತಿ ಪ್ರಕಾರ ನೀರು ಬಿಡುತ್ತಿದ್ದರು. ಈಗ ಕೆರೆಗಳು ಸರ್ಕಾರದ ಸ್ವಾಧೀನದಲ್ಲಿದ್ದು ಅವುಗಳನ್ನು ಲೋಕೋಪಯೋಗಿ ಇಲಾಖೆಗಳ ಉಸ್ತುವಾರಿಗೆ ಬಿಡಲಾಗಿದೆ. ಇವರು ಇತರರಂತೆ ಕೃಷಿ, ವ್ಯಾಪಾರ ಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರನ್ನು ದುಡಿಮೆಯ ಇತರ ರಂಗಗಳಲ್ಲೂ ಕಾಣಬಹುದು.

ಇವರಲ್ಲಿ ಮಾಳ್ಗೇರು, ಸೆಟ್ಟೇಲರು, ಮುದಿಗೊಂಡಲರು, ಟೇಲರು ಹೀಗೆ ಹಲವಾರು ಬೆಡಗುಗಳಿರುವವು. ಒಂದು ಮನೆಯವರು ಸಂಬಂಧ ಬೆಳೆಸುವಾಗ ಬೇರೆ ಬೆಡಗುಗಳಲ್ಲಿ ಬೆಳೆಸುವರು. ಹಿಂದಿನ ಕಾಲದಲ್ಲಿ ಎರಡು ದಿನಗಳ ಕಾಲ ವಿವಾಹ ನೆರವೇರಿಸುತ್ತಿದ್ದರು. ಈಗ ಒಂದೇ ದಿನದಲ್ಲಿ ಮುಗಿಸುವರು.

ಬಹಳ ಹಿಂದಿನ ಕಾಲದಲ್ಲಿ ಹೆಣ್ಣಿಗೆ ತೆರ ಒಂದು ನೂರು ಅಥವಾ ಐವತ್ತು ರೂ. ಕೊಡುತ್ತಿದ್ದರು. ಕಾಲ ಬದಲಾಗಿದೆ. ವಿವಾಹ ಮಾತುಕತೆ ಹೆಣ್ಣು ಅಥವಾ ಗಂಡಿನ ಮನೆ ಮುಂದೆ ನಡೆಯದೆ, ಛತ್ರಗಳಲ್ಲಿ ನಡೆಯುತ್ತದೆ. ಇವರಲ್ಲಿ ಯಾರಾದರೂ ನಿಧನರಾದರೆ ಇಲ್ಲವೆ ಹೆಣ್ಣು ಮೈನೆರೆತರೆ ಒಂದು ವಾರ ಸೂತಕ ಆಚರಿಸುವರು. ಹೆಣ್ಣು ಮಕ್ಕಳಿಗೆ ಮರು ವಿವಾಹ ನಿಷಿದ್ಧ.

ನಾವು ಗಂಗಾದೇವಿಯ ಮಕ್ಕಳು. ನಮ್ಮ ಹಿರಿಯರು ವ್ಯಾಸ ಮುನಿಗಳು. ಶರಣ ಅಂಬಿಗರ ಚೌಡಯ್ಯ ನಮ್ಮ ಜಾತಿಯ ಶರಣರೆಂದು ಹೇಳಿಕೊಳ್ಳುವರು. ಇವರು ಮಾಂಸಹಾರಿಗಳು ಮತ್ತು ಸಸ್ಯಾಹಾರಿಗಳು ಆಗಿರುವರು.

**ಈಡಿಗರು**

ಪ್ರಾಚೀನ ಕಾಲದಲ್ಲಿ ಇವರು ಸೇಂದಿ ಇಳಿಸುವ ಕಾಯಕದಲ್ಲಿದ್ದರು. ಬೆಲ್ಲದ ಈಡಿಗ, ಏಣಿ ಈಡಿಗ, ದಂಡು ಈಡಿಗ, ಮಡಿ ಈಡಿಗ ಮೊದಲಾದ ಪಂಗಡಗಳು ಇರುವವು. ಈ ನಾಲ್ಕು ಗೋತ್ರಗಳಲ್ಲಿ ಬರುವ ಕಾರಣ್ಯ, ವಾತ್ಸಲ್ಯ ಗೋತ್ರದವರನ್ನು ಸಾಸವೆಯವರೆಂದು, ಕೌಂಡಿಣ್ಯ ಮತ್ತು ಕಮಂಡಲ ಗೋತ್ರದವರನ್ನು ಬೊಡ್ಡೆಯವರೆಂದು ಕರೆಯಲಾಗಿದೆ. ಸಾಸವೆಯವರು ವಿಷ್ಣು ಭಕ್ತರಾದರೆ, ಬೊಡ್ಡೆಯವರು ಶಿವಭಕ್ತರು. ಇದರಲ್ಲಿ ನಿಧನರಾದವರನ್ನು ಹೂಳುವರು. ೧೦ ದಿನಗಳ ಕಾಲ ಸೂತಕ ಆಚರಿಸುವರು.

### ವೈಶ್ಯರು

ಇವರನ್ನು ಶ್ರೇಷ್ಠಿ, ಶೆಟ್ಟರು, ಕೋಮಟಿ ಎಂದು ಕರೆಯುತ್ತಾರೆ. ಇವರು ಹೆಚ್ಚಾಗಿ ವರ್ತಕರು. ಇವರಲ್ಲಿ ಗವರೆ, ತುಪ್ಪದ ತ್ರೈವರ್ಣಿಕ ಪಂಗಡಗಳಿರುತ್ತವೆ. ವೈದಿಕ ಪದ್ಧತಿಗಳನ್ನು ಅನುಸರಿಸುವರು. ಇವರಲ್ಲಿ ೧೦೨ ಗೋತ್ರಗಳು. ಇವರಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸುವರು. ಇವರ ಕುಲದೇವತೆಯು ಕನ್ನಿಕಾಪರಮೇಶ್ವರಿ. ವೆಂಕಟೇಶನನ್ನೂ ಆರಾಧಿಸುವರು. ಇವರಲ್ಲಿ ಜಾತಿ ಪಂಚಾಯಿತಿಗಳು ರೂಢಿಯಲ್ಲಿರುತ್ತವೆ. ಇವರು ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳನ್ನು ಮಾತನಾಡುವರು.

**ಬುಡಕಟ್ಟು ಜನಾಂಗ**: ಬುಡಕಟ್ಟು ಎಂಬುವುದು ಅನೇಕ ಕುಲಗಳು, ಅಲೆಮಾರಿ ತಂಡಗಳು ಅಥವಾ ನಿಶ್ಚಿತ ಭೌಗೋಳಿಕ ಪ್ರದೇಶದೊಳಗೆ ವಾಸಿಸುವ ಜನಗಳ ಒಂದು ಸಮೂಹ. ಇವರುಗಳಲ್ಲಿ ಪ್ರತ್ಯೇಕ ಉಪಭಾಷೆ, ವಿಶಿಷ್ಟ ಸಂಸ್ಕೃತಿ ಹಾಗೂ ಒಂದು ಸಾಮಾನ್ಯ ಸಾಮಾಜಿಕ ವ್ಯವಸ್ಥೆ ಕಂಡುಬರುತ್ತದೆ. ಇತರರಿಗಿಂತ ತಾವು ಬೇರೆ ಎಂಬ ಏಕತಾ ಭಾವನೆಯೂ ಈ ಒಳ ಗುಂಪುಗಳ ಸಮೂಹದಲ್ಲಿರುತ್ತದೆ. ಇವರು ಸಾಮಾನ್ಯವಾಗಿ ಆಧುನಿಕ ಜಗತ್ತಿನಿಂದ ಪ್ರತ್ಯೇಕವಾಗಿ ವಾಸಿಸಲು ಬಯಸುತ್ತಾರೆ. ತಾಲ್ಲೂಕಿನ ಜಾತಿ ಮತ್ತು ಬುಡಕಟ್ಟುಗಳ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳ ಬಗ್ಗೆ ಸಂಕ್ಷಿಪ್ತವಾಗಿ ಈ ಮುಂದೆ ವಿವರಿಸಲಾಗಿದೆ.

### ಕೊರಚರು

ಇವರು ಅಡವಿಯಲ್ಲಿ ತಮ್ಮದೇ ಪ್ರತ್ಯೇಕ ಗುಡಿಸಲುಗಳುಳ್ಳ ಮನೆಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿ ವಾಸಿಸುವರು. ಬಹುತೇಕ ಮನೆಗಳು ಗುಡಿಸಲು ಮೇಲೆ ಚಪ್ಪರ ಹೊದಿಕೆಯುಳ್ಳವುಗಳಾಗಿರುತ್ತವೆ. ಬ್ರಾಹ್ಮಣರಲ್ಲಿ ಗೋತ್ರಗಳಿದ್ದಂತೆ ಇವರಲ್ಲಿ ಬೆಡಗುಗಳಿರುತ್ತವೆ. ಒಂದು ಬೆಡಗಿನವರು ಮತ್ತೊಂದು ಬೆಡಗಿನವರಲ್ಲಿ ವಿವಾಹ ಸಂಬಂಧ ಬೆಳೆಸುವರು. ಹೆಣ್ಣಿಗೆ ತೆರ ಕೊಡುವ ಪದ್ಧತಿ ಇತ್ತು. ಇವರಲ್ಲಿ ಪ್ರಮುಖ ಬೆಡಗುಗಳು ಹೀಗಿವೆ: ೧) ಮೇಂಡರಗುತ್ತಿ ೨) ಸಾತ್ಪಾಡಿ ೩) ಕಾವಾಡಿ. ಲಗ್ನವು ಎರಡು ದಿನಗಳ ಕಾಲ ನಡೆಯುವುದು. ಇವರು ಮಾರಮ್ಮ, ವೀರಭದ್ರ ದೇವರನ್ನು ಆರಾಧಿಸುತ್ತಾರೆ.

ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯವುದು, ಕಣ್ಣಿ (ಚಿಕ್ಕ ಹಗ್ಗ). ಇವುಗಳಿಗೆ ಬೇಕಿರುವ ಕಚ್ಚಾ ಮಾಲನ್ನು ನದಿ, ಹಳ್ಳದ ದಂಡೆ, ಅರಣ್ಯಗಳಲ್ಲಿ ಸಂಗ್ರಹಿಸುವರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಯಲ್ಲಾಪುರದ ಬಳಿ ಕೊರ್ಚರಹಟ್ಟಿ, ಮಾಚೀಹಳ್ಳಿಯ ಬಳಿ ಕೊರಚರ ಹಟ್ಟಿ, ವಡೇರಹಳ್ಳಿ ಬಳಿಯ ಕೊರಚರಹಟ್ಟಿ, ಅರಸೀಕೆರೆಗೆ ಹೋಗುವ

ಮಾರ್ಗದ ಬಳಿಯ ಪವನಪುರ–ಕೊರಚರಹಟ್ಟಿ ಇವು ನಾಲ್ಕು ಪ್ರಮುಖ ಹಟ್ಟಿಗಳು. ಈಗ ಕಾಲಕ್ಕೆ ತಕ್ಕಂತೆ ಅವರು ಕೃಷಿ, ವ್ಯಾಪಾರ, ಶಿಕ್ಷಣದಲ್ಲಿ ಭಾಗಿಗಳಾಗಿ ಎಲ್ಲರಂತೆ ಮನೆಗಳನ್ನು ಕಟ್ಟಿಕೊಂಡಿರುವರು. ಸರ್ಕಾರವು ಹೊಸ ಹೆಂಚಿನ ಮನೆಗಳನ್ನು ಕಟ್ಟಿಸಿಕೊಟ್ಟಿದೆ.

**ಲಂಬಾಣಿ**

ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ೨೬ ತಾಂಡಗಳಿವೆ. ತಾಲ್ಲೂಕಿನ ಪಶ್ಚಿಮ ಭಾಗವು ಅರಣ್ಯದಿಂದ ಆವೃತವಾಗಿದೆ. ಅರಣ್ಯದಲ್ಲಿರುವ ಈ ಜನರು ಗುಡ್ಡಗಳಿಂದ ಕಟ್ಟಿಗೆ ಕಡಿದು ಹೊರೆ ಹೊತ್ತು ಗ್ರಾಮಗಳಲ್ಲಿ ಮಾರುವರು. ಮಾರಿಬಂದ ಹಣದಿಂದ ತಮ್ಮ ಮನೆಗಳಿಗೆ ಅವಶ್ಯಕವಾದ ಕಿರಾಣಿ ಸಾಮಾನು ಕೊಂಡು ಒಯ್ಯುವರು. ಇವರ ಜನಾಂಗದಲ್ಲಿ ಹೆಂಗಸರೂ ಶ್ರಮ ಜೀವಿಗಳು. ಗಂಡಸರು ಕಚ್ಚೆ ಪಂಚೆ, ಶರ್ಟು, ತಲೆಗೆ ಟವೆಲ್ಲುಗಳನ್ನು ಧರಿಸುವರು. ಮಹಿಳೆಯರು ಬಟ್ಟೆ ಅಂಗಡಿಗಳಲ್ಲಿ ಕೆಂಪು ಬಟ್ಟೆಯನ್ನು ಕೊಂಡು ಮನೆಗೆ ತಂದು ತಾವೇ ಲಂಗಗಳನ್ನು ತಯಾರಿಸಿಕೊಳ್ಳುವರು. ರವಿಕೆಯನ್ನು ಕೂಡಾ. ಅವುಗಳಿಗೆ ಚಿಕ್ಕ ಚಿಕ್ಕ ಹರಳುಗಳನ್ನು ಹಚ್ಚಿ ಹೊಲಿದುಕೊಳ್ಳುವರು.

ಕಾಲ ಬದಲಾದಂತೆ ಇವರಿಗೆ ಸರ್ಕಾರದ ಮೀಸಲು ನೀತಿಯಿಂದ ಶಿಕ್ಷಣದ ಸೌಲಭ್ಯ ದೊರಕಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವರು. ಸೇವಾಲಾಲ್ ವಿವಾಹದಲ್ಲಿ ತೆರಕೊಡುತ್ತಿದ್ದರು. ಬ್ರಾಹ್ಮಣರು/ಲಿಂಗಾಯತ ಸ್ವಾಮಿಗಳ ಪೌರೋಹಿತ್ಯದಲ್ಲಿ ವರ ತಾಳಿ ಕಟ್ಟುತ್ತಾರೆ. ಹಿಂದಿನ ದಿನಗಳಲ್ಲಿ ಇವರ ಲಗ್ನ ಒಂದು ತಿಂಗಳವರೆಗೆ ನಡೆಯುತ್ತಿದ್ದದ್ದು, ಇಂದು ಮೂರು ದಿನಗಳಲ್ಲಿ ಮದುವೆ ಕಾರ್ಯ ನೆರವೇರುತ್ತದೆ. ಹಟ್ಟಿ ಯಜಮಾನನ ಬಳಿ ಅಡಿಕೆ ಎಲೆ ಇರುವುದು. ಅದನ್ನು ಪ್ರತಿ ಸಂಜೆ ಅಲ್ಲಿಗೆ ಬರುವವರಿಗೆ ಹಂಚುವುದಾಗಿದ್ದಿತು. ಇವರ ಭಾಷೆ ಲಂಬಾಣಿ, ಇದಕ್ಕೆ ಲಿಪಿಯಿಲ್ಲ. ಇವರಲ್ಲಿ ಹಲವು ಬೆಡಗುಗಳಿದ್ದು, ಮುಂದಿನಂತಿವೆ ೧) ಜಾಲ್ ೨) ಬುಕ್ಯಾ ೩) ಗರ್ಕಲಾ ೪) ಲಾವಡ್ಯಾ ೫) ಹಠಾವತ್ ೬) ಮೂಡ್.

**ಸಾಮಾಜಿಕ ಜೀವನ**

ಹಿಂದೂಗಳಲ್ಲಿ ಸಾಮಾನ್ಯವಾಗಿ ವಿವಾಹಗಳಲ್ಲಿ ಗಂಡನ ವಯಸ್ಸು ಹೆಂಡತಿ ವಯಸ್ಸಿಗಿಂತ ಹೆಚ್ಚಾಗಿರುತ್ತದೆ. ತಮ್ಮ ಗಂಡಂದಿರನ್ನು ಹೆಸರು ಹಿಡಿದು ಕೂಗುವ ಪದ್ಧತಿ ಹಿಂದೂಗಳಲ್ಲಿ ಹಿಂದಿನಿಂದ ರೂಢಿಗೆ ಬಂದಿಲ್ಲ. ಮದುವೆಯಾದ ಮೇಲೆ ಮೊದಲನೇಯ ಹೆರಿಗೆಯು ಸಾಮಾನ್ಯವಾಗಿ ತಾಯಿಯ ಮನೆಯಲ್ಲಿ ಆಗುತ್ತದೆ. ಗರ್ಭಿಣಿ ಹೆಂಗಸರು ಅನೇಕ ಕಟ್ಟಳೆಗಳಿಗೆ ಒಳಗಾಗುತ್ತಾರೆ. ಗ್ರಹಣ ಕಾಲದಲ್ಲಿ ಮನೆಯಿಂದ

ಹೊರಗೆ ಬರುವುದಿಲ್ಲ. ಸಂಜೆಯ ನಂತರ ಮನೆಯ ಮುಂಭಾಗದ ಹೊಸಲು ದಾಟಬಾರದು. ಗರ್ಭಿಣಿ ಹೆಂಗಸರಿಗೆ ಅವರು ಆಸೆ ಪಡುವ ತಿಂಡಿ ತಿನಸುಗಳನ್ನು ಮಾಡಿಕೊಡುತ್ತಾರೆ. ಅವರನ್ನು ನೋಡಲು ಬರುವವರೂ ಬರಿಕೈಲಿ ಬರುವುದಿಲ್ಲ. ಐದನೇಯ ಅಥವಾ ಏಳನೇಯ ತಿಂಗಳಿನಲ್ಲಿ ಸೀಮಂತವನ್ನು ಮಾಡಿ ಹಸಿರು ಸೀರೆ ಉಡಿಸುತ್ತಾರೆ. ಹುಡುಗಿಯು ಮೈನೆರೆದಾಗ ಹಳ್ಳಿಗಳಲ್ಲಿ ಬೇರೊಂದು ಗುಡಿಸಿಲನ್ನೇ ಕಟ್ಟಿ ಅದರಲ್ಲಿಟ್ಟು ಮೂರು ದಿನಗಳ ನಂತರ ಗುಡಿಸಲನ್ನು ತೆಗೆದು ಹಾಕುತ್ತಿದ್ದರು. ಈ ದಿನಗಳಲ್ಲಿ ಹುಡುಗಿಗೆ ಪುಷ್ಟಿಕರ ಆಹಾರ ಕೊಟ್ಟು ಸಾಯಂಕಾಲಗಳಲ್ಲಿ ಮಣೆಯ ಮೇಲೆ ಕೂರಿಸಿ, ಅರತಿ ಎತ್ತಿ ಉಡಿ ತುಂಬುತ್ತಿದ್ದರು. ಹುಡುಗಿಯು ಮೈನೆರೆದಾಗಲೂ ಮದುವೆಯಲ್ಲಿಯೂ ಹುಡುಗಿಯ ಸೋದರಮಾವನು ವಿಶೇಷ ಪಾತ್ರವಹಿಸುತ್ತಾನೆ. ಮೈನೆರೆದಾಗ ಗುಡಿಸಲು ಕಟ್ಟುವುದು, ಹುಡುಗಿಗೆ ಹೊಸಬಟ್ಟೆ ತರುವುದು, ವಿವಾಹದಲ್ಲಿ ಹಾಲುಗಂಬ ತಂದು ನೆಡುವುದು, ಹುಡುಗಿಯನ್ನು ಧಾರೆ ಮಂಟಪಕ್ಕೆ ಕರೆತರುವುದು, ಬಾಸಿಂಗ ಕಟ್ಟುವುದು, ಕಾಲುಂಗರ ಹಾಕುವುದು, ಸೆರೆ ಬಿಡಿಸುವುದು ಮೊದಲಾದ ಸಾಂಪ್ರದಾಯಿಕ ಕಾರ್ಯಗಳನ್ನು ಸೋದರಮಾವನು ಅವನಿಲ್ಲದಿದ್ದರೆ ಅವನ ಮಗ ನೇರವೇರಿಸುತ್ತಾನೆ.

ಮುಸಲ್ಮಾನರಲ್ಲಿಯೂ ಅನೇಕ ಸಂಪ್ರದಾಯಗಳಿವೆ. ಮಗು ಹುಟ್ಟಿದ ಸುದ್ದಿ ತಂದವರಿಗೆ ತಂದೆಯು ಬಹುಮಾನ ಕೊಡುತ್ತಾನೆ. ಹುಟ್ಟಿದ ಆರನೇಯ ದಿನ ಸಾಮಾನ್ಯವಾಗಿ ಹೆಸರಿಡುತ್ತಾರೆ. ಏಳು ಅಥವಾ ಹದಿನಾಲ್ಕು ಅಥವಾ ಇಪ್ಪತ್ತೊಂದನೇಯ ದಿನ ಅಕಿಕ ಎಂಬ ಶಾಸ್ತ್ರ ಮಾಡುತ್ತಾರೆ. ನಾಲ್ಕುವರೆ ತಿಂಗಳಿಗೆ ನಮಕ್ ಚಾಸಿ ಎಂಬ ಶಾಸ್ತ್ರವನ್ನು, ನಾಲ್ಕು ವರ್ಷ ನಾಲ್ಕು ತಿಂಗಳು ನಾಲ್ಕು ದಿವಸವಾದಾಗ ಬಿಸ್ಮಿಲ್ಲ ಎಂಬ ಶಾಸ್ತ್ರವನ್ನು ಆಚರಿಸುತ್ತಾರೆ. ಏಳನೇಯ ವರ್ಷಕ್ಕೆ ಸುನ್ನತ್ ಮಾಡುತ್ತಾರೆ.

### ವಿವಾಹ

ಹಿಂದೂಗಳು ಮದುವೆಯನ್ನು ಹಿಂದಿನ ಕಾಲದಲ್ಲಿ ಸಂಪ್ರದಾಯವಾಗಿ ನಾಲ್ಕರಿಂದ ಐದು ದಿನ ಆಚರಿಸುತ್ತಿದ್ದು, ಈಗ ಒಂದು ದಿನಕ್ಕೆ ಸೀಮಿತಗೊಂಡಿದೆ. ಆದರೆ ಬಂಧು ಬಳಗದವರು ಮದುವೆಯ ಒಂದು ದಿನ ಮೊದಲು ಮದುವೆ ನಂತರದವರೆಗೂ ಮನೆಯಲ್ಲಿರುವರು. ಬಾಲ್ಯವಿವಾಹ ನಿಷಿದ್ಧವಾಗಿದೆ. ಈಗ ದೇವಾಲಯ ಅಥವಾ ಕಲ್ಯಾಣ ಮಂಟಪಗಳಲ್ಲಿ ವಿವಾಹ ನಡೆಯುತ್ತದೆ. (ಬೆಡಗು) ಸಗೋತ್ರದಲ್ಲಿ ವಿವಾಹ ನಡೆಯುವುದಿಲ್ಲ. ವಧು-ವರರ ಜಾತಕ ನೋಡುವರು. ಜಾತಕ ಕೂಡಿ ಬಂದರೆ ಮಾತ್ರ ವಿವಾಹ ಮಾಡುತ್ತಿದ್ದರು. ಈಗ ಅದು ಕಡಿಮೆಯಾಗುತ್ತಿದೆ. ವಿವಾಹಕ್ಕೆ ಎರಡು ದಿನ ಮೊದಲು ಮುತ್ತೈದೆಯರು ವಧು/ವರರಿಗೆ ಮನೆ ಮುಂದೆ ಚಪ್ಪರದಲ್ಲಿ ಕೂಡಿಸಿ ಎಣ್ಣೆ ನೀರುಗಳಿಂದ ಸ್ನಾನ ಮಾಡಿಸುತ್ತಿದ್ದರು. ಇದಕ್ಕೆ ಸುರಗಿ ನೀರು ಎಂದು ಕರೆಯುವರು.

ನಂತರ ಹೊಸ ಬಟ್ಟೆ ಧರಿಸಿ ಎತ್ತಿನಗಾಡಿಯಲ್ಲಿ ದೇವಾಲಯಕ್ಕೆ ತೆರಳಿ ಅಲ್ಲಿ ದೇವರನ್ನು ಪೂಜಿಸಿ ಮರಳಿ ಚಪ್ಪರಕ್ಕೆ ಆಗಮಿಸಿ, ಹೆಣ್ಣಿಗೆ ಗಂಡು ತಾಳಿ ಕಟ್ಟುವರು. ಪುರೋಹಿತರು ಮಂತ್ರ ಹೇಳುವರು, ಜನರು ವಧು-ವರರಿಗೆ ಅಕ್ಷತೆ ಹಾಕಿ, ಆಶೀರ್ವವದಿಸುತ್ತಿದ್ದರು. ಈ ಮೊದಲೇ ವಧುವಿನ ತಂದೆ ತಾಯಿ ವರನಿಗೆ ಕನ್ಯೆ ಕೊಡುವುದಾಗಿ ಹೇಳುವರು. ಇದು ಹಿಂದಿನ ಕಾಲದ ಪದ್ಧತಿಯಾಗಿದ್ದಿತು. ಆದರೆ ಇಂದು ಯಂತ್ರ-ಮಂತ್ರ ಕಾಳಿ ಕೊಂಬುಗಳಿಲ್ಲದೆ ಗುರುಹಿರಿಯರಿಲ್ಲದೆ, ಬಂಧು ಬಳಗವಿಲ್ಲದೆ ಅಂತರ್ಜಾತೀಯ ವಿವಾಹಗಳು ನಡೆಯುತ್ತಿವೆ. ಸರ್ಕಾರವೂ ಇದಕ್ಕೆ ಪ್ರೋತ್ಸಾಹ ನೀಡುವುದು. ನೋಂದಣಿ ಕಛೇರಿಗಳಲ್ಲಿ ಗಂಡು ಹೆಣ್ಣುಗಳ ಒಪ್ಪಿಗೆ ಪ್ರಕಾರ ನೋಂದಣಿಯಾಗಿ ವಿವಾಹಗಳು ನಡೆಯುತ್ತವೆ. ಇವು ಈ ತಾಲ್ಲೂಕಿನಲ್ಲಿ ಹೆಚ್ಚು ಪ್ರಮಾಣದಲ್ಲಿ ಆಗುತ್ತಿಲ್ಲ. ಆಗೊಂದು ಈಗೊಂದು ನಡೆಯುತ್ತವೆ.

ಕೆಲವು ಜಾತಿಯ ಜನರಲ್ಲಿ ಸೀರುಡಿಕೆ, ಕೂಡಿಕೆ ವಿವಾಹಗಳು ನಡೆಯುತ್ತವೆ. ಹಿಂದೂಗಳಲ್ಲಿ ವಿವಾಹ ವಿಚ್ಛೇದನಕ್ಕೆ ಸಾಂಪ್ರದಾಯಿಕ ಹಿರಿಯರ ಒಪ್ಪಿಗೆಯಿಲ್ಲ.

ಮುಸ್ಲಿಮರಲ್ಲಿ ಸಾಮಾಜಿಕ ಮೆದಾರ್ ಒಪ್ಪಂದವಾಗಿ ಖಾಜಿ ಸಮ್ಮುಖದಲ್ಲಿ ನಿಖಾ ಆಗುವುದು. ಹುಡುಗನ ಮುಖಕ್ಕೆ ಹೂ ಹಾಕುವರು. ಹುಡುಗಿಯನ್ನು ಬೇರೆ ಕಡೆ ಕೂಡಿಸುವರು. ಹುಡುಗ ಖುರಾನಿನ ಕೆಲ ಮಾತುಗಳನ್ನು ಹೇಳುವನು.

## ಧಾರ್ಮಿಕ ಆಚರಣೆಗಳು

ಹಿಂದೂ ಮಹಿಳೆಯರು ವಿವಾಹಿತರಾಗಿ ಗರ್ಭ ಧರಿಸಿದ್ದರಿಂದ ಹೆರಿಗೆಯವರೆಗೆ ಹಲವು ಧಾರ್ಮಿಕ ಕಟ್ಟು ಪಾಡುಗಳು, ವಿಧಿ ವಿಧಾನಗಳಿರುತ್ತವೆ, ಹೆರಿಗೆಯು ತವರುಮನೆಯಲ್ಲಿ ನಡೆಯುವುದು. ಅವಳ ಬಯಕೆಗಳನ್ನು ತವರು ಮನೆಯವರು ಯಾವ ಸಂಕೋಚವಿಲ್ಲದೆ ನಡೆಸಿಕೊಡುವರು. ಪೌಷ್ಟಿಕ ಆಹಾರ ಕೊಡುವರು. ಪುರಾಣ ಪುಣ್ಯಕಥೆಗಳ ಗೋಷ್ಠಿಗಳಿಗೆ ಕರೆದೊಯ್ಯುವರು. ಶ್ರಮದಾಯಕ ಕೆಲಸಗಳಿಂದ ಅವಳನ್ನು ಮುಕ್ತಗೊಳಿಸುವರು. ಕೆಟ್ಟ ಸಂಗತಿ ಮತ್ತು ನೋಡುವ ಕಡೆ ಅವಳನ್ನು ದೂರವಿಡುವರು. ಅಮಾವಾಸ್ಯೆ, ಸೂರ್ಯ-ಚಂದ್ರ ಗ್ರಹಣಗಳ ದಿನಗಳಲ್ಲಿ ಅವಳನ್ನು ಮನೆಯ ಕತ್ತಲು ಕೋಣೆಗಳಲ್ಲಿ ಕೂಡಿಸುವರು. ಗರ್ಭವತಿಯಾದ ೭ ಅಥವಾ ೯ನೇ ತಿಂಗಳಲ್ಲಿ ಗಂಡನ ಮನೆಯಲ್ಲಿ ಸೀಮಂತ ಕಾರ್ಯ ಮಾಡಿ ಹಸಿರು ಸೀರೆ, ಹಸಿರು ರವಿಕೆ, ಹಸಿರು ಬಳೆ ತೊಡಿಸುವರು. ಹಿಂದಿನ ಕಾಲದಲ್ಲಿ ಸೂಲಗಿತ್ತಿಯರ ನೆರವಿನಿಂದ ಹೆರಿಗೆ ಮಾಡಿಸುತ್ತಿದ್ದರು. ಸೂಲಗಿತ್ತಿಯರಿಗೆ ಒಂದು ಮರ ಅಕ್ಕಿ ಅಥವಾ ಜೋಳ ತುಂಬಿ ಅಡಿಕೆ-ಎಲೆ ಕೊಟ್ಟು ಕಳುಹಿಸುತ್ತಿದ್ದರು. ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಂದ ಹೆರಿಗೆ ಮಾಡಿಸುವರು. ಹೆರಿಗೆಯಾದ ೧೧ ದಿನಗಳವರೆಗೂ ಸೂತಕ ದಿನವನ್ನು ಆಚರಿಸುವರು. ಮಗುವಿಗೆ ೩ ತಿಂಗಳು ಅಥವಾ ೫ ತಿಂಗಳಲ್ಲಿ

ಹೆಣ್ಣಿನ ಮನೆಯಲ್ಲಿ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ನಾಮಕರಣ ಮಾಡುವ ಸಂಪ್ರದಾಯವಿದೆ. ಬ್ರಾಹ್ಮಣರಲ್ಲಿ ಉಪನಯನವನ್ನು ಮಾಡಿ ಜನಿವಾರ ಧರಿಸುವರು. ಈ ಪದ್ಧತಿ ವೈಶ್ಯ, ಕಮ್ಮಾರ, ಅಕ್ಕಸಾಲಿಗ, ನೇಕಾರ ಮುಂತಾದ ವೈಷ್ಣವ ಪಂಥದವರಲ್ಲಿ ಕಂಡುಬರುವುದು. ವೀರಶೈವರಲ್ಲಿ ಅವರ ಧಾರ್ಮಿಕ ಗುರುಗಳಿಂದ ಇಷ್ಟಲಿಂಗ ಧಾರಣೆ ಮಾಡಿಸುವ ಸಂಪ್ರದಾಯವಿರುತ್ತದೆ.

ಮುಸ್ಲಿಮರಲ್ಲಿ ಮಗು ಜನಿಸಿದ ಕೂಡಲೇ ನಾಮಕರಣ ಮಾಡುವರು. ಮಗು ಜನಿಸಿದ ನಲ್ವತ್ತು ದಿನಕ್ಕೆ ಚಿಲ್ಲಾ ಆಚರಿಸುವರು. ಮಗುವಿನ ಮೈಗೂ, ತಲೆಗೂ ಕೊಬ್ಬರಿ ಎಣ್ಣೆಯನ್ನು ಸವರಿ (ಹಚ್ಚಿ) ಸ್ನಾನ ಮಾಡಿಸುವರು. ಬಾಣಂತಿಗೆ ಮೈ ತುಂಬಾ ಅರಿಶಿಣ ಹಚ್ಚಿ, ಕೆಂಪು ಬಟ್ಟೆ ಮೇಲೆ ಹಿಡಿದು ಕೈಯಲ್ಲಿ ಎಲೆ ಅಡಿಕೆ ಕೊಟ್ಟು ಬಚ್ಚಲು ಮನೆಗೆ ಕರೆತಂದು ನಲ್ವತ್ತು ತಂಬಿಗೆ ನೀರು ಮೊದಲು ಹುಯ್ದು ಸ್ನಾನ ಮಾಡಿಸುವರು. ಬಾಣಂತಿ ತವರಿನವರು ತಂದ ಹೊಸ ಉಡುಗೆ ಉಟ್ಟು ಎರಡು ಶಕರಿಯಾ ನಮಾಜು ಮಾಡಿ ಖುರಾನ್ ಓದಿದ ನಂತರ ಮೊದಲು ಮಗುವನ್ನು ನೋಡುವಳು. ಅಲ್ಲಿಯತನಕ ಅವಳು ಉಪವಾಸವಿರಬೇಕು. ಸಂಜೆಯ ವೇಳೆ ಗಂಡನ ಕಡೆಯಿಂದ ತಂದ ಸೀರೆ–ಕುಪ್ಪಸ ಧರಿಸಿ ಮಗುವನ್ನು ಮಡಲಿಗೆ ಹಾಕಿ ಮಲಗಿಸಿ ಶಾಸ್ತ್ರಕ್ಕೆ ಕೂಡುವಳು. ಗಂಡನು ಕೂಡಾ ಅವಳ ಜೊತೆ ಕೂಡಬಹುದು. ಐದು ಜನ ಮುತ್ತೈದೆಯರು ಹೂವಿನಿಂದ ಅಲಂಕರಿಸಿದ ತೊಟ್ಟಿಲಲ್ಲಿ ಮಗುವನ್ನು ಹಾಕುವರು.

## ಗೃಹೋಪಯೋಗಿ ವಸ್ತುಗಳು

ಬಡವರ ಮನೆಗಳಲ್ಲಿ ಆಹಾರ ಬೇಯಿಸಲು, ಕುಡಿಯುವ ನೀರು ಸಂಗ್ರಹಿಸಲು ದೊಡ್ಡ ದೊಡ್ಡ ಮಣ್ಣಿನ ಪಾತ್ರೆಗಳಿದ್ದವು. ರೈತರಿಗೆ ಹೊಲಗಳಿಗೆ ನೀರು ತುಂಬಿಕೊಂಡು ಹೋಗಲು ಮಣ್ಣಿನ ತತ್ರಾಣಿಗಳಿದ್ದವು. ಕ್ರಮೇಣ ತಾಮ್ರದ ಹಂಡೆ, ಹಿತ್ತಾಳೆ, ತಾಮ್ರದ ಕೊಡಪಾನ, ಅಲ್ಯೂಮಿನಿಯಂ ತಟ್ಟೆ ಮುಂತಾದ ಪಾತ್ರೆಗಳ ಲಭ್ಯತೆಯಿಂದಾಗಿ ಮಣ್ಣಿನ ಪಾತ್ರೆಗಳು ಕಣ್ಮರೆಯಾದವು. ಮರದ ಕುರ್ಚಿ, ಬೆಂಚು, ಟೇಬಲ್‌ಗಳು ಕೆಲವರ ಮನೆಗಳಲ್ಲಿ ಕಾಣ ಬಂದವು. ನಂತರ ಪ್ಲಾಸ್ಟಿಕ್ ಕುರ್ಚಿ, ಟೀಪಾಯಿ, ಬಕೇಟು, ಮಗ್ಗು, ಬೇಸನ್ ಮುಂತಾದುವು ಬಳಕೆಗೆ ಬಂದುವು. ಎಲ್.ಪಿ.ಜಿ. ಗ್ಯಾಸ್ ಸ್ಟೌಗಳು ಹಳ್ಳಿ ಪಟ್ಟಣಗಳನ್ನು ಪ್ರವೇಶಿಸಿದವು. ಸೌದೆ ಒಲೆಗಳು ಕೆಲಹಳ್ಳಿಗರ ಮನೆಗಳಲ್ಲಿ ಉಳಿದಿವೆ. ಚಾಪೆ, ಕೌದಿ, ಜಮಖಾನ, ಹಾಸಿಗೆ, ತಲೆದಿಂಬು, ಹೊದಿಯಲು ಕಂಬಳಿ, ರಗ್ಗುಗಳನ್ನು ಸರ್ವರೂ ಉಪಯೋಗಿಸುವರು. ಶ್ರೀಮಂತರ ಮನೆಗಳಲ್ಲಿ ಮಂಚಗಳನ್ನು ಬಳಸುವರು. ಪಟ್ಟಣ ಮತ್ತು ಹಳ್ಳಿಗಳಲ್ಲಿ ಗೃಹೋಪಯೋಗಿ ಸಾಮಾನುಗಳು ಗಣನೀಯ ಪ್ರಮಾಣದಲ್ಲಿ ಸುಧಾರಣೆಗಳಾಗಿರುವುದು ಕಂಡುಬಂದಿದೆ.

## ಗೃಹ ಜೀವನ

ಹರಪನಹಳ್ಳಿ ತಾಲ್ಲೂಕಿನ ಗ್ರಾಮಗಳಲ್ಲಿ ಪ್ರಾಚೀನ ಕಾಲದಿಂದ ಹತ್ತೊಂಬತ್ತನೇ ಶತಮಾನದವರೆಗೂ ಹಳ್ಳಿಗಳಿಗೆ ರಸ್ತೆಗಳಿರಲಿಲ್ಲ. ಸರ್ಕಾರಿ ಆಸ್ಪತ್ರೆಗಳಿರಲಿಲ್ಲ. ಮಣ್ಣಿನ ಗೋಡೆಗಳಿದ್ದು, ಕೆಲವು ನೆರಕೆ ಮೇಲೆ ಚಪ್ಪರ ಮತ್ತೆ ಕೆಲವು ಮಣ್ಣಿನ ಮಾಳಿಗೆ ಮನೆಗಳು ಇದ್ದವು. ಮಳೆ ಬಂದರೆ ಮನೆಯಲ್ಲಿ ನೀರು ಜಿನುಗುತ್ತಿತ್ತು. ರಾತ್ರಿ ಸೀಮೆ ಎಣ್ಣೆಗಳ ಬರುಡಿ ದೀಪ, ಶ್ರೀಮಂತರ ಮನೆಗಳಲ್ಲಿ ಸೀಮೆ ಎಣ್ಣೆಯಿಂದ ಉರಿವ ಲಾಟೀನು, ಊರಲ್ಲಿ ರಾತ್ರಿ ಲಾಟೀನಿನ ಬೆಳಕಿನಲ್ಲಿ ತಿರುಗಾಡಬೇಕಿದ್ದಿತು. ದಿನಾಂಕ ೩೦-೧-೧೯೫೫ ರಲ್ಲಿ ಹರಪನಹಳ್ಳಿ ತಾಲ್ಲೂಕಿಗೆ ವಿದ್ಯುತ್ ದೊರಕಿತು.

## ಆಹಾರ ಮತ್ತು ಪಾನೀಯ

ಈ ತಾಲ್ಲೂಕಿನ ಬಹುತೇಕ ಜನರು ಜೋಳದ ರೊಟ್ಟಿ, ರಾಗಿ ಮುದ್ದೆ, ಗೋಧಿ ಚಪಾತಿಗಳನ್ನು ಪ್ರಮುಖ ಆಹಾರವನ್ನಾಗಿ ಮಾಡಿಕೊಂಡಿರುವರು. ನವಣೆ, ಅಕ್ಕಿಯನ್ನು ಉಪಯೋಗಿಸುವರು. ಹೆಸರು, ಅವರೆ, ತೊಗರಿ, ಉದ್ದು, ಹುರುಳಿ, ಅಲಸಂದಿ ಮುಂತಾದ ಕಾಳುಗಳು, ತರಕಾರಿಯಿಂದ ಮಾಡಿದ ಸಾಂಬಾರು, ಉಪ್ಪಿನಕಾಯಿ, ಮೊಸರು, ಮಜ್ಜಿಗೆ ದಿನ ನಿತ್ಯ ಉಪಯೋಗಿಸುವ ಆಹಾರ. ವಿವಾಹ ಸಂದರ್ಭಗಳಲ್ಲಿ ಹಣಕಾಸಿಗೆ ಅನುಗುಣವಾಗಿ ವಿಶೇಷ ಭಕ್ಷ್ಯಗಳನ್ನು ಸೇವಿಸುವರು. ತಾಲ್ಲೂಕಿನ ಪೂರ್ಣಪ್ರಮಾಣದಲ್ಲಿ ಹೆಚ್ಚು ಜನರು ಉಪಾಹಾರ, ಚಹಾ, ಮದ್ಯಾಹ್ನ ಊಟ, ಸಂಜೆ ಟೀ, ಕಾಫಿ ಮತ್ತು ರಾತ್ರಿ ಊಟ ಮಾಡುವರು. ಹಳ್ಳಿಗಳಲ್ಲಿ ಕೂಲಿ ಕಾರ್ಮಿಕರು ಹೋಟೆಲುಗಳಲ್ಲಿ ಬೆಳಗಿನ ಉಪಾಹಾರ, ಚಹಾ ಸೇವಿಸುವರು. ಮಾಂಸಹಾರಿಗಳು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಅಥವಾ ಹಬ್ಬಗಳಲ್ಲಿ ಮಾಂಸ ಸೇವಿಸುವರು.

## ಶವ ಸಂಸ್ಕಾರ

ಶವಸಂಸ್ಕಾರಕ್ಕೆ ವಿವಿಧ ಜಾತಿಯ ಜನರಿಗೆ ಸ್ಮಶಾನಗಳು ಪ್ರತ್ಯೇಕವಾಗಿವೆ. ಗ್ರಾಮೀಣರು ಪ್ರತ್ಯೇಕ ಕಾದಿಟ್ಟ ಸ್ಥಳಗಳಲ್ಲಿ ಅಥವಾ ತಮ್ಮ ಹೊಲಗಳಲ್ಲಿ ನೆಲ ತೋಡಿ ಹೂಳುವರು. ಈ ತಾಲ್ಲೂಕಿನ ಗ್ರಾಮೀಣ ಪ್ರದೇಶ ಮತ್ತು ಪಟ್ಟಣ ಪ್ರದೇಶಗಳಲ್ಲಿ ನೆಲದಲ್ಲಿ ಹೂಳುವ ಅಥವಾ ಸುಡುವ ಎರಡೂ ಪದ್ಧತಿಗಳು ರೂಢಿಯಲ್ಲಿರುವವು. ಕುಷ್ಠ ರೋಗ, ತೊನ್ನು, ದೇವರ ಹೊರೆ ಹೊತ್ತವರನ್ನು ಸುಡುವರು.

ಬ್ರಾಹ್ಮಣರಲ್ಲಿ ಹತ್ತು ದಿನ ಸೂತಕ ಆಚರಿಸುವರು. ಹನ್ನೊಂದನೆ ದಿನ ಶ್ರಾದ್ಧ ಮಾಡುತ್ತ ಬಂಧುಮಿತ್ರರಿಗೆ ಊಟ ಹಾಕುವರು. ಇತರೆ ಕುಲಗಳಲ್ಲಿ ೯ ದಿನ, ೧೨ ದಿನ, ೧೫ ದಿನ, ೨೧ ದಿನಗಳಿಗೆ ಶ್ರಾದ್ಧ ಮಾಡುತ್ತಿದ್ದರು.

ಕ್ರೈಸ್ತರು ಹೊಸ ಬಟ್ಟೆಯನ್ನು ಶವಕ್ಕೆ ಹೊದಿಸಿ ಒಂದು ಪೆಟ್ಟಿಗೆಯಲ್ಲಿರಿಸಿ ಚರ್ಚಿಗೆ ಹೋಗಿ ಅಲ್ಲಿ ಪ್ರಾರ್ಥನೆ ಸಲ್ಲಿಸುವರು. ಮುಸ್ಲಿಂರು ಸ್ನಾನ ಮಾಡಿಸಿ ಶವಕ್ಕೆ ಹೊಸ ಬಟ್ಟೆ ಹೊದಿಸಿ, ಪೆಟ್ಟಿಗೆಯಲ್ಲಿ ಮಸೀದಿಗೆ ತಂದು ಅಲ್ಲಿ ಪ್ರಾರ್ಥನೆ ಸಲ್ಲಿಸಿ ನಂತರ ಸ್ಮಶಾನದಲ್ಲಿ ಹೂಳುವರು.

**ಉಡುಪು**

ಹರಪನಹಳ್ಳಿ ತಾಲ್ಲೂಕಿನ ಸಾಮಾನ್ಯ ಉಡುಪು, ಪುರುಷರದು ಪಂಚೆ, ಧೋತ್ರ, ಲುಂಗಿ, ಚಡ್ಡಿ, ಒಳ ಅಂಗಿ, ಶರ್ಟು, ಜುಬ್ಬಾ, ಟವೆಲ್. ಮಹಿಳೆಯರ ಉಡುಪುಗಳು ಸೀರೆ, ಕುಪ್ಪಸ, ಲಂಗ, ಜಂಪರ್, ದಾವಣಿ, ನೈಟಿ. ಈಗ ಆಧುನಿಕತೆಯ ಪ್ರಭಾವ ಹೆಚ್ಚಾಗಿ ಗ್ರಾಮೀಣ ಪ್ರದೇಶದ ರೈತರು ಕೆಲಸ ಮಾಡುವಾಗ ಚಡ್ಡಿ, ಬನಿಯನ್ ಧರಿಸುವರು. ಬಿಡುವಿನ ವೇಳೆಯಲ್ಲಿ ಪಂಚೆ, ಶರ್ಟು ತೊಡುವರು. ಪಟ್ಟಣದಲ್ಲಿಯ ಹುಡುಗರು ಕಿರು ಪ್ಯಾಂಟಿನಂತಹ ಬರ್ಮೋಡವನ್ನು ಧರಿಸುವರು. ಹಳ್ಳಿಗರು ಶರ್ಟು, ಹೆಗಲ ಮೇಲೆ ಟವೆಲ್ ಧರಿಸಿ, ಕಾಲಲ್ಲಿ ಚಪ್ಪಲಿ ಧರಿಸಿ ಓಡಾಡುವರು.

ಇಂದಿನ ಯುವಕರು ಪ್ಯಾಂಟು, ನಿಕ್ಕರ್, ಟೀ ಷರ್ಟ, ಬರ್ಮೋಡ, ಚಡ್ಡಿ ಲುಂಗಿ ಮೊದಲಾದುವುಗಳನ್ನು ಧರಿಸುವರು. ಇದೇ ತರದಲ್ಲಿ ಮಹಿಳೆಯರ ಸೀರೆಗಳು ಹದಿನಾರು ಮೊಳಗಳಿಂದ, ಹನ್ನೆರಡು ಮೊಳಗಳಿಂದ ಹತ್ತು ಮೊಳಗಳಿಗೆ ಬಂದಿವೆ. ಪೇಟೆಗಳಲ್ಲಿ ಮತ್ತು ಹಳ್ಳಿಗಳಲ್ಲಿ ಹೆಚ್ಚು ಚೂಡಿದಾರ ವೇಲು, ಲಂಗ, ಫ್ರಾಕ್, ಷರ್ಟು, ಜೀನ್ಸ್ ಪ್ಯಾಂಟ್, ಟೀ-ಷರ್ಟ್ ಮಿಡಿ ಮುಂತಾದ ಉಡುಪುಗಳು ಸ್ತ್ರೀಯರ ಉಡುಪುಗಳಾಗಿವೆ.

ಮುಸ್ಲಿಮರಲ್ಲಿ ಪುರುಷರು ಕುರ್ತಾ, ಪೈಜಾಮ, ಲುಂಗಿ ಹಾಗೂ ಷರ್ಟುಗಳನ್ನು ಧರಿಸಿದರೆ, ಮಹಿಳೆಯರು ಸೀರೆ-ರವಿಕೆ, ಚೂಡಿದಾರ ಮತ್ತು ಬುರ್ಕಾ ಧರಿಸುವರು. ಇವರು ಹಬ್ಬಗಳಲ್ಲಿ ಹೊಸ ಬಟ್ಟೆಗಳನ್ನು ಕಡ್ಡಾಯವಾಗಿ ಧರಿಸುವರು.

**ಆಭರಣಗಳು**

ಹರಪನಹಳ್ಳಿ ತಾಲ್ಲೂಕಿನಲ್ಲಿ ಮಹಿಳೆಯರು ಆಭರಣ ಧರಿಸುವರು, ವಿವಾಹ, ಹಬ್ಬದ ದಿನಗಳಲ್ಲಿ ಓಲೆ, ಮಾಟಿ, ಮೂಗು ಬೊಟ್ಟು, ಕರಿಮಣಿ ಸರಗಳನ್ನು, ಕೈಗಳಿಗೆ ಗಾಜಿನ ಬಳೆ, ಉಂಗುರ, ಬೆಳ್ಳಿಯ ಕಾಲ್ಮುರಿ, ಕಡಗ, ಜಡೆ ಬಿಲ್ಲೆ, ನಾಗರ, ಮುರುವು, ಚೌಲಿ, ಗೊಣಸು, ಪಾಟ್ಲಿ, ಪದಕ, ತೋಳ್ಬಂದಿ ಮೊದಲಾದುವು. ಹಿಂದಿನ ಕಾಲದಲ್ಲಿ ಪುರುಷರು ಕಿವಿಗೆ ಹತ್ತೊಡಕು, ಕೊರಳಿಗೆ ತಾಯಿತ, ಕೈಗೆ ಕಡಗವನ್ನು ಧರಿಸುತ್ತಿದ್ದರು. ಇವರ ಸಂಖ್ಯೆ ಹಳ್ಳಿಗಳಲ್ಲಿಯೂ ಕಡಿಮೆಯಾಗಿದೆ. ಕೊರಳಿಗೆ ಚೈನ್,ಹಾರ, ಉಂಗುರ,

ಮಣಿಕಟ್ಟಿನ(ಬ್ರಾಸ್ಲೇಟ್) ಸರ ಬಳಕೆಯಲ್ಲಿವೆ. ವಯಸ್ಸಾದ ಹಿರಿಯ ಮಹಿಳೆಯರು ತಲೆ ಕೂದಲಿಗೆ ಗಂಟು ಬಿಗಿದರೆ ಇತರರು, ವಿವಿಧ ಬಗೆಗಳಲ್ಲಿ ತುರುಬು ಕಟ್ಟುವರು.

ತಲೆಗೆ ಹೆಚ್ಚಾಗಿ ಕೊಬ್ಬರಿ ಎಣ್ಣೆಯನ್ನು ಬಳಸುವರು. ಹಲ್ಲುಜ್ಜಲು ಪೇಸ್ಟ್, ಬ್ರಷ್, ಸ್ನಾನಕ್ಕೆ ಸೀಗೆಕಾಯಿ, ಸೋಪು, ಶಾಂಪು ಬಳಸುವರು. ಮೇಕಪ್ ಮಾಡಿಕೊಳ್ಳುವರು, ಮುಖಕ್ಕೆ ಸ್ನೋ, ಪೌಡರ್, ಸುಗಂಧ ದ್ರವ್ಯಗಳನ್ನು ಬಳಸುವರು. ಕಾಲಲ್ಲಿ ವಿವಿಧ ಚಪ್ಪಲಿ ಬೂಟು ಧರಿಸುವರು. ಕೈಗೆ ಹಚ್ಚೆ ಹಾಕಿಸಿಕೊಳ್ಳುವರು.

## ಹಬ್ಬಗಳು

ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಅವರ ಧರ್ಮ ಸಂಪ್ರದಾಯಗಳ ಪ್ರಕಾರ ವರ್ಷದಲ್ಲಿ ವ್ರತ, ಉಪವಾಸ, ಹಬ್ಬಗಳನ್ನು ಆಚರಿಸುವರು. ಗ್ರಾಮಗಳಲ್ಲಿ ಗ್ರಾಮ ದೇವತೆಯ ಜಾತ್ರೆ ನಡೆಯುತ್ತವೆ. ಹಿಂದುಗಳಿಗೆ ಯುಗಾದಿ, ನಾಗರಪಂಚಮಿ, ದೀಪಾವಳಿ, ವಿನಾಯಕ ಚತುರ್ಥಿ, ಹೋಳಿ ಹುಣ್ಣಿಮೆ, ದಸರಾ, ವರಮಹಾಲಕ್ಷ್ಮಿ ಮೊದಲಾದ ಹಬ್ಬಗಳನ್ನು ಸಡಗರ ಮತ್ತು ಸಂಭ್ರಮಗಳಿಂದ ಆಚರಿಸುವರು. ಆಷಾಡ ಮಾಸ ಶುಭವಲ್ಲ. ಮುಸ್ಲಿಮರು ಒಂದು ತಿಂಗಳು ಕರಾಬ್ ಕೇ ಮೈನ ಎಂದು ಆ ತಿಂಗಳ ಪೂರ್ತಿ ಶುಭ ಕಾರ್ಯ ಮಾಡುವುದಿಲ್ಲ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ನದಿಗಳಿಗೆ ತೆರಳಿ ವಿಶೇಷ ಆಹಾರಗಳನ್ನು ಮಾಡಿ ಹಬ್ಬ ಆಚರಿಸುವರು. ಶಿವರಾತ್ರಿ ಹಬ್ಬದಂದು ಒಂದು ದಿನ ಉಪವಾಸವಿದ್ದು ಶಿವನನ್ನು ಆರಾಧಿಸಿ ಮರು ದಿವಸ ಹಬ್ಬ ಮಾಡಿ ಊಟ ಮಾಡುವರು. ಇದನ್ನು ಈ ತಾಲ್ಲೂಕಿನಲ್ಲಿ ಹೆಚ್ಚು ಶ್ರದ್ಧಾ-ಭಕ್ತಿಗಳಿಂದ ಆಚರಿಸುವರು.

ಮುಸ್ಲಿಮರು ಶಾಬಾನ್, ಈದ್‌ಮಿಲಾದ್, ರಂಜಾನ್, ಬಕ್ರೀದ್ ಹಬ್ಬಗಳನ್ನು ಆಚರಿಸುವರು. ಪ್ರತಿ ಹಬ್ಬಗಳಲ್ಲಿ ಮನೆಯವರೆಲ್ಲ ಹೊಸಬಟ್ಟೆ ತೊಡುವರು. ರಂಜಾನ್ ಹಬ್ಬದಲ್ಲಿ ಒಂದು ತಿಂಗಳು ಒಪ್ಪತ್ತು ಊಟ ಮಾಡುವರು. ಮೂವತ್ತು ದಿನಗಳು ಕಳೆದ ಬಳಿಕ ಊರ ಹೊರಗೆ ಈದ್ಗಾ ಮೈದಾನಕ್ಕೆ ಹೋಗಿ ಅಲ್ಲಾನಿಗೆ ಪ್ರಾರ್ಥನೆ ಸಲ್ಲಿಸಿ ಮನೆಗೆ ಬರುವರು. ಮೊಹರಂ ಹಬ್ಬವನ್ನು ಅಲೀ ಹದೀಸ್ ಪಂಗಡದವರು ಆಚರಿಸುವುದಿಲ್ಲ. ಮೆಕ್ಕಾಗೆ ಹಜ್‌ಯಾತ್ರೆಯನ್ನು ಕೈಗೊಳ್ಳುವರು.

ಈ ತಾಲ್ಲೂಕಿನಲ್ಲಿ ಕ್ರಿಶ್ಚಿಯನ್ನರು ಕಡಿಮೆ ಪ್ರಮಾಣದಲ್ಲಿರುವರು. ಕ್ರಿಸ್‌ಮಸ್ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವರು.

## ಜಾತ್ರೆಗಳು

**ಜಾತ್ರೆ ಪದದ ಅರ್ಥ** : ಜಾತ್ರೆ-ಯಾತ್ರೆ, ಉತ್ಸವ, ಜನಗಳ ಗುಂಪು ಸಮೂಹ. "ಯಾನೇನ ತ್ರಾಯತ ಇತಿಯಾತ್ರಾ" ಪುಣ್ಯಕ್ಷೇತ್ರಗಳ ದರ್ಶನ ಪಡೆಯಲು

ಹೊರಟವರಿಗೆ ರಕ್ಷೆಯೇ ಯಾತ್ರೆ. ಇದರ ತದ್ಭವ ಪದವೇ ಜಾತ್ರೆ. ಜನರು ದೇವ–ದೇವತೆಗಳನ್ನು ಭಕ್ತಿಯಿಂದ ಸಾಮೂಹಿಕವಾಗಿ ಆರಾಧಿಸುವ ವ್ಯವಸ್ಥೆಯೇ ಜಾತ್ರೆ. ಎಲ್ಲಾ ದೇಶಗಳಲ್ಲಿ, ಎಲ್ಲಾ ಜನಾಂಗಗಳಲ್ಲಿ ವಿವಾಹಿತ ದಂಪತಿಗಳು ತಮ್ಮ ಇಷ್ಟ ದೇವರುಗಳನ್ನು ಆರಾಧಿಸಲು ಆ ಜಾತ್ರೆಗಳಿಗೆ ತೆರಳುವರು. ಜಾತ್ರೆ ಮತ್ತು ಸಂತೆಗಳು ಒಂದೇ ರೀತಿ ಕಂಡು ಬಂದರೂ ಅವುಗಳು ಬೇರೆಯಾಗಿರುತ್ತವೆ.

ಸಂತೆ ಒಂದೇ ದಿನ ನಡೆಯುವುದು. ಜಾತ್ರೆ ಕೆಲ ದಿನಗಳವರೆಗೆ ನಡೆಯುತ್ತದೆ. ವಸ್ತುಗಳನ್ನು ಕೊಂಡುಕೊಳ್ಳುವ ಮತ್ತು ತಮ್ಮ ವಸ್ತುಗಳನ್ನು ಇತರರಿಗೆ ಮಾರುವ ವ್ಯವಸ್ಥೆ ಎರಡರಲ್ಲಿಯೂ ಒಂದೇ ತೆರನಾಗಿದ್ದರೂ ದೇವರನ್ನು ಆರಾಧಿಸುವ ವ್ಯವಸ್ಥೆಯು ಜಾತ್ರೆಯಲ್ಲಿ ಪ್ರಮುಖವಾಗಿರುತ್ತದೆ.

### ಜಾತ್ರೆಗಳಲ್ಲಿ ಹಲವು ವಿಧಗಳು

ಶರಣರು, ಮಹಾತ್ಮರು, ಶಿವಯೋಗಿಗಳ ಸ್ಮರಣೆಗಾಗಿ ನಡೆಯುವ ಜಾತ್ರೆಗಳು, **ಮಠದ ಜಾತ್ರೆಗಳು** : ಉದಾ ೧) ಹುಬ್ಬಳ್ಳಿ ಸಿದ್ಧಾರೂಢ ಸ್ವಾಮಿ ೨) ಡಂಬಳ ತೋಂಟದಾರ್ಯ ೩) ಚೆಳ್ಳಗುರ್ಕಿ ೪) ಕಲಬುರ್ಗಿ ಶರಣಬಸಪ್ಪ.

**ಭೂತ ಜಾತ್ರೆಗಳು** : ೧) ಕೋಟಿ ಚೆನ್ನಯರ ಬೈದ್ಯರ್ಕಳ ೨) ಮಾರಿ ೩) ನಾಗಮಂಡಲ.

**ಗುಡಿ ಜಾತ್ರೆ** : ೧) ಸವದತ್ತಿ ಯಲ್ಲಮ್ಮ ೨) ಕಲಬುರ್ಗಿ ಕಾಳಮ್ಮ ೩) ಬಳ್ಳಾರಿ ಮಲ್ಲೇಶ್ವರ ೪) ಹಂಪಿ ವಿರೂಪಾಕ್ಷಲಿಂಗ.

ಹರಪನಹಳ್ಳಿ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ತಾಲ್ಲೂಕಿನ ಪ್ರಮುಖ ಜಾತ್ರೆಗಳು–ಉರುಸು**

| ಕ್ರ. ಸಂ. | ದೇವರು | ಸ್ಥಳ | ಜಾತ್ರೆಗಳು ನಡೆತಯವ ದಿನ | ಅವಧಿ | ಭಾಗ ವಹಿಸುವ ಜನಸಂಖ್ಯೆ |
|---|---|---|---|---|---|
| ೧ | ಶ್ರೀ ಗೋಣಿ ಬಸವೇಶ್ವರ | ಕೂಲಹಳ್ಳಿ | ಮಾರ್ಚ್ ತಿಂಗಳು ೧೩ ರಿಂದ | ಮೂರು ದಿನಗಳು | ೧೦ ರಿಂದ ೧೫ ಸಾವಿರ |
| ೨ | ಶ್ರೀ ನಾರಪ್ಪ | ಚಿಗಟೇರಿ | ಏಪ್ರಿಲ್ ೩೦ | ಎರಡು ದಿನಗಳು | ೧೦ ರಿಂದ ೧೨ ಸಾವಿರ |

| | | | | | |
|---|---|---|---|---|---|
| ೩ | ಶ್ರೀ ವೀರಭದ್ರ | ಹರಪನಹಳ್ಳಿ ಪಟ್ಟಣ | ಪ್ರತಿವರ್ಷ ಗೌರಿ ಹುಣ್ಣಿಮೆ | ಮೂರು ದಿನಗಳು | ೧೦ ರಿಂದ ೧೫ ಸಾವಿರ |
| ೪ | ಶ್ರೀ ಕೋಟೆ ಆಂಜನೇಯ ಸ್ವಾಮಿ | ಹರಪನಹಳ್ಳಿ ಕೋಟೆ | ಪ್ರತಿವರ್ಷ ಚೈತ್ರ ಶುದ್ಧ ಹುಣ್ಣಿಮೆ ದಿನ | ಒಂದೇ ದಿನ | ೨ ರಿಂದ ೩ ಸಾವಿರ |
| ೫ | ಶ್ರೀ ವೆಂಕಟೇಶ್ವರ ಸ್ವಾಮಿ | ದೇವರ–ತಿಮ್ಲಾಪುರ | ಪ್ರತಿವರ್ಷ ಡಿಸೆಂಬರ್ ತಿಂಗಳು ೨೭–೨೮ | ಎರಡು ದಿನಗಳ ಕಾಲ | ೩ ರಿಂದ ೪ ಸಾವಿರ |
| ೬ | ಶ್ರೀ ಉಚ್ಚೆಂಗೆಮ್ಮ | ಉಚ್ಚೆಂಗಿ ದುರ್ಗ | ಪ್ರತಿ ವರ್ಷ ಯುಗಾದಿ | ೪ ದಿನಗಳು | ೫ ಸಾವಿರ |
| ೭ | ಶ್ರೀ ಮೈಲಾರಲಿಂಗ ಸ್ವಾಮಿ | ಹರಪನಹಳ್ಳಿ | ಭಾರತ ಹುಣ್ಣಿಮೆ ದಿನ | ೨ ದಿನಗಳು | ೩ ಸಾವಿರ |
| ೮ | ಗುಳೇದ ಲಕ್ಕಮ್ಮ | ಹುಲಿಕಟ್ಟಿ | ಮೂರು ವರ್ಷಕ್ಕೊಮ್ಮೆ | | ೧೦ ಸಾವಿರ |
| ೯ | ಚಮನ್ ಷಾ ವಲಿ | ನಂದ್ಯಾಲ | ಪ್ರತಿ ವರ್ಷ ಬನದ ಹುಣ್ಣಿಮೆ ಆದ ೫ ದಿನಕ್ಕೆ | ೫ ದಿನಗಳು | ೪ ಸಾವಿರ |
| ೧೦ | ಚಮನ್ ಷಾ ವಲಿ | ತೆಲಗಿ | ಪ್ರತಿ ವರ್ಷ | ೫ ದಿನಗಳು | ೩ ಸಾವಿರ |
| ೧೧ | ದಂಡಿನ ದುರುಗಮ್ಮ | ಅರಸೀಕೆರೆ | ಪ್ರತಿ ವರ್ಷ | ೨ ದಿನಗಳು | ೨ ಸಾವಿರ |

**ಆಧಾರ: ಶ್ರೀ ಕುಂ.ಬಾ.ಸದಾಶಿವಪ್ಪ ಇವರ ಕ್ಷೇತ್ರಕಾರ್ಯ.**

## ಅಧ್ಯಾಯ–೪

# ಕೃಷಿ ಮತ್ತು ನೀರಾವರಿ

**ಕ**ಲ್ಯಾಣ ಚಾಲುಕ್ಯರ ಸಾಮಂತರಾದ ನೊಳಂಬ ಪಲ್ಲವರ ತ್ರೈಲೋಕ್ಯ ಮಲ್ಲ ಇರಿವ ನೊಳಂಬ ನರಸಿಂಗ ದೇವ (ಘಟೆಯಂಕರಸ ಅವನ ಪುತ್ರ ಉದಯಾದಿತ್ಯ) ಕ್ರಿ.ಶ.೯೯೮ ರಿಂದ ೧೦೧೮ ರವರೆಗೆ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಭಾಗವನ್ನು ಆಳಿದರು, ಇವರ ಆಳ್ವಿಕೆಯಲ್ಲಿ ಉದಯಾದಿತ್ಯನ ತಾಯಿ ಮಹಾದೇವಿ ಒಂದು ಕೆರೆಯನ್ನು ನಿರ್ಮಿಸಿದಳು. ಅದಕ್ಕಾಗಿ ಆ ಕೆರೆಗೆ ಅರಸೀಕೆರೆ ಎಂದು ಹೆಸರು ಉಂಟಾಗಿದೆ. ಇದನ್ನು ಪುನಭಗಟ್ಟ ಶಾಸನದಿಂದ ಖಚಿತಪಡಿಸಲಾಗಿದೆ. ಕೆರೆಯ ಜಲ ವಿಸ್ತೀರ್ಣ ೧೦೫ ಹೆಕ್ಟೇರು. ನೊಳಂಬರು ಇದೇ ತಾಲ್ಲೂಕಿನ ಕಂಚಿಕೆರೆಯನ್ನು ನಿರ್ಮಿಸಿರುವರು. ಮೊದಲಿನ ನೊಳಂಬ ಅರಸರು ಕಟ್ಟಿಸಿದ್ದ ಕೆರೆಯ ಜೀರ್ಣೋದ್ಧಾರವನ್ನು ಸಂಧಿವಿಗ್ರಹಿ ಅರಿದಾಸಯ್ಯ ಮಾಡಿಸಿದ್ದು ಕ್ರಿ.ಶ. ೧೦೬೯ ರ ಶಾಸನದಿಂದ ಗೊತ್ತಾಗುತ್ತದೆ.

ವೀರ ಪಾಂಡ್ಯ ದೇವ ಅವನ ರಾಣಿಯ ಸಮ್ಮುಖದಲ್ಲಿ ಎರಡು ಕೆರೆಗಳನ್ನು ಕಟ್ಟಿಸಿ ಮಲ್ಲಿ ಎಂಬುವರಿಗೆ ದಾನ ನೀಡಿದ್ದು ಕ್ರಿ.ಶ. ೨೫–೧೨–೧೧೫೪ ರ ಅಲಗಿಲವಾಡದ ಕಲ್ಲೇಶ್ವರ ದೇವಾಲಯದ ಶಾಸನ ದೃಢಪಡಿಸುತ್ತದೆ. ಉಚ್ಚಂಗಿದುರ್ಗದ ಕ್ರಿ.ಶ. ೨೫–೬–೧೧೬೫ ರ ಶಾಸನದಂತೆ ಚಟ್ನೀಹಳ್ಳಿ ಚಿಕ್ಕಮ್ಮನಕೆರೆಯಿಂದ ಚಟ್ಟನ ಕೆರೆಯ ಉತ್ತರದ ಕೋಡಿಯವರೆಗಿನ ನೀರಾವರಿಯ ವಿಚಾರ ಬರುತ್ತದೆ.

ಹೀಗೆ ಹರಪನಹಳ್ಳಿ ತಾಲ್ಲೂಕು ಹಳ್ಳಿಗಳಲ್ಲಿ ಚಾಲುಕ್ಯ ಸಾಮಂತ ಅರಸರು ವಿಜಯನಗರದ ರಾಯರು, ಹರಪನಹಳ್ಳಿ ಪಾಳೆಯಗಾರರು ಅನೇಕ ಕೆರೆ ಬಾವಿಗಳನ್ನು ನಿರ್ಮಿಸಿ ಜನರಿಗೆ ಅನುಕೂಲ ಮಾಡಿದರು. ಈಗಲೂ ಹರಪನಹಳ್ಳಿಯಲ್ಲಿ ನಾಯಕನಕೆರೆ ಮತ್ತು ಅಯ್ಯಪ್ಪನ ಕೆರೆಗಳನ್ನು ಕಾಣಬಹುದು. ವಿಜಯನಗರದ ರಾಯ ಕೆರೆಗಳು ಸಾಕಷ್ಟಿದ್ದವು. ಕರ್ನಾಟಕ ರಾಜ್ಯದಲ್ಲಿ ಕೋಲಾರ ಬಿಟ್ಟರೆ ಎರಡನೆಯದು ಬಳ್ಳಾರಿ ಜಿಲ್ಲೆ. ವಿಜಯನಗರದವರ ಸೈನ್ಯದಲ್ಲಿದ್ದು ಸ್ವತಂತ್ರರಾಗಿ ರಾಜ್ಯ ಕಟ್ಟಿ ಆಳಿದ ಹರಪನಹಳ್ಳಿ ಪಾಳೆಯಗಾರರು ರೈತರಿಗಾಗಿ ನೀರಾವರಿ ವ್ಯವಸ್ಥೆಯನ್ನು ಹೆಚ್ಚು ಆಸಕ್ತಿಯಿಂದ ಮಾಡಿದ್ದನ್ನು ಗಮನಿಸಬಹುದು.

**ಭೂ ಬಳಕೆ** : ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ ಒಟ್ಟು ೧,೪೩,೦೨೪ ಹೆಕ್ಟೇರ್‌ಗಳು ಇದ್ದು, ಇದರಲ್ಲಿ ಸಾಗುವಳಿಗೆ ಲಭ್ಯವಿಲ್ಲದ್ದು ೧೭,೫೪೦ ಹೆಕ್ಟೇರ್‌ಗಳು , ಬೀಳು ಭೂಮಿ ೯,೯೮೬ ಹೆಕ್ಟೇರ್, ಬಿತ್ತನೆಯಾಗುವ ಭೂಮಿ ೧,೦೧,೩೯೪ ಹೆಕ್ಟೇರ್ ಹಾಗೂ ಅರಣ್ಯ ಪ್ರದೇಶ ೨೨,೨೩೦ ಹೆಕ್ಟೇರ್‌ಗಳನ್ನು ಹೊಂದಿರುತ್ತದೆ.

**ಭೂಮಿಯ ಬಳಕೆ**

| | | | ೨೦೧೪–೧೫ರ ಗಣತಿ | ೨೦೧೫–೧೬ರ ಗಣತಿ |
|---|---|---|---|---|
| ೧ | ಭೌಗೋಳಿಕ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | | ೧,೪೩,೦೨೪ | ೧,೪೩,೦೨೪ |
| ೨ | ಅರಣ್ಯ | | ೨೨,೨೩೦ | ೨೨,೨೩೦ |
| ೩ | | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | |
| | ಎ | ವ್ಯವಸಾಯೇತರ | ೧೧,೩೦೦ | ೧೧,೩೦೦ |
| | ಬಿ | ಬಂಜರು | ೬,೨೫೮ | ೬,೨೫೮ |
| | ಸಿ | ಒಟ್ಟು | ೧೭,೫೪೦ | ೧೭,೫೪೦ |
| ೩ | ಸಾಗುವಳಿ ಮಾಡದಿರುವ ಇತರೆ ಭೂಮಿ | | | |
| | ಎ | ಸಾಗುವಳಿಗೆ ಯೋಗ್ಯವಾದ ಬಂಜರು | ೩,೧೭೪ | ೩,೧೭೪ |
| | ಬಿ | ಖಾಯಂ ಗೋಮಾಳ | ೧,೬೦೩ | ೧,೬೦೩ |
| | ಸಿ | ವೃಕ್ಷ ಮತ್ತು ತೋಪುಗಳು | ೮೧೨ | ೮೧೨ |
| | ಡಿ | ಒಟ್ಟು | ೫,೫೮೯ | ೫,೫೮೯ |
| ೪ | ಬೀಳು ಭೂಮಿ | | | |
| | ಎ | ಚಾಲ್ತಿ | ೩,೧೩೩ | ೩,೧೩೩ |
| | ಬಿ | ಇತರೆ | ೮೫೩ | ೮೫೩ |
| | ಸಿ | ಒಟ್ಟು | ೩,೯೮೬ | ೩,೯೮೬ |
| ೫ | ಬಿತ್ತನೆಯಾದ ಪ್ರದೇಶ | | | |
| | ಎ | ನಿವ್ವಳ | ೯೩,೬೬೧ | ೯೩,೬೬೧ |
| | ಬಿ | ಒಂದಕ್ಕಿಂತ ಹೆಚ್ಚು | ೭,೭೩೩ | ೭,೭೩೩ |
| | ಸಿ | ಒಟ್ಟು | ೧,೦೧,೩೯೪ | ೧,೦೧,೩೯೪ |

**ಆಧಾರ : ದಾವಣಗೆರೆ ಜಿಲ್ಲಾ ಅಂಕಿ–ಅಂಶಗಳ ನೋಟ ೨೦೧೪–೧೫ ಹಾಗೂ ೨೦೧೫–೧೬.**

## ಕೃಷಿ ಮತ್ತು ನೀರಾವರಿ

ಹರಪನಹಳ್ಳಿ ತಾಲ್ಲೂಕು ವಲಯದ ಹೆಚ್ಚಿನ ಭಾಗದ ಮಳೆ ಮುಂಗಾರು ಋತುವಿನಲ್ಲಿ ಆಗುತ್ತಿದ್ದು, ಹೆಚ್ಚಿನ ಭಾಗ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ್ದರೂ ಅಲ್ಲಲ್ಲಿ ಅಂದರೆ ಹಲುವಾಗಲು ಕೆಲ ಭಾಗ ಬೆಣ್ಣಿಹಳ್ಳಿ ಕೆಲ ಭಾಗ, ಚಿಗಟೇರಿ ಕೆಲ ಭಾಗಗಳಲ್ಲಿ ಕಪ್ಪು ಮಣ್ಣು ಕಂಡು ಬರುವುದು. ಜೋಳ, ಮೆಕ್ಕೆಜೋಳ, ರಾಗಿ, ಹತ್ತಿ, ಬತ್ತ, ಕಬ್ಬು, ದ್ವಿದಳ ಧಾನ್ಯಗಳು ಇಲ್ಲಿಯ ಪ್ರಮುಖ ಬೆಳೆಗಳು.

**ಗೊಬ್ಬರ** : ರೈತರು ಹಿಂದಿನ ಕಾಲದಿಂದಲೂ ಸಾಂಪ್ರದಾಯಿಕವಾಗಿ ಹಟ್ಟಿ ಗೊಬ್ಬರ, ಹಸಿರು ಗೊಬ್ಬರಗಳನ್ನು ಬಳಸುವುದರ ಜೊತೆಗೆ ಎತ್ತು, ಎಮ್ಮೆ, ಗೋವು, ಆಡು, ಕುರಿ ಮೊದಲಾದ ಪ್ರಾಣಿಗಳ ಸಗಣಿ-ಹಿಕ್ಕೆ ಕೃಷಿ ಜಮೀನಿಗೆ ಗೊಬ್ಬರವಾಗಿ ಬಳಸುವರು. ಕೆರೆಯ ಹೂಳು ಮಣ್ಣನ್ನು ಎತ್ತಿದಾಗ ಬರುವ ಗೋಡು ಮಣ್ಣನ್ನು ಇತರ ಹಾಳು ಗೋಡೆ ಮಣ್ಣನ್ನು ಜಮೀನಿನ ಫಲವತ್ತತೆಯನ್ನು ಹೆಚ್ಚಿಸಲು ಬಳಸುವರು. ಅಧಿಕ ಇಳುವರಿ ನೀಡುವ ತಳಿಗಳನ್ನು ನೀರಾವರಿ ಸೌಕರ್ಯವಿರುವೆಡೆ ಬೆಳೆಯುವರು.

**ಕೃಷಿ ಉಪಕರಣಗಳು** : ೧೯೮೮ ರಲ್ಲಿ ಮರದ ನೇಗಿಲು ಬದಲು ಕಬ್ಬಿಣದ ನೇಗಿಲು ಬಂಡಿ ಪಂಪ್‌ಸೆಟ್ ಟ್ರ್ಯಾಕ್ಟರ್ ಇತರೆ ಉಪಕರಣಗಳು ಈ ತಾಲ್ಲೂಕಿನಲ್ಲಿ ಬಳಕೆಗೆ ಬಂದಿವೆ. ಹೆಚ್ಚಿನ ರೈತರು ಮಳೆ ಆಧಾರಿತ ಬೆಳೆಯನ್ನು ಅವಲಂಬಿಸಿರುವರು. ಕೆರೆ, ಕಾಲುವೆ, ಬಾವಿ, ಪಂಪ್‌ಸೆಟ್ - ಇವೇ ನೀರಾವರಿ ಮೂಲಗಳು. ಲಕ್ಕವಳ್ಳಿ ಯೋಜನೆಯಿಂದ ಹರಪನಹಳ್ಳಿ ತಾಲ್ಲೂಕಿನ ಕೆಲ ಪ್ರದೇಶಕ್ಕೆ ನೀರು ದೊರಕುತ್ತದೆ. ಮತ್ತೆ ಕೆಲ ಭಾಗ ತುಂಗಭದ್ರಾ ನದಿಯ ಬಳಿ ಇರುವ ಪ್ರದೇಶಗಳಿಗೆ ನೀರು ದೊರಕುತ್ತದೆ. ಸುಧಾರಿತ ಗೊಬ್ಬರ, ತಳಿ, ಯಂತ್ರ ಆಧಾರಿತ ಕೃಷಿ ವಿಧಾನಗಳಿಂದ ವರ್ಷದುದ್ದಕ್ಕೂ ಈಗ ರೈತರು ಬೆಳೆ ಬೆಳೆಯುವರು.

**ತೋಟಗಾರಿಕೆ ಕೃಷಿ** : ಹರಪನಹಳ್ಳಿಯಲ್ಲಿ ತೋಟಗಾರಿಕಾ ಇಲಾಖೆ ೧೯೭೨ ರಿಂದ ಪ್ರಾರಂಭವಾಗಿದೆ. ೧೯೯೨ ರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ. ಮೊದಲು ಸೊಂಡೂರು ಉಪ ವಿಭಾಗ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಈ ಇಲಾಖೆಯಿಂದ ಪ್ರಮುಖವಾಗಿ ಹಣ್ಣಿನ ಕಸಿ/ಸಸಿ, ಹೂವಿನ ಬೆಳೆ ಮತ್ತು ಸಾಂಬಾರು ಬೆಳೆಗಳ ಸಸಿಗಳನ್ನು ನೀರಾವರಿ ಸೌಲಭ್ಯವಿರುವ ರೈತರಿಗೆ ಅದರಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ರೈತರಿಗೆ ಉಚಿತವಾಗಿ ವಿತರಿಸುತ್ತಿದೆ, ಈ ತಾಲ್ಲೂಕಿನಲ್ಲಿ ತರಕಾರಿ ಬೀಜಗಳನ್ನು ಸಹ (ಸಂಕೀರ್ಣ ತಳಿಗಳು) ವಿತರಿಸುವರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವು, ಹಣ್ಣಿನ ಬೆಳೆಗಳು-೧೮೩೦ ಹೆಕ್ಟೇರ್, ತರಕಾರಿ ಬೆಳೆಗಳು-೩೨೮೬ ಹೆಕ್ಟೇರ್, ಸಾಂಬಾರು

ಬೆಳೆಗಳು ೩೯ ಹೆಕ್ಟೇರ್ ತೋಟದ ಬೆಳೆಗಳು ೧೧೦೫ ಹೆಕ್ಟೇರ್ ಹಾಗೂ ಹೂವಿನ ಬೆಳೆಗಳು–೭೯೨ ಹೆಕ್ಟೇರ್‌ಗಳಲ್ಲಿ ಇರುವುದು. ಅಡಿಕೆ, ತೆಂಗು, ಮಾವು, ಬಾಳೆ, ದಾಳಿಂಬೆ, ಮೋಸಂಬಿ, ಪಪ್ಪಾಯಿ ಕೋಸು ಮತ್ತು ವಿವಿಧ ಜಾತಿಯ ಹೂಗಳು, ತಾಲ್ಲೂಕಿನಲ್ಲಿ ಒಟ್ಟು ೭೧೫೨ ಹೆಕ್ಟೇರ್‌ನಷ್ಟು ತರಕಾರಿಗಳು ಹೊಂದಿದ್ದು, ಹವಾಗುಣ, ನೀರಿನ ಲಭ್ಯತೆ ಮತ್ತು ಸಂಪನ್ಮೂಲಗಳು ದೊರಕಿ ಅಭಿವೃದ್ಧಿ ಹೊಂದುತ್ತಲಿದೆ.

**೨೦೧೪–೧೫ನೇ ಸಾಲಿನ ಹರಪನಹಳ್ಳಿ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು**

| ಹಣ್ಣಿನ ಬೆಳೆಗಳು | | | |
|---|---|---|---|
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧,೫೪೧ | ೧೩,೪೦೦ | ೮.೭೦ | ೪,೨೬೭ |
| **ತರಕಾರಿ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫,೬೫೭ | ೭೩,೭೨೧ | ೧೩.೦೩ | ೫,೧೨೯ |
| **ಸಾಂಬಾರು ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧೫೨ | ೨೫೨ | ೧.೬೬ | ೧೧೨ |
| **ತೋಟದ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧,೭೦೪ | ೬೭೯ | ೦.೪೦ | ೧,೯೩೮ |
| **ವಾಣಿಜ್ಯ ಪುಷ್ಪಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೬೪೩ | ೨,೫೧೮ | ೩.೯೨ | ೫೫೬ |
| **ಒಟ್ಟು ಮೊತ್ತ** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೯,೬೯೬ | ೯೦,೫೬೯ | ೯.೩೪ | ೧೨,೦೦೨ |

**೨೦೧೫-೧೬ನೇ ಸಾಲಿನ ಹರಪನಹಳ್ಳಿ ತಾಲ್ಲೂಕಿನ ತೋಟಗಾರಿಕೆ ಬೆಳೆಗಳ ಪ್ರಮುಖ ವರ್ಗವಾರು, ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉತ್ಪನ್ನ (ಮೆ.ಟನ್ನುಗಳಲ್ಲಿ), ಇಳುವರಿ (ಮೆ. ಟನ್ನುಗಳಲ್ಲಿ ಹೆಕ್ಟೇರಿಗೆ), ಮತ್ತು ಮೌಲ್ಯ (ರೂ. ಲಕ್ಷಗಳಲ್ಲಿ) ವಿವರಗಳು**

| **ಹಣ್ಣಿನ ಬೆಳೆಗಳು** | | | |
|---|---|---|---|
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧,೬೩೩ | ೧೩,೪೦೦ | ೮.೨೦ | ೯೦೩೦ |
| **ತರಕಾರಿ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೫,೬೫೭ | ೭೩,೭೨೧ | ೧೩.೦೩ | ೫೬೧೮ |
| **ಸಾಂಬಾರು ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧೫೭ | ೫೫೧ | ೩.೫೧ | ೨೩೫ |
| **ತೋಟದ ಬೆಳೆಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೧,೭೭೬ | ೪,೧೧೧ | ೨.೩೧ | ೩೧೯೦ |
| **ವಾಣಿಜ್ಯ ಪುಷ್ಪಗಳು** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೬೪೩ | ೨,೫೧೮ | ೩.೯೨ | ೫೫೬ |
| **ಒಟ್ಟು ಮೊತ್ತ** | | | |
| ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೯೮,೬೬ | ೯೪೩೦೧ | ೯.೫೬ | ೧೮,೬೨೯ |

**ಜೋಳ** : ಈ ತಾಲ್ಲೂಕಿನಲ್ಲಿ ಹಿಂದಿನಿಂದ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳಲ್ಲಿ ಒಂದು, ಇದನ್ನು ಎತ್ತು, ಎಮ್ಮೆ ಮುಂತಾದ ದನಗಳ ಮೇವಿಗಾಗಿ ಸಹ ಬೆಳೆಯುವರು. ಸಿ.ಎಸ್. ಎಚ್.೧ ಮತ್ತು ಸಿ.ಎಸ್.ವಿ. ೫ ಮೊದಲಾದುವು ಪ್ರಮುಖ ಬೆಳೆಗಳ ತಳಿಗಳಾಗಿವೆ. ಪ್ರತಿ ಹೆಕ್ಟೇರಿಗೆ ೧೦ ರಿಂದ ೧೫ ಟನ್ ಮೇವು, ಹೆಕ್ಟೇರಿಗೆ ೪೦ ರಿಂದ ೫೦ ಕ್ವಿಂಟಾಲ್ ಜೋಳ ದೊರಕುತ್ತದೆ. ಈ ತಾಲ್ಲೂಕಿನ ರೈತರು ಇದನ್ನು ಪ್ರಮುಖವಾಗಿ ಊಟಕ್ಕೆ ಬಳಸುವರು.

**ಮುಸುಕಿನ ಜೋಳ** : ಈ ಬೆಳೆಯು ತಾಲ್ಲೂಕಿನ ಎಲ್ಲಾ ರೈತರು ಸಾಕಷ್ಟು ಪ್ರಮಾಣದಲ್ಲಿ ಬೆಳೆಯುವರು.

**ರಾಗಿ** : ಇದನ್ನು ಹರಪನಹಳ್ಳಿ ಸುತ್ತ ಮುತ್ತ ಹೆಚ್ಚಾಗಿ ಬೆಳೆಯುವರು. ಇದರಲ್ಲಿ ಇಂಡಾಪ್-೧, ಇಂಡಾಪ್-೨, ಇಂಡಾಪ್-೩ ಇಂಡಾಪ್-೫, ಇಂಡಾಪ್-೮ ಮತ್ತು ಇಂಡಾಪ್-೯ ಇ.ಎಸ್.೧೧ ಪೂರ್ಣ ಹಾಗೂ ಪಿ.ಆರ್.೨೦೨ ಸುಧಾರಿತ ತಳಿಗಳು ಮತ್ತು ಹೆಚ್ಚು ಇಳುವರಿ ಕೊಡುತ್ತವೆ.

**ಬತ್ತ**: ಇದನ್ನು ಈ ತಾಲ್ಲೂಕಿನಲ್ಲಿ ತುಂಗಭದ್ರಾ ನದಿಯ ಸಮೀಪದ ಗ್ರಾಮಗಳಲ್ಲಿ ಹೆಚ್ಚಾಗಿ ಬೆಳೆಯುವರು. ನಾಲೆಗಳಿಂದ ಮತ್ತು ಕೆರೆ ನೀರಾವರಿಯಾಗುವ ಪ್ರದೇಶದಲ್ಲಿ ಬತ್ತವನ್ನು ಬೆಳೆಯಲಾಗುತ್ತದೆ.

**ಕಬ್ಬು**: ಇದು ನೀರಾವರಿ ಬೆಳೆ, ಇದನ್ನು ಹಿಂದಿನ ಕಾಲದಿಂದ ಬೆಳೆಯುವರು. ಇದು ಹನ್ನೊಂದು ತಿಂಗಳ ಕಾಲದ ಬೆಳೆ, ಇದರಲ್ಲಿ ಅನೇಕ ವಿಧಗಳಿದ್ದರೂ ಹರಪನಹಳ್ಳಿ ತಾಲ್ಲೂಕಿನಲ್ಲಿ ರಸತಾಳೆ ಮತ್ತು ಬ್ಯಾಟರಿ ವಿಧಗಳನ್ನು ಬೆಳೆಸುವರು.

**ದ್ವಿದಳ ಧಾನ್ಯಗಳು**: ಹೆಸರು, ತೊಗರಿ, ಹುರುಳಿ, ಅವರೆ, ಕಡಲೆ, ಈ ತಾಲ್ಲೂಕಿನ ಪ್ರಮುಖ ಬೆಳೆ, ಅಲಸಂದಿಯನ್ನು ೩೪೩ ಹೆಕ್ಟೇರ್‌ನಲ್ಲಿ ಅವರೆಯನ್ನು ೨೦ ಹೆಕ್ಟೇರ್‌ನಲ್ಲಿ, ತೊಗರಿಯನ್ನು ೩೦೦ ಹೆಕ್ಟೇರ್‌ಗಳಲ್ಲಿ ಬೆಳೆಯುವರು.

**ಪ್ರಮುಖ ಬೆಳೆಗಳ ವಿಸ್ತೀರ್ಣ**

| | ೨೦೧೫-೧೬ |
|---|---|
| ೧) ಏಕದಳ ಧಾನ್ಯಗಳು ವಿಸ್ತೀರ್ಣ(ಹೆ) | |
| ೧.೧) ಬತ್ತ | ೫,೧೦೩ |
| ೧.೨) ಜೋಳ | ೫,೪೦೬ |
| ೧.೩) ಸಜ್ಜೆ | ೪೦೦ |
| ೧.೪) ಮುಸುಕಿನ ಜೋಳ | ೫೭,೬೬೪ |
| ೧.೫) ರಾಗಿ | ೪,೫೦೭ |
| ೧.೬) ಗೋಧಿ | ೭ |
| ೧.೭) ಇತರ ತೃಣ ಧಾನ್ಯಗಳು | ೩ |
| ೧.೮) ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು | ೭೩,೦೯೦ |

| | |
|---|---|
| ೨) ದ್ವಿದಳ ಧಾನ್ಯಗಳ ವಿಸ್ತೀರ್ಣ (ಹೆ) | |
| ೨.೧) ತೊಗರಿ | ೨೧೭೯ |
| ೨.೨) ಹುರುಳಿ | ೨೦೫ |
| ೨.೩) ಉದ್ದು | ೧೧ |
| ೨.೪) ಹೆಸರು | ೪೪ |
| ೨.೫) ಅವರೆ | ೪ |
| ೨.೬) ಅಲಸಂಧಿ | ೧೯೭ |
| ೨.೭) ಕಡಲೆ | ೪೨೯ |
| ೨.೮) ಒಟ್ಟು ದ್ವಿದಳ ಧಾನ್ಯಗಳು | ೩,೦೬೯ |
| ೨.೯) ಒಟ್ಟು ಆಹಾರ ಧಾನ್ಯಗಳು | ೭೬,೧೫೯ |
| ೨.೧೦) ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ೪೪೩ |
| ೨.೧೧) ಒಟ್ಟು ತರಕಾರಿ ಬೆಳೆಗಳ ವಿಸ್ತೀರ್ಣ | ೬,೮೨೯ |
| ೩) ಪ್ರಮುಖ ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ (ಹೆ) | |
| ೩.೧) ಶೇಂಗಾ | ೩,೦೪೯ |
| ೩.೨) ಸೂರ್ಯಕಾಂತಿ | ೧,೭೫೭ |
| ೩.೩) ಕುಸುಮೆ | ೯ |
| ೩.೪) ಹರಳು | ೬ |
| ೩.೫) ಎಳ್ಳು | ೭ |
| ೩.೬) ಅಗಸೆ | ೦ |
| ೩.೭) ಸೋಯ ಅವರೆ | ೦ |
| ೩.೮) ಹುಚ್ಚೆಳ್ಳು | ೪೨ |
| ೩.೯) ಇತರೆ | ೪ |
| ೩.೧೦) ಒಟ್ಟು ಎಣ್ಣೆ ಕಾಳುಗಳು | ೪,೮೭೪ |
| ೪) ವಾಣಿಜ್ಯ ಬೆಳೆಗಳ ವಿಸ್ತೀರ್ಣ (ಹೆ) | |

| | |
|---|---|
| ೪.೧) ಹತ್ತಿ | ೭೦೧೯ |
| ೪.೨) ಕಬ್ಬು | ೨೦೦೭ |
| ೪.೩) ತಂಬಾಕು | ೪೪೫ |
| ೪.೪) ಒಟ್ಟು ವಾಣಿಜ್ಯ ಬೆಳೆಗಳು | ೯,೪೭೧ |

**ಮಾಹಿತಿ ಮೂಲ: ದಾವಣಗೆರೆ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

**ಒಣ ಬೇಸಾಯ**: ಈ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ನೀರಾವರಿ ಸೌಲಭ್ಯವಿತ್ತು (ಕಪಿಲೆ, ಬಾವಿ, ಏತ, ಬಾವಿ). ಬೇಸಾಯಕ್ಕಾಗಿ ಮಳೆಯನ್ನೇ ರೈತರು ಅವಲಂಬಿಸಿರುವರು. ಅಧಿಕ ಮಳೆ ಬಿದ್ದ ಸಂದರ್ಭಗಳಲ್ಲಿ ಮೇಲ್ಮಣ್ಣಿನ ಸಂರಕ್ಷಣೆಯ ಉದ್ದೇಶದಿಂದ ಹರಿವನ್ನು ನಿಯಂತ್ರಿಸಲು ಒಡ್ಡುಗಳನ್ನು ಹಾಕುತ್ತಿದ್ದರು. ಬಹುಪಾಲು ಭೂಮಿಯ ಸವಕಳಿಯನ್ನು ತಡೆಯಲು ಪ್ರತಿ ವರ್ಷ ಇಲ್ಲವೇ ಎರಡು ವರ್ಷಗಳಿಗೊಮ್ಮೆ ಒಡ್ಡು ನಿರ್ಮಿಸುತ್ತಿದ್ದರು. ಹೆಚ್ಚು ನೀರು ಹರಿಯುವ ಭಾಗಕ್ಕೆ ಬದುವುಗಳಲ್ಲಿ ಒಳ ಮಗ್ಗಲು ಕಲ್ಲು ಒಡ್ಡು ಕಟ್ಟಿಸುತ್ತಿದ್ದರು.

**ಕೃಷಿ ಬೆಳೆಗೆ ವಿಮಾ ಯೋಜನೆ**: ಕೆಲವೊಂದು ಬಾರಿ ರೈತರ ಬೆಳೆಗಳು ಪ್ರಕೃತಿ ವಿಕೋಪಗಳಿಗೆ ತುತ್ತಾಗಿ ಪ್ರತಿ ಹಂಗಾಮಿನಲ್ಲೂ ರೈತರು ನಷ್ಟ ಅನುಭವಿಸುವುದು ಕಂಡು ಬರುತ್ತಿತ್ತು, ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಹಯೋಗದಲ್ಲಿ ಬೆಳೆ ವಿಮಾ ಯೋಜನೆಯನ್ನು ೧೯೮೫-೮೬ ರಿಂದ ಮುಂಗಾರು ಹಂಗಾಮಿನಿಂದ ಜಾರಿಗೆ ತರಲಾಗಿದೆ. ಬೆಳೆ ಸಾಲಗಳನ್ನು ಸಹಕಾರಿ, ವಾಣಿಜ್ಯ ಬ್ಯಾಂಕುಗಳಿಂದ (ಸಾಲ ಪಡೆವ ರೈತರಿಗೆ) ವಿಮಾ ಯೋಜನೆಯನ್ನು ಕಡ್ಡಾಯ ಮಾಡಿದರು.

ಈ ಯೋಜನೆಯಿಂದ ಪ್ರತಿ ಹಂಗಾಮಿನಲ್ಲಿ ಬೆಳೆ ಸಮೀಕ್ಷೆ ಕೈಗೊಂಡು ವರದಿ ಸಲ್ಲಿಸುವರು. ಅದರ ಆಧಾರದಿಂದ ರೈತರಿಗೆ ತಗಲುವ ನಷ್ಟದ ಪ್ರಮಾಣವನ್ನು ೨/೧ ರ ಪ್ರಮಾಣದಲ್ಲಿ ಸರಕಾರ ಭರಿಸುತ್ತದೆ. ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ವಿಮಾ ಕಂತಿನ ಮೇಲೆ ನೀಡಬೇಕಾದ ಶೇಕಡ ೫೦ ರ ಸಹಾಯಧನವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಮಪ್ರಮಾಣದಲ್ಲಿ ನೀಡುವುವು.

**ಈ ತಾಲ್ಲೂಕಿನ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತರು:**

೧) ಹಿಂದಿನ ಕಾಲದಲ್ಲಿ – ಶ್ರೀ ಕಟ್ಟಿ ಸೇತೂರಾಮಾಚಾರ್ಯರು
(ಕ್ಷೇತ್ರ ಹೈಬ್ರೀಡ್ ಬೆಳೆಗೆ)

೨) ೨೦೦೯-೧೦ ರಲ್ಲಿ – ಶ್ರೀ ಕೊಟ್ರೇಶಿ ಅರಸೀಕೆರೆ,
(ಕ್ಷೇತ್ರ ಬೀಜೋತ್ಪಾದನೆ ಕೃಷಿಗೆ.)

೩) ೨೦೧೦–೧೧ ರಲ್ಲಿ – ಶ್ರೀ ಬಿ.ಎಂ. ಶಿವಯೋಗಿ
ಶ್ರೀಮತಿ ಸೌಮ್ಯ ಶಿವಯೋಗಿ
ಇಟ್ಟುಗುಡಿ–ಬೇವಿನಹಳ್ಳಿ (ಸಮಗ್ರ ಕೃಷಿ ಪದ್ಧತಿ)

೪) ೨೦೧೧–೧೨ ರಲ್ಲಿ – ಶ್ರೀ ಮೌನೇಶ ತಾಯಿ ಬಸಮ್ಮ ಕುಲುಮರ,
ಕಲ್ಲಹಳ್ಳಿ (ಸಮಗ್ರ ಕೃಷಿ ಪದ್ಧತಿ)

೫) ೨೦೧೨–೧೩ ರಲ್ಲಿ – ಶ್ರೀ ಕೆ.ಎಸ್. ಪ್ರಕಾಶ ಕುರೇಮಾಗನಹಳ್ಳಿ
(ಸಮಗ್ರ ಕೃಷಿ ಪದ್ಧತಿ).

**ನೀರಾವರಿ** : ಮಳೆಯಾಧಾರಿತ ಒಣ ಬೇಸಾಯ ಪದ್ಧತಿ ಬಹುಕಾಲದಿಂದ ಈ ತಾಲ್ಲೂಕಿನಲ್ಲಿದ್ದರೂ ಕೆರೆ, ಬಾವಿಗಳನ್ನು ಬಳಸಿ ನೀರಾವರಿ ಸೌಕರ್ಯ ಒದಗಿಸಿಕೊಂಡು ಸುಧಾರಿತ ಕೃಷಿ ಪದ್ಧತಿಯನ್ನು ರೈತರು ಅನುಸರಿಸುತ್ತಿದ್ದರು. ಈ ವಿಷಯವನ್ನು ನೊಳಂಬ ಪಲ್ಲವರ ಹಾಗೂ ಉಚ್ಚಂಗಿ ಪಾಂಡ್ಯರ ವಿಜಯ ನಗರದ ರಾಯರ ಶಾಸನಗಳು ಈ ತಾಲ್ಲೂಕಿನ ಬಾಗಳಿ, ಅಲಗಿಲವಾಡ, ಉಚ್ಚಂಗಿದುರ್ಗಗಳ ಶಾಸನಗಳಿಂದ ಆಯಾ ಕೆರೆಗಳ ರಕ್ಷಣೆಗೆ ಯಾವ ತರಹ ಕ್ರಮ ಕೈಗೊಂಡಿದ್ದರು, ದುರಸ್ತಿ ಮಾಡಿದ್ದರು ಎಂಬುದು ಗೊತ್ತಾಗುವುದು. ಕೆರೆಗಳ ನಿರ್ಮಾಣ, ದುರಸ್ಥಿ ಸುಧಾರಣೆಗಳಿಗೆ, ತೂಬುಗಳ ದುರಸ್ತಿಗಾಗಿ, ಕೆರೆಯ ಹೂಳನ್ನು ಎತ್ತಲು ಮೊದಲಾದ ಕಾರ್ಯಗಳಿಗೆ ಉಂಬಳಿ ಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ತ್ರಿಭುವನ ಮಲ್ಲದೇವನ ಆಳ್ವಿಕೆಯಲ್ಲಿ ಅವನ ದಂಡನಾಯಕ ಬರ್ಮರಸನು ಹಿರಿಯ ಕೆರೆಯ ಕೆಲಸಕ್ಕೆ ಪನ್ನಾಯದ ಸುಂಕದಲ್ಲಿ ತಿಂಗಳಿಗೆ ಒಂದು ಗದ್ಯಾಣ ಹೊನ್ನನ್ನು ಬಾಳ್ಗುಳಿಯ ಮಹಾಜನಗಳ ಕಾಲನ್ನು ತೊಳೆದು ಸ್ವಯಂಭುಕಲಿ ದೇವರ ಸನ್ನಿಧಾನದಲ್ಲಿ ನೀಡುವನು ಎಂಬುದು ಕಲ್ಲೇಶ್ವರ ದೇವರ ಕ್ರಿ.ಶ.೧೩–೧೨–೧೧೦೭ ರ ಶಾಸನ ತಿಳಿಸುತ್ತದೆ. ಅದೇ ಬಾಗಳಿಯ ಕಲ್ಲೇಶ್ವರ ದೇವರ ದೇವಾಲಯದ ಕ್ರಿ.ಶ.೯–೫–೧೯೩೮ ರ ಶಾಸನದಲ್ಲಿ ಚಾಲುಕ್ಯ ಭುವನೈಕ್ಯಮಲ್ಲನು ಆಳುತ್ತಿದ್ದಾಗ ಮಾಂಡಳಿಕ ನೊಳಂಬ ಪಲ್ಲವ ಪೆರ್ಮಾನಡಿ ಜಯಸಿಂಗದೇಮ ೫೨ ಗದ್ಯಾಣವನ್ನು ಇತರರು ದುರುಪಯೋಗಪಡಿಸಿಕೊಳ್ಳುತ್ತಿರಲು ಅದನ್ನು ತಾನು ಪಡೆದು ಊರಿನ ಹಿರಿಯ ಕೆರೆಗೆ ದಾನ ನೀಡುವನು. ತಾಲ್ಲೂಕಿನ ಪ್ರಾಚೀನ ಮತ್ತು ಪ್ರಮುಖ ಕೆರೆಗಳೆಂದರೆ, ಅರಸೀಕೆರೆ ಕೆರೆ, ಕಂಚಿಕೇರಿ ಕೆರೆ, ಸತ್ತೂರು ಕೆರೆ, ಸಿಂಗ್ರಿಹಳ್ಳಿ ಕೆರೆ, ರಾಗಿಮಸಲ್ವಾಡ ಕೆರೆ, ಬಿಕ್ಕಿಟ್ಟಿ ಕೆರೆ, ಅಲಗಿಲವಾಡದ ಕೆರೆ, ಕುಂಚೂರು ಕೆರೆ, ನೀಲಗುಂದದ ಕೆರೆ, ಬಾಗಳಿ ಕೆರೆ, ಅಲಮರಸಿಕೆರೆ ಕೆರೆ, ಸಿದ್ಧಾಪುರ ಕೆರೆ, ಹರಪನಹಳ್ಳಿ ಹಿರೇ ಕೆರೆ, ಹರಪನಹಳ್ಳಿ ಅಯ್ಯನಕೆರೆ, ಶೃಂಗಾರ ತೋಟದ ಕೆರೆ, ಮುತ್ತಿಗೆ ಕೆರೆ.

**ನೀರಾವರಿ:**

**ನೀರಾವರಿಯಾದ ನಿವ್ವಳ ಪ್ರದೇಶ, ಹರಪನಹಳ್ಳಿ ತಾಲ್ಲೂಕು**

| **೧) ಕಾಲುವೆಗಳಿಂದ** | **೨೦೧೫-೧೬** |
|---|---|
| ೧.೧) ಉದ್ದ (ಕಿ.ಮಿ) | ೧೯.೦೦ |
| ೧.೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೩,೮೦೦ |
| ೧.೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೨,೯೬೧ |
| **೨) ಕೆರೆಗಳಿಂದ** | |
| ೨.೧) ಸಂಖ್ಯೆಗಳು | ೪೩ |
| ೨.೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೪೩೦ |
| ೨.೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೪೩೦ |
| **೩) ಬಾವಿಗಳಿಂದ** | |
| ೩.೧) ಸಂಖ್ಯೆಗಳು | ೫೯೫ |
| ೩.೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೧೫೦ |
| ೩.೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೧೫೦ |
| **೪) ಕೊಳವೆ ಬಾವಿಗಳಿಂದ** | |
| ೪.೧) ಸಂಖ್ಯೆಗಳು | ೬,೩೭೬ |
| ೪.೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೩೧೭೮೮ |
| ೪.೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೨೧,೫೮೪ |
| **೫) ಏತ ನೀರಾವರಿ** | |
| ೫.೧) ಸಂಖ್ಯೆಗಳು | ೭೪ |
| ೫.೨) ಒಟ್ಟು ನೀರಾವರಿಯಾದ ವಿಸ್ತೀರ್ಣ | ೮೯೦ |

| | |
|---|---|
| ೫.೩) ನಿವ್ವಳ ನೀರಾವರಿಯಾದ ವಿಸ್ತೀರ್ಣ | ೮೯೦ |
| **೬) ಇತರೆ ಮೂಲಗಳಿಂದ** | |
| **೭) ಒಟ್ಟು ನೀರಾವರಿಯಾದ ಪ್ರದೇಶ** | ೩೭,೦೫೮ |
| **೭) ಒಟ್ಟು ನಿವ್ವಳ** | **೨೬,೦೧೫** |

**ಮಾಹಿತಿ ಮೂಲ: ದಾವಣಗೆರೆ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

## ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆ

ಸರಕಾರದ ವಿಶೇಷ ಘಟಕದ ಯೋಜನೆಯಡಿ, ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಹಸು-ಎಮ್ಮೆ ಸಾಕಾಣಿಕೆಗಾಗಿ ಶೇಕಡ ೨೦ ಸಹಾಯಧನ ನೀಡುವರು. ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಫಲಾನುಭವಿಗಳಿಗೆ ಶೇ.೭೫ (ಗರಿಷ್ಟ ೧೦,೦೦೦ ರೂ.) ಸಹಾಯಧನ ಮಿಶ್ರತಳಿ ಹಸು ಅಥವಾ ಎಮ್ಮೆ ಘಟಕವನ್ನು ಕೊಡಲಾಗುವುದು. ಅಲ್ಲದೆ, ಬರಡು ದನಗಳ ಚಿಕಿತ್ಸಾ ಶಿಬಿರ ಬೇರೆ-ಬೇರೆ ಗ್ರಾಮಗಳಲ್ಲಿ, ಮೇವು ಬೆಳೆಯಲು ಪ್ರೋತ್ಸಾಹಕ್ಕೆ ಉಚಿತ ಬೀಜ ವಿತರಣೆ, ವಿಶೇಷ ಮೇವು ಅಭಿವೃದ್ಧಿಗೊಳಿಸಲು ಸಹಾಯ ಧನ, ಮೇವು ಕತ್ತರಿಸುವ ಯಂತ್ರಗಳ ಖರೀದಿಗೆ ಸಹಾಯಧನವನ್ನು ನೀಡುವರು.

ದನ-ಕರು, ಎತ್ತು-ಎಮ್ಮೆ, ಆಡು-ಕುರಿಗಳ ಪಾಲನೆ-ಪೋಷಣೆ ಎಲ್ಲಾ ಜನರಿಗೆ ಹಾಲು, ಮೊಸರು, ಬೆಣ್ಣೆ ಮೊದಲಾದ ಹೈನುಗಾರಿಕೆ ಉತ್ಪನ್ನಗಳನ್ನು ಒದಗಿಸುತ್ತದೆ. ಕೃಷಿಗೆ ಬೇಕಾದ ಗೊಬ್ಬರ ಮತ್ತು ದವಸ-ಧಾನ್ಯ ಹಾಗೂ ಜನರನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಸಾಗಿಸಲು ಪಶುಪಾಲನೆ ನೆರವಾಗುತ್ತದೆ. ಚೋಳ-ಹೊಯ್ಸಳರ ಕಾಲದ ಶಾಸನಗಳಲ್ಲಿ ದೇವಾಲಯಗಳ ಸೇವೆಗೆ ಗೋವುಗಳನ್ನು ದಾನ ಬಿಟ್ಟಿದ್ದು ಗೊತ್ತಾಗುವುದು. ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿ ಬೇಸಾಯ ಕೆಲಸಕ್ಕೆ ಉಪಯುಕ್ತವಾಗುತ್ತವೆ.

ಹರಪನಹಳ್ಳಿ ಪಾಳೆಯಗಾರರು ಸವಣೂರು ನವಾಬರಿಗೆ ಪತ್ರ ಬರೆದದ್ದು, ನವಾಬರು ಬಿಜಾಪುರದ ಒಳ್ಳೇ ತಳಿ ಆಕಳುಗಳನ್ನು ತರಿಸಿ ಹರಪನಹಳ್ಳಿಗೆ ಕಳಿಸಿದ್ದು ಅವರು ಬರೆದ ಪತ್ರಗಳಿಂದ ಗೊತ್ತಾಗುತ್ತದೆ. ಈಗಲೂ ರಾಮಚಂದ್ರಾಪುರ ಮಠದಲ್ಲಿ ಗೋವುಗಳನ್ನು ಸಾಕುವುದು ಕಂಡು ಬರುವುದು. ದನಗಳು ಮೇವಿಗೆಂದು ಸರಕಾರ ಗೋಮಾಳಗಳನ್ನು ಎಲ್ಲಾ ಕಡೆ ಮೀಸಲಿಟ್ಟಿರುವುದು ಪ್ರಾಚೀನ ಕಾಲದಿಂದ ಎಲ್ಲಾ ಹಳ್ಳಿಗಳಲ್ಲಿ ಈಗಲೂ ಕಾಣಸಿಗುತ್ತವೆ.

## ಪಶುಪಾಲನೆ ಮತ್ತು ಪಶುವೈದ್ಯ ಸೇವೆಗಳು

| | ೨೦೧೨ರ ಗಣತಿ |
|---|---|
| **೧) ಜಾನುವಾರು ಗಣತಿ** | |
| ೧.೧) ದನಕರುಗಳು | |
| ೧.೨) ಸ್ಥಳೀಯ | ೫೭,೪೧೩ |
| ೧.೩) ವಿದೇಶಿತಳಿ | ೦ |
| ೧.೪) ಮಿಶ್ರತಳಿ | ೯,೪೬೨ |
| ೧.೫) ಒಟ್ಟು | ೬೬,೮೭೫ |
| **೨) ಎಮ್ಮೆಗಳು** | **೩೬,೬೭೪** |
| **೩) ಕುರಿಗಳು** | |
| ೩.೧) ಸ್ಥಳೀಯ | ೧,೬೬,೧೮೦ |
| ೩.೨) ವಿದೇಶಿತಳಿ | ೦ |
| ೩.೩) ಮಿಶ್ರತಳಿ | ೧೧ |
| ೩.೪) ಒಟ್ಟು | ೧,೬೬,೧೯೧ |
| **೪) ಮೇಕೆಗಳು** | ೩೨,೮೮೧ |
| **೫) ಹಂದಿಗಳು** | |
| ೫.೧) ಸ್ಥಳೀಯ | ೨೬೬ |
| ೫.೨) ವಿದೇಶಿತಳಿ | ೦ |
| ೫.೩) ಮಿಶ್ರತಳಿ | ೦ |
| ೫.೪) ಒಟ್ಟು | ೨೬೬ |
| **೬) ಮೊಲಗಳು** | ೫೩ |
| **೭) ನಾಯಿಗಳು** | ೬,೩೫೩ |
| **೮) ಇತರೆ** | ೭೬ |
| **೯) ಒಟ್ಟು ಜಾನುವಾರುಗಳು** | ೩,೦೯,೩೬೯ |
| **೧೦) ಒಟ್ಟು ಕೋಳಿಗಳು** | ೫೩,೦೯೯ |

| | |
|---|---|
| **೧೧) ಪಶು ವೈದ್ಯ ಶಾಲೆಗಳು** | |
| ೧೧.೧) ಪಶು ಆಸ್ಪತ್ರೆಗಳು | ೫ |
| ೧೧.೨) ಚಿಕಿತ್ಸಾಲಯಗಳು | ೬ |
| ೧೧.೩) ಪ್ರಾಥಮಿಕ ಪಶುವೈದ್ಯ ಕೇಂದ್ರಗಳು | ೧೪ |
| ೧೧.೪) ಸಂಚಾರಿ ಚಿಕಿತ್ಸಾಲಯಗಳು | ೧ |
| ೧೧.೫) ಕೃತಕ ಗರ್ಭಧಾರಣ ಕೇಂದ್ರಗಳು | ೫ |
| ೧೧.೬) ಇತರೆ | ೦ |
| ೧೧.೭) ಒಟ್ಟು | ೩೧ |
| **೧೨) ಇತರೆ ಮಾಹಿತಿ** | |
| ೧೨.೧) ಕೃತಕ ಗರ್ಭಧಾರಣೆ ನೀಡಿದ ಪಶುಗಳ ಸಂಖ್ಯೆ (ಲಕ್ಷಗಳಲ್ಲಿ) | ೧,೧೭,೭೫೪ |
| ೧೨.೨) ಚಿಕಿತ್ಸೆ ನೀಡಲಾದ ಪ್ರಾಣಿಗಳ ಸಂಖ್ಯೆ | ೧೯,೮೪೪ |
| ೧೨.೩) ಹಾಲು ಉತ್ಪಾದನೆ (ಸಾವಿರ ಟನ್‌ಗಳಲ್ಲಿ) | ೩೯.೩೪ |
| ೧೨.೪) ಮೊಟ್ಟೆ ಉತ್ಪಾದನೆ (ಲಕ್ಷ ಸಂಖ್ಯೆ) | ೧,೬೪೨.೯೬ |

**ಮಾಹಿತಿ ಮೂಲ: ದಾವಣಗೆರೆ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬**

**ಮೀನುಗಾರಿಕೆ**

ತಾಲ್ಲೂಕಿನಲ್ಲಿ ಕೆರೆಗಳಿಗೆ ಮೀನು ಮರಿಗಳನ್ನು ಬಿಟ್ಟು ಪಾಲನೆ ಮಾಡುವರು. ಅವು ಬೆಳೆದು ದೊಡ್ಡವಾದ ಬಳಿಕ ಕೆರೆಗಳನ್ನು ಯಾಲಂ ಹಾಕುವರು ಅವುಗಳನ್ನು ಯಾಲಂನಲ್ಲಿ ತಮ್ಮ ಹೆಸರಿಗೆ ಕೂಗಿ ಹಿಡಿಯುವರು. ಕೆಲ ವರ್ಷಗಳ ಹಿಂದೆ ಕ್ಷೇತ್ರ ಅಭಿವೃದ್ಧಿ ಕಛೇರಿಯ ಆವರಣದಲ್ಲಿ ಕೆಲವು ಮೀನು ಗುಂಡಿಗಳನ್ನು ನಿರ್ಮಿಸಿ, ಅವುಗಳಲ್ಲಿ ನೀರು ಸಂಗ್ರಹಿಸಿ ಮೀನು ಸಾಕಾಣಿಕೆ ನಡೆಸಿದ್ದರು.

೨೦೧೫-೧೬ ರ ಪ್ರಕಾರ ತಾಲ್ಲೂಕಿನಲ್ಲಿ ೨,೦೫೨ ಟನ್ ಮೀನುಗಳನ್ನು ಹಿಡಿದಿದ್ದು, ೫೫ ಪಂಚಾಯತ್‌ರಾಜ್ ಸಂಸ್ಥೆಗೆ ಸೇರಿದ ಕೆರೆಗಳು ಹಾಗೂ ಸಣ್ಣ ನೀರಾವರಿಗೆ ಸೇರಿದ ೨೮ ಕೆರೆಗಳಿವೆ. ತಾಲ್ಲೂಕಿನಲ್ಲಿ ಒಟ್ಟು ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ ೪೦೦ (ಪೂರ್ಣಕಾಲಿಕ), ಅರೆಕಾಲಿಕ ೫೦೦ ಕುಟುಂಬಗಳಿವೆ. ಮತ್ಸ್ಯಾಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ ೫ ಇದ್ದು, ೨೩.೪೯ ಲಕ್ಷ ಮೀನುಮರಿ ಬಿತ್ತನೆಯಾಗಿರುತ್ತದೆ.

**ಬರ-ಕ್ಷಾಮ** : ಬಹುಕಾಲ ಹರಪನಹಳ್ಳಿ ತಾಲ್ಲೂಕಿಗೆ ಬರ ತಾಕಿಲ್ಲ. ನಮ್ಮ ಪೂರ್ವಜರ ಕಾಲಕ್ಕೆ ಡೊಕ್ಕಿ-ಡೋವಿ ಬರಗಳು ಸುಮಾರು ೧೮೫೦-೧೯೦೦ ರಲ್ಲಿ ಬಿದ್ದದು ಆಹಾರವಿಲ್ಲದೆ ಬಹು ಜನರು ಮಡಿದದ್ದು ಹಿರಿಯರಿಂದ ಕೇಳಿ ತಿಳಿದ ವಿಷಯವಾಗಿದೆ. ಈಗ ಕೂಡಾ ಮುಂಗಾರು ಬೆಳೆಯಿಲ್ಲ. ಹಿಂಗಾರು ಬೆಳೆ ಸ್ವಲ್ಪ ಮಟ್ಟಿಗೆ ಬಂದು ಜನರಿಗೆ ನೆಮ್ಮದಿಯನ್ನು ತಂದಿದೆ (ಅಲ್ಲಲ್ಲಿ ಜಾನುವಾರುಗಳಿಗೆ ಕೇಂದ್ರಮಾಡಿ ಮೇವನ್ನು ಸರಕಾರ ಒದಗಿಸಿದ್ದಿತು).

**ನೆರೆ ಹಾವಳಿ** : ನೆರೆ ಹಾವಳಿ ನದಿ ದಂಡೆಯ ಗ್ರಾಮಗಳಿಗೆ ಎದುರಾಗುವುದು. ನಮಗೆ ತುಂಗಭದ್ರಾ ನದಿ ಇದೆ. ಆಗ ಸರಕಾರ ಅಲ್ಲಿ ವಾಸಿಸುವ ಜನರಿಗೆ ಎಚ್ಚರಿಕೆ ಕೊಡುವುದು.

## ಮೀನುಗಾರಿಕೆ

| | ೨೦೧೫-೧೬ |
|---|---|
| ೧) ಹಿಡಿದ ಮೀನುಗಳು (ಟನ್ನುಗಳಲ್ಲಿ) | ೨,೦೫೨ |
| ೨) ಕೆರೆಗಳ ಸಂಖ್ಯೆ(ಮೀನುಗಾರಿಕೆಗೆ ಸಂಬಂಧಿಸಿದಂತೆ) | |
| ಅ) ಪಂಚಾಯತ್ ರಾಜ್ ಸಂಸ್ಥೆಗೆ ಸೇರಿದ | ೫೫ |
| ಆ) ಸಣ್ಣ ನೀರಾವರಿಗೆ ಸೇರಿದ | ೨೮ |
| ೩) ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಸಂಖ್ಯೆ | |
| ಅ)ಪೂರ್ಣಕಾಲಿಕ | ४೦೦ |
| ಆ) ಅರೆಕಾಲಿಕ | ೫೦೦ |
| ४) ಮತ್ಸ್ಯಾಶ್ರಯ ಯೋಜನೆ ಫಲಾನುಭವಿಗಳ ಸಂಖ್ಯೆ | ೫ |
| ೫) ಮೀನು ಮರಿ ಬಿತ್ತನೆ ಸಂಖ್ಯೆ (ಲಕ್ಷಗಳಲ್ಲಿ) | ೨,೩४೯ |
| ೬) ಮೀನು ಮಾರುಕಟ್ಟೆಗಳ ಸಂಖ್ಯೆ | ೦ |

**ಮಾಹಿತಿ ಮೂಲ: ದಾವಣಗೆರೆ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫-೧೬.**

## ಅಧ್ಯಾಯ–೫

# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

**ಪ್ರಾ**ಚೀನ ಕೈಗಾರಿಕೆಗಳಾದ ಕುಂಬಾರಿಕೆ, ನೇಕಾರಿಕೆ, ಕಮ್ಮಾರಿಕೆ, ಇಟ್ಟಿಗೆ, ಸುಣ್ಣ, ಉಪ್ಪು, ಗಾಣ ಮೊದಲಾದ ಸಾಂಪ್ರದಾಯಿಕ ಕೈಗಾರಿಕೆಗಳ ಬಗ್ಗೆ ಶಾಸನಗಳಲ್ಲಿ ಪ್ರಸ್ತಾಪವಿದೆ. ರಾಜ್ಯ ಸರ್ಕಾರವು ಕೈಗಾರಿಕೀಕರಣ ಮಾಡಿ ೧೯೫೪–೫೫ ರಲ್ಲಿ ಜಾರಿಗೊಳಿಸಿತು. ರೇಷ್ಮೆ, ತೋಟಗಾರಿಕೆ, ಆಲೆಮನೆ, ಅಕ್ಕಿಗಿರಣಿ, ಎಣ್ಣೆ ಗಿರಣಿ, ಕೃಷಿ ಆಧಾರಿತ ಕೈಗಾರಿಕೆಗಳು, ಇಟ್ಟಿಗೆ, ಹೆಂಚು, ಬಿದಿರು ಉತ್ಪನ್ನ, ಬಡಗಿ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಸಾಮಿಲ್ಲು (ಮರಕೊಯ್ಯುವ ಕಾರ್ಖಾನೆ) ಮೊದಲಾದ ಉದ್ಯಮಗಳು ಈ ತಾಲ್ಲೂಕಿನಲ್ಲಿ ಕಂಡು ಬಂದಿವೆ. ಆದರೆ ತಾಲ್ಲೂಕಿನಲ್ಲಿ ಖನಿಜ ಸಂಪನ್ಮೂಲದ ಕೊರತೆ ಇದೆ. ಆದರೂ ವಿದ್ಯುತ್ ಪ್ರಧಾನ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು, ವಿಶೇಷ ರಿಯಾಯಿತಿ ಸವಲತ್ತುಗಳನ್ನು ನೀಡಲು ಸರ್ಕಾರ ಮುಂದಾಯಿತು. ಇದರ ಉಪಯೋಗ ಪಡೆದು ಅಲ್ಲಲ್ಲಿ ಸಕ್ಕರೆ ಕಾರ್ಖಾನೆಗಳು ತಾಲ್ಲೂಕಿನಲ್ಲಿ ಸ್ಥಾಪನೆಗೊಂಡವು.

### ಸಕ್ಕರೆ ಕಾರ್ಖಾನೆ

ತಾಲ್ಲೂಕಿನ ದುಗ್ಗಾವತಿ ಬಳಿ ೧೯೯೯ ರಲ್ಲಿ ಶಾಮನೂರು ಶಿವಶಂಕರಪ್ಪ ರವರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದರು. ಈ ಕಾರ್ಖಾನೆಯಲ್ಲಿ ೧) ಸಕ್ಕರೆ ೨) ಕಾಕಂಬಿ ೩) ಸಾವಯವ ಗೊಬ್ಬರವನ್ನು ಉತ್ಪಾದಿಸುವರು. ಅದೂ ಅಲ್ಲದೆ ೨೨ ಮೆಗಾವ್ಯಾಟ್ ವಿದ್ಯುತ್ ಉತ್ಪತ್ತಿ ಮಾಡುವರು. ಮಧ್ಯಸಾರ ಘಟಕವನ್ನು ಸ್ಥಾಪಿಸಿ ೬೦ ಕೆ.ಎಲ್.ಎ.ಐ. ತಯಾರಿಸುವರು. ಶಿವಶಂಕರಪ್ಪನವರ ಮಗನಾದ ಶ್ರೀ ಬಕ್ಕೇಶ ರವರು ಈ ಕಾರ್ಖಾನೆಯ ಮಾಲೀಕರಾಗಿರುತ್ತಾರೆ.

ಎರಡನೇಯದು ಚೆಂಡು ಹೂವಿನ ಕಾರ್ಖಾನೆ ಈ ತಾಲ್ಲೂಕಿನ ತೆಲಗಿ ಗ್ರಾಮದಲ್ಲಿ ೧೯೯೭ ರಲ್ಲಿ ಸ್ಥಾಪನೆಯಾಯಿತು. ಮೊದ ಮೊದಲು ಇದರ ಹೆಸರು ಅಗ್ರೋ ಬಯೋ ಕೆಮಿಕಲ್ಸ್ ಲಿಮಿಟೆಡ್ ಎಂಬುದಾಗಿದ್ದಿತು. ನಂತರ ಶ್ರೀ ರಮೇಶ

ವಂಗಲ್ ಎಂಬುವವರು ಖಾಸಗಿ ಒಡತನದಲ್ಲಿ ಸ್ಥಾಪಿಸಿದರು. ಈಗ ಕಟ್ರಿ ಪ್ರೈವೇಟ್ ಲಿಮಿಟೆಡ್ ಎಂದು ಹೆಸರು ಬದಲಾಯಿಸಲಾಗಿದೆ. ಇಲ್ಲಿ ಬಯೋರೇಜಿನ್ ಲೂನಿಸ್ ಈಥೇನ್ ಎಂಬುದನ್ನು ಉತ್ಪಾದಿಸಲಾಗುತ್ತಿದೆ. ಕಣ್ಣಿನ ಮತ್ತು ನರಕೋಶ ಸಂಬಂಧಿ ಕಾಯಿಲೆಗೆ ಔಷಧಿ ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. ಇದು ದೇಶೀಯ ಮೌಲ್ಯಾಧಾರಿತ ವಸ್ತುಗಳ ತಯಾರಿಕೆಗೆ ಉಪಯುಕ್ತವಾಗಿದೆ. ಇದನ್ನು ಹೊರ ರಾಷ್ಟ್ರಗಳಿಗೆ ರಫ್ತು ಮಾಡುವರು. ಇದಕ್ಕೆ ಬೇಕಾಗುವ ಕಚ್ಚಾ ವಸ್ತುವನ್ನು ಹೊಲಗಳಲ್ಲಿ ಬೆಳೆಯಲು ರೈತರಿಗೆ ಕಿಲೋಗೆ ಇಂತಿಷ್ಟು (ನಿಗದಿತ) ಹಣ ಕೊಟ್ಟು ಪಡೆಯುತ್ತಿದ್ದರು.

## ಕರಕುಶಲ ಕೈಗಾರಿಕೆ

ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಂಪ್ರದಾಯಿಕ ಹಾಗೂ ಕರಕುಶಲ ಕೈಗಾರಿಕೆಗಳು ಬಹಳ ಹಿಂದಿನಿಂದಲೂ ಬೆಳೆದು ಬಂದಿವೆ. ಬಹಳಷ್ಟು ಕುಶಲಕರ್ಮಿಗಳು ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿದ್ದು, ವ್ಯವಸಾಯದ ಜೊತೆಗೆ ಅನುವಂಶಿಕವಾಗಿ ಬಂದಿದ್ದು, ಕುಲಕಸುಬನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕಮ್ಮಾರ, ಚಮ್ಮಾರ, ಬಡಗಿ, ಅಕ್ಕಸಾಲಿಗ ಮತ್ತು ಕಂಚುಗಾರರು ತಾಲ್ಲೂಕಿನಲ್ಲಿ ಕಂಡು ಬರುವ ಪ್ರಮುಖ ಕರಕುಶಲ ಕರ್ಮಿಗಳಾಗಿದ್ದರು.

ಈ ತಾಲ್ಲೂಕಿನಲ್ಲಿ ಮರಕೆತ್ತನೆ, ಬಾಗಿಲು ಚೌಕಟ್ಟು, ಮಂಚ, ಕುರ್ಚಿಗಳನ್ನು ತಯಾರಿಸುವ ಬಡಗಿಗಳಿರುವರು. ರೈತರಿಗೆ ಉಪಯುಕ್ತ ಕಬ್ಬಿಣದ ಕುಡುಗೋಲು ಸಾಮಾನುಗಳನ್ನು ತಯಾರಿಸುತ್ತಾರೆ. ಅವರಿಗೆ ಪ್ರೋತ್ಸಾಹ ಕಡಿಮೆ. ಆರು ದಶಕಗಳ ಹಿಂದೆ ಸೋಮ ಶಿಲ್ಪಿ ಎಂಬುವವರು ಈ ಊರಿನಲ್ಲಿದ್ದು, ಅವರು ಕಲ್ಲಿನಲ್ಲಿ ಉತ್ತಮ ಗುಣಮಟ್ಟದ ದೇವರ ಮೂರ್ತಿಗಳನ್ನು ರಚಿಸುತ್ತಿದ್ದರು. ಈ ವೃತ್ತಿಯನ್ನು ಅವರ ಮಕ್ಕಳು ಮತ್ತು ಅಳಿಯಂದಿರು ಮುಂದುವರೆಸಿಕೊಂಡು ಬರುತ್ತಿದ್ದು, ಅವರು ಒಳ್ಳೇ ಮೂರ್ತಿಗಳನ್ನು ರೂ. ೪೦,೦೦೦ – ರೂ. ೫೦,೦೦೦ ಗಳಿಗೆ ರಚಿಸಿ ಮಾರುವರು. ಇದೇ ತಾಲ್ಲೂಕಿನ ಯರಬಳ್ಳಿ ಗ್ರಾಮದಲ್ಲಿ ಬಹು ಜನರು ಕಲ್ಲಿನ ದೋಸೆಮಣೆ, ಚಿಕ್ಕ–ಚಿಕ್ಕ ಮೂರ್ತಿಗಳನ್ನು ರಚಿಸುವರು. ಬಳಪದ ಕಲ್ಲಿನಲ್ಲಿಯು ಕೆಲ ಗೃಹ ಉಪಯೋಗಿ ವಸ್ತುಗಳನ್ನು ರಚಿಸುವರು. ಇದೇ ತಾಲ್ಲೂಕಿನ ಮಾಡಲಗೇರಿ ಗ್ರಾಮದಲ್ಲಿ ಕಬ್ಬಿಣದ ಚಿಕ್ಕ ಸಾಮಾನುಗಳನ್ನು ತಯಾರಿಸುವರು.

## ರೇಷ್ಮೆ ಕೈಗಾರಿಕೆ

ರೇಷ್ಮೆಯು ರಾಜ್ಯದ ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಟಿಪ್ಪುಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಘಟಕವನ್ನು ಸ್ಥಾಪಿಸಿ, ಚೀನಾದಿಂದ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ

ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ಹುಳುಗಳ ತಳಿಗಳನ್ನು ಇಟಲಿಯಿಂದ ತರಿಸಿ ಅಭಿವೃದ್ಧಿಪಡಿಸಲಾಯಿತು. ೧೯೧೫ರಲ್ಲಿ ಮೈಸೂರು ತಳಿ ಮತ್ತು ಇಟಲಿಯ ತಳಿಯನ್ನು ಸೇರಿಸಿ ಅಧಿಕ ಇಳುವರಿಯ ಮಿಶ್ರತಳಿಯನ್ನು ಪಡೆಯಲಾಯಿತು. ಇದೇ ಕಾಲಾವಧಿಯಲ್ಲಿ ಅನೇಕ ರೇಷ್ಮೆ ಕೃಷಿ ಮತ್ತು ಹುಳು ಸಾಕಾಣೆ ಕೇಂದ್ರಗಳು ಪ್ರಾರಂಭಗೊಂಡವು. ರೇಷ್ಮೆ ಕೈಗಾರಿಕೆಯು ಪ್ರಧಾನವಾಗಿ ಹಿಪ್ಪುನೇರಳೆಯನ್ನು ಬೆಳೆಯುವುದು, ರೇಷ್ಮೆ ಹುಳುಗಳನ್ನು ಸಾಕುವುದು ಮತ್ತು ನೂಲು ತಯಾರಿಸುವ ಕಾರ್ಯಗಳನ್ನೊಳಗೊಂಡಿದೆ. ಮೊದಲೆರಡು ಕಾರ್ಯಗಳು ಕೃಷಿಯ ವ್ಯಾಪ್ತಿಗೊಳಪಟ್ಟಿದ್ದರೆ, ಮೂರನೆಯದು ಸಂಪೂರ್ಣವಾಗಿ ಕೈಗಾರಿಕಾ ವ್ಯಾಪ್ತಿಗೊಳಪಟ್ಟಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ೨೦೦೭-೦೮ರಲ್ಲಿ ೯೫.೨೦ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯಲಾಗಿತ್ತು. ೪೯ ಗ್ರಾಮಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, ರೂ. ೫೯.೪೦ ಲಕ್ಷ ಮೌಲ್ಯದ ೩೬.೨೪ ಟನ್ ರೇಷ್ಮೆಗೂಡು ಉತ್ಪಾದಿಸಿದರು. ಹಾಗೆಯೇ ೨೦೧೪-೧೫ರಲ್ಲಿ ೨೮ ಗ್ರಾಮಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದವು. ತಾಲ್ಲೂಕಿನಲ್ಲಿ ೧೨೩.೩೦ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆದು, ರೂ. ೨೩೬.೩೪ ಲಕ್ಷ ಮೌಲ್ಯದ ೫೭.೭೧೧ ಟನ್ ರೇಷ್ಮೆ ಉತ್ಪಾದಿಸಲಾಗಿತ್ತು. ರೇಷ್ಮೆ ಕೃಷಿಯಲ್ಲಿ ೧೦ ಮಂದಿ ಪರಿಶಿಷ್ಟ ಜಾತಿ, ೦೫ ಮಂದಿ ಪರಿಶಿಷ್ಟ ಪಂಗಡದವರು, ೧೫೧ ಮಂದಿ ಇತರರು ಒಟ್ಟು ೧೬೬ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದರು. ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಸಹಾಯ ಪಡೆದ ರೈತರ ಸಂಖ್ಯೆ ೧೧೬ ಆಗಿತ್ತು.

೨೦೧೫-೧೬ರಲ್ಲಿ ೩೯ ಗ್ರಾಮಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದವು. ತಾಲ್ಲೂಕಿನಲ್ಲಿ ೧೫೦.೨೦ ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆದು, ರೂ. ೨೫೪.೮೪ ಲಕ್ಷ ಮೌಲ್ಯದ ೮೪.೦೧ ಟನ್ ರೇಷ್ಮೆ ಉತ್ಪಾದಿಸಲಾಗಿತ್ತು. ರೇಷ್ಮೆ ಕೃಷಿಯಲ್ಲಿ ೧೦ ಮಂದಿ ಪರಿಶಿಷ್ಟ ಜಾತಿ, ೦೫ ಮಂದಿ ಪರಿಶಿಷ್ಟ ಪಂಗಡದವರು, ೧೫೧ ಮಂದಿ ಇತರರು ಒಟ್ಟು ೧೬೬ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದರು. ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಸಹಾಯ ಪಡೆದ ರೈತರ ಸಂಖ್ಯೆ ೧೬ ಆಗಿತ್ತು. ತಾಲ್ಲೂಕಿನಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಇಲ್ಲದೆ ರೈತರು ರೇಷ್ಮೆಗೂಡು ಮಾರಾಟಕ್ಕಾಗಿ ಬೇರೆ ಬೇರೆ ಮಾರುಕಟ್ಟೆಗಳಿಗೆ ಹೋಗಬೇಕಾಗಿದೆ.

## ಸಣ್ಣ ಪ್ರಮಾಣದ ಕೈಗಾರಿಕೆಗಳು

ಹರಪನಹಳ್ಳಿ ತಾಲ್ಲೂಕಿನಲ್ಲಿ ೨೦೦೭-೦೮ನೇ ಸಾಲಿನಲ್ಲಿ ೨೫ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಂಡು, ೭೭ ಮಂದಿಗೆ ಉದ್ಯೋಗ ನೀಡಿದ್ದವು.

ಹಾಗೆಯೇ ೨೦೧೫-೧೬ನೇ ಸಾಲಿನಲ್ಲಿ ೦೭ ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಗೊಂಡಿದ್ದು, ೭೦ ಮಂದಿಗೆ ಉದ್ಯೋಗ ಕಲ್ಪಿಸಿದ್ದವು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

**ದಾವಣಗೆರೆ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಹರಪನಹಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ನೋಂದಣಿಗೊಂಡ ಸಣ್ಣ ಪ್ರಮಾಣ ಕೈಗಾರಿಕೆಗಳ ವಿವರ**

| ಕ್ರ ಸಂ | ವಿವರ | | ೨೦೦೭-೦೮ | ೨೦೧೪-೧೫ | ೨೦೧೫-೧೬ |
|---|---|---|---|---|---|
| ೧ | ಆಟೋಮೋಬೈಲ್ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |
| ೨ | ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ | ಸಂಖ್ಯೆ | ೦ | ೦ | ೨ |
| | | ಕೆಲಸಗಾರರು | ೦ | ೦ | ೧೨ |
| ೩ | ಕೆಮಿಕಲ್ಸ್ | ಸಂಖ್ಯೆ | ೦ | ೦ | ೧ |
| | | ಕೆಲಸಗಾರರು | ೦ | ೦ | ೨೦ |
| ೪ | ಫೆರಸ್ ಮತ್ತು ನಾನ್ ಫೆರಸ್ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |
| ೫ | ಆಹಾರ ಮತ್ತು ಮಾದಕ ವಸ್ತುಗಳು | ಸಂಖ್ಯೆ | ೦ | ೩ | ೧ |
| | | ಕೆಲಸಗಾರರು | ೦ | ೧೩ | ೧೬ |
| ೬ | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |
| ೭ | ಜಾಬ್ ವರ್ಕ್ಸ್ ಮತ್ತು ರಿಪೇರಿ | ಸಂಖ್ಯೆ | ೨೦ | ೦ | ೦ |
| | | ಕೆಲಸಗಾರರು | ೪೪ | ೦ | ೦ |
| ೮ | ಚರ್ಮ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |

| | | | | | |
|---|---|---|---|---|---|
| ೯ | ಮೆಕ್ಯಾನಿಕಲ್ ಇಂಜಿನಿಯರಿಂಗ್ | ಸಂಖ್ಯೆ | ೨ | ೦ | ೦ |
| | | ಕೆಲಸಗಾರರು | ೧೬ | ೦ | ೦ |
| ೧೦ | ಕಾಗದ ಮತ್ತು ಮುದ್ರಣ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |
| ೧೧ | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ | ೦ | ೦ | ೦ |
| | | ಕೆಲಸಗಾರರು | ೦ | ೦ | ೦ |
| ೧೨ | ಟೆಕ್ಸ್‌ಟೈಲ್ಸ್ | ಸಂಖ್ಯೆ | ೧ | ೨ | ೧ |
| | | ಕೆಲಸಗಾರರು | ೧೨ | ೫ | ೪ |
| ೧೩ | ಮರ | ಸಂಖ್ಯೆ | ೧ | ೦ | ೨ |
| | | ಕೆಲಸಗಾರರು | ೨ | ೦ | ೧೮ |
| ೧೪ | ಇತರೆ | ಸಂಖ್ಯೆ | ೧ | ೯ | ೦ |
| | | ಕೆಲಸಗಾರರು | ೩ | ೩೦ | ೦ |

**ಆಧಾರ: ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ.**

**ಬೀಡಿ ಉದ್ಯಮ**

ಈ ತಾಲ್ಲೂಕಿನಲ್ಲಿ ೧೯೯೦ ರಲ್ಲಿ ಬೀಡಿ ತಯಾರಿಸುವ ಕಂಪನಿಗಳಿದ್ದವು. ಪ್ರಸ್ತುತ ೧) ಶಾಸ್ತ್ರಿ ಬೀಡಿ ೨) ಲೈಟ್ ಬೀಡಿ ಕಂಪನಿಗಳು ಉಳಿದಿವೆ. ಇದರಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಎರಡೂ ಸೇರಿ ೨೫ ಜನರು. ಇನ್ನು ಬಾತಿಯಿಂದ ಗಣೇಶ ಬೀಡಿ, ಇತರೆ ಬೀಡಿಗಳನ್ನು ಕಟ್ಟುವ ಕಾರ್ಮಿಕರು ಹರಪನಹಳ್ಳಿ ಪಟ್ಟಣದಲ್ಲಿ ಸುಮಾರು ೨೨೦೦ ಜನರಿರುವರು. ಪ್ರತಿ ವಾರಕ್ಕೆ ಅವರಿಗೆ ಏಜೆಂಟರ ಮೂಲಕ ಹಣ ಬಟವಾಡೆ ಮಾಡಲಾಗುವುದು. ಬೀಡಿ ಕಾರ್ಮಿಕರಿಗೆ ವರ್ಷಕ್ಕೊಮ್ಮೆ ಬೋನಸ್ಸು ಕೊಡುವರು. ಗಣೇಶ ಬೀಡಿ ಏಜೆಂಟರು ದಾವಣಗೆರೆ ಜಿಲ್ಲೆಯ ದೊಡ್ಡಬಾತಿಯವರಾಗಿದ್ದು, ಅವರು ಹರಪನಹಳ್ಳಿ ತಾಲ್ಲೂಕಿನಲ್ಲಿಯ ಕಾರ್ಮಿಕರಿಗೆ ಎಲೆ ಮತ್ತು ತಂಬಾಕು ಒದಗಿಸಿ ತಯಾರಾದ ಒಂದು ಸಾವಿರ ಬೀಡಿಗೆ ರೂ.೧೧೦ ರಂತೆ ಹಣವನ್ನು ಪಾವತಿಸುವರು. ಹರಪನಹಳ್ಳಿ ಪಟ್ಟಣದಲ್ಲಿ ೭೫೦, ಕುಂಚೂರು ಗ್ರಾಮದಲ್ಲಿ ೫೦, ಮಾದಿಹಳ್ಳಿ ಗ್ರಾಮದಲ್ಲಿ ೨೦, ತೆಲಗಿ ಗ್ರಾಮದಲ್ಲಿ ೪೦, ಉಚ್ಚಂಗಿ ದುರ್ಗದಲ್ಲಿ ೬೫, ಅರಸೀಕೆರೆ ಗ್ರಾಮದಲ್ಲಿ ೬೦, ಹೀಗೆ ತಾಲ್ಲೂಕಿನಲ್ಲಿ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ೯೮೫ ಆಗಿದ್ದು, ಇವರಲ್ಲಿ ಬಹುತೇಕರು ಮುಸ್ಲಿಂ ಮಹಿಳೆಯರು ಆಗಿದ್ದರು.

## ವಿದ್ಯುತ್ ಕೈಗಾರಿಕೆ

ವಿದ್ಯುತ್ ಕೈಗಾರಿಕೆಯ ಅಭಿವೃದ್ಧಿಗೆ ಪೂರಕವಾಗಿದ್ದು, ಶಿಂಷಾ, ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹಾಗೂ ರಾಯಚೂರು ಕಲ್ಲಿದ್ದಲು ಘಟಕಗಳಿಂದ ತಾಲ್ಲೂಕಿಗೆ ವಿದ್ಯುತ್ ಸರಬರಾಜಾಗುತ್ತಿದೆ. ನೀರಾವರಿ, ವಾಣಿಜ್ಯ, ಬೀದಿ ದೀಪ, ಜನವಸತಿ ದೀಪ ಹೀಗೆ ವಿದ್ಯುತ್ ಬಹು ಉಪಯುಕ್ತವಾಗಿದೆ. ೨೦೧೪–೧೫ ರಲ್ಲಿ ತಾಲ್ಲೂಕಿನಲ್ಲಿ ವಿದ್ಯುತ್‌ಶಕ್ತಿಯಿಂದ ಬಂದ ಆದಾಯ ರೂ. ೪೮೨೭.೩೯ ಲಕ್ಷಗಳಾಗಿದ್ದರೆ, ಇದು ೨೦೧೫–೧೬ ರಲ್ಲಿ ರೂ. ೫೯೦೮.೨೮ ಲಕ್ಷಗಳಾಗಿತ್ತು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

**ಹರಪನಹಳ್ಳಿ ತಾಲ್ಲೂಕಿನ ವಲಯವಾರು ವಿದ್ಯುತ್ ಬಳಕೆದಾರರ(ಸಂಖ್ಯೆಗಳಲ್ಲಿ) ವಿವರ**

| ಕ್ರ. ಸಂ. | ವಿವರಗಳು | | ೨೦೦೭–೦೮ | ೨೦೧೪–೧೫ | ೨೦೧೫–೧೬ |
|---|---|---|---|---|---|
| ೧ | ಗೃಹಬಳಕೆ | ಸಂಖ್ಯೆ | ೨೪,೬೫೫ | ೫೮,೨೯೫ | ೫೯,೫೫೧ |
| | | ಯೂನಿಟ್ | ೭೧.೮ | ೨೧.೨೩ | ೨೦.೦೮ |
| ೨ | ಕೈಗಾರಿಕೆ | ಸಂಖ್ಯೆ | ೫೫೫ | ೯೯೫ | ೧೦೮೭ |
| | | ಯೂನಿಟ್ | ೪೨.೫ | ೨.೮೪ | ೩.೩೭ |
| ೩ | ವಾಣಿಜ್ಯ ಬಳಕೆ | ಸಂಖ್ಯೆ | ೧೯೯೨ | ೩೧೧೪ | ೩೨೭೯ |
| | | ಯೂನಿಟ್ | ೧೩ | ೩.೭೮ | ೩.೯೭ |
| ೪ | ನೀರಾವರಿ ಐ.ಪಿ. ಸೆಟ್ಟುಗಳು | ಸಂಖ್ಯೆ | ೧೧,೯೩೬ | ೧೭,೭೪೧ | ೧೭,೭೪೧ |
| | | ಯೂನಿಟ್ | ೮೧೪.೩ | ೧೨೬.೧೩ | ೧೪೩೬.೮೫ |
| ೫ | ದಾರಿ ದೀಪಗಳು | ಸಂಖ್ಯೆ | ೪೧೭ | ೦ | ೦ |
| | | ಯೂನಿಟ್ | ೨.೯ | ೨.೧೫ | ೨.೧೩ |
| ೬ | ಇತರೆ | ಸಂಖ್ಯೆ | ೦ | ೧,೭೮೦ | ೧೯,೭೩೩ |
| | | ಯೂನಿಟ್ | ೬೨.೭ | ೮.೯೪ | ೧೦.೨೬ |
| **ಒಟ್ಟು** | | **ಸಂಖ್ಯೆ** | **೩೯,೫೫೫** | **೮೧,೯೨೫** | **೧,೦೧,೩೯೧** |
| | | **ಯೂನಿಟ್** | **೧೦೦೭.೨೦** | **೧೬೫.೦೭** | **೧೮೬.೬೬** |

ಆಧಾರ: ದಾವಣಗೆರೆ ಜಿಲ್ಲಾ ಅಂಕಿ ಅಂಶಗಳ ನೋಟ.

ಸೂಚನೆ: ೨೦೦೭–೦೮ ರ ವಿದ್ಯುತ್ ಬಳಕೆ ಲಕ್ಷ ಯೂನಿಟ್‌ಗಳಲ್ಲೂ, ೨೦೧೪–೧೫,

೨೦೧೫–೧೬ ರಲ್ಲಿ ಮಿಲಿಯನ್ ಯೂನಿಟ್‌ಗಳಲ್ಲೂ ನೀಡಿದೆ.

## ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

### ಕೈಗಾರಿಕಾ ನೀತಿ–೨೦೧೪–೧೯

ರಾಜ್ಯ ಸರ್ಕಾರವು ೧೯೮೮, ೧೯೯೦, ೧೯೯೩, ೧೯೯೬, ೧೯೯೮, ೨೦೦೧, ೨೦೦೬, ೨೦೦೯–೧೪ ಹಾಗೂ ೨೦೧೪–೧೯ರ ಕೈಗಾರಿಕಾ ನೀತಿಗಳಲ್ಲಿ ಹೆಚ್ಚು ಸವಲತ್ತು ಮತ್ತು ವಿಶೇಷ ರಿಯಾಯಿತಿಗಳನ್ನು ಘೋಷಿಸಿತು. ಆದ್ದರಿಂದ ದೊಡ್ಡ, ಮಧ್ಯಮ, ಸಣ್ಣ ಮತ್ತು ಅತೀ ಸಣ್ಣ ಪ್ರಮಾಣಗಳ ಕೈಗಾರಿಕೆ ಸ್ಥಾಪನೆಗೆ ಅವಕಾಶ ದೊರೆಯಿತು. ೨೦೧೪–೧೯ರ ಕೈಗಾರಿಕಾ ನೀತಿಯಂತೆ ಹರಪನಹಳ್ಳಿ ತಾಲ್ಲೂಕು ಹೈದರಾಬಾದ್ ಕರ್ನಾಟಕೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳಲ್ಲಿ ಪ್ರವರ್ಗ–೧ ಕ್ಕೆ ಸೇರಿದೆ.

### ದೃಷ್ಟಿಕೋನ

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಿ ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

### ಧ್ಯೇಯ

- ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ, ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು.
- ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
- ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.
- ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

### ಉದ್ದೇಶಗಳು

- ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ. ೧೨ ರ ಗತಿಯಲ್ಲಿ ಮುಂದುವರೆಸುವುದು.
- ರಾಜ್ಯ ಜಿ.ಡಿ.ಪಿ ಯಲ್ಲಿ ಪ್ರಸಕ್ತ ಶೇ. ೧೬.೮೭ ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ ಶೇ.೨೦ ಕ್ಕೆ ಹೆಚ್ಚಿಸುವುದು.

- ರೂ. ೫ ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು.
- ೧೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು. ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ–ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು.

**ಕಾರ್ಯತಂತ್ರಗಳು**

- ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು
- ಸಾಮರ್ಥ್ಯ ವರ್ಧನೆ ಮತ್ತು ಕುಶಲತೆಯ ಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು
- ಅನುಕೂಲಕರ ವ್ಯವಸ್ಥೆ ಮತ್ತು ನೀತಿ ನಿಯಮಗಳ ಸುಧಾರಣೆ
- ತಾಲ್ಲೂಕುಗಳ ವರ್ಗೀಕರಣ
- ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನ
- ಎಮ್.ಎಸ್.ಎಮ್.ಇ ಗಳಿಗೆ ಉತ್ತೇಜನ
- ಪರಿಶಿಷ್ಟಜಾತಿ/ ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು
- ಮಹಿಳಾ ಉದ್ಯಮಶೀಲರಿಗೆ ಉತ್ತೇಜನ
- ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿ ಯೋಧ ಉದ್ಯಮಶೀಲರಿಗೆ ಉತ್ತೇಜನ
- ಅನಿವಾಸಿ ಕನ್ನಡಿಗರಿಗೆ (ಎನ್ ಆರ್‌ಕೆ ಗಳು) ಉತ್ತೇಜನ
- ರಫ್ತು ವಲಯಕ್ಕೆ ಉತ್ತೇಜನ
- ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ
- ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ
- ಪರಿಸರಸ್ನೇಹಿ ಹಸಿರು ಮತ್ತು ಸ್ವಚ್ಛ ಯೋಜನೆಗಳಿಗೆ ಉತ್ತೇಜನ
- ಆರ್ ಅಂಡ್ ಡಿ ಹಾಗೂ ಡಿಜಿಟಲ್ ಡೈರೆಕ್ಟ್ ತಯಾರಿಕೆಗೆ ಬೆಂಬಲ
- ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉಪಕ್ರಮ
- ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ
- ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ
- ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು
- ಪ್ರಮುಖ ಒತ್ತಾಸೆಯ ಕೈಗಾರಿಕೆಗಳು
- ಆಯವ್ಯಯದ ಬೆಂಬಲ

## ಕೈಗಾರಿಕಾ ಕಾರಿಡಾರ್‌ಗಳ ಸ್ಥಾಪನೆ

- ಚೆನ್ನೈ– ಬೆಂಗಳೂರು– ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು–ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ)–ಇವುಗಳ ಮೇಲಿನ ಕಾರ್ಯವನ್ನು ದೆಹಲಿ–ಮುಂಬೈ ಕೈಗಾರಿಕಾ ಕಾರಿಡಾರ್ ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್ ನ್ಯಾಷನಲ್ ಕೋ–ಆಪರೇಷನ್ ಏಜೆನ್ಸಿ (ಜೆಐಸಿಎ)ಗಳನ್ನು ಸ್ಥಾಪಿಸಲು ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.

  i) ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ

  ii) ಚಿತ್ರದುರ್ಗ–ಬಳ್ಳಾರಿ–ಕಲಬುರಗಿ–ಬೀದರ್

  iii) ಧಾರವಾಡ–ಕೊಪ್ಪಳ–ರಾಯಚೂರು

  iv) ಬೆಂಗಳೂರು–ಹಾಸನ–ಮಂಗಳೂರು

  v) ಚಿತ್ರದುರ್ಗ–ಹಾವೇರಿ–ಕಾರವಾರ

  vi) ತುಮಕೂರು–ಶಿವಮೊಗ್ಗ–ಹೊನ್ನಾವರ

  vii) ರಾಯಚೂರು–ಬಾಗಲಕೋಟೆ–ಬೆಳಗಾವಿ

- ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ ಕಾರಿಡಾರ್ ಜ್ಞಾನ ಆಧಾರಿತ ಕೈಗಾರಿಕಾ ಕಾರಿಡಾರ್ ಆಗಿ ಸ್ಥಾಪಿತವಾಗಲು ಸೂಕ್ತವಾಗಿದೆ.
- ಭಾರತ ಸರ್ಕಾರವು ತುಮಕೂರು, ಕೋಲಾರ, ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತು ಉತ್ಪಾದನಾ ವಲಯಗಳ (ಎನ್‌ಐಎಮ್‌ಜೆಡ್) ಸ್ಥಾಪನೆಗೆ ತತ್ವಶಃ ಅನುಮತಿ ನೀಡಿದೆ. ಸಿಬಿಸಿಐಸಿ/ ಎಸ್‌ಐಸಿ ಯ ಉದ್ದಕ್ಕೆ ಈ ಸ್ಥಳಗಳಲ್ಲಿನ ಎನ್‌ಐಎಮ್‌ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.
- ಎನ್‌ಐಎಮ್‌ಜಡ್‌ಗಳನ್ನು ಭಾರತ ಸರ್ಕಾರದ ರಾಷ್ಟ್ರೀಯ ಉತ್ಪಾದನಾ ನೀತಿಯ ಮಾರ್ಗದರ್ಶನಗಳಡಿ ವಿಶೇಷ ಉದ್ದೇಶದ ಸಂಸ್ಥೆಗಳ (ಎಸ್‌ಪಿವಿಗಳು) ಮುಖೇನ ಅಭಿವೃದ್ಧಿಪಡಿಸಲಾಗುವುದು. ರಾಜ್ಯ ಸರ್ಕಾರವು ಈ ಎಸ್‌ಪಿವಿಗಳನ್ನು ಈಕ್ವಿಟಿ ಭಾಗವಹಿಸುವಿಕೆಯ ಮೂಲಕ (ಪ್ರತಿ ಎನ್‌ಐಎಮ್‌ಜೆಡ್‌ಗಾಗಿ ರೂ.೫೦೦ ಕೋಟಿ ಮೀರದಂತೆ) ಬೆಂಬಲಿಸುತ್ತದೆ. ಎಸ್‌ಪಿವಿಗಳು ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಸಾಧ್ಯವಾಗಿಸಲು ರಾಜ್ಯವು ಅಗತ್ಯ ಕಾನೂನುಗಳನ್ನು ಜಾರಿಗೊಳಿಸುತ್ತದೆ.

- ರಸ್ತೆಗಳು, ನೀರು ಪೂರೈಕೆ, ವಿದ್ಯುತ್ ಮತ್ತು ಬಂದರುಗಳಿಗೆ ಒಳಪಟ್ಟಂತೆ ಕೈಗಾರಿಕಾ ಮೂಲವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವತ್ತ ಹೆಚ್ಚುವರಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು ಪಿಪಿಪಿ ವಿಧಾನವನ್ನು ಪ್ರೋತ್ಸಾಹಿಸಲಾಗುವುದು.
- ರಾಜ್ಯ ಸರ್ಕಾರವು ಮಂಗಳೂರು ಬಂದರು ಸಾಮರ್ಥ್ಯವನ್ನು ಗರಿಷ್ಠವಾಗಿ ಬಳಸಿಕೊಂಡು, ತದಡಿ ಬಂದರನ್ನು ಸರ್ವ ಋತುಗಳ ಬಂದರಾಗಿ ಅಭಿವೃದ್ಧಿಪಡಿಸುತ್ತದೆ. ನವ ಮಂಗಳೂರಿನ ಬಂದರನ್ನು ಆಧುನೀಕರಿಸಿ, ಎನ್.ಐ.ಎಮ್.ಜೆಡ್ ತುಮಕೂರು ಮತ್ತು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವುದನ್ನು ಸಿಬಿಸಿಐಸಿ ಯೋಜನೆಯ ಒಂದು ಮುಖ್ಯ ಅಂಗವನ್ನಾಗಿ ಮಾಡಲಾಗುವುದು.

**ತಾಲ್ಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ**

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲ್ಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದುಬಂದಿದೆ.

- ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲ್ಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲ್ಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ.
- ಸಂವಿಧಾನದ ಅನುಚ್ಛೇದ ೩೭೧(ಜೆ)ನ ಕಲಂಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್ ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್–ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್–ಕರ್ನಾಟಕಯೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ.
- ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲ್ಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ

ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ.

i) ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ೨ ವಲಯಗಳಾಗಿ ಅಂದರೆ ಹೆಚ್‌ಕೆ ವಲಯ-೧ ಮತ್ತು ಹೆಚ್‌ಕೆವಲಯ-೨ ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್-ಕರ್ನಾಟಕಯೇತರ ಪ್ರದೇಶದಲ್ಲಿನ ತಾಲ್ಲೂಕುಗಳನ್ನು ೪ ವಲಯಗಳಾಗಿ ಅಂದರೆ ವಲಯ-೧, ೨, ೩, ಮತ್ತು ೪ ಎಂದು ವರ್ಗೀಕರಿಸಲಾಗಿದೆ.

iii) ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ವಲಯ-೧ ರಲ್ಲೂ, ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದಿರುವ ತಾಲ್ಲೂಕುಗಳನ್ನು ವಲಯ-೨ ರಲ್ಲೂ, ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳನ್ನು ವಲಯ-೩ ರಲ್ಲೂ ಮತ್ತು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳನ್ನು ವಲಯ-೪ ಕ್ಕೆ ಸೇರಿಸಲಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕೆಯಲ್ಲಿ ಅತ್ಯಂತವಾಗಿ ಹಿಂದುಳಿದ ತಾಲ್ಲೂಕುಗಳನ್ನು ಹೆಚ್‌ಕೆ ವಲಯ-೧ ಕ್ಕೂ ಮತ್ತು ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದ ತಾಲ್ಲೂಕುಗಳನ್ನು ಹೆಚ್‌ಕೆವಲಯ-೨ ಕ್ಕೆ ಸೇರಿಸಲಾಗಿದೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ-೨ ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲ್ಲೂಕುಗಳನ್ನು ವಲಯ-೩ಕ್ಕೆ ಒಳಪಡಿಸಲಾಗಿದೆ.

v) ತಾಲ್ಲೂಕುಗಳ ವರ್ಗೀಕರಣ ಈ ಕೆಳಗಿನಂತೆ ಇದೆ:

ಹೈದರಾಬಾದ್-ಕರ್ನಾಟಕಯೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳನ್ನು ನಾಲ್ಕು ವಲಯಗಳನ್ನಾಗಿ ಅಂದರೆ ವಲಯ-೧,೨,೩ ಮತ್ತು ೪ ಎಂದು ವರ್ಗೀಕರಿಸಲಾಗಿದೆ. ಅದರಂತೆ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಚನ್ನಗಿರಿ ಹಾಗೂ ಜಗಳೂರು ತಾಲ್ಲೂಕುಗಳನ್ನು ವಲಯ-೧ಕ್ಕೆ ಸೇರಿಸಲಾಗಿದೆ. ವಲಯ-೧ರಲ್ಲಿ ಬರುವ ತಾಲ್ಲೂಕುಗಳು ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿವೆ. ಕೈಗಾರಿಕೆಗಳಲ್ಲಿ ಸ್ವಲ್ಪ ಹಿಂದುಳಿದ ತಾಲ್ಲೂಕುಗಳನ್ನು ವಲಯ-೨ಕ್ಕೆ ಸೇರಿಸಲಾಗಿದೆ. ಹೊನ್ನಾಳಿ ತಾಲ್ಲೂಕು ವಲಯ-೨ ಕ್ಕೆ ಸೇರಿದೆ. ವಲಯ-೩ರಲ್ಲಿ ಬರುವ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಿದೆ. ವಲಯ-೩ಕ್ಕೆ ದಾವಣಗೆರೆ ಹಾಗೂ ಹರಿಹರ ತಾಲ್ಲೂಕುಗಳು ಸೇರಿವೆ. ವಲಯ-೪ರಲ್ಲಿ ಬರುವ ತಾಲ್ಲೂಕುಗಳನ್ನು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳೆಂದು ಪರಿಗಣಿಸಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ವಲಯ-೪ಕ್ಕೆ ಸೇರಿದ ಯಾವುದೇ ತಾಲ್ಲೂಕುಗಳಿರುವುದಿಲ್ಲ.

| ಕ್ರ. ಸಂ. | ಜಿಲ್ಲೆಗಳು | ತಾಲ್ಲೂಕುಗಳ ಒಟ್ಟಾರೆ ಸಂಖ್ಯೆ | ಹೈದರಾಬಾದ್–ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್–ಕರ್ನಾಟಕೇತರ ಪ್ರದೇಶಗಳಲ್ಲಿನ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೆಚ್‌ಕೆ ಪ–೧ | ಹೆಚ್‌ಕೆ ಪ–೨ | ಪ–೧ | ಪ–೨ | ಪ–೩ | ಪ–೪ |
| ೧ | ದಾವಣಗೆರೆ | ೬ | – | – | ಚೆನ್ನಗಿರಿ | ಹೊನ್ನಾಳಿ | ದಾವಣಗೆರೆ | – |
| | | | | | ಜಗಳೂರು | – | ಹರಿಹರ | – |
| | | | | | ಹರಪನಹಳ್ಳಿ | – | – | – |

**ಆಧಾರ: ಕೈಗಾರಿಕಾ ನೀತಿ ೨೦೧೪–೧೯**

**ಭೂ ಬಳಕೆ**

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ಹರಪನಹಳ್ಳಿ ತಾಲ್ಲೂಕು (೨೦೦೬–೦೭ರಲ್ಲಿ) ೧,೪೩,೦೨೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿ, ೨೨,೨೩೦ ಹೆಕ್ಟೇರ್ ಅರಣ್ಯ ಪ್ರದೇಶ ಇತ್ತು. ೧೭,೫೦೩ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ ಹೊಂದಿದ್ದು, ೧೧,೨೪೫ ವ್ಯವಸಾಯೇತರ ಹಾಗೂ ೬,೨೫೮ ಹೆಕ್ಟೇರ್ ಬಂಜರು ಭೂಮಿಯೂ ಸೇರಿದೆ. ೫,೫೮೯ ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದ್ದು, ಇದರಲ್ಲಿ ೩,೧೭೪ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು, ೧,೬೦೩ ಹೆಕ್ಟೇರ್ ಖಾಯಂ ಗೋಮಾಳ ಹಾಗೂ ೮೧೨ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿದ್ದವು. ೮,೪೪೫ ಹೆಕ್ಟೇರ್ ಬೀಳು ಭೂಮಿಯಾಗಿದ್ದು, ಇದರಲ್ಲಿ ೭,೩೯೫ ಹೆಕ್ಟೇರ್ ಚಾಲ್ತಿ ಬೀಳುಭೂಮಿ ಹಾಗೂ ೧,೦೫೦ ಹೆಕ್ಟೇರ್ ಇತರೆ ಬೀಳು ಭೂಮಿ ಸೇರಿದೆ. ೯೯,೮೯೭ ಹೆಕ್ಟೇರ್ ಬಿತ್ತನೆಯಾದ ಪ್ರದೇಶವಾಗಿದ್ದು, ಇದರಲ್ಲಿ ೮೯,೨೫೭ ಹೆಕ್ಟೇರ್ ನಿವ್ವಳ, ೧,೦೬೪೦ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆ ಪ್ರದೇಶವಾಗಿತ್ತು. ೨೦೧೫ರ ಮಾರ್ಚ್‌ನ ಅಂತ್ಯಕ್ಕೆ ೧,೪೩,೦೨೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿ, ೨೨,೨೩೦ ಹೆಕ್ಟೇರ್ ಅರಣ್ಯ ಪ್ರದೇಶವಿತ್ತು. ೧೭,೫೫೮ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಾಗಿದ್ದು, ಇದರಲ್ಲಿ ೧೧,೩೦೦ ಹೆಕ್ಟೇರ್ ವ್ಯವಸಾಯೇತರ ಭೂಮಿ, ೬,೨೫೮ ಹೆಕ್ಟೇರ್ ಬಂಜರು ಭೂಮಿಯಾಗಿತ್ತು. ೫,೫೮೯

ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದ್ದು, ಇದರಲ್ಲಿ ೩,೧೭೪ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ೧,೬೦೩ ಹೆಕ್ಟೇರ್ ಖಾಯಂ ಗೋಮಾಳ, ೮೧೨ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿತ್ತು. ೩,೯೮೬ ಹೆಕ್ಟೇರ್ ಬೀಳು ಭೂಮಿಯಾಗಿದ್ದು, ಇದರಲ್ಲಿ ೩,೧೩೩ ಹೆಕ್ಟೇರ್ ಚಾಲ್ತಿ ಬೀಳು ಭೂಮಿ, ೮೫೩ ಹೆಕ್ಟೇರ್ ಇತರೆ ಬೀಳು ಭೂಮಿಯಾಗಿತ್ತು. ೧,೦೧,೩೯೪ ಹೆಕ್ಟೇರ್ ಬಿತ್ತನೆಯಾದ ಪ್ರದೇಶವಾಗಿದ್ದು, ಇದರಲ್ಲಿ ೯೩,೬೬೧ ಹೆಕ್ಟೇರ್ ನಿವ್ವಳ ಬಿತ್ತನೆಯಾದ ಪ್ರದೇಶ ಹಾಗೂ ೭,೭೩೩ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶವಾಗಿತ್ತು. ೨೦೧೬ರ ಮಾರ್ಚ್‌ನ ಅಂತ್ಯಕ್ಕೆ ೧,೪೩,೦೨೪ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿ, ೨೨,೨೩೦ ಹೆಕ್ಟೇರ್ ಅರಣ್ಯ ಪ್ರದೇಶವಿತ್ತು. ೧೭,೫೫೮ ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಾಗಿದ್ದು, ಇದರಲ್ಲಿ ೧೧,೩೦೦ ಹೆಕ್ಟೇರ್ ವ್ಯವಸಾಯೇತರ ಭೂಮಿ, ೬,೨೫೮ ಹೆಕ್ಟೇರ್ ಬಂಜರು ಭೂಮಿಯಾಗಿತ್ತು. ೫,೫೮೯ ಹೆಕ್ಟೇರ್ ಸಾಗುವಳಿ ಮಾಡದಿರುವ ಇತರೆ ಭೂಮಿಯಾಗಿದ್ದು, ಇದರಲ್ಲಿ ೩,೧೭೪ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ೧,೬೦೩ ಹೆಕ್ಟೇರ್ ಖಾಯಂ ಗೋಮಾಳ, ೮೧೨ ಹೆಕ್ಟೇರ್ ವೃಕ್ಷ ಮತ್ತು ತೋಪುಗಳು ಸೇರಿತ್ತು. ೩,೯೮೬ ಹೆಕ್ಟೇರ್ ಬೀಳು ಭೂಮಿಯಾಗಿದ್ದು, ಇದರಲ್ಲಿ ೩,೧೩೩ ಹೆಕ್ಟೇರ್ ಚಾಲ್ತಿ ಬೀಳು ಭೂಮಿ, ೮೫೩ ಹೆಕ್ಟೇರ್ ಇತರೆ ಬೀಳು ಭೂಮಿಯಾಗಿತ್ತು. ೧,೦೧,೩೯೪ ಹೆಕ್ಟೇರ್ ಬಿತ್ತನೆಯಾದ ಪ್ರದೇಶವಾಗಿದ್ದು, ಇದರಲ್ಲಿ ೯೩,೬೬೧ ಹೆಕ್ಟೇರ್ ನಿವ್ವಳ ಬಿತ್ತನೆಯಾದ ಪ್ರದೇಶ ಹಾಗೂ ೭,೭೩೩ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶವಾಗಿತ್ತು.

**ಭೂ-ಹಿಡುವಳಿ**

ಕೃಷಿ ಗಣತಿ ಪ್ರತಿ ಐದು ವರ್ಷಗಳಿಗೊಮ್ಮೆ ಜರುಗುತ್ತದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂ-ಹಿಡುವಳಿ ಹೊಂದಿರುವರ ಸಂಖ್ಯೆ ೨೦,೧೪೭ ಆಗಿದ್ದು, ೧೦,೮೪೪ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರು. ಸಣ್ಣ (೧-೨ಹೆ) ಭೂ-ಹಿಡುವಳಿ ಹೊಂದಿರುವವರ ಸಂಖ್ಯೆ ೧೮,೩೨೧ ಆಗಿದ್ದು, ಇವರು ೨೬೪೮೦ ಹೆ ವಿಸ್ತೀರ್ಣ ಹೊಂದಿದ್ದರು. ಅರೆಮಧ್ಯಮ (೨-೪ಹೆ) ಭೂ ಹಿಡುವಳಿದಾರರ ಸಂಖ್ಯೆ ೧೦,೯೯೫ ಆಗಿದ್ದು, ೨೯,೭೪೦ ಹೆ ವಿಸ್ತೀರ್ಣ ಹೊಂದಿದ್ದರು. ಮಧ್ಯಮ (೪-೧೦ಹೆ) ಭೂ ಹಿಡುವಳಿದಾರರ ಸಂಖ್ಯೆ ೪,೫೧೬ ಆಗಿದ್ದು, ೨೫,೬೪೬ ಹೆ ವಿಸ್ತೀರ್ಣ ಹೊಂದಿದ್ದರು. ದೊಡ್ಡ (೧೦ ಹೆಕ್ಟೇರ್‌ಗಿಂತ ಹೆಚ್ಚು) ಭೂ ಹಿಡುವಳಿದಾರರ ಸಂಖ್ಯೆ ಕೇವಲ ೫೫೮ ಆಗಿದ್ದು, ೭,೯೬೪ ಭೂ ವಿಸ್ತೀರ್ಣ ಹೊಂದಿದ್ದರು. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿದ್ದು, ಹೆಚ್ಚು ಭೂ-ಹಿಡುವಳಿದಾರರ ಸಂಖ್ಯೆ ಕಡಿಮೆಯಾಗಿರುತ್ತದೆ. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

## ಕೃಷಿ ಗಣತಿಯಂತೆ (೨೦೧೦–೧೧) ಭೂ ಹಿಡುವಳಿದಾರರ ಸಂಖ್ಯೆ ಮತ್ತು ವಿಸ್ತೀರ್ಣ (ಎಲ್ಲಾ ವರ್ಗಗಳು) ಗ=ವ್ವರ್ಗಗಳು)

| ಕ್ರ.ಸಂ. | ವರ್ಗ | | ಹಿಡುವಳಿದಾರರ ಸಂಖ್ಯೆ | | | | ಭೂ ಹಿಡುವಳಿ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ | | | |
|---|---|---|---|---|---|---|---|---|---|---|
| | | | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು | ವೈಯಕ್ತಿಕ | ಜಂಟಿ | ಸಾಂಸ್ಥಿಕ | ಒಟ್ಟು |
| | **ಅತೀ ಸಣ್ಣ** | | | | | | | | | |
| ೧ | ೦.೫ ಕ್ಕಿಂತ ಕಡಿಮೆ | ಪು | ೮೧೦೪ | ೧೬ | ೦ | ೮೧೨೦ | ೨೨೩೯.೯೯ | ೩.೩೭ | ೦.೦೦ | **೨೨೪೩.೩೬** |
| | | ಮ | ೧೭೦೫ | ೪ | ೦ | ೧೭೦೯ | ೪೮೬.೩೭ | ೦.೭೨ | ೦.೦೦ | **೪೮೭.೦೯** |
| | | ಒಟ್ಟು | ೯೮೦೯ | ೨೦ | ೭೮ | ೯೯೦೭ | ೨೭೨೬.೩೬ | ೪.೦೯ | ೧೯.೮೨ | **೨೭೫೦.೨೭** |
| | (೦.೫ – ೧.೦) | ಪು | ೯೭೨೪ | ೮ | ೦ | ೯೭೩೨ | ೭೩೩೪.೮೫ | ೫.೮೧ | ೦.೦೦ | **೭೩೪೦.೬೬** |
| | | ಮ | ೨೬೦೧ | ೬ | ೦ | ೨೬೦೭ | ೧೯೮೬.೯೬ | ೪.೭೦ | ೦.೦೦ | **೧೯೯೧.೬೬** |
| | | ಒಟ್ಟು | ೧೨೩೨೫ | ೧೪ | ೧೧೯ | ೧೨೪೫೮ | ೯೩೨೧.೮೧ | ೧೦.೫೧ | ೯೪.೨೩ | **೯೪೨೬.೫೫** |
| | ಒಟ್ಟು | **ಪು** | **೧೭೮೨೮** | **೨೪** | **೦** | **೧೭೮೫೨** | **೯೫೭೪.೮೪** | **೯.೧೮** | **೦.೦೦** | **೯೫೮೪.೦೨** |
| | | **ಮ** | **೪೩೦೬** | **೧೦** | **೦** | **೪೩೧೬** | **೨೪೭೩.೩೩** | **೫.೪೨** | **೦.೦೦** | **೨೪೭೮.೭೫** |
| | | **ಒಟ್ಟು** | **೨೨೧೩೪** | **೩೪** | **೧೯೭** | **೨೨೩೬೫** | **೧೨೦೪೮.೧೭** | **೧೪.೬೦** | **೧೧೪.೦೫** | **೧೨೧೭೬.೮೨** |
| | **ಸಣ್ಣ** | | | | | | | | | |
| ೨ | (೧.೦ – ೨.೦) | ಪು | ೧೫೪೨೬ | ೧೫ | ೦ | ೧೫೪೪೧ | ೨೧೮೫೫.೬೨ | ೨೩.೩೨ | ೦.೦೦ | **೨೧೮೭೮.೯೪** |
| | | ಮ | ೩೮೯೧ | ೫ | ೦ | ೩೮೯೬ | ೫೪೩೯.೧೨ | ೮.೮೩ | ೦.೦೦ | **೫೪೪೭.೯೫** |
| | | ಒಟ್ಟು | ೧೯೩೧೭ | ೨೦ | ೧೮೦ | ೧೯೫೧೭ | ೨೭೨೯೪.೭೪ | ೩೨.೧೫ | ೨೬೬.೦೬ | **೨೭೫೯೨.೯೫** |

| | | | | | | | | | | |
|---|---|---|---|---|---|---|---|---|---|---|
| | ಒಟ್ಟು | ಪು | ೧೫೪೨೬ | ೧೫ | ೦ | ೧೫೪೪೧ | ೨೧೮೫೫.೬೨ | ೨೩.೩೨ | ೦.೦೦ | ೨೧೮೭೮.೯೪ |
| | | ಮ | ೩೮೯೧ | ೫ | ೦ | ೩೮೯೬ | ೫೪೩೯.೧೨ | ೮.೮೩ | ೦.೦೦ | ೫೪೪೭.೯೫ |
| | | ಒಟ್ಟು | ೧೯೩೧೭ | ೨೦ | ೧೮೦ | ೧೯೫೧೭ | ೨೭೨೯೪.೭೪ | ೩೨.೧೫ | ೨೬೬.೦೬ | ೨೭೫೯೨.೯೫ |
| | ಅರೆ ಮಧ್ಯಮ | | | | | | | | | |
| ೩ | (೨.೦ – ೩.೦) | ಪು | ೬೦೯೪ | ೫ | ೦ | ೬೦೯೯ | ೧೪೩೮೪.೭೫ | ೧೧.೫೭ | ೦.೦೦ | ೧೪೩೯೬.೩೨ |
| | | ಮ | ೧೪೪೧ | ೧ | ೦ | ೧೪೪೨ | ೩೩೯೫.೧೮ | ೨.೭೩ | ೦.೦೦ | ೩೩೯೭.೯೧ |
| | | ಒಟ್ಟು | ೭೫೩೫ | ೬ | ೯೯ | ೭೬೪೦ | ೧೭೭೭೯.೯೩ | ೧೪.೩೦ | ೨೨೮.೨೦ | ೧೮೦೨೨.೪೩ |
| | (೩.೦ – ೪.೦) | ಪು | ೨೭೯೦ | ೬ | ೦ | ೨೭೯೬ | ೯೪೫೭.೦೪ | ೧೯.೭೩ | ೦.೦೦ | ೯೪೭೬.೭೭ |
| | | ಮ | ೫೮೫ | ೧ | ೦ | ೫೮೬ | ೧೯೭೭.೩೦ | ೩.೬೮ | ೦.೦೦ | ೧೯೮೦.೯೮ |
| | | ಒಟ್ಟು | ೩೩೭೫ | ೭ | ೫೬ | ೩೪೩೮ | ೧೧೪೩೪.೩೪ | ೨೩.೪೧ | ೧೮೪.೨೪ | ೧೧೬೪೧.೯೯ |
| | ಒಟ್ಟು | ಪು | ೮೮೮೪ | ೧೧ | ೦ | ೮೮೯೫ | ೨೩೮೪೧.೭೯ | ೩೧.೩೦ | ೦.೦೦ | ೨೩೮೭೩.೦೯ |
| | | ಮ | ೨೦೨೬ | ೨ | ೦ | ೨೦೨೮ | ೫೩೭೨.೪೮ | ೬.೪೧ | ೦.೦೦ | ೫೩೭೮.೮೯ |
| | | ಒಟ್ಟು | ೧೦೯೧೦ | ೧೩ | ೧೫೫ | ೧೧೦೭೮ | ೨೯೨೧೪.೨೭ | ೩೭.೭೧ | ೪೧೨.೪೪ | ೨೯೬೬೪.೪೨ |

| | | | ಮಧ್ಯಮ | | | | | | | |
|---|---|---|---|---|---|---|---|---|---|---|
| ೪ | (೪.೦ – ೫.೦) | ಪು | ೧೫೨೮ | ೨ | ೦ | ೧೫೩೦ | ೬೬೭೭.೪೫ | ೮.೫೪ | ೦.೦೦ | **೬೬೮೫.೯೯** |
| | | ಮ | ೨೫೬ | ೧ | ೦ | ೨೫೭ | ೧೧೨೯.೩೭ | ೪.೩೮ | ೦.೦೦ | **೧೧೩೩.೭೫** |
| | | ಒಟ್ಟು | ೧೭೮೪ | ೩ | ೨೪ | ೧೮೧೧ | ೭೮೦೬.೮೨ | ೧೨.೯೨ | ೧೦೪.೯೯ | **೭೯೨೪.೭೩** |
| | (೫.೦ – ೭.೫) | ಪು | ೧೪೫೦ | ೦ | ೦ | ೧೪೫೦ | ೮೫೦೬.೨೫ | ೦.೦೦ | ೦.೦೦ | **೮೫೦೬.೨೫** |
| | | ಮ | ೨೭೫ | ೧ | ೦ | ೨೭೬ | ೧೬೦೭.೦೫ | ೫.೯೭ | ೦.೦೦ | **೧೬೧೩.೦೨** |
| | | ಒಟ್ಟು | ೧೭೨೫ | ೧ | ೩೭ | ೧೭೬೩ | ೧೦೧೧೩.೩೦ | ೫.೯೭ | ೨೦೬.೩೩ | **೧೦೩೨೫.೬೦** |
| | (೭.೫ –೧೦.೦) | ಪು | ೫೧೭ | ೦ | ೦ | ೫೧೭ | ೪೩೨೦.೬೩ | ೦.೦೦ | ೦.೦೦ | **೪೩೨೦.೬೩** |
| | | ಮ | ೮೩ | ೦ | ೦ | ೮೩ | ೬೯೭.೨೬ | ೦.೦೦ | ೦.೦೦ | **೬೯೭.೨೬** |
| | | ಒಟ್ಟು | ೬೦೦ | ೦ | ೧೬ | ೬೧೬ | ೫೦೧೭.೮೯ | ೦.೦೦ | ೧೩೩.೫೮ | **೫೧೫೧.೪೭** |
| | **ಒಟ್ಟು** | **ಪು** | **೩೪೯೫** | **೨** | **೦** | **೩೪೯೭** | **೧೯೫೦೪.೩೩** | **೮.೫೪** | **೦.೦೦** | **೧೯೫೧೨.೮೭** |
| | | **ಮ** | **೬೧೪** | **೨** | **೦** | **೬೧೬** | **೩೪೩೩.೬೮** | **೧೦.೩೫** | **೦.೦೦** | **೩೪೪೪.೦೩** |
| | | **ಒಟ್ಟು** | **೪೧೦೯** | **೪** | **೭೭** | **೪೧೯೦** | **೨೨೯೩೮.೦೧** | **೧೮.೮೯** | **೪೪೪.೯೦** | **೨೩೪೦೧.೮೦** |

| | | | | | | | | | | |
|---|---|---|---|---|---|---|---|---|---|---|
| | ದೊಡ್ಡ | | | | | | | | | |
| ೫ | (೧೦.೦–೨೦.೦) | ಪು | ೩೯೫ | ೧ | ೦ | ೩೯೬ | ೫೦೬೦.೪೨ | ೧೩.೨೦ | ೦.೦೦ | ೫೦೭೩.೬೨ |
| | | ಮ | ೫೬ | ೧ | ೦ | ೫೭ | ೬೭೭.೫೨ | ೧೨.೭೨ | ೦.೦೦ | ೬೯೦.೨೪ |
| | | ಒಟ್ಟು | ೪೫೧ | ೨ | ೨೬ | ೪೭೯ | ೫೭೩೭.೯೪ | ೨೫.೯೨ | ೩೨೩.೮೭ | ೬೦೮೭.೭೩ |
| | ೨೦ ಮತ್ತು ಅದಕ್ಕಿಂತ ಹೆಚ್ಚು | ಪು | ೩೦ | ೦ | ೦ | ೩೦ | ೭೪೭.೩೧ | ೦.೦೦ | ೦.೦೦ | ೭೪೭.೩೧ |
| | | ಮ | ೪ | ೦ | ೦ | ೪ | ೮೩.೦೩ | ೦.೦೦ | ೦.೦೦ | ೮೩.೦೩ |
| | | ಒಟ್ಟು | ೩೪ | ೦ | ೨ | ೩೬ | ೮೩೦.೩೪ | ೦.೦೦ | ೫೧.೬೧ | ೮೮೧.೯೫ |
| | **ಒಟ್ಟು** | **ಪು** | **೪೨೫** | **೧** | **೦** | **೪೨೬** | **೫೮೦೭.೭೩** | **೧೩.೨೦** | **೦.೦೦** | **೫೮೨೦.೯೩** |
| | | **ಮ** | **೬೦** | **೧** | **೦** | **೬೧** | **೭೬೦.೫೫** | **೧೨.೭೨** | **೦.೦೦** | **೭೭೩.೨೭** |
| | | **ಒಟ್ಟು** | **೪೮೫** | **೨** | **೨೮** | **೫೧೫** | **೬೫೬೮.೨೮** | **೨೫.೯೨** | **೩೭೫.೪೮** | **೬೯೬೯.೬೮** |
| ೬ | ಎಲ್ಲಾ ವರ್ಗದವರು | | | | | | | | | |
| | **ಒಟ್ಟು** | **ಪು** | **೪೬೦೫೮** | **೫೩** | **೦** | **೪೬೧೧೧** | **೮೦೫೮೪.೩೧** | **೮೫.೫೪** | **೦.೦೦** | **೮೦೬೬೯.೮೫** |
| | | **ಮ** | **೧೦೮೯೭** | **೨೦** | **೦** | **೧೦೯೧೭** | **೧೭೪೭೯.೧೬** | **೪೩.೭೩** | **೦.೦೦** | **೧೭೫೨೨.೮೯** |
| | | **ಒಟ್ಟು** | **೫೬೯೫೫** | **೭೩** | **೬೩೭** | **೫೭೬೬೫** | **೯೮೦೬೩.೪೭** | **೧೨೯.೨೭** | **೧೬೧೩.೪೩** | **೯೯೮೦೬.೧೭** |

ಆಧಾರ: ಕೃಷಿ ಗಣತಿ ೨೦೧೦–೧೧

**ಹೈನು ಉದ್ಯಮ**

ಗ್ರಾಮೀಣ ಜನರ ಆರ್ಥಿಕ ಸ್ಥಾನಮಾನ ಹಾಗೂ ಜೀವನಮಟ್ಟ ಸುಧಾರಣೆಗೆ ಪಶುಸಂಪತ್ತು ಹಿಂದಿನಿಂದಲೂ ಮಹತ್ತರ ಪಾತ್ರ ವಹಿಸುತ್ತಿದೆ. ತಾಲ್ಲೂಕಿನಲ್ಲಿ ಪಶುಸಂಪತ್ತು ಶ್ರೀಮಂತವಾಗಿದ್ದು, ವ್ಯವಸಾಯ ಮಾಡಲೂ, ಬಾವಿಗಳಿಂದ ನೀರೆತ್ತಲೂ, ದವಸ ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲೂ, ರೈತಾಪಿ ವರ್ಗಕ್ಕೆ ನೆರವಾಗಿದೆ. ಹೈನುಗಾರಿಕೆಯು ಡೈರಿ ಉದ್ಯಮದ ಸ್ಥಾಪನೆಗೆ ಕಾರಣವಾಗಿದೆ. ಉದ್ಯೋಗ ಸೃಷ್ಟಿಸುವ ಜೊತೆಗೆ ಜನರ ಜೀವನ ಮಟ್ಟ ಸುಧಾರಿಸಲು ನೆರವಾಗಿದೆ. ತಾಲ್ಲೂಕಿನಲ್ಲಿ ೨೦೧೨ರ ಜಾನುವಾರು ಗಣತಿಯಂತೆ, ೬೬,೮೭೫ ದನಕರುಗಳು, ೩೬,೬೭೪ ಎಮ್ಮೆಗಳು, ೧,೬೬,೧೯೧ ಕುರಿಗಳು, ೩೨,೮೮೧ ಮೇಕೆಗಳು, ೨೬೬ ಹಂದಿಗಳು, ೫೩ ಮೊಲಗಳು, ೬,೩೫೩ ನಾಯಿಗಳು, ೭೬ ಇತರೆ ಸೇರಿದಂತೆ ಒಟ್ಟು ೩,೦೯,೩೬೯ ಜಾನುವಾರುಗಳಿದ್ದವು. ೫೩,೦೯೯ ಕೋಳಿಗಳಿದ್ದವು. ತಾಲ್ಲೂಕಿನಲ್ಲಿ ೨೦೧೫-೧೬ರಲ್ಲಿ ಐದು ಪಶು ಆಸ್ಪತ್ರೆಗಳು, ಆರು ಚಿಕಿತ್ಸಾಲಯಗಳು, ೧೪ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಚಿಕಿತ್ಸಾಲಯ, ಐದು ಗರ್ಭಧಾರಣ ಕೇಂದ್ರಗಳು ಹೀಗೆ ಒಟ್ಟು ೩೧ ಪಶುವೈದ್ಯ ಸಂಸ್ಥೆಗಳು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ತಾಲ್ಲೂಕಿನಲ್ಲಿ ೧,೧೭,೭೫೪ ರಾಸುಗಳು ಕೃತಕ ಗರ್ಭಧಾರಣೆ ಸೌಲಭ್ಯ ಪಡೆದಿದ್ದವು. ೧೯,೮೪೪ ಚಿಕಿತ್ಸೆ ಪಡೆದ ಪ್ರಾಣಿಗಳಾಗಿದ್ದವು. ತಾಲ್ಲೂಕಿನಲ್ಲಿ ೩೯.೩೪ ಸಾವಿರ ಟನ್ ಹಾಲು ಉತ್ಪಾದನೆ ಮಾಡಲಾಗಿತ್ತು. ೧೬೪೩ ಲಕ್ಷ ಮೊಟ್ಟೆ ಉತ್ಪಾದಿಸಲಾಗಿತ್ತು.

**ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳ ಸರಬರಾಜು**

ಗ್ರಾಮಾಂತರ ಪ್ರದೇಶಗಳಲ್ಲಿರುವ ವಿವಿಧ ವೃತ್ತಿಯ ಕುಶಲಕರ್ಮಿಗಳು ಹಳೆಯ ಮಾದರಿಯ ಹಾಗೂ ಹೆಚ್ಚು ಉತ್ಪಾದನೆಗೆ ಸಹಾಯಕವಲ್ಲದ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಸುಧಾರಿತ ಹಾಗೂ ಉತ್ತಮ ಉಪಕರಣಗಳನ್ನು ಕೊಳ್ಳುವ ಸಾಮರ್ಥ್ಯವಿಲ್ಲದಿರುವುದರಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಒದಗಿಸುವ ಮೂಲಕ ಅವರನ್ನು ಆರ್ಥಿಕವಾಗಿ ಹೆಚ್ಚು ಸ್ವಾವಲಂಭಿಗಳನ್ನಾಗಿ ಮಾಡುವ ಉದ್ದೇಶದಿಂದ ಈ ಕಾರ್ಯಕ್ರಮದಡಿ ಚಟುವಟಿಕೆಗೆ ಅನುಗುಣವಾಗಿ ರೂ. ೧೫೦೦/- ರಿಂದ ರೂ. ೩೦೦೦/- ಮೌಲ್ಯದ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲಾಗುವುದು. ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಚಟುವಟಿಕೆಗಳಿಗೆ ಮಾತ್ರ ಸುಧಾರಿತ ಉಪಕರಣ ಸರಬರಾಜು ಮಾಡಲಾಗುವುದು.

**ಜೇನು ಕೃಷಿ ಅಭಿವೃದ್ಧಿ ಯೋಜನೆ**

ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಹಾಗೂ ಕೃಷಿ ಕಾರ್ಮಿಕರುಗಳಿಗೆ ಈ ಯೋಜನೆಯನ್ನು ಪರಿಚಯಿಸಿ ಅವರ ಆದಾಯದ ಒಂದು ಭಾಗವನ್ನಾಗಿ ಈ ಉದ್ಯಮವನ್ನು ಅಭಿವೃದ್ಧಿಪಡಿಸಿಕೊಳ್ಳಲು ನೆರವು ನೀಡುವುದು ಹಾಗೂ ಪರೋಕ್ಷವಾಗಿ ಕೃಷಿ ಆಧಾರಿತ ಚಟುವಟಿಕೆಗಳ ಉತ್ಪಾದನೆಯನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ತಾಲ್ಲೂಕಿನಲ್ಲಿ ಸು ೧೦ ರಿಂದ ೪೦ ಜನರಿಗೆ ಜೇನು ಸಾಕಾಣಿಕೆಯ ತರಬೇತಿ ನೀಡಿ ಜೇನು ಕೃಷಿಯನ್ನು ಕೈಗೊಳ್ಳುವಂತೆ ಪ್ರೇರೇಪಿಸುವ ಗುರಿಯನ್ನು ಹೊಂದಲಾಗಿದೆ.

**ಹೋಟೆಲ್ ಉದ್ಯಮ**

ಹರಪನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು ೨೨೬ ಹೋಟೆಲುಗಳು ಇದ್ದು, ಪ್ರತಿಯೊಂದು ಗ್ರಾಮದಲ್ಲೂ ಒಂದು ಹೋಟೆಲು ಕಂಡುಬರುವುದು. ೧೪೫ ಚಿಕ್ಕ ಗ್ರಾಮಗಳಲ್ಲಿ ಒಟ್ಟು ೧೬೦ ಹೋಟೆಲುಗಳು ಕಂಡುಬರುತ್ತವೆ. ದೊಡ್ಡ ಗ್ರಾಮಗಳು ೮೧ ಇದ್ದು, ಗ್ರಾಮ ಒಂದಕ್ಕೆ ಅವುಗಳಲ್ಲಿ ೨-೪ ಹೋಟೆಲುಗಳಿವೆ.

ಹರಪನಹಳ್ಳಿ ಪಟ್ಟಣದಲ್ಲಿ ೨೮ ಹೋಟೆಲುಗಳಿರುತ್ತವೆ. ಈ ೨೮ ರಲ್ಲಿ ೧೨ ಊಟದ ಹೋಟೆಲುಗಳು, ಉಳಿದ ೧೬ ರಲ್ಲಿ ಊಟ ಮತ್ತು ಉಪಹಾರ ಮತ್ತು ಪಾನೀಯಗಳನ್ನು ಒದಗಿಸುವರು. ಎರಡರಲ್ಲಿ ಊಟ, ತಿಂಡಿ ಜೊತೆಗೆ ವಸತಿ ಸೌಕರ್ಯವನ್ನು ಒದಗಿಸುವರು. ಗ್ರಾಮೀಣ ಹೋಟೆಲುಗಳಲ್ಲಿ ಹೋಟೆಲು ಮಾಲೀಕರ ಮನೆಯವರೇ ಎಲ್ಲಾ ಕೆಲಸಗಳನ್ನು ಮಾಡುವರು. ಇನ್ನು ಹರಪನಹಳ್ಳಿ ಹೋಟೆಲುಗಳಲ್ಲಿ ನೌಕರರು (ಕಾರ್ಮಿಕರು) ಗಳನ್ನು ನೇಮಿಸಿಕೊಂಡಿರುವರು. ಅವರಿಗೆ ಊಟ ಉಪಹಾರಗಳ ಜೊತೆಗೆ ಮಾಸಿಕ ವೇತನವನ್ನು ಕೊಡುವರು. ೨೦ ಹೋಟೆಲುಗಳಲ್ಲಿ ಪ್ರತಿಯೊಂದರಲ್ಲಿ ೫ ಜನರಂತೆ ೨೦x೫=೧೦೦ ಎಂದು, ಎಂಟರಲ್ಲಿ ೧೦ ಜನರಂತೆ ೮x೧೦=೮೦ ಜನರು ಕೆಲಸ ಮಾಡುವರು.

ಹೀಗೆ ಹರಪನಹಳ್ಳಿ ಪಟ್ಟಣದ ೨೮ ಹೋಟೆಲುಗಳಲ್ಲಿ ಒಟ್ಟು ೧೮೦ ಕಾರ್ಮಿಕರು ದುಡಿಯುತ್ತಿದ್ದು, ಇವರಲ್ಲಿ ೧೬೦ ಜನ ಪುರುಷರು ಹಾಗೂ ೨೦ ಜನ ಮಹಿಳೆಯರು ಇದ್ದರು.

**ಉದ್ಯೋಗ**

ಈ ತಾಲ್ಲೂಕು ಕೃಷಿ ಪ್ರಧಾನವಾಗಿದ್ದು, ಹೆಚ್ಚಿನ ಜನರು ಕೃಷಿ ಕಾಯಕವನ್ನೇ ಅವಲಂಬಿಸಿರುವರು. ಹೀಗಿದ್ದರೂ ವ್ಯವಸಾಯೇತರ ಉದ್ಯೋಗಗಳನ್ನು

ಅವಲಂಬಿಸಿರುವವರು ಬಹುಸಂಖ್ಯೆಯಲ್ಲಿ ದೊರಕುವರು. ತಾಲ್ಲೂಕಿನ ವಿದ್ಯಾವಂತ ವರ್ಗದವರಲ್ಲಿ ೨೦೦೬-೦೭ ಮತ್ತು ೨೦೦೯-೧೦ ನೇ ಸಾಲಿನಲ್ಲಿ ೪,೦೬೨ ಮಂದಿ ಎಸ್.ಎಸ್.ಎಲ್.ಸಿ. ಗಿಂತ ಕಡಿಮೆ ಶಿಕ್ಷಣ ಪಡೆದವರು, ೫,೬೯೭ ಮಂದಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದವರು, ೩೬೭೫ ಮಂದಿ ಪಿ.ಯು.ಸಿ. ಪಾಸಾದವರು, ೨೧೮ ಬಿ.ಎ. ಪಾಸಾದವರು, ೪೮ ಮಂದಿ ಬಿ.ಎಸ್ಸಿ., ೩೨ ಮಂದಿ ಬಿ.ಕಾಂ ಪದವೀಧರರು ಉದ್ಯೋಗಾಕಾಂಕ್ಷಿಗಳಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ದಾವಣಗೆರೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವ್ಯಾಪ್ತಿಗೆ ಸೇರಿರುವ ಹರಪನಹಳ್ಳಿ ತಾಲ್ಲೂಕಿನಲ್ಲಿ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಬಯಸಿ ದಾವಣಗೆರೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿದ್ದರು. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

**ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ಅಭ್ಯರ್ಥಿಗಳ ವಿವರ ಸಂಖ್ಯೆಗಳಲ್ಲಿ.**

| ಕ್ರ. ಸಂ. | ವಿದ್ಯಾರ್ಹತೆ | | ೨೦೦೭-೦೮ | ೨೦೧೨-೧೩ |
|---|---|---|---|---|
| ೧ | ಎಸ್.ಎಸ್.ಎಲ್.ಸಿ. ಗಿಂತ ಕಡಿಮೆ ವಿದ್ಯಾರ್ಹತೆ | ಹುಡುಗರು | ೨೧೨ | ೨೦ |
| | | ಹುಡುಗಿಯರು | | ೧೯ |
| ೨ | ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರು | ಹುಡುಗರು | ೧೮೮೫ | ೨೬೨ |
| | | ಹುಡುಗಿಯರು | | ೮೧ |
| ೩ | ಪಿ.ಯು.ಸಿ. ಉತ್ತೀರ್ಣರಾದವರು | ಹುಡುಗರು | ೩೦೨ | ೩೩ |
| | | ಹುಡುಗಿಯರು | | ೨೬ |
| ೪ | ಕಲಾ ಪದವೀಧರರು | ಹುಡುಗರು | ೪೧ | ೪೧ |
| | | ಹುಡುಗಿಯರು | | ೧೪ |
| ೫ | ವಿಜ್ಞಾನ ಪದವೀಧರರು | ಹುಡುಗರು | ೪೧ | ೨೩ |
| | | ಹುಡುಗಿಯರು | | ೯ |
| ೬ | ವಾಣಿಜ್ಯ ಪದವೀಧರರು | ಹುಡುಗರು | ೪೩ | ೨೧ |
| | | ಹುಡುಗಿಯರು | | ೧೩ |
| ೭ | ಶೀಘ್ರಲಿಪಿಗಾರರು | ಹುಡುಗರು | ೨೨ | ೦೧ |
| | | ಹುಡುಗಿಯರು | | ೦೨ |

| | | | | |
|---|---|---|---|---|
| ೮ | ಐ.ಟಿ.ಐ. ಸರ್ಟಿಫಿಕೇಟ್ ಪಡೆದವರು | ಹುಡುಗರು | ೩೩೬ | ೧೪೮ |
| | | ಹುಡುಗಿಯರು | | ೦೫ |
| ೯ | ಚಾಲಕರು | ಹುಡುಗರು | ೫೩ | ೩೦ |
| | | ಹುಡುಗಿಯರು | | ೦ |
| ೧೦ | ಬಿ.ಎಡ್, ಬಿ.ಪಿ.ಎಡ್ ಪದವಿ ಪಡೆದವರು | ಹುಡುಗರು | ೫೮ | ೩೬ |
| | | ಹುಡುಗಿಯರು | | ೦೯ |
| ೧೧ | ಡಿಪ್ಲೋಮಾ ಪಡೆದವರು | ಹುಡುಗರು | ೫೯ | ೦೫ |
| | | ಹುಡುಗಿಯರು | | ೦೧ |
| ೧೨ | ದೈಹಿಕ ಶಿಕ್ಷಕರ, ಶಿಕ್ಷಕರ ತರಬೇತಿ ಮತ್ತು ದಾದಿ ತರಬೇತಿ ಹೊಂದಿದವರು | ಹುಡುಗರು | ೧೩೬ | ೨೬ |
| | | ಹುಡುಗಿಯರು | | ೧೮ |
| ೧೩ | ಬೆರಳಚ್ಚುಗಾರರು | ಹುಡುಗರು | ೫೬ | ೧೦ |
| | | ಹುಡುಗಿಯರು | | ೦೯ |
| ೧೪ | ಇತರೆ | ಹುಡುಗರು | ೨೧೭೩ | ೩೩ |
| | | ಹುಡುಗಿಯರು | | ೨೮ |
| **ಒಟ್ಟು** | | **ಹುಡುಗರು** | **೫೪೧೭** | **೬೮೯** |
| | | **ಹುಡುಗಿಯರು** | | **೨೩೪** |

**ಆಧಾರ: ದಾವಣಗೆರೆ ಅಂಕಿ ಅಂಶಗಳ ನೋಟ, ೨೦೧೨-೧೩**

**ಕೆಲಸಗಾರರು**

ಹರಪನಹಳ್ಳಿ ತಾಲ್ಲೂಕಿನಲ್ಲಿ ೨೦೦೧ರ ಜನಗಣತಿಯಂತೆ ೧,೨೯,೮೬೬ ಒಟ್ಟು ಕೆಲಸಗಾರರಿದ್ದು, ಇವರಲ್ಲಿ ೯೫,೭೦೧ ಮುಖ್ಯ ಕೆಲಸಗಾರರು ಹಾಗೂ ೩೪,೧೬೫ ಸೀಮಾಂತ ಕೆಸಲಗಾರರು ಸೇರಿದ್ದರು. ೯೫,೭೦೧ ಮುಖ್ಯ ಕೆಲಸಗಾರರಲ್ಲಿ ೩೮,೪೨೭ ಸಾಗುವಳಿದಾರರು, ೩೧,೭೯೭ ಕೃಷಿ ಕಾರ್ಮಿಕರು, ೬,೦೧೨ ಗೃಹ ಕೈಗಾರಿಕಾ ಕಾರ್ಮಿಕರು, ೧೯,೪೬೫ ಇತರೆ ಕಾರ್ಮಿಕರು ಸೇರಿದ್ದರು. ೩೪೧೬೫ ಸೀಮಾಂತ ಕೆಲಸಗಾರರಲ್ಲಿ ೨,೬೫೪ ಸಾಗುವಳಿದಾರರು, ೨೬,೬೧೧ ಕೃಷಿ ಕಾರ್ಮಿಕರು, ೧,೧೩೪ ಗೃಹ ಕೈಗಾರಿಕಾ ಕಾರ್ಮಿಕರು, ೩,೭೬೬ ಇತರೆ ಕಾರ್ಮಿಕರು ಸೇರಿದ್ದರು. ತಾಲ್ಲೂಕಿನಲ್ಲಿ ೧೩,೮೯೨೭ ಮಂದಿ ಕೆಲಸಗಾರರಲ್ಲದವರಿದ್ದರು. ೨೦೧೧ರ ಜನಗಣತಿಯಂತೆ ಕೆಲಸಗಾರರ ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ.

## ೨೦೧೧ರ ಜನಗಣತಿಯಂತೆ ಕೆಲಸಗಾರರ ವಿವರಗಳು

| ಕೆಲಸಗಾರರು | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ಮುಖ್ಯ ಕೆಲಸಗಾರರು | ೬೮೪೧೦ | ೪೧೬೬೦ | ೧೧೦೦೭೦ | ೧೦೪೨೫ | ೪೭೫೩ | ೧೫೧೭೮ | ೭೮೮೩೫ | ೪೬೪೧೩ | ೧೨೫೨೪೮ |
| ಕೃಷಿ ಸಾಗುವಳಿದಾರರು | ೩೪೫೦೫ | ೯೪೮೭ | ೪೩೯೯೨ | ೧೧೫೨ | ೨೫೧ | ೧೪೦೩ | ೩೪೪೦೦ | ೮೨೫೮ | ೪೨೬೫೮ |
| ಕೃಷಿ ಕಾರ್ಮಿಕರು | ೨೭೩೭೯ | ೩೫೮೪೦ | ೬೩೨೧೯ | ೧೨೮೩ | ೧೧೬೭ | ೨೪೫೦ | ೨೩೭೮೯ | ೨೭೧೫೦ | ೫೦೯೩೯ |
| ಗೃಹ ಕೈಗಾರಿಕೆ ಕೆಲಸಗಾರರು | ೧೮೬೪ | ೨೦೮೩ | ೩೯೪೭ | ೭೮೭ | ೨೩೮೫ | ೩೧೭೨ | ೧೮೫೩ | ೨೭೬೨ | ೪೬೧೫ |
| ಇತರೆ ಕೆಲಸಗಾರರು | ೧೩೪೭೨ | ೮೪೪೦ | ೨೧೯೧೨ | ೧೦೧೦೯ | ೩೩೯೭ | ೧೩೫೦೬ | ೧೮೭೯೩ | ೮೨೪೩ | ೨೭೦೩೬ |
| ಸೀಮಾಂತ ಕೆಲಸಗಾರರು | ೮೮೧೦ | ೧೪೧೯೦ | ೨೩೦೦೦ | ೨೯೦೬ | ೨೪೪೭ | ೫೩೫೩ | ೧೧೭೧೬ | ೧೬೬೩೭ | ೨೮೩೫೩ |
| ಕೃಷಿ ಸಾಗುವಳಿದಾರರು | ೧೧೯೪ | ೧೪೩೫ | ೨೬೨೯ | ೬೩ | ೪೫ | ೧೦೮ | ೧೨೫೭ | ೧೪೮೦ | ೨೭೩೭ |
| ಕೃಷಿ ಕಾರ್ಮಿಕರು | ೪೫೪೦ | ೯೪೩೧ | ೧೩೯೭೧ | ೩೩೩ | ೪೨೬ | ೭೫೯ | ೪೮೭೩ | ೯೮೫೭ | ೧೪೭೩೦ |
| ಗೃಹ ಕೈಗಾರಿಕೆ ಕೆಲಸಗಾರರು | ೫೪೭ | ೯೧೫ | ೧೪೬೨ | ೨೫೧ | ೭೯೧ | ೧೦೪೨ | ೭೯೮ | ೧೭೦೬ | ೨೫೦೪ |
| ಇತರೆ ಕೆಲಸಗಾರರು | ೨೫೨೯ | ೨೪೦೯ | ೪೯೩೮ | ೨೨೫೯ | ೧೧೮೫ | ೩೪೪೪ | ೪೭೮೮ | ೩೫೯೪ | ೮೩೮೨ |
| ಕೆಲಸಗಾರರಲ್ಲದವರು | ೫೩೧೭೮ | ೬೮೭೧೬ | ೧೨೧೮೯೪ | ೧೦೫೬೦ | ೧೫೯೪೮ | ೨೬೫೦೮ | ೬೩೭೩೮ | ೮೪೬೬೪ | ೧೪೮೪೦೨ |

**ಆಧಾರ: ೨೦೧೧ ರ ಜನಗಣತಿ**

**ಬಡತನ ನಿರ್ಮೂಲನೆ**

**ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ**

ಈ ಯೋಜನೆಯಲ್ಲಿ ನಿರುದ್ಯೋಗಿ ಯುವಕ ಯುವತಿಯರಿಗೆ ಕೈಗಾರಿಕೆ ಮತ್ತು ವಿವಿಧ ಚಟುವಟಿಕೆಗಳನ್ನು ಕೈಗೊಂಡು ಉದ್ಯೋಗಸ್ಥರಾಗಲು ಬ್ಯಾಂಕುಗಳಿಂದ ಸಾಲ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು.

ಈ ಯೋಜನೆಯಲ್ಲಿ ಆಯಾ ಚಟುವಟಿಕೆಗಳಿಗೆ ತಕ್ಕಂತೆ ರೂ. ೨.೦೦ ಲಕ್ಷದವರೆಗೆ ಸಾಲದ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುವುದು. ಈ ಯೋಜನೆಗೆ ಅರ್ಹರಾಗಲು ೧೮ ರಿಂದ ೩೫ ವರ್ಷ ವಯಸ್ಸಿನ ವಯೋಮಿತಿ ಯುಳ್ಳವರಾಗಿರಬೇಕು. ಈ ತಾಲ್ಲೂಕಿನಲ್ಲಿ ಪ್ರತಿವರ್ಷ ೫೦ ಜನರಿಗೆ ಈ ಯೋಜನೆಯಲ್ಲಿ ಸಾಲವನ್ನು ಕಲ್ಪಿಸಿಕೊಡಲಾಗುವುದು.

ಸಾಮಾನ್ಯ ಯೋಜನೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಿಗದಿತ ದಾಖಲಾತಿ ಮತ್ತು ಅರ್ಜಿಗಳನ್ನು ಪಡೆದು ಸಾಲ ಸೌಲಭ್ಯಕ್ಕೆ ಶಿಫಾರಸ್ಸು ಮಾಡಲಾಗುವುದು. ಈ ಯೋಜನೆಯಲ್ಲಿ ಶೇ.೨೦ರಷ್ಟು ಸಹಾಯಧನದ ಸೌಲಭ್ಯವಿರುತ್ತದೆ. ಸ್ವರ್ಣಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನೆಯಡಿ ೨೦೦೭-೦೮ ರಲ್ಲಿ ೭ ವೈಯಕ್ತಿಕ ಹಾಗೂ ೨೫ ಗುಂಪು ಪ್ರಯೋಜನ ಪಡೆದವರಾಗಿದ್ದರು. ಸಂಪೂರ್ಣ ಗ್ರಾಮೀಣ ಸ್ವ-ರೋಜ್‌ಗಾರ್ ಯೋಜನೆ/ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ೧೧.೨೩ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ೧,೪೦೨ ಮನೆಗಳನ್ನು ಆಶ್ರಯ ಯೋಜನೆಯಲ್ಲಿ ಕಟ್ಟಿದ ಮನೆಗಳಾಗಿದ್ದರೆ, ೩೧ ಮನೆಗಳು ಅಂಬೇಡ್ಕರ್ ವಸತಿ ಯೋಜನೆಯಲ್ಲಿ, ೧೮೬ ಮನೆಗಳು ಇಂದಿರಾ ಅವಾಸ್ ಯೋಜನೆಯಡಿಯಲ್ಲಿ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು. ಸ್ವರ್ಣಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನೆಯಲ್ಲಿ ೨೦೧೪-೧೫ರಲ್ಲಿ ೧೬೬೩ ಮಹಿಳಾ ಗುಂಪುಗಳು ಪ್ರಯೋಜನ ಪಡೆದಿದ್ದರು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ೪೬,೦೬೬ ಮಂದಿಗೆ ಕೆಲಸದ ಚೀಟಿಗಳನ್ನು ವಿತರಿಸಲಾಯಿತು. ೧೦,೧೨೧ ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದವು. ೯,೦೬೯ ಮಂದಿ ಕುಟುಂಬಗಳು ಈ ಯೋಜನೆಯಡಿ ಕೆಲಸ ನಿರ್ವಹಿಸಿದವು. ೩೩೩ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿಕೊಂಡರು. ಈ ಯೋಜನೆಯಡಿ ೭೩,೦೬೫ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ೨೦೧೫-೧೬ರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ೪೬,೨೨೧ ಮಂದಿಗೆ ಕೆಲಸದ ಚೀಟಿಗಳನ್ನು ವಿತರಿಸಲಾಯಿತು. ೧೨,೮೫೮ ಕುಟುಂಬಗಳು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದವು. ೯೮೯೮ ಮಂದಿ ಕುಟುಂಬಗಳು ಈ

ಯೋಜನೆಯಡಿ ಕೆಲಸ ನಿರ್ವಹಿಸಿದವು. ೧,೩೩೧ ಕುಟುಂಬಗಳು ೧೦೦ ದಿನಗಳ ಉದ್ಯೋಗವನ್ನು ಉಪಯೋಗಿಸಿಕೊಂಡರು. ಈ ಯೋಜನೆಯಡಿ ೬,೦೨,೯೬೬ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು.

ಅಧ್ಯಾಯ–೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

**ಯಾ**ವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳವನ್ನು ಪೂರೈಸುವಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಬ್ಯಾಂಕಿಂಗ್ ವ್ಯವಹಾರವೆಂದರೆ ಬಂಡವಾಳದ ಸಂಗ್ರಹಣೆ ಮತ್ತು ವಿತರಣೆ. ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಸಂಸ್ಥೆಗಳು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಬೇಕಾಗುವ ಬಂಡವಾಳವನ್ನು ಒದಗಿಸುವ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ, ಕೃಷಿ, ವ್ಯಾಪಾರ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯವಾದ ಸಾಲವನ್ನು ಪೂರೈಸಿದರೆ, ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಪರಿವರ್ತನೆಗೊಳ್ಳುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅನುಗುಣವಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಕೂಡ ಸಾಲನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಗ್ರಾಮ ಮಟ್ಟದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಸರ್ಕಾರದ ಆರ್ಥಿಕ ನೀತಿ ನಿರೂಪಣೆಗಳನ್ನು, ಆದ್ಯತೆಗಳನ್ನು ಕಾರ್ಯರೂಪದಲ್ಲಿ ತರಲು ಬ್ಯಾಂಕಿಂಗ್ ವ್ಯವಸ್ಥೆ ಸಹಾಯಕವಾಗುತ್ತಿದೆ.

ಇಪ್ಪತ್ತನೇಯ ಶತಮಾನದ ಆದಿಭಾಗದಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ರೂಪುಗೊಳ್ಳುವ ಪೂರ್ವದಲ್ಲೂ, ವ್ಯವಸಾಯ ಅಭಿವೃದ್ಧಿ ಮತ್ತು ಸುಧಾರಣೆ ಹಾಗೂ ವ್ಯಾಪಾರ ವಾಣಿಜ್ಯ ಸಂಬಂಧದ ಚಟುವಟಿಕೆಗಳಿಗೆ ಸಾಲ ನೀಡುವ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿತ್ತು. ಗ್ರಾಮೀಣ ಜನಸಂಖ್ಯೆಯಲ್ಲಿ ಹೆಚ್ಚಿನವರು ಕೃಷಿಕರಿದ್ದು, ಸಾಮಾನ್ಯವಾಗಿ ತಮಗೆ ಅಗತ್ಯವಿದ್ದ ಸಾಲಕ್ಕಾಗಿ ಅವರು ನಿರ್ದಿಷ್ಟ ಬಡ್ಡಿದರದ ಮೇಲೆ ಸಾಲವನ್ನು ನೀಡುತ್ತಿದ್ದ ಹಳ್ಳಿಯ ಸಾಹುಕಾರರು

ಮತ್ತು ದಲ್ಲಾಳಿಗಳನ್ನೇ ಅವಲಂಬಿಸಿದ್ದರೆಂದು ಹೇಳಬಹುದು. ಈ ದಲ್ಲಾಳಿಗಳು ಮತ್ತು ಸಾಹುಕಾರರರು ನೀಡುತ್ತಿದ್ದ ಸಾಲದ ಮೊತ್ತ ಕಡಿಮೆ ಇದ್ದು, ಬಡ್ಡಿಯ ದರ ದುಬಾರಿಯಾಗಿರುತ್ತಿತ್ತು. ಇಂತಹ ಸಾಲದ ವ್ಯವಹಾರಗಳನ್ನು ನಿಯಂತ್ರಿಸಲು ಅಂದಿನ ಆಡಳಿತ ವ್ಯವಸ್ಥೆ ಯಾವುದೇ ಕಾನೂನನ್ನು ರೂಪಿಸದ ಕಾರಣ, ಸಣ್ಣ ಬಂಡವಾಳದಾರರೂ ಲೇವಾದೇವಿ ವ್ಯವಹಾರದಿಂದ ಅಧಿಕ ಲಾಭ ಪಡೆಯುತ್ತಿದ್ದರು. ಬೇಸಾಯಕ್ಕಾಗಿ ಅಗತ್ಯವಿದ್ದ ಸಾಲಕ್ಕಾಗಿ ಸಾಮಾನ್ಯವಾಗಿ ಕೃಷಿಕರು ಜಮೀನಿನಂತಹ ಸ್ಥಿರಾಸ್ತಿ ಮತ್ತು ಆಭರಣಗಳು ಮುಂತಾದವುಗಳನ್ನು ಹಳ್ಳಿಯ ಸಾಹುಕಾರರ ಬಳಿ ಒತ್ತೆಯಿಟ್ಟು ಸಾಲವನ್ನು ಪಡೆಯಬೇಕಾಗಿತ್ತು. ರೈತರು ತಮ್ಮ  ಅಗತ್ಯಗಳ ಪೂರೈಕೆಗಾಗಿ ಹಣವನ್ನು ಪಡೆಯಲು ಸ್ಥಳೀಯ ಸಾಹುಕಾರರ ಬಳಿಗೆ ಹೋಗುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಪ್ರತಿಯೊಂದು ಹಳ್ಳಿಯಲ್ಲೂ ಸ್ಥಳೀಯರಿಗೆ ಪರಿಚಯವಿದ್ದ ಮೂರ್‍ನಾಲ್ಕಾದರೂ ಲೇವಾದೇವಿಗಾರರಿದ್ದರು. ಸ್ಥಳೀಯರ ನಡತೆ ಮತ್ತು ಅವರ ಸೊತ್ತಿನ ಬಗ್ಗೆ ಸ್ಪಷ್ಟ ಅರಿವು ಹೊಂದಿರುತ್ತಿದ್ದ ಈ ಲೇವಾದೇವಿಗಾರರು ನಿಗದಿತ ಬಡ್ಡಿದರದ ಮೇಲೆ ಸಾಲವನ್ನು ನೀಡುತ್ತಿದ್ದು, ಅಸಲು ಮತ್ತು ಬಡ್ಡಿಯ ವಸೂಲಿಗಾಗಿ ಸಾಲಗಾರರ ಮನೆ ಬಾಗಿಲಿಗೂ ಹೋಗುತ್ತಿದ್ದರು. ಸಾಲವನ್ನು ತೀರಿಸಲಾಗದವರು ತಮ್ಮ ಒತ್ತೆಯ ಸ್ವತ್ತನ್ನು ಕಳೆದುಕೊಳ್ಳಬೇಕಿತ್ತು. ಬಹುಪಾಲು ರೈತರು ಅನಕ್ಷರಸ್ಥರಾಗಿದ್ದ ಕಾರಣ ಲೇವಾದೇವಿಗಾರರ ವಂಚನೆಗೆ ಸುಲಭವಾಗಿ ಬಲಿಯಾಗುತ್ತಿದ್ದರು. ಹಣದ ತುರ್ತು ಅಗತ್ಯವಿದ್ದ ರೈತರಿಗೆ ಸಾಲ ನೀಡುವುದೇ ಲೇವಾದೇವಿಗಾರರ ವೃತ್ತಿಯಾಗಿತ್ತು. ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿದ್ದ ಕೆಲ ಶ್ರೀಮಂತ ಲೇವಾದೇವಿಗಾರರೂ ಸಹ ಹಳ್ಳಿಯ ರೈತರಿಗೆ ಆಗಾಗ ಸಾಲವನ್ನು ನೀಡುತ್ತಿದ್ದು, ಸಾಲ ವಸೂಲಿಗೆ ಅವರು ಒತ್ತಾಯ, ಒತ್ತಡ ಮತ್ತು ಶೋಷಣೆಯ ವಿಧಾನಗಳನ್ನು ಅನುಸರಿಸುತ್ತಿದ್ದರು. ಯಾವಾಗಲೂ ನಗದು ಹಣವನ್ನು ಯಥೇಚ್ಛವಾಗಿ ಹೊಂದಿರುತ್ತಿದ್ದ ಇವರು ಅದರಿಂದ ಹೆಚ್ಚು ಲಾಭಗಳಿಸಲು ಮುಂದಾಗುತ್ತಿದ್ದರು. ಸುಗ್ಗಿಯ ಕಾಲದಲ್ಲಿ ಇವರು  ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ದೊಡ್ಡ ಪ್ರಮಾಣದಲ್ಲಿ ಖರೀದಿಸಿದ ದವಸಧಾನ್ಯಗಳನ್ನು ತಮ್ಮ ಉಗ್ರಾಣಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಮಾರುಕಟ್ಟೆಯಲ್ಲಿ ದವಸಧಾನ್ಯಗಳ ಕೊರತೆಯುಂಟಾಗಿ ಧಾರಣೆ ಹೆಚ್ಚಿದಾಗ ತಮ್ಮ ಸಂಗ್ರಹದಲ್ಲಿದ್ದ ಮಾಲನ್ನು ಹೆಚ್ಚಿನ ಬೆಲೆಗೆ ಮಾರಿ ಅಧಿಕ ಲಾಭ ಗಳಿಸುತ್ತಿದ್ದರು.

ಸುಮಾರು ೧೯೦೦ ರ ವೇಳೆಗೆ ಲೇವಾದೇವಿಗಾರರು ಶೇ. ೧೨ ರಿಂದ ಶೇ. ೩೦ ರ ವರೆಗೆ ಬಡ್ಡಿ ವಿಧಿಸುತ್ತಿದ್ದರು. ಇದನ್ನು ಗುರುತಿಸಿ ಸರ್ಕಾರ ತಕ್ಕಾವಿ ಸಾಲ ೧೮೭೬, ದಖ್ಖನ್ ರೈತ ಪರಿಹಾರ ಕಾಯ್ದೆ ೧೮೭೯, ಭೂ ಸುಧಾರಣಾ ಸಾಲ ಕಾಯ್ದೆ ೧೮೮೩, ರೈತ ಸಾಲ ಕಾಯ್ದೆ ೧೮೮೮, ೧೮೯೦ರ ಕಾಯ್ದೆಗಳನ್ನು ಜಾರಿಗೊಳಿಸಿದರು. ತಾಲ್ಲೂಕು ಮಟ್ಟದಲ್ಲಿ ರೈತರಿಗೆ ೨೫೦ ರ ವರೆಗೆ ತಕ್ಕಾವಿ ಸಾಲ ನೀಡಲು ಅಧಿಕಾರವಿದ್ದಿತು. ಏಕೀಕರಣದ ಬಳಿಕ ಕರ್ನಾಟಕ ಲೇವಾದೇವಿ ಕಾಯ್ದೆ ೧೯೬೧ ಹಾಗೂ ೧೯೬೨ ಮತ್ತು

೧೯೬೭ ರಲ್ಲಿ ಕಾಯ್ದೆಗಳು ಜಾರಿಗೆ ಬಂದವು. ೧೯೩೨, ೧೯೫೭ ರ ಕಾಯ್ದೆಯನ್ವಯ ಎಲ್ಲಾ ವರ್ಗಗಳಿಗೆ ಸಾಲ ವಿತರಿಸಲು ಅನುವು ಆಯಿತು.

## ವಾಣಿಜ್ಯ ಬ್ಯಾಂಕುಗಳು

ಆಗ ವಾಣಿಜ್ಯ ಬ್ಯಾಂಕುಗಳು ಸಮಾಜ ಸೇವೆಯಲ್ಲಿ ಗಣನೀಯ ಪಾತ್ರ ವಹಿಸಿದವು. ತಾಲ್ಲೂಕಿನಲ್ಲಿ ಮೈಸೂರು ಬ್ಯಾಂಕು, ಕೆನರಾ ಬ್ಯಾಂಕ್, ವಿಜಯ ಬ್ಯಾಂಕು, ಸಿಂಡಿಕೇಟ್ ಬ್ಯಾಂಕ್, ಮುಂತಾದವು ಇದ್ದವು. ೧೯೬೯ ರಲ್ಲಿ ೧೪ ಪ್ರಮುಖ ಬ್ಯಾಂಕುಗಳು ರಾಷ್ಟ್ರೀಕರಣಗೊಂಡವು. ಇದರ ಪರಿಣಾಮ ಹಲವಾರು ಬ್ಯಾಂಕುಗಳು ಸ್ಥಾಪನೆಗೊಂಡವು. ಇದರಿಂದ ರೈತರಿಗೆ, ಸಾಮಾನ್ಯ ಜನರಿಗೆ ಹೆಚ್ಚು ಅನುಕೂಲಗಳಾದವು. ತಾಲ್ಲೂಕಿನಲ್ಲಿ ೨೦೦೭-೦೮ರಲ್ಲಿ ೪ ವಾಣಿಜ್ಯ ಬ್ಯಾಂಕುಗಳು, ೧೧ ಗ್ರಾಮೀಣ ಬ್ಯಾಂಕುಗಳಿದ್ದು, ಒಟ್ಟು ೯,೯೬೫ ಲಕ್ಷ ಠೇವಣಿ ಸಂಗ್ರಹಿಸಿದ್ದವು. ೧೦,೭೭೫ ಲಕ್ಷ ಒಟ್ಟು ಸಾಲ ನೀಡಿದ್ದವು. ೨೦೧೫-೧೬ರಲ್ಲಿ ೨೨ ರಾಷ್ಟ್ರೀಕೃತ ಬ್ಯಾಂಕುಗಳಿದ್ದು, ೩೨,೪೩೭ ಲಕ್ಷ ಠೇವಣಿಯನ್ನು ಹೊಂದಿದ್ದು, ೧೦,೬೧೩ ಲಕ್ಷರೂ ಸಾಲ ನೀಡಿದ್ದವು. ೧೪ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳಿದ್ದು, ೧೫,೫೬೪ ರೂ ಠೇವಣಿ ಸಂಗ್ರಹಿಸಿ ೨೦,೫೬೪ ಲಕ್ಷ ರೂ ಸಾಲ ನೀಡಿದ್ದವು. ೧ ಖಾಸಗಿ ಬ್ಯಾಂಕ್ ಇದ್ದು, ೩,೧೮೨ ಲಕ್ಷ ರೂ ಠೇವಣಿ ಸಂಗ್ರಹಿಸಿ ೩,೬೦೭ ಲಕ್ಷ ರೂ ಸಾಲ ನೀಡಿತ್ತು.

## ಸಹಕಾರಿ ಚಳುವಳಿ

ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಜನರು ಸಮಾನತೆಯ ಆಧಾರದ ಮೇಲೆ ಸ್ವ-ಇಚ್ಛೆಯಿಂದ ಸಂಘಟಿತರಾಗಿ ಗುಂಪುಗೊಂಡು ನೋಂದಾಯಿಸಿ ಕೊಂಡು ಆರಂಭಿಸುವ ಸಂಘವನ್ನು ಸಹಕಾರಿ ಸಂಘವೆಂದು ಪರಿಗಣಿಸಲಾಗುವುದು. **ಒಬ್ಬರು ಎಲ್ಲರಿಗಾಗಿ ಎಲ್ಲರೂ ಒಬ್ಬನಿಗಾಗಿ (Each for All & All for Each)** ಎಂಬುದು ಸಹಕಾರದ ಮೂಲ ತತ್ವವಾಗಿದೆ.

ಭಾರತದಲ್ಲಿ ಕಾನೂನಿನ ಚೌಕಟ್ಟಿನಡಿ ಸಹಕಾರ ವ್ಯವಸ್ಥೆ ೧೯೦೪ ರಲ್ಲಿ ಪ್ರಾರಂಭವಾಗುವ ಒಂದು ದಶಕಕ್ಕೆ ಮೊದಲೇ ಅಂದರೆ ೧೮೯೪ ರಲ್ಲೇ ಸಹಕಾರಿ ತತ್ವದ ಮೇಲೆ ಕಾರ್ಯನಿರ್ವಹಿಸುವ, ರಚನೆಯಲ್ಲಿ ಕೂಡು ಬಂಡವಾಳ ಸಂಸ್ಥೆಗಳನ್ನು ಹೋಲುವ, ಮಿಶ್ರ ಮಾದರಿಯ 'ವ್ಯವಸಾಯ ಬ್ಯಾಂಕು'ಗಳನ್ನು ಸ್ಥಾಪಿಸಿದ ಕೀರ್ತಿ ಅಂದಿನ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಸಣ್ಣ ಮತ್ತು ಬಡ ರೈತರಿಗೆ ಸರಳವಾಗಿ ವ್ಯವಸಾಯ ಸಾಲವನ್ನು ಒದಗಿಸುವುದು, ಈ ಬ್ಯಾಂಕುಗಳ ಪ್ರಮುಖ ಉದ್ದೇಶವಾಗಿತ್ತು.

೧೯೨೦-೩೦ ರ ದಶಕದಲ್ಲಿ ದೀರ್ಘಾವಧಿ ಸಾಲ ನೀಡುವ ಪ್ರಾಥಮಿಕ ಭೂ ಅಭಿವೃದ್ಧಿ ಸಹಕಾರಿ ಬ್ಯಾಂಕುಗಳು ೧೯೩೦ ರ ದಶಕದಲ್ಲಿ ಜಿಲ್ಲೆಯಲ್ಲಿ ಆರಂಭಗೊಂಡ ಬಳಿಕ ೩೧-೧೦-೧೯೫೬ ರಂದು ಈ ತಾಲ್ಲೂಕಿನಲ್ಲಿ ಭೂ ಅಭಿವೃದ್ಧಿ ಬ್ಯಾಂಕೊಂದು ಪ್ರಾರಂಭವಾಯಿತು. ದೀರ್ಘಾವಧಿ, ಮಧ್ಯಮ ಅವಧಿ ಸಾಲಗಳು ರೈತರಿಗೆ ದೊರಕಿದವು.

## ಸ್ತ್ರೀ ಶಕ್ತಿ ಸಂಘಗಳು

ತಾಲ್ಲೂಕಿನಲ್ಲಿ ಸ್ತ್ರೀ-ಶಕ್ತಿ ಸಂಘಗಳನ್ನು ಸಂಘಟಿಸುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿಸುವುದರ ಜೊತೆಗೆ ಅವರ ಆರ್ಥಿಕ ಬಲವನ್ನು ಇಮ್ಮಡಿಗೊಳಿಸುವ ಉದ್ದೇಶಗಳಿಂದ ಸ್ಥಳೀಯವಾಗಿ ಅಸ್ತಿತ್ವಗೊಂಡ ಸ್ತ್ರೀಶಕ್ತಿ ಸಂಘಗಳು ಈ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳು ಸಮೀಪದ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆದು, ಸಾಲವನ್ನು ಕಂತುಗಳಲ್ಲಿ ಮರುಪಾವತಿ ಮಾಡುತ್ತಿದ್ದರು. ತಾಲ್ಲೂಕಿನಲ್ಲಿ ೨೦೧೪-೧೫ನೇ ಸಾಲಿನಲ್ಲಿ ೭೦೧ ಸ್ತ್ರೀ ಶಕ್ತಿ ಸಂಘಗಳಿದ್ದು, ಈ ಸಂಘದಲ್ಲಿ ೨,೦೩೨ ಪರಿಶಿಷ್ಟ ಜಾತಿ ಮಹಿಳೆಯರು, ೧,೫೬೦ ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ಹಾಗೂ ೫,೩೭೧ ಇತರೆ ಮಹಿಳೆಯರು ಇದ್ದು ಒಟ್ಟಾಗಿ ೮,೯೬೩ ಮಹಿಳೆಯರು ಈ ಸಂಘದಲ್ಲಿ ಸದಸ್ಯರಾಗಿದ್ದರು. ೨೦೧೫-೧೬ರಲ್ಲಿ ೭೦೧ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಇದರಲ್ಲಿ ೨,೦೭೦ ಪರಿಶಿಷ್ಟ ಜಾತಿಯ ಮಹಿಳೆಯರು, ೧,೨೮೭ ಪರಿಶಿಷ್ಟ ಪಂಗಡದ ಮಹಿಳೆಯರು, ೫,೯೬೦ ಇತರೆ ಮಹಿಳೆಯರು ಸೇರಿದಂತೆ ಒಟ್ಟು ೯,೩೧೭ ಸದಸ್ಯರಿದ್ದರು.

ತಾಲ್ಲೂಕಿನಲ್ಲಿ ಒಂದು ಡಿಸಿಸಿ ಬ್ಯಾಂಕ್ ಇದ್ದು, ೧೦,೩೭೪ ರೂ ಸಾಲ ಪಡೆದ ಸದಸ್ಯರಿದ್ದರು. ೩,೩೫೫.೫೬ ಲಕ್ಷ ರೂ. ಕೃಷಿ ಸಾಲ ಹಾಗೂ ೫೫.೧೭ ಲಕ್ಷ ರೂ. ಇತರೆ ಸಾಲ ಹೀಗೆ ಒಟ್ಟು ರೂ ೩,೪೧೦.೭೩ ಲಕ್ಷ ರೂ ಸಾಲ ನೀಡಲಾಗಿತ್ತು. ಇದು ೩,೨೧೧ ಲಕ್ಷ ರೂ. ಠೇವಣಿ ಸಂಗ್ರಹಿಸಿತ್ತು. ಒಂದು ಪಿಎಲ್‌ಡಿ ಬ್ಯಾಂಕ್‌ಯಿದ್ದು ಇದರಲ್ಲಿ ೨೮೦ ಸದಸ್ಯರು ಸಾಲ ಪಡೆದಿದ್ದರು. ಒಟ್ಟು ೧೭೨.೪೮ ಲಕ್ಷ ರೂ. ಕೃಷಿ ಸಾಲ ನೀಡಲಾಗಿತ್ತು. ೪೭೧.೧೭ ಲಕ್ಷ ರೂ. ಠೇವಣಿ ಸಂಗ್ರಹಿಸಲಾಗಿತ್ತು. ತಾಲ್ಲೂಕಿನಲ್ಲಿ ಇಪ್ಪತ್ತೆರಡು ವ್ಯವಸಾಯ ಸಹಕಾರ ಸಂಘಗಳಿದ್ದು, ೫೦,೬೬೬ ಸದಸ್ಯರಿದ್ದರು, ಮೂರು ವ್ಯವಸಾಯೇತರ ಸಹಕಾರ ಸಂಘಗಳಿದ್ದು, ೧,೭೧೦ ಸದಸ್ಯರಿದ್ದರು. ಹೀಗೆ ಒಟ್ಟು ೨೫ ಸಹಕಾರ ಸಂಘಗಳಿದ್ದು, ೫೨,೩೭೨ ಸದಸ್ಯರಿದ್ದರು. ಒಂದು(೨,೪೫೮) ಮಾರುಕಟ್ಟೆ ಸಹಕಾರ ಸಂಘ, ಒಂದು (೧,೬೦೪) ಗೃಹ ನಿರ್ಮಾಣ ಸಹಕಾರ ಸಂಘ, ೪೩ (೬,೪೫೦) ಹಾಲು ಉತ್ಪಾದಕರ ಸಹಕಾರಿ ಸಂಘಗಳಿದ್ದವು. ಅಲ್ಲದೇ ೪೪ (೬,೬೨೦) ಇತರೆ ಸಂಘಗಳಿದ್ದವು. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ಅವುಗಳು ಹೊಂದಿದ್ದ ಸದಸ್ಯರ ಸಂಖ್ಯೆಯನ್ನು ಸೂಚಿಸುತ್ತದೆ.

**ಜೀವ ವಿಮೆ**

ಮೊದಮೊದಲು ಸರಕಾರಿ ನೌಕರರಿಗೆ ಮಾತ್ರ ಜೀವ ವಿಮೆಯ ಸೌಲಭ್ಯವಿತ್ತು. ೧೯೧೬ರಲ್ಲಿ ಸಾರ್ವಜನಿಕರಿಗೂ ಇದರ ಲಾಭ ದೊರಕಲಾರಂಭಿಸಿತು. ೧೯೫೬ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಬಳಿಕ ಜೀವ ವಿಮೆ ಸಾಕಷ್ಟು ಪ್ರಗತಿಯನ್ನು ಸಾಧಿಸಿತು. ಮೊದಮೊದಲು ದೊಡ್ಡ ನಗರಗಳಲ್ಲಿ ಇದ್ದ ಜೀವ ವಿಮೆ ಶಾಖೆಗಳು ನಂತರ ತಾಲ್ಲೂಕು ಕೇಂದ್ರಗಳಲ್ಲೂ ಆರಂಭಗೊಂಡವು. **ಕೆ.ಜಿ.ಐ.ಡಿ**: ಸರ್ಕಾರಿ ವಿಮೆ, ಕರ್ನಾಟಕ ಸರಕಾರಿ ವಿಮಾ ಇಲಾಖೆ ಸರಕಾರಿ ನೌಕರರಿಗೆ ಸೀಮಿತವಾಗಿದ್ದು, ಸರಕಾರಿ ನೌಕರರ ಜೀವ ವಿಮೆ, ವಾಹನ ವಿಮೆಗಳನ್ನು ಪಡೆದು ನಂತರ ತಾಲ್ಲೂಕಿನ ಮೂರನೆಯ ಮತ್ತು ನಾಲ್ಕನೆಯ ಶ್ರೇಣಿಯ ನೌಕರ ವಿಮಾ ಖಾತೆಗಳನ್ನು ಪಡೆದರು. ಪತ್ರಾಂಕಿತ ಅಧಿಕಾರಿಗಳನ್ನೊಳಗೊಂಡು ಎಲ್ಲಾ ಸರಕಾರಿ ನೌಕರರ ಖಾತೆಗಳನ್ನು ವಿಮಾ ಕಛೇರಿಗಳೇ ನಿರ್ವಹಿಸುತ್ತವೆ.

ದಿನಾಂಕ ೧೭.೦೮.೧೯೭೨ರಲ್ಲಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಭಾರತೀಯ ಜೀವ ವಿಮಾ ನಿಗಮವು ತನ್ನ ಶಾಖಾ ಕಛೇರಿಯನ್ನು ಪ್ರಾರಂಭಿಸಿದ್ದು, ಇದರ ವ್ಯವಹಾರ ವ್ಯಾಪ್ತಿಯು ಹರಪನಹಳ್ಳಿ ತಾಲ್ಲೂಕಿನೊಂದಿಗೆ, ಕೂಡ್ಲಿಗಿ ಮತ್ತು ಹೂವಿನ ಹಡಗಲಿ ತಾಲ್ಲೂಕುಗಳನ್ನು ಒಳಗೊಂಡಿದೆ. ೨೦೧೧-೧೨ರ ಸಾಲಿನಲ್ಲಿ ಒಟ್ಟು ೨,೯೮,೨೬೩ ಪಾಲಿಸಿದಾರರನ್ನು ಹೊಂದಿದ್ದು ಸುಮಾರು ಹದಿನಾಲ್ಕು ಕೋಟಿ ರೂಗಳ ವ್ಯವಹಾರ ನಡೆದಿದೆ ಹಾಗೂ ೧,೧೩೮ ಫಲಾನುಭವಿಗಳಿಗೆ ಜೀವ ವಿಮಾ ಬಾಂಡ್ ವಿತರಿಸಿದೆ.

**ವಾಣಿಜ್ಯ ಮತ್ತು ವ್ಯಾಪಾರ**

ಹರಪನಹಳ್ಳಿ ಪಾಳೆಯಗಾರರ ಕಾಲದಿಂದ ಈ ತಾಲ್ಲೂಕಿನಲ್ಲಿ ವ್ಯಾಪಾರ ವಹಿವಾಟು ನಡೆದಿರುವುದು ತಿಳಿದುಬರುತ್ತದೆ. ತಾಲ್ಲೂಕಿನ ಕೆಲವು ಪ್ರಮುಖ ಗ್ರಾಮಗಳಲ್ಲಿ ವಾರಕ್ಕೊಮ್ಮೆ ಸಂತೆ ನಡೆಯುತ್ತಿದ್ದವು. ಸಂತೆಗೆ ಸುತ್ತ-ಮುತ್ತಲ ಚಿಕ್ಕ ಪುಟ್ಟ ಹಳ್ಳಿಯ ಜನರು ಬಂದು ಸಾಮಾನು ಕೊಂಡು ಹೋಗುತ್ತಿದ್ದರು. ಸಂತೆಯಲ್ಲಿ ಅರಬರು, ಪಿಂಡಾರಿಗಳು ಗಂಟಿಚೌಡಿಯರು, ಪುಡಾರಿಗಳು ಬಂದು ಅಂಗಡಿಯವರನ್ನು ಹೆದರಿಸಿ ಧವಸ, ಧಾನ್ಯ, ತಿಂಡಿ, ಅಡಿಕೆ, ಎಲೆ ಮತ್ತು ಹಣವನ್ನು ವಸೂಲಿ ಮಾಡುತ್ತಿದ್ದರು. ಅಂಗಡಿಕಾರರು ಅವರು ಕೇಳಿದ್ದನ್ನು ಸ್ವಲ್ಪವಾದರು ಕೊಟ್ಟು ಕಳಿಸುವುದು ಅನಿವಾರ್ಯವಾಗಿತ್ತು. ಕೊಡದಿದ್ದರೆ ಅವರ ಅಂಗಡಿಗಳನ್ನು ಕೊಳ್ಳೆ ಹೊಡೆಯುತ್ತಿದ್ದರು. ಅಂಗಡಿ ಸಾಮಾನುಗಳನ್ನು ಬೀದಿಗೆ ಎಸೆಯುತ್ತಿದ್ದರು. ಮೊದಲು ಸೋಮಶೇಖರನಾಯಕನ ಕಾಲದಲ್ಲಿ ಕ್ರಿ.ಶ.೧೭೪೨-೧೭೬೬ರ ಅವಧಿಯಲ್ಲಿ ಒಬ್ಬ ದಳವಾಯಿ ಕುದುರೆ ಏರಿ ಸಂತೆ ಸುತ್ತುತ್ತಿದ್ದನು. ದಳವಾಯಿಗೆ ಪ್ರತಿ ಅಂಗಡಿಕಾರರು ೧೦೧/೨ ಆಣೆಯುಳ್ಳ ನಾಣ್ಯವನ್ನು ಕೊಡುವ ಪದ್ಧತಿ ಇದ್ದಿತು. ಇದು ಅವರ

ಚರಿತ್ರೆಯಿಂದ ತಿಳಿಯುತ್ತದೆ. ಸಂತೆಗಳಲ್ಲಿ ಕೊಡುವ ಈ ಹಣಕ್ಕೆ ಸುಂಕವೆಂದು ಕರೆಯುತ್ತಿದ್ದರು. ಸುಂಕದವರ ಮನೆಗಳು ಈಗಲೂ ಹರಪನಹಳ್ಳಿ ತಾಲ್ಲೂಕಿನಲ್ಲಿ ದೊರಕುತ್ತವೆ. ತಾಲ್ಲೂಕಿನ ಹಳ್ಳಿಗರು ದವಸ ಧಾನ್ಯ (ತಾವು ಬೆಳೆದವು) ಗಳನ್ನು ಎತ್ತಿನಗಾಡಿಯಲ್ಲಿ ಹೇರಿ ಹರಪನಹಳ್ಳಿ ಸಂತೆಗೆ ಬರುತ್ತಿದ್ದರು. ಕಾಲ ಬದಲಾದಂತೆ ವ್ಯಾಪಾರ ವಹಿವಾಟು ಸುಧಾರಣೆಯನ್ನು ಹೊಂದಿತು.

## ನಿಯಂತ್ರಿತ ಮಾರುಕಟ್ಟೆ

ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಮತ್ತು ಸ್ಪರ್ಧಾತ್ಮಕ ಬೆಲೆಗಳನ್ನು ದೊರಕಿಸಿಕೊಡುವ ಉದ್ದೇಶದಿಂದ, ಸರಕಾರ ನಿಯಂತ್ರಿತ ಮಾರುಕಟ್ಟೆಗಳನ್ನು ಸ್ಥಾಪಿಸಿತು. ೧೯೩೯ ರ ವೇಳೆಗೆ ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆ ೧೯೪೭ ರಲ್ಲಿ ಪ್ರಾರಂಭವಾಯಿತು. ಕರ್ನಾಟಕ ಏಕೀಕರಣದ ಬಳಿಕ ಹೆಚ್ಚು ಸಮಗ್ರವೂ ಆದ ಏಕ ಪ್ರಕಾರದ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯು ೧೯೬೬, ೧೯೬೮ ರಲ್ಲಿ ಜಾರಿಯಾಯಿತು. ಅದರಂತೆ ಕೃಷಿ ಉತ್ಪನ್ನ ಉಪ ಮಾರುಕಟ್ಟೆಗಳು ಬಳ್ಳಾರಿ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ಸ್ಥಾಪನೆಯಾದವು. ಅದರ ಪ್ರಕಾರ ೧೫-೦೧-೧೯೯೭ ರಲ್ಲಿ ಹರಪನಹಳ್ಳಿ ತಾಲ್ಲೂಕಿನ ಕೊಟ್ಟೂರಿನಲ್ಲಿ ಸ್ಥಾಪನೆಯಾಯಿತು. ಅದರನ್ವಯ ೨೦೧೦-೧೧ನೇ ಸಾಲಿನಲ್ಲಿ ರೂ.೭,೨೪೩ ಲಕ್ಷ ಮತ್ತು ೨೦೧೧-೧೨ನೇ ಸಾಲಿನಲ್ಲಿ ರೂ.೭,೦೫೬ ಲಕ್ಷ ವಸೂಲಾತಿ ಮಾಡಲಾಗಿದೆ.

**ಅವಕವಾಗುವ ಪ್ರಮುಖ ಕೃಷಿ ಉತ್ಪನ್ನಗಳು**

| ಉತ್ಪನ್ನದ ಹೆಸರು | ಕ್ವಿಂಟಾಲ್‌ಗಳಲ್ಲಿ ೨೦೧೦-೧೧ | ಕ್ವಿಂಟಾಲ್‌ಗಳಲ್ಲಿ ೨೦೧೧-೧೨ | ಕ್ವಿಂಟಾಲ್‌ಗಳಲ್ಲಿ ೨೦೧೨-೧೩ |
|---|---|---|---|
| ೧) ಮೆಕ್ಕೆಜೋಳ | ೨೮೦೮೮೨ | ೩೯೭೨೪೧ | ೨೯೧೯೮.೪೦ |
| ೨) ಜೋಳ | ೪೩೫೪೫ | ೩೬೭೩೦ | ೩೨೭೦.೫೦ |
| ೩) ರಾಗಿ | ೧೭೪೭೪ | ೩೧೬೬೩ | - |
| ೪) ಸಜ್ಜೆ | ೩೩೮೬೪ | ೧೭೭೭೪ | - |
| ೫) ಭತ್ತ | ೯೨೫೭ | ೯೮೩೪ | - |
| ೬) ಇತರೆ | - | - | ೩೭೩೭.೮೦ |

ಆಧಾರ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ.

ರೈತ ಹಾಗೂ ರೈತ ಕುಟುಂಬದ ಸದಸ್ಯರು ಕೃಷಿ ಚಟುವಟಿಕೆಯಲ್ಲಿ ತೊಡಗಿದಾಗ ಅಪಘಾತದಿಂದ ಮೃತರಾದಾಗ ಸಮಿತಿಯಿಂದ ರೈತ ಸಂಜೀವಿನಿ ಯೋಜನೆಯಡಿಯಲ್ಲಿ ಪರಿಹಾರ ನೀಡಲಾಗುವುದು. ಹಾಗೂ ಸಮಿತಿಯಿಂದ ಪರವಾನಿಗೆ ಪಡೆದ ಹಮಾಲರು ಜನಶ್ರೀ ವಿಮಾ ಯೋಜನೆಯ ವ್ಯಾಪ್ತಿಗೆ ಬರುತ್ತಿದ್ದು, ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಪರಿಹಾರ ನೀಡಲಾಗುತ್ತದೆ.

## ಸಾರ್ವಜನಿಕ ಪಡಿತರ ವ್ಯವಸ್ಥೆ

ಪ್ರತಿಯೊಬ್ಬ ವ್ಯಕ್ತಿಯ ಜೀವನೋಪಾಯಕ್ಕೆ ಆಹಾರ ಮತ್ತು ಇತರೆ ನಾಗರಿಕ ವಸ್ತುಗಳು ಅವಶ್ಯಕ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಿಕವಾಗಿ ಎಲ್ಲರೂ ಸಮಾನರು. ಹೆಚ್ಚಿನ ಸಂಖ್ಯೆಯಲ್ಲಿ ಬಡವರು, ನಿರ್ಗತಿಕರು ಮತ್ತು ಅಸಹಾಯಕರನ್ನು ಒಳಗೊಂಡಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆಯಂತಹ ವಸ್ತುಗಳು 'ಸಾಮಾಜಿಕ ನ್ಯಾಯ' ಪರಿಕಲ್ಪನೆಯಲ್ಲಿ ವಿತರಣೆಯಾಗಬೇಕೆಂದರೆ ಸಹಜವಾಗಿಯೇ ಸರ್ಕಾರಗಳು ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಆಹಾರ ಮತ್ತು ನಾಗರಿಕ ಇಲಾಖೆಯ ಮುಖಾಂತರ ಶೋಷಕರಿಂದ ಶೋಷಣೆ ಮತ್ತು ಅನ್ಯಾಯಗಳನ್ನು ತಪ್ಪಿಸಲು **'ಪಡಿತರ'** ವಿತರಣೆಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಅವಶ್ಯಕ ಆಹಾರ ವಸ್ತುಗಳಾದ ಗೋಧಿ, ಅಕ್ಕಿ, ಬೇಳೆ, ಸಕ್ಕರೆ, ಸೀಮೆ ಎಣ್ಣೆ ಮುಂತಾದವುಗಳನ್ನು ವಿತರಣೆ ಮಾಡುವ ವ್ಯವಸ್ಥೆ ಪ್ರತಿ ತಾಲ್ಲೂಕಿನಲ್ಲಿ ಅದಕ್ಕಾಗಿಯೇ ಒಂದು ಕಛೇರಿಯನ್ನು ಪ್ರಾರಂಭಿಸಿದೆ. ಇದನ್ನು ನೋಡಿಕೊಳ್ಳಲು ಆಹಾರ ಶಿರಸ್ತೇದಾರರು ಮುಖ್ಯಸ್ಥರಾಗಿರುತ್ತಾರೆ. ಇವರು ತಾಲ್ಲೂಕಿನ ತಹಶೀಲ್ದಾರ್ ಮತ್ತು ದಂಡಾಧಿಕಾರಿಗಳಿಗೆ ನೆರವಾಗುವ ಮೂಲಕ ತಾಲ್ಲೂಕಿನ ಸಾರ್ವಜನಿಕ ಪಡಿತರ ಚೀಟಿ ಮೇಲ್ವಿಚಾರಣೆ, ನ್ಯಾಯಬೆಲೆ ಅಂಗಡಿಗಳ ಮೇಲ್ವಿಚಾರಣೆ, ಆಹಾರ ಧಾನ್ಯಗಳ ಬೇಡಿಕೆಗಳ ಪಟ್ಟಿ ಸಲ್ಲಿಸುವುದು ಮತ್ತು ಹಂಚಿಕೆ, ಅಕ್ರಮ ಸರಬರಾಜನ್ನು ತಡೆಗಟ್ಟುವುದು, ಸಾರ್ವಜನಿಕರ ಪಡಿತರ ಚೀಟಿ ಹಂಚಿಕೆ, ಆಹಾರ ನಿರೀಕ್ಷಕರುಗಳ ಮೇಲ್ವಿಚಾರಣೆ ಮುಂತಾದ ಕೆಲಸಗಳನ್ನು ನಿರ್ವಹಿಸುವ ಮೂಲಕ ತಾಲ್ಲೂಕಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ವ್ಯವಸ್ಥೆಯನ್ನು ಸುಗಮವಾಗಿ ನೋಡಿಕೊಳ್ಳುವುದೇ ಆಗಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ೨೦೦೭-೦೮ ರಲ್ಲಿ ತಾಲ್ಲೂಕಿನಲ್ಲಿ ಒಟ್ಟು ೯೧ ಪಡಿತರ ಅಂಗಡಿಗಳಿದ್ದು, ೯,೩೪೯ ಮಂದಿ ಅಂತ್ಯೋದಯ ಅನ್ನ ಯೋಜನೆಯ ಕಾರ್ಡುದಾರರು, ೨೯,೫೭೦ ಬಿ.ಪಿ.ಎಲ್. ಕಾರ್ಡುದಾರರು ಹಾಗೂ ೧೭,೧೯೦ ಎ.ಪಿ.ಎಲ್. ಕಾರ್ಡುದಾರರು ಸೇರಿದಂತೆ ಒಟ್ಟು ೫೫,೦೪೯ ಪಡಿತರ ಚೀಟಿದಾರರಿದ್ದರು.

೨೦೧೫ ರ ಮಾರ್ಚ್ ಅಂತ್ಯಕ್ಕೆ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು ೯೮ ನ್ಯಾಯಬೆಲೆ ಅಂಗಡಿಗಳಿದ್ದವು. ತಾಲ್ಲೂಕಿನ ಜನಸಂಖ್ಯೆಗೆ ಅನುಗುಣವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶವೆಂದು ವಿಭಾಗಿಸಲಾಗಿದೆ.

## ನಗರ ಪ್ರದೇಶ

ಹರಪನಹಳ್ಳಿ ನಗರದಲ್ಲಿ ೨೦೧೪-೧೫ ನೇ ಸಾಲಿನಲ್ಲಿ ಒಟ್ಟು ೯ ಪಡಿತರ ಅಂಗಡಿಗಳಿದ್ದವು. ಬಿ.ಪಿ.ಎಲ್ ಪಡಿತರ ಚೀಟಿದಾರರಲ್ಲಿ ೧,೦೭೪ ಮಂದಿ ಅಂತ್ಯೋದಯ, ೧,೪೧೬ ಮಂದಿ ಅಕ್ಷಯ ಸಿಲಿಂಡರ್ ಸಹಿತ, ೫,೧೪೯ ಮಂದಿ ಸಿಲಿಂಡರ್ ರಹಿತ ಚೀಟಿದಾರರಿದ್ದರು. ಎ.ಪಿ.ಎಲ್ ಪಡಿತರ ಚೀಟಿದಾರರಲ್ಲಿ ೪೪೪ ಮಂದಿ ಸಿಲಿಂಡರ್ ಸಹಿತ, ೧,೨೪೯ ಮಂದಿ ಸಿಲಿಂಡರ್ ರಹಿತ ಪಡಿತರ ಚೀಟಿದಾರರಿದ್ದರು.

## ಗ್ರಾಮಾಂತರ ಪ್ರದೇಶ

ಹರಪನಹಳ್ಳಿ ಗ್ರಾಮಾಂತರ ಪ್ರದೇಶದಲ್ಲಿ ೨೦೧೪-೧೫ ರಲ್ಲಿ ಒಟ್ಟು ೮೯ ಪಡಿತರ ಅಂಗಡಿಗಳಿದ್ದು, ಬಿ.ಪಿ.ಎಲ್ ಪಡಿತರ ಚೀಟಿದಾರರಲ್ಲಿ, ೪,೬೭೪ ಮಂದಿ ಅಂತ್ಯೋದಯ, ೧,೭೮೦ ಮಂದಿ ಅಕ್ಷಯ ಸಿಲಿಂಡರ್ ಸಹಿತ, ೩೪,೫೭೩ ಮಂದಿ ಸಿಲಿಂಡರ್ ರಹಿತ ಚೀಟಿದಾರರಿದ್ದರು. ಎ.ಪಿ.ಎಲ್ ಪಡಿತರ ಚೀಟಿದಾರರಲ್ಲಿ ೨೮೩ ಮಂದಿ ಸಿಲಿಂಡರ್ ಸಹಿತ, ೩,೦೦೫ ಮಂದಿ ಸಿಲಿಂಡರ್ ರಹಿತ ಪಡಿತರರಿದ್ದು, ಒಟ್ಟು ಗ್ರಾಮೀಣ ಭಾಗದಲ್ಲಿ ೪೮,೧೮೯ ಮಂದಿ ಚೀಟಿದಾರರಿದ್ದು, ಇವರೆಲ್ಲರೂ ಭಾವಚಿತ್ರ ಹೊಂದಿರುವ ಚೀಟಿದಾರರಾಗಿರುತ್ತಾರೆ.

## ಉಗ್ರಾಣ ವ್ಯವಸ್ಥೆ

ಪ್ರಾಚೀನ ಕಾಲದಲ್ಲಿ ರೈತರು ಬೆಳೆದ, ಬೆಳೆಗಳ ಧವಸ-ಧಾನ್ಯಗಳು ಅಲ್ಪ ಪ್ರಮಾಣವಾದರೆ, 'ಕಣಜ' 'ವಾಡೇವು'ಗಳಲ್ಲಿ (ಗೋಡೆಯ ಮಧ್ಯದಲ್ಲಿ), ಹೆಚ್ಚು ಕಾಳು ಅಂದರೆ ಜೋಳವನ್ನು ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದರು. ಇವು ಹಾಳಾಗದಂತೆ ಹಗೇವುಗಳನ್ನು ಎತ್ತರದ ಪ್ರದೇಶದಲ್ಲಿ (ಮಳೆ ಬಿದ್ದಾಗ ನೀರು ತಾಕದಂತೆ) ನಿರ್ಮಿಸುತ್ತಿದ್ದರು. ಪಾಳೆಯಗಾರರ ಕಾಲದಲ್ಲಿ ಗರಡಿ ಮನೆ ಅಂಗಳದ ಹಗೇವುಗಳಲ್ಲಿ ಸಂಗ್ರಹಿಸುತ್ತಿದ್ದು, ಒಂದು ಹಗೇವಿಗೆ ೫ ಸೇರು ಜೋಳ ಕೊಡಬೇಕಾಗಿತ್ತು. ಗರಡಿ ಮನೆ ಅಂಗಳ ಎತ್ತರ ಪ್ರದೇಶದಲ್ಲಿದ್ದಿತು. ಈಗ ಹರಪನಹಳ್ಳಿ ಪಟ್ಟಣದಲ್ಲಿ ಮಾರ್ಕೆಟಿಂಗ್ ಸಹಕಾರ ಸಂಘದವರು ಉಗ್ರಾಣಗಳನ್ನು ನಿರ್ಮಿಸಿ, ಅದರಲ್ಲಿ ಸಂಗ್ರಹಿಸುವ ಸೌಲಭ್ಯ ಕಲ್ಪಿಸಿದ್ದಾರೆ.

## ನಾಣ್ಯ ಪದ್ಧತಿ

ಪುರಾವೆ ಪ್ರಕಾರ ಹರಪನಹಳ್ಳಿ ತಾಲ್ಲೂಕಿನಲ್ಲಿ ದೊರಕಿರುವ ಬೇರೆ ಬೇರೆ ಅರಸು ಮನೆತನಕ್ಕೆ ಸೇರಿದ ಗದ್ಯಾಣ, ವರಾಹ ಹಾಗೂ ವೀಸ, ದ್ರಮ್ಮ, ಪಗೋಡ, ಚಿನ್ನ, ಬೆಳ್ಳಿ, ತಾಮ್ರ ನಾಣ್ಯಗಳ ಉಲ್ಲೇಖಗಳಿರುತ್ತವೆ.

ಹರಪನಹಳ್ಳಿ ಪಾಳೆಯಗಾರರು ತಮ್ಮ ಪಾಳೆಯಗಾರಿಕೆ ಆರಂಭಿಸಿದ ನಂತರ ಕೆಲ ವರ್ಷಗಳವರೆಗೂ ವಿಜಯನಗರದ ಅರಸರ ನಾಣ್ಯಗಳನ್ನೇ ಉಪಯೋಗಿಸುತ್ತಿದ್ದರು. ಈ ನಾಣ್ಯಗಳಲ್ಲಿ ಹೆಚ್ಚಿಗೆ ಬಳಕೆಯಾಗಿರುವುದು 'ಗದ್ಯಾಣ' ಅಥವಾ 'ಘೋನ್' ಎಂಬುದು. ಇದರ ತೂಕ ೬೩ ಗ್ರಾಂ ಎಂದು ಡಾ॥ ಅಲ್ಟೇಕರರು ಹೇಳಿದರೆ ೨೩೩ ಗ್ರಾಂ ಎಂದು ಡಾ॥ ಅಪ್ಪಾದೊರೈ ಹೇಳಿರುವರು.

೧) ಗದ್ಯಾಣ – ಹತ್ತು ಪಣ

೨) ಪಣ – ಎರಡು ಅಡ

೩) ಪಣ – ನಾಲ್ಕು ಹಾಗ

೪) ಪಣ – ಇಪ್ಪತ್ತು ವೀಸ

೫) ಹಾಗ – ಎರಡು ಬೇಳೆ.

ಈ ನಾಣ್ಯಗಳಲ್ಲದೆ ರೋಮನ್ ನಾಣ್ಯವಾದ 'ದ್ರಮ್ಮ'ದ ಹೆಸರು ಒಂದು ಶಾಸನದಲ್ಲಿದೆ. "ಮೂವತ್ತು ಕರಿಯ ದ್ರಮ್ಮ ಮಂಗೋಲರವರ್ ತಿರುವರ್" ಎಂದು ಶಾಸನದ ಮೇಲೆ ಬರೆದಿದೆ. ಇಷ್ಟೇ ಅಲ್ಲದೆ ಬಸವಣ್ಣನವರ ವಚನದಲ್ಲಿಯೂ ಇದರ ಬಗ್ಗೆ ಕಂಡು ಬಂದಿದೆ. ಬಸವಣ್ಣನವರ ಷಟ್ಸ್ಥಳ ವಚನಗಳು (ಪುಟ–೨೮) ರಲ್ಲಿ "ಹಾದರಕ್ಕೆ ಹೋದರೆ ಕಳ್ಳ ದಮ್ಮವಾಯಿತು" ಕೆಲ ಕಾಲದ ಬಳಿಕ ನಾಯಕರು ಪೆಕ್ಲಾಸ್–ಪಗೋಡಗಳನ್ನು ಬಳಸಿರುವರು. ಬ್ರಿಟೀಷರ ಗ್ಯಾಸೆಟಿಯರ್‌ನಲ್ಲಿ ಇದರ ಉಲ್ಲೇಖವಿದೆ. ಒಂದನೇ ಸೋಮಶೇಖರ ನಾಯಕರ ಕಾಲದಲ್ಲಿ ಹರಪನಹಳ್ಳಿ ಪಾಳೆಗಾರರು ನಾಣ್ಯಗಳನ್ನು ಉಪಯೋಗಿಸಿರುವರು. ಈ ನಾಣ್ಯ ೧೦ ೧/೨ ಇರುವುದು. ಇವರು ಬರೆದ ಪತ್ರಗಳಲ್ಲಿ ಈ ನಾಣ್ಯದ ವಿಚಾರ ಬರುವುದು. ನಾಣ್ಯದ ಒಂದು ಮುಖದಲ್ಲಿ ತಮ್ಮ ಮನೆ ದೇವರಾದ ಉಚ್ಚಂಗೆಮ್ಮಳ ಚಿತ್ರವಿದ್ದರೆ, ಇನ್ನೊಂದು ಮುಖದಲ್ಲಿ ಆಂಜನೇಯ ದೇವರ ಚಿತ್ರವಿರುವುದಾಗಿ ತಿಳಿದುಬರುತ್ತದೆ.

ಬ್ರಿಟೀಷ್ ಗ್ಯಾಸೆಟಿಯರ್‌ನ ಪ್ರಕಾರ ಹರಪನಹಳ್ಳಿ ನಾಯಕರು ತಮ್ಮ ಸೇನಾಬಲವನ್ನು ಕಡಿಮೆ ಮಾಡಿದಾಗ ಹೈದರಾಬಾದ್ ನವಾಬರು, ಹೂಟಿ ಮುರಾರಿರಾವ್ ಘೋರ್ಪಡೆ, ಪೇಶ್ವೆಗಳಿಗೆ ಒಂದು ವರ್ಷಕ್ಕೆ ಕೆಳಗಿನಂತೆ ಕಪ್ಪ ಕೊಡುತ್ತಿದ್ದರು.

a. ಹೈದರಾಬಾದ್ ನವಾಬರಿಗೆ – ೧೨,೦೦೦ ಪಗೋಡಗಳು.

b. ಹೂಟಿ ಮುರಾರಿರಾವ್‌ಗೆ – ೬,೦೦೦ ಪಗೋಡಗಳು.

c. ಪೇಶ್ವೆಗಳಿಗೆ – ೨,೦೦,೦೦೦ ಪಗೋಡಗಳು.

ಪಾಳೆಯಗಾರರಿಗೆ ವಾರ್ಷಿಕ ಆದಾಯ–೮,೦೦,೦೦೦ ವರಾಹಗಳು ಎಂದು ತಿಳಿಸಿದೆ. ಮುಂದೆ ಬ್ರಿಟೀಷರ ಆಡಳಿತ ಅವಧಿಯಲ್ಲಿ ೧೭೮೨ ರಲ್ಲಿ ರೂಪಾಯಿ, ಅರ್ಧ ರೂಪಾಯಿ, ಪಾವಲಿ (ನಾಲ್ಕಾಣೆ), ಒಂದು ಆಣೆ ಬಳಕೆಗೆ ಬಂದವು. ೧೯೧೮ ರಲ್ಲಿ ನೋಟು ಚಲಾವಣೆ ಪ್ರಾರಂಭಗೊಂಡಿತು. ರೂಪಾಯಿ, ಅರ್ಧ ರೂಪಾಯಿ ನಾಣ್ಯಗಳು ಬೆಳ್ಳಿಯಿಂದ ತಯಾರಾಗಿದ್ದವು. ಕಾಸು, ಮೂರು ಕಾಸು, ಆಣೆ, ನಿಕಲ್ ನಾಣ್ಯಗಳು ಬಳಕೆಯಲ್ಲಿದೆ. ೧೯೫೭ ರಲ್ಲಿ ನಾಣ್ಯ ಪದ್ಧತಿ ಸುಧಾರಣೆ ಹೊಂದಿತು. ಪ್ರಸ್ತುತ ಒಂದು, ಎರಡು, ಐದು, ಹತ್ತು, ೨೦, ೫೦, ೧೦೦, ೨೦೦, ೫೦೦, ೨೦೦೦ ರೂಪಾಯಿ ಮೌಲ್ಯದ ನೋಟುಗಳು ಚಲಾವಣೆಯಲ್ಲಿವೆ.

## ತೂಕ ಮತ್ತು ಅಳತೆ

ತೂಕ ಮತ್ತು ಅಳತೆಯಲ್ಲಿ ಪ್ರಾದೇಶಿಕ ವ್ಯತ್ಯಾಸವಿರುತ್ತದೆ. ಶಾಸನಗಳಲ್ಲಿ ಖಂಡುಗ, ಕೊಳಗಗಳನ್ನು ದವಸ–ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದ ಬಗ್ಗೆ ಉಲ್ಲೇಖವಿದೆ. ವೀಸೆ ಸೇರುಗಳನ್ನು, ಎಣ್ಣೆ ಅಳೆಯುವ ಸೇರು, ಪಾವು, ಚಟಾಕುಗಳೆಂದು ಕರೆಯುತ್ತಿದ್ದರು. ಭೂಮಿಯನ್ನು ಅಳೆಯಲು ಗೇಣು, ಪಾದಳತೆ, ಕೋಲುಗಳನ್ನು ಬಳಸುತ್ತಿದ್ದರು. ಪ್ರಾಚೀನ ಕಾಲದ ಅರಸರಲ್ಲಿ ಕೋಲುಗಳು ಪ್ರಚಲಿತದಲ್ಲಿದ್ದು, ದೇವಾಲಯಗಳಲ್ಲಿ ಇಡುತ್ತಿದ್ದರು. ಹೊಲಗಳನ್ನು ಅಳೆಯಲು 'ಗಳೆ' ಗಳನ್ನು ಬಳಸುತ್ತಿದ್ದರು. ಆಯಾ ಊರುಗಳಿಗೆ ರಾಜನು ಅಳತೆಗೋಲುಗಳನ್ನು ನಿರ್ಧರಿಸುತ್ತಿದ್ದನು. ಉದಾಹರಣೆಗೆ ಕುರುಗೋಡು ಊರಿನಲ್ಲಿ ಹದಿನೆಂಟು ಗೇಣಿನ ಕೋಲನ್ನು ಉಪಯೋಗಿಸಬೇಕೆಂದು ರಾಜನು ಶಾಸನವನ್ನು ಹೊರಡಿಸಿದ್ದನು. ಇಂತಹ ಕೋಲುಗಳ ಒಂದು ಮಾದರಿಯನ್ನು ಆಯಾ ಊರಿನ ದೇವಾಲಯಗಳಲ್ಲಿಡುತ್ತಿದ್ದರು. ಇದಕ್ಕೆ ಪುರಾವೆಯಾಗಿ ದೇವಾಲಯದ ಗೋಡೆಯ ಮೇಲೆ ಈ ಶಾಸನವಿದೆ. "ಯೀ ಅಯ್ವತ್ತು ಗೇಣು ಗಡಿಬವ ಸಲಿಸದೆ ಕಿತ್ತವಂಗೆ ಕುಂಬೀ ನರಕ ಸಂತಾನ ಕ್ಷಯವಕ್ಕುಂ" ಎಂದಿದೆ. ಹೀಗೆ ನೂರಾರು ಅಳತೆ ಕೋಲುಗಳ ಹೆಸರು ಕಂಡುಬರುತ್ತವೆ. ಈ ಅಳತೆ ಕೋಲುಗಳಿಗೆ ಆಯಾ ಊರುಗಳ ಹೆಸರನ್ನೇ ಕೊಡುತ್ತಿದ್ದರು. ಕೋಗಳಿಯ ಗಡಿಂಬ ಎಂಬ ಊರನ್ನು ಇದಕ್ಕೆ ಉದಾಹರಿಸಬಹುದು. ಈ ಕೋಲುಗಳ ನೆರವಿನಿಂದ ಹೊಲಗಳನ್ನು 'ಮತ್ತರು' ಮತ್ತು 'ಕಮ್ಮ', ಕಂಬಗಳೆಂಬುದಾಗಿ ಅಳೆಯುತ್ತಿದ್ದರು. ಒಂದು ಮತ್ತರಿಗೆ ೬೦೦ ಕಂಗಗಳು. ಇದಕ್ಕೆ ಆಧಾರ ಕ್ರಿ.ಶ.೧೧೮೯ ರ ಒಂದು ಶಾಸನ ತಿಳಿಸುತ್ತದೆ. ಒಂದು ಮತ್ತರು ೬೦೦ ಕಮ್ಮಗಳಿಗೆ ಸಮಾನವಾಗುತ್ತದೆ.

| | | |
|---|---|---|
| ೧ | ಖಂಡುಗ | = ೪ ಪಂಚಕ |
| ೧ | ಪಂಚಕ | = ೫ ಕೊಳಗ |
| ೧ | ಕೊಳಗ | = ೪ ಬಳ್ಳ |
| ೧ | ಬಳ್ಳ | = ೪ ಮಾನ |
| ೧ | ಮಾನ | = ೪ ಸೊಲ್ಲಿಗೆ |
| ೧ | ಸೊಲ್ಲಿಗೆ | = ೪ ಗಿದ್ದಿಗೆ |
| ೧ | ಭಾರ | = ೨೦ ತೊಲ |
| ೧ | ತೊಲ | = ೫ ಬೀಸಗೆ |
| ೧ | ಬೀಸಗೆ | = ೨೦ ಫಲ |
| ೧ | ಫಲ | = ೪ ಕರ್ಷ |
| ೧ | ಕರ್ಷ | = ೪ ಸುವರ್ಣ |

ಮನೆ, ಹಿತ್ತಲುಗಳನ್ನು ಅಳೆಯಲು, ಹಸ್ತ, ಮೊಳ, ಮಾರುಗಳನ್ನು ಬಳಸುತ್ತಿದ್ದರು. ಇವು ಪ್ರತಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತಿತ್ತು. ದೇಶ ಸ್ವಾತಂತ್ರ್ಯ ಪಡೆದ ಬಳಿಕ ೧೯೫೮ ರ ಕಾಯ್ದೆಯಂತೆ ಮೆಟ್ರಿಕ್ ಪದ್ಧತಿಯು ೧೯೬೨ ರಲ್ಲಿ ಕಡ್ಡಾಯವಾಗಿ ಜಾರಿಯಾಯಿತು. ಅದರ ಪ್ರಕಾರ ಎಣ್ಣೆ ಮಾಪನಕ್ಕೆ ಸೇರು, ಪಾವು ಚಟಾಕುಗಳ ಬದಲಿಗೆ ಲೀಟರ್, ವೀಸೆಗೆ ಬದಲು ಕಿಲೋ ಗ್ರಾಮ್, ಉದ್ದದ ಅಳತೆಗೆ ಸೆಂ.ಮೀ.ಗಳು ಬಳಕೆಗೆ ಬಂದವು. ಅಳತೆಯನ್ನು ನಿಖರಗೊಳಿಸಿ ಏಕತೆಯನ್ನು ಸಾಧಿಸುವ ಉದ್ದೇಶದಿಂದ ಜಿಲ್ಲಾ ಮತ್ತು ಉಪ ವಿಭಾಗಗಳಲ್ಲಿ ಕಾನೂನು ಮಾಪನ ಇಲಾಖೆಯನ್ನು ಸರಕಾರ ಸ್ಥಾಪಿಸಿತು. ಹರಪನಹಳ್ಳಿ ತಾಲ್ಲೂಕು ಈ ಉಪ ವಿಭಾಗದ ವ್ಯಾಪ್ತಿಗೆ ಬರುವುದು.

## ಸಂತೆ

ಜನಪದರು ತಮ್ಮ ಜೀವನವನ್ನು ಸಾರ್ಥಕವಾಗಿ ನಡೆಸುವುದಕ್ಕಾಗಿ ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ಹಲವು ವ್ಯವಸ್ಥೆಗಳನ್ನು ರೀತಿ-ರಿವಾಜುಗಳನ್ನು ರೂಪಿಸಿಕೊಂಡಿರುವರು. ಜೀವನದ ನಿರ್ವಹಣೆಯನ್ನು ಸುಗಮಗೊಳಿಸಲೆಂದು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನುಭವದೊಂದಿಗೆ ತಮ್ಮದೇ ವಿಧಾನ ಕ್ರಮಗಳನ್ನು ಸ್ಥಾಪಿಸಿಕೊಂಡಿದ್ದರು. ಹೀಗೆ ಸ್ಥಾಪಿಸಿಕೊಂಡ ಅನೇಕ ಪದ್ಧತಿ, ನಿಯಮ-ಕಟ್ಟಳೆ ಸಂಪ್ರದಾಯಗಳನ್ನು ಒಳಗೊಂಡಿರುವ ಸಂತೆ ಜನವಸತಿಯ ಎಲ್ಲಾ ಪ್ರದೇಶಗಳಲ್ಲಿ ಅಸ್ತಿತ್ವ ಪಡೆದಿವೆ.

**ಸಂತೆ ಪದದ ಅರ್ಥ**

ಇದು ವಿಶಾಲ ಹಾಗೂ ವಿವಿಧ ಅರ್ಥವನ್ನು ಹೊಂದಿರುತ್ತದೆ. ಸಂಸ್ಕೃತ ಪದ ಸಂಸ್ಥಾದ ಎನ್ನುವ ತದ್ಭವ ರೂಪ ಸಂಸ್ಥೆ ಎಂದು ಕನ್ನಡದಲ್ಲಿ ಪ್ರಯೋಗವಾಗಿದೆ. ಕೊಡು, ಕೊಳ್ಳುವ ಉದ್ದೇಶದಿಂದ ಜನ ಸೇರುವ ಗುಂಪು–ಸಮುದಾಯವೇ ಸಂತೆ ಎಂದು ಶಿವರಾಮ ಕಾರಂತರು ತಮ್ಮ ಸಿರಿಗನ್ನಡ ಅರ್ಥಕೋಶದಲ್ಲಿ(೧೯೮೧, ಪು.ಸಂ.೫೧೬) ವಿವರಿಸಿರುವರು. ಸಂಸ್ಥೆ ಎಂಬ ಪದವು ಸಮಾಜಶಾಸ್ತ್ರದ ಒಂದು ಪರಿಕಲ್ಪನೆ (ಶಂಕರರಾವ್ ಚ.ನ. ಸಮಾಜಶಾಸ್ತ್ರ ೨೦೦೫ ಪು–೫೨) 'ಸಂತೆ' ಪದಕ್ಕೆ ಗೊಂದಲ, ಗದ್ದಲ, ದೊಂಬಿ, ಕೋಲಾಹಲ, ಅವ್ಯವಸ್ಥೆ, ಜನಸಂದಣಿ ನಾನಾಬಗೆಯ ಜನರ ಗುಂಪು, ಸಮೂಹ ಮೊದಲಾದ ಪರ್ಯಾಯ ಪದಗಳಿರುತ್ತವೆ.

ಒಂದು ನಿರ್ದಿಷ್ಟ ಸ್ಥಳ, ದಿನದಂದು ಸಮುದಾಯದ ಜನಪದರು ಸೇರಿ ತಮ್ಮ ಅಗತ್ಯಗಳನ್ನು ಕೊಡುಕೊಳ್ಳುವಿಕೆಯ ಮೂಲಕ ಪೂರೈಸಿಕೊಳ್ಳುವ ವ್ಯವಸ್ಥೆಯಾಗಿದೆ. ಸುಸಂಘಟಿತ, ವ್ಯವಸ್ಥಿತ ಉದ್ದೇಶಪೂರ್ವ ನೆರೆಯುವ ಚಟುವಟಿಕೆಗಳ ಕೇಂದ್ರವಾಗಿರುತ್ತದೆ.

ಸಂತೆ– ಇದರ ಹುಟ್ಟು ಮತ್ತು ಬೆಳವಣಿಗೆ, ಇಂತಹ ದಿನದಂದು, ಇಂತಹ ವ್ಯಕ್ತಿಯಿಂದ ಸ್ಥಾಪನೆಯಾದಿತೆಂದು ನಿಖರವಾಗಿ ಹೇಳಬರುವಂತಿಲ್ಲ.

ಪ್ರಾಚೀನ ಕಾಲದಿಂದಲೂ ಮಾನವ ಆರ್ಥಿಕ ಚಟುವಟಿಕೆಗಳಲ್ಲಿ ಸಂತೆಯು ಮಹತ್ವದ ಪಾತ್ರವನ್ನು ವಹಿಸಿದೆ. ರೈತರು ತಾವು ಬೆಳೆದ ದವಸಧಾನ್ಯಗಳನ್ನು ಬೇರೆಯವರಿಗೆ ಮಾರಾಟ ಮಾಡಿ ತನಗೆ ಅವಶ್ಯಕವಾದ ಸರಕು ಸಾಮಗ್ರಿಗಳನ್ನು ಪಡೆಯುವುದೇ ಸಂತೆಗೆ ಕಾರಣವಾಗಿದೆ.

ಇದು ನಡೆಯುವ ಸ್ಥಳಕ್ಕೆ ಸಂತೆಮಾಳ ಎಂದು ಕರೆಯುವರು. ಹೆಚ್ಚು ದೊಡ್ಡ ದೊಡ್ಡ ಮರಗಳು ಬೆಳೆದ ಸ್ಥಳ ಅಥವಾ ದೇವಸ್ಥಾನದ ಬದಿಯಲ್ಲಿಯ ಒಂದು ಸ್ಥಳವಾಗಿರುತ್ತದೆ.

ರಾಬರ್ಟ್ ಪೀವೆಲ್ ರುಫರಗಾಟನ್ ಎಂಪೈರ್ ತಮ್ಮ ಗ್ರಂಥದಲ್ಲಿ ಒಂದೊಂದು ದಿನ ಒಂದೊಂದು ಭಾಗದಲ್ಲಿ ಸಂತೆ ಸೇರುತ್ತಿದ್ದುದನ್ನು ತಿಳಿಸಿರುವನು. ಪೋರ್ಚುಗೀಸರ ಪ್ರವಾಸಿಗ ಡೊಮಿಂಗೋ ಪಾಯೇಸನು ವಿಜಯನಗರದಲ್ಲಿ ಪ್ರತಿನಿತ್ಯವೂ ಒಂದೊಂದು ಕಡೆ ಸಂತೆ ನಡೆಯುತ್ತಿದ್ದುದನ್ನು ಹೀಗೆ ತಿಳಿಸಿರುವನು,

ಕೃಷ್ಣ ಬಜಾರದಲ್ಲಿ ಸೋಮವಾರ, ಅಚ್ಯುತ ಬಜಾರದಲ್ಲಿ ಮಂಗಳವಾರ, ಪಾನಸುಪಾರಿ ಬಜಾರಿನಲ್ಲಿ ಶುಕ್ರವಾರ ಹೀಗೆ ಒಂದೊಂದು ದಿನ ಒಂದು ಸಂತೆ ಸೇರುತ್ತಿದ್ದಿತು. ವಿರೂಪಾಕ್ಷ, ಮಾಲ್ಯವಂತ, ವರದ ರಾಜಮ್ಮ, ವಿಠ್ಠಲ ಬಜಾರ ಮೊದಲಾದ ದೇವಾಲಯ ಮತ್ತು ಮುಖ್ಯ ಬೀದಿಗಳಲ್ಲಿ ಸಂತೆಗಳು ನಡೆಯುತ್ತಿದ್ದವು.

## ತಾಲ್ಲೂಕಿನ ಪ್ರಮುಖ ಸಂತೆಗಳು

| ಕ್ರ. ಸಂ. | ಗ್ರಾಮಗಳು | ವಾರ | ಅವಧಿ | ಸೇರುವ ಜನಸಂಖ್ಯೆ |
|---|---|---|---|---|
| ೧ | ಹರಪನಹಳ್ಳಿ ಪಟ್ಟಣ | ಶನಿವಾರ | ಒಂದು ದಿನ | ೧೦ ಸಾವಿರ |
| ೨ | ಹಲುವಾಗಲು | ಗುರುವಾರ | ಒಂದು ದಿನ | ೫ ಸಾವಿರ |
| ೩ | ಉಚ್ಚಂಗಿದುರ್ಗ | ಗುರುವಾರ | ಒಂದು ದಿನ | ೨ ಸಾವಿರ |
| ೪ | ಚಿಗಟೇರಿ | ಮಂಗಳವಾರ | ಒಂದು ದಿನ | ೧ ಸಾವಿರ |
| ೫ | ತೆಲಗಿ | ಸೋಮವಾರ | ಒಂದು ದಿನ | ೧ ಸಾವಿರ |
| ೬ | ಅರಸಿಕೆರೆ | ಶುಕ್ರವಾರ | ಒಂದು ದಿನ | ೧ ಸಾವಿರ |
| ೭ | ಮತ್ತಿಹಳ್ಳಿ | ಬುಧವಾರ | ಒಂದು ದಿನ | ೧ ಸಾವಿರ |
| ೮ | ಕುಂಚೂರು | ಮಂಗಳವಾರ | ಒಂದು ದಿನ | ೫೦೦ |
| ೯ | ನೀಲಗುಂದ | ಬುಧವಾರ | ಒಂದು ದಿನ | ೫೦೦ |
| ೧೦ | ನಂದಿಬೇವೂರು | ಸೋಮವಾರ | ಒಂದು ದಿನ | ೮೦೦ |
| ೧೧ | ದುಗ್ಗತಿ | ಗುರುವಾರ | ಒಂದು ದಿನ | ೫೦೦ |

## ಅಧ್ಯಾಯ–೨

# ಸಾರಿಗೆ ಮತ್ತು ಸಂಪರ್ಕ

**ಮಾ**ನವ ಸಮಾಜದ ಸರ್ವಾಂಗೀಣ ಪ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯು ಮಹತ್ವದ ಪಾತ್ರ ವಹಿಸುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ, ಲಭ್ಯವಿರುವ ಭೌಗೋಳಿಕ ಸಂಪನ್ಮೂಲಗಳ ಸದ್ಬಳಕೆ, ಕಾರ್ಯಶೀಲ ಕೃಷಿರಂಗ, ಉದ್ಯಮಶೀಲ ಕೈಗಾರಿಕಾ ರಂಗ, ಯೋಜನಾಶೀಲ ವಾಣಿಜ್ಯ–ವ್ಯಾಪಾರ, ವಿವೇಚನಾಶೀಲ ಬ್ಯಾಂಕಿಂಗ್, ಪ್ರಗತಿಶೀಲ ಸಾರಿಗೆ ಸಂಪರ್ಕ ವ್ಯವಸ್ಥೆ ಹಾಗೂ ಸೃಜನಶೀಲ ತಾಂತ್ರಿಕ ಬೆಳವಣಿಗೆಗಳು ಅತ್ಯಗತ್ಯವಾಗಿದ್ದು, ಇವುಗಳ ಅರ್ಥಪೂರ್ಣ ಪ್ರಗತಿ, ಆರ್ಥಿಕ ಅಭಿವೃದ್ಧಿಗೆ ಪೂರಕವಾಗುತ್ತದೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ಆರ್ಥಿಕ ಅಂಶಗಳನ್ನು ಪರಸ್ಪರ ಜೋಡಿಸುವಲ್ಲಿ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಪಾತ್ರ ಹಿರಿದಾಗಿದೆ. ಅದರಲ್ಲೂ ಈ ರಂಗಕ್ಕೆ ಸಂಬಂಧಿಸಿದಂತೆ ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಾಗಿರುವ ವೈಜ್ಞಾನಿಕ ಪ್ರಗತಿ ಮತ್ತು ಕಂಪ್ಯೂಟರ್ ತಂತ್ರಜ್ಞಾನದ ವಿಸ್ಮಯಗಳು, ಸಾರಿಗೆ–ಸಂಪರ್ಕ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿವೆ. ಸಂಪರ್ಕ ಮಾಧ್ಯಮ ರಂಗಕ್ಕೆ ಸಂಬಂಧಿಸಿದಂತೆ, ಅದರಲ್ಲೂ ಕಂಪ್ಯೂಟರ್ ಅಂತರ್ಜಾಲ ವ್ಯವಸ್ಥೆ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಗಿರುವ ಸಂಶೋಧನೆಗಳಿಂದಾಗಿ ವಿಶಾಲ ಪ್ರಪಂಚವಿಂದು ಕಿರಿದಾಗುತ್ತಿದೆಯೇನೋ ಎಂಬ ಭಾವನೆ ಮೂಡುತ್ತಿದ್ದು, ಸಾವಿರಾರು ಕಿ.ಮೀ.ಗಳ ದೂರ, ಅಂತರ ಎಂದು ಅನಿಸದಂತಾಗಿದೆ. ಇಂದು ಸಂಪರ್ಕ ಮಾಧ್ಯಮದ ಸಕಲ ಸಾಧನಗಳು ಒಂದಲ್ಲಾ ಒಂದು ರೀತಿಯ ತಾಂತ್ರಿಕ ಅಭಿವೃದ್ಧಿಯಿಂದಾಗಿ ಮಾನವನ ದೈನಂದಿನ ಬದುಕನ್ನು ಗಣನೀಯ ಪ್ರಮಾಣದಲ್ಲಿ ಮಾರ್ಪಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ. ಇದೇ ರೀತಿ ಹರಪನಹಳ್ಳಿ ತಾಲ್ಲೂಕಿನಲ್ಲೂ ಕೂಡ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳು ಪ್ರಗತಿ ಪಥದಲ್ಲಿ ಮುನ್ನಡೆದಿರುವುದು ಗಮನಾರ್ಹ ಅಂಶವಾಗಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾರಿಗೆ ವ್ಯವಸ್ಥೆ ಬಹುಕಾಲ ನಿರಾಶಾದಾಯಕ ವಾಗಿದ್ದಿತು. ೧೯ನೇ ಶತಮಾನದಿಂದ ಪ್ರಮುಖ ರಸ್ತೆಗಳು ವಾಹನಗಳ ಸಂಚಾರಕ್ಕೆ ಯೋಗ್ಯವಾಗಿದ್ದವು. ಈ ಹೆದ್ದಾರಿಗಳ ಮೇಲೆ ಖಾಸಗಿ ವಾಹನಗಳು ಚಲಿಸುತ್ತಿದ್ದವು. ಕಾರಣ ರಸ್ತೆಗಳು ಪ್ರತಿ ವರ್ಷ ದುರಸ್ತಿಗೆ ಬರುತ್ತಿದ್ದವು. ಮಳೆಗಾಲದಲ್ಲಿ ಹರಪನಹಳ್ಳಿ ಸಂತೆಗೆ, ದಲ್ಲಾಳಿಗಳ ಅಂಗಡಿಗಳಿಗೆ ಬೆಳೆದ ದವಸ ಧಾನ್ಯಗಳನ್ನು ಎತ್ತಿನ ಗಾಡಿಯಲ್ಲಿ ತುಂಬಿಕೊಂಡು ಹೋಗುವುದಕ್ಕೆ ಆಗುತ್ತಿರಲಿಲ್ಲ. ವ್ಯಾಪಾರಿಗಳು ಹಳ್ಳಿಗಳಿಗೆ ಬರುತ್ತಿರಲಿಲ್ಲ. ಲಾರಿ, ಟ್ರಕ್ಕುಗಳು ಚಲಿಸುವಂತಿರಲಿಲ್ಲ. ಹರಪನಹಳ್ಳಿಯ ರೈತರು ದವಸ ಧಾನ್ಯಗಳನ್ನು ಮಾರಾಟ ಮಾಡಲು ದಾವಣಗೆರೆ, ಕೊಟ್ಟೂರು, ರಾಣೆಬೆನ್ನೂರಿಗೆ ಹೋಗುತ್ತಿದ್ದರು. ೧೯೦೦ ರ ನಂತರ ವರ್ತಕರು ಹರಪನಹಳ್ಳಿಗೆ ಆಗಮಿಸುತ್ತಿದ್ದರು. ಹೆದ್ದಾರಿ ರಸ್ತೆಗೆ ಸೇತುವೆ ಒಂದೊಂದಾಗಿ ನಿರ್ಮಾಣಗೊಳ್ಳಲು ಪ್ರಾರಂಭವಾಯಿತು. ಪ್ರಮುಖ ಜಿಲ್ಲಾ ರಸ್ತೆ ಹರಿಹರದಿಂದ ಹರಪನಹಳ್ಳಿಗೆ, ಹರಪನಹಳ್ಳಿಯಿಂದ ಹೊಸಪೇಟೆ ಮೂಲಕ ಬಳ್ಳಾರಿಗೆ ೧೪೦ ಕಿ.ಮೀ. ರಸ್ತೆಯನ್ನು ೧೯೨೦ ರಲ್ಲಿ ನಿರ್ಮಿಸಲಾಯಿತು. ಕೃಷ್ಣಾಚಾರ್ಯ ಮತ್ತು ಎಂ.ಜಿ.ಆರ್ ಬಸ್ಸುಗಳು ಜನರಿಗೆ ಸಂಪರ್ಕ ಸೇವೆಯನ್ನು ಒದಗಿಸಿದವು. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಪ್ರಾರಂಭವಾಗುವವರೆಗೂ ಹರಪನಹಳ್ಳಿ ಮಾರ್ಗದ ಪ್ರಮುಖ ಹೆದ್ದಾರಿಗಳು ಸುಸ್ಥಿತಿಯಲ್ಲಿರಲಿಲ್ಲ.

೧೯೩೦ ರಲ್ಲಿ ಮದ್ರಾಸ್ ಸರ್ಕಾರವು ನಾಗಪುರ ಯೋಜನೆ ಪ್ರಕಾರ ರಾಷ್ಟ್ರೀಯ, ರಾಜ್ಯ ಜಿಲ್ಲಾ, ಗ್ರಾಮೀಣ ದಾರಿಗಳಿಗೆ ಸಂಬಂಧಿಸಿದ ರಸ್ತೆಗಳ ನಿರ್ಮಾಣ ಮಾಡಿದರು. ಬಳ್ಳಾರಿ–ಹರಪನಹಳ್ಳಿ, ಹರಪನಹಳ್ಳಿ–ಹಡಗಲಿ, ಹರಪನಹಳ್ಳಿ–ಸೋಮಲಾಪುರ, ರಾಯದುರ್ಗ – ಹೊಸಪೇಟೆ, ಹರಪನಹಳ್ಳಿ – ಕುಡಿತಿನಿ, ಹರಪನಹಳ್ಳಿ – ಕಂಪಲಿ ಮುಂತಾದವು. ಈ ಮಾರ್ಗಗಳು ಬಸ್ಸು, ಲಾರಿ, ಟ್ರಕ್ಕು, ಕಾರು, ಸೈಕಲ್ ಓಡಿಸಲು ಅನುಕೂಲವಾಗಿದ್ದವು. ಎಂ.ಜಿ. ಆಟೋಮೊಬೈಲ್ ಬಳ್ಳಾರಿ ಕಂಪನಿಯನ್ನು ಪ್ರಾರಂಭಿಸಿ ಕ್ರಿ.ಶ. ೧೯೨೪ ರಲ್ಲಿಯೇ ನೀಲಕಂಠೇಶ್ವರ ಮೋಟಾರ್ ಸರ್ವೀಸ್ ಎನ್ನುವ ಒಂದೇ ಬಸ್ಸು ಸಂಚಾರ ಆರಂಭಿಸಿತು. ನಂತರ ವರ್ಕ್‌ಶಾಪ್ ಅನ್ನು ಆರಂಭಿಸಿದರು. ಅದು ಕ್ರಿ.ಶ. ೧೯೩೭ ರಲ್ಲಿ ಬಳ್ಳಾರಿ ಕೋಟೆ ಭಾಗದಲ್ಲಿ ಕಾರ್ಯಾರಂಭಿಸಿತು. ೧೯೫೭ ರಲ್ಲಿ ಸಿಲ್ವರ್‌ಪ್ಲೇಟಿನ ಬಸ್ಸುಗಳು ನಂತರ ಡಿಲೆಕ್ಸ್ ಮತ್ತು ಲಕ್ಷುರಿ ಬಸ್ಸುಗಳು ಸಂಚಾರ ಆರಂಭಿಸಿದವು.

ಎಂ.ಜಿ. ಬ್ರದರ್ಸ್ ಬಸ್ಸುಗಳ ಜೊತೆ–ಜೊತೆಯಲ್ಲಿ ಕೃಷ್ಣಾಚಾರ್ಯ, ಶ್ರೀ ವೆಂಕಟೇಶ್ವರ ಮೋಟರ್ ಸರ್ವೀಸ್ (ಎಸ್.ವಿ.ಎಂ.ಎಸ್) ಬಸ್ಸುಗಳು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಹೊರಡುತ್ತಿದ್ದವು. ಇವರ ಮೋಟರ್ ವರ್ಕ್‌ಶಾಪ್ ಹೊಸಪೇಟೆಯಲ್ಲಿದ್ದಿತು. ಸುಮಾರು ಇಪ್ಪತ್ತೆಂಟು ಬಸ್ಸುಗಳು ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿ, ಹರಿಹರ, ಶಿವಮೊಗ್ಗಗಳಿಗೆ ಚಲಿಸುತ್ತಿದ್ದವು.

ಹರಪನಹಳ್ಳಿ ಬಸ್ ಡಿಪೋ ೧೮-೧೧-೨೦೧೦ ರಲ್ಲಿ ಪ್ರಾರಂಭವಾಯಿತು. ಇಲ್ಲಿಂದ ಹೋಗಿ ಬರುವ ಬಸ್ ಸಂಖ್ಯೆ-೪೫. ಹರಪನಹಳ್ಳಿಯಿಂದ ಬೆಂಗಳೂರಿಗೆ ಮೂರು ಸಾಮಾನ್ಯ ಬಸ್ಸುಗಳು, ಒಂದು ರಾಜಹಂಸ ಬಸ್ಸು ಹೊರಡುತ್ತವೆ.

೧೧ ಪ್ರಮುಖ ಜಿಲ್ಲಾ ರಸ್ತೆಗಳಲ್ಲಿ ೫೩, ಇತರ ಜಿಲ್ಲಾ ರಸ್ತೆಗಳಲ್ಲಿ ಐದು ಹಾಗೂ ಗ್ರಾಮಾಂತರ ರಸ್ತೆಗಳಲ್ಲಿ ೪೧ ಗಣತಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಜಿಲ್ಲೆಯ ರಾಜ್ಯ ಹೆದ್ದಾರಿಗಳಲ್ಲಿ ಪ್ರತಿ ೨೬ ಕಿ.ಮೀ.ಗೆ, ಜಿಲ್ಲಾ ಇತರ ರಸ್ತೆಗಳಲ್ಲಿ ಪ್ರತಿ ೨೫ ಕಿ.ಮೀ.ಗೆ, ಜಿಲ್ಲಾ ಇತರ ರಸ್ತೆಗಳಲ್ಲಿ ಪ್ರತಿ ೨೪ ಕಿ.ಮೀ.ಗೆ ಹಾಗೂ ಗ್ರಾಮಾಂತರ ರಸ್ತೆಗಳಲ್ಲಿ ಪ್ರತಿ ೧೧೧ ಕಿ.ಮೀ.ಗಳಿಗೆ ಒಂದರಂತೆ ಒಟ್ಟು ೧೧೦ ಗಣತಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ತಾಲ್ಲೂಕಿನಲ್ಲಿದ್ದ ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳನ್ನು ಮುಂದೆ ನೀಡಲಾಗಿದೆ.

## ರಾಷ್ಟ್ರೀಯ ಹೆದ್ದಾರಿ

ರಾಷ್ಟ್ರದ ವಿವಿಧ ಪ್ರದೇಶಗಳನ್ನು, ವಿವಿಧ ರಾಜ್ಯ ಹೆದ್ದಾರಿಗಳನ್ನು ಜೋಡಿಸುವ ಮೂಲಕ ರಾಷ್ಟ್ರ ವ್ಯಾಪಿ ಸಂಪರ್ಕವನ್ನು ಜೋಡಿಸುವ ಇವು ರಾಷ್ಟ್ರೀಯ ಮಹತ್ವದ ಹೆದ್ದಾರಿಗಳಾಗಿವೆ. ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು ೧೮೭.೪೨ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ ಇದ್ದು, ಹರಪನಹಳ್ಳಿ ತಾಲ್ಲೂಕಿನಲ್ಲಿ ಯಾವುದೇ ರಾಷ್ಟ್ರೀಯ ಹೆದ್ದಾರಿ ಹಾಯ್ದು ಹೋಗುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

## ರಾಜ್ಯ ಹೆದ್ದಾರಿ

ರಾಷ್ಟ್ರೀಯ ಹೆದ್ದಾರಿ, ರಾಜ್ಯ ಜಿಲ್ಲಾ ಕೇಂದ್ರ ಹಾಗೂ ಪ್ರಮುಖ ಪಟ್ಟಣಗಳನ್ನು ಪರಸ್ಪರ ಜೋಡಿಸುವ ಇವು ರಾಜ್ಯ ಮಟ್ಟದಲ್ಲಿ ಸಂಪರ್ಕವನ್ನು ಒದಗಿಸುವ ಪ್ರಮುಖ ಕೊಂಡಿಗಳಾಗಿವೆ. ಈ ರಸ್ತೆಗಳ ನಿರ್ವಹಣೆಯು ಲೋಕೋಪಯೋಗಿ ಇಲಾಖೆಯದಾಗಿದ್ದು, ತಗಲುವ ವಾರ್ಷಿಕ ವೆಚ್ಚವನ್ನು ರಾಜ್ಯ ನಿಧಿಯಿಂದ ಬಳಸಲಾಗುತ್ತದೆ. ತಾಲ್ಲೂಕಿನಲ್ಲಿ ೨೦೦೭-೦೮ ರಲ್ಲಿ ೧೨೮.೭೦ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಇದ್ದರೆ, ೨೦೧೪-೧೫ ಮತ್ತು ೨೦೧೫-೧೬ ರಲ್ಲಿ ೨೧೫.೪೦ ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಇತ್ತು.

## ಮುಖ್ಯ ಜಿಲ್ಲಾ ರಸ್ತೆ

ಜಿಲ್ಲೆಯ ವಿವಿಧ ಭಾಗಗಳನ್ನು ರಾಜ್ಯ ಹೆದ್ದಾರಿಗಳೊಡನೆ ಜೋಡಿಸುವ ಕೊಂಡಿ ಇದಾಗಿದ್ದು, ಲೋಕೋಪಯೋಗಿ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿದೆ.

ತಾಲ್ಲೂಕಿನಲ್ಲಿ ೨೦೦೭-೦೮ ರಲ್ಲಿ ೧೭೬ ಕಿ.ಮೀ ಉದ್ದದ ಮುಖ್ಯ ಜಿಲ್ಲಾ ರಸ್ತೆಗಳಿದ್ದರೆ, ೨೦೧೪-೧೫ ರಲ್ಲಿ ೩೧೫.೨೦ ಕಿ.ಮೀ. ಆಗಿದ್ದರೆ. ೨೦೧೫-೧೬ರಲ್ಲಿ ಇದು ೩೧೪.೪೦ ಕಿ.ಮೀ ಗೆ ಕುಸಿತ ಕಂಡಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗಿದೆ.

ತಾಲ್ಲೂಕಿನಲ್ಲಿ ೨೦೧೫-೧೬ರಲ್ಲಿ ೩೧೫.೧೭ ಕಿ.ಮೀ ಪಕ್ಕಾ (ಡಾಂಬರ್) ರಸ್ತೆಗಳು, ೩೩೯.೧ ಕಿ.ಮೀ ಜಲ್ಲಿರಸ್ತೆ, ೪೧೩.೪೮ ಕಿ.ಮೀ ಕಚ್ಚಾ (ಮಣ್ಣಿನ ರಸ್ತೆ) ರಸ್ತೆಗಳು ಹೀಗೆ ಒಟ್ಟು ೧೦೬೭.೭೫ ಕಿ.ಮೀ ಉದ್ದದ ರಸ್ತೆಗಳಿದ್ದವು.

## ಪ್ರಾದೇಶಿಕ ಸಾರಿಗೆ ಕಛೇರಿ

ಈ ಇಲಾಖೆಯ ಹೆಸರು ಸಾರಿಗೆ ಇಲಾಖೆ ಎಂದು ಬದಲಾಗುವುದಕ್ಕೆ ಮೊದಲು 'ಮೋಟಾರ್ ವಾಹನಗಳ ಇಲಾಖೆ' ಎಂದೇ ಚಿರ ಪರಿಚಿತವಾಗಿತ್ತು. ರಾಜ್ಯದ ಬೊಕ್ಕಸಕ್ಕೆ ಅಧಿಕ ಆದಾಯ ತರುವ ಕೆಲವೇ ಇಲಾಖೆಗಳಲ್ಲಿ ಒಂದಾಗಿರುವ ಈ ಇಲಾಖೆಯು ಮೋಟಾರು ವಾಹನಗಳ ನೋಂದಣಿ, ನಿಯಂತ್ರಣ, ತೆರಿಗೆ ಸಂಗ್ರಹ, ಚಾಲಕರಿಗೆ, ನಿರ್ವಾಹಕರಿಗೆ ಪರವಾನಗಿ ನೀಡಿಕೆ ಮುಂತಾದ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತದೆ. ೧)ಮೋಟಾರು ವಾಹನಗಳ ಕಾಯ್ದೆ-೧೯೩೯ರ ಕೇಂದ್ರ ಕಾಯ್ದೆIV, ೨), ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮ ಕಾಯ್ದೆ-೧೯೫೭, ೩) ೧೯೬೩ರ ಕರ್ನಾಟಕ ಮೋಟಾರು ವಾಹನಗಳ ನಿಯಮ, ೪) ಮೋಟಾರು ವಾಹನಗಳ ಅಧಿನಿಯಮ (೧೯೮೮ರ ೫೯ನೇ ಕೇಂದ್ರ ಅಧಿನಿಯಮ), ೫) ಕರ್ನಾಟಕ ಮೋಟಾರು ವಾಹನಗಳ ನಿಯಮ ೧೯೮೯, ೬) ಕೇಂದ್ರ ಸರ್ಕಾರದ ಮೋಟಾರು ವಾಹನಗಳ ಅಧಿನಿಯಮ ೧೯೮೯ ಮುಂತಾದ ಕಾಯ್ದೆ ನಿಯಮಗಳನ್ವಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಎಲ್ಲಾ ಕಾಯ್ದೆಗಳ ಜೊತೆಗೆ ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ರೂಪಿಸುವ ಕಾಯ್ದೆಗಳನ್ನು ಜಿಲ್ಲಾಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಅನುಷ್ಟಾನಗೊಳಿಸುತ್ತಿವೆ.

ಈ ಇಲಾಖೆಯು ಕಾರ್ಯಾರಂಭದ ಪೂರ್ವದಲ್ಲಿ ಸಾರಿಗೆ ಸಂಚಾರ, ವಾಹನ ನಿಯಂತ್ರಣಗಳಂತಹ ಕಾರ್ಯಗಳನ್ನು ಜಿಲ್ಲಾ ಬೋರ್ಡ್, ಪುರಸಭೆಗಳು-ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ನಿರ್ವಹಿಸುತ್ತಿದ್ದವು. ೧೯೧೧ರ ಮೈಸೂರು ಸಾರ್ವಜನಿಕ ಸಂಚಾರ ನಿಯಂತ್ರಣ ಕಾಯ್ದೆಯಂತೆ, ಸಾರ್ವಜನಿಕ ವಾಹನ ಸಂಚಾರದ ನಿಯಂತ್ರಣ ಕಾಯ್ದೆಯನ್ವಯ ವಾಹನಗಳ ನೋಂದಣಿ ಹಾಗೂ ವಾಹನ ಚಾಲನಾ ಪರವಾನಗಿಯನ್ನು ಕಡ್ಡಾಯ ಮಾಡಿ ವಾಹನ ಚಾಲಕರಿಗೆ ಪರವಾನಗಿ ನೀಡಲಾಗುತ್ತಿತ್ತು.

ಮೋಟಾರು ವಾಹನಗಳಿಗೆ ಸಂಚಾರ ಪರವಾನಗಿ ನೀಡುವ ಅಧಿಕಾರ ೧೯೨೯ರ ಮೈಸೂರು ಮೋಟಾರು ವಾಹನ ಕಾಯ್ದೆಯಂತೆ ಬೆಂಗಳೂರಿನಲ್ಲಿದ್ದ ಐ.ಜಿ.ಪಿ ಯವರಿಗೆ ಇತ್ತು. ಜಿಲ್ಲಾ ದಂಡಾಧಿಕಾರಿಗಳಿಗೆ ಆಯಾ ಜಿಲ್ಲೆಗಳಲ್ಲಿ ವಾಹನಗಳಿಗೆ ಲೈಸೆನ್ಸ್ ನೀಡುವ ಅಧಿಕಾರವನ್ನು ೧೯೩೭ರಲ್ಲಿ ವಹಿಸಲಾಯಿತು. ಪ್ರಜಾಪ್ರತಿನಿಧಿ ಸಭೆಯ ನಾಯಕ, ಅಧಿಕಾರಿ ಹಾಗೂ ಅಧಿಕಾರೇತರರನ್ನು ಸದಸ್ಯರನ್ನಾಗಿ ಒಳಗೊಂಡಿದ್ದ ಮೈಸೂರು ಸಾರಿಗೆ ಬೋರ್ಡ್, ಮೈಸೂರು ರಸ್ತೆ ಸಾರಿಗೆ ಹಾಗೂ ತೆರಿಗೆ ನಿಯಂತ್ರಣ ಕಾಯ್ದೆಯನ್ನು ೧೯೩೬ರ ಜನವರಿ ೧ ರಂದು ಜಾರಿಗೆ ತರುವ ಮೂಲಕ ಮೋಟಾರು ಸಾರಿಗೆ ನಿಯಂತ್ರಣ ಹಾಗೂ ತೆರಿಗೆ ಕಾಯ್ದೆಗಳಲ್ಲಿ ಏಕರೂಪತೆ ತರಲು ಯತ್ನಿಸಿತು. ತತ್ಪರಿಣಾಮವಾಗಿ ಜಿಲ್ಲಾ ಬೋರ್ಡಿನ ಹಾಗೂ ಪುರಸಭೆಗಳಿಗೆ ಇದ್ದ ತೆರಿಗೆ ವಿಧಿಸುವ ಅಧಿಕಾರ ರದ್ದಾಯಿತು. ಅದಕ್ಕಾಗಿ ಪುರಸಭೆಗಳಿಗೆ ಪರಿಹಾರವನ್ನು ನೀಡಲಾಯಿತು. ಅಲ್ಲದೇ ಪ್ರತ್ಯೇಕ ರಸ್ತೆ ನಿಧಿಯನ್ನೂ ಆರಂಭಿಸಲಾಯಿತು. ಈ ಬೋರ್ಡ್ ಮೇಲಿಂದ ಮೇಲೆ ಸಭೆ ಸೇರಿ ಕ್ರಮ ಕೈಗೊಳ್ಳುತ್ತಿತ್ತು. ತೆರಿಗೆ ಸಂಗ್ರಹಕ್ಕಾಗಿ ಟೋಲ್‌ಗಳನ್ನು ತೆರೆಯಲಾಯಿತು. ಮೋಟಾರು ವಾಹನಗಳ ಪ್ರವಾಸಿಗರಿಗೆ ಅನುಕೂಲವಾಗಲೆಂದು, ಸಂಸ್ಥಾನದ ಗಡಿಗಳಲ್ಲಿದ್ದ ಟೋಲ್ ಗೇಟಿನ ಅಧಿಕಾರಿಗಳಿಗೆ ಅಲ್ಪಾವಧಿಯ ಪರ್ಮಿಟ್ ನೀಡುವ ಅಧಿಕಾರವಿತ್ತು. ೧೯೨೨ರಲ್ಲಿ ಸಂಸ್ಥಾನದಲ್ಲಿ ಒಟ್ಟು ೮೨ ಉಕ್ಕಡಗಳಿದ್ದವು. ಮೋಟಾರು ಸೈಕಲ್ ಹಾಗೂ ಕಾರುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಾಯಿತು (೧೯೨೨). ಮೋಟಾರು ಸೈಕಲ್ ಹೊರತು ಪಡಿಸಿ ಉಳಿದೆಲ್ಲಾ ವಾಹನಗಳಿಗೂ ಹಿಂಗನ್ನಡಿಯನ್ನು ಕಡ್ಡಾಯ ಮಾಡಲಾಯಿತು. ಬಸ್ಸು ನಿರ್ವಾಹಕರ ಪರವಾನಿಗೆಗಳನ್ನು ನವೀಕರಿಸಲಾಯಿತು. ಅಪಘಾತ ತಡೆಗಟ್ಟಲು ನಗರ ವ್ಯಾಪ್ತಿಯಲ್ಲಿ ಕಾರುಗಳಿಗೆ ಗಂಟೆ ೩೦ ಮೈಲಿ, ಬಸ್ಸು, ಲಾರಿಗಳಿಗೆ ಗಂಟೆಗೆ ೨೦ ಮೈಲಿ ವೇಗವನ್ನು ೧೯೨೯ರಲ್ಲಿ ನಿಗದಿಪಡಿಸಲಾಯಿತು. ರಾಜ್ಯಸಾರಿಗೆ ಇಲಾಖೆಯನ್ನು ದಕ್ಷಿಣ ರೈಲ್ವೆ ಇಲಾಖೆಯ ಸಹಯೋಗದೊಂದಿಗೆ ನಡೆಸಲು ೧೯೪೦ರಲ್ಲಿ ತೀರ್ಮಾನಿಸಲಾಯಿತು. ಸಾರ್ವಜನಿಕ ಸೇವಾ ಮೋಟಾರು ಹಾಗೂ ಖಾಸಗಿ ಸ್ಥಿತಿ-ಗತಿ ಅರಿಯಲು ಅಚ್ಚರಿ ತಪಾಸಣೆ ಮಾಡುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಕೋರಲಾಯಿತು. ಅದೇ ವರ್ಷ ಚಾಲಕರು ಹಾಗೂ ನಿರ್ವಾಹಕರುಗಳಿಗೆ ಪ್ರಥಮ ಚಿಕಿತ್ಸೆ ತರಬೇತಿಯನ್ನು ಕಡ್ಡಾಯ ಮಾಡಲಾಯಿತು. ಬಸ್ಸುಗಳ ಆಸನ ಸಾಮರ್ಥ್ಯ, ಟ್ಯಾಕ್ಸಿಗಳಿಗೆ ಮೀಟರ್ ಜೋಡಣೆ ಹಾಗೂ ಬಾಡಿಗೆಗಳನ್ನು ೧೯೪೨ರಲ್ಲಿ ನಿಗದಿಪಡಿಸಲಾಯಿತು.

ಯುರೋಪಿನಲ್ಲಿ ೧೯೪೨-೪೩ರಲ್ಲಿ ಎರಡನೇಯ ಜಾಗತಿಕ ಯುದ್ಧ ನಡೆದಿದ್ದಾಗ, ಮೈಸೂರು ರಸ್ತೆ ವರ್ಗೀಕರಣ ಸಮಿತಿಯ ಸಲಹೆಯಂತೆ ಸಂಸ್ಥಾನದ ಒಳಗಿದ್ದ ಟೋಲ್‌ಗಳನ್ನು ರದ್ದುಪಡಿಸಲಾಯಿತು. ಅದರಿಂದ ಉಂಟಾಗುವ ನಷ್ಟವನ್ನು ಭರಿಸಲು ಮೋಟಾರು ವಾಹನ ತೆರಿಗೆಯನ್ನು ಹೆಚ್ಚಿಸಲು ಮೈಸೂರು ಸಾರಿಗೆ ಬೋರ್ಡ್ ಒಪ್ಪಿತು.

ಟೈರ್, ಪೆಟ್ರೋಲ್‌ಗಳನ್ನು ಪಡಿತರ ವ್ಯವಸ್ಥೆಗೆ ಒಳಪಡಿಸಲಾಯಿತು. ಆದರೂ ಸಾರ್ವಜನಿಕ ಬಸ್‌ಸಂಚಾರ ಮಾರ್ಗಗಳನ್ನೂ ಯಥಾ ರೀತಿಯಲ್ಲಿ ಮುಂದುವರಿಸ ಲಾಯಿತು. ೧೯೪೩ರ ಮೋಟಾರ್ ವಾಹನ ಹಾಗೂ ರಸ್ತೆ ಸಾರಿಗೆ ಕಾಯ್ದೆಯಂತೆ ಮೂರನೇಯ ಪಾರ್ಟಿಗೆ ಜೀವ ವಿಮೆ ಮಾಡುವುದನ್ನು ಕಡ್ಡಾಯಗೊಳಿಸಲಾಯಿತು. ೧೯೪೮ರಲ್ಲಿ ಜಿಲ್ಲಾ ಪೊಲೀಸ್ ಕಮೀಷನರ್ ಮೂರನೇಯ ಚಾಲಕರಿಗೆ ಪರವಾನಿಗೆ ನೀಡುವ ಅಧಿಕಾರ ಹೊಂದಿದ್ದು, ಐಜಿಪಿಯವರು ವಾಹನ ನೋಂದಣಿ ಅಧಿಕಾರಿಗಳಾಗಿದ್ದರು. ೧೯೪೮-೪೯ ರಲ್ಲಿ ಪೆಟ್ರೋಲ್ ಕೊರತೆ ಹಾಗೂ ರಸ್ತೆ ಸಾರಿಗೆ ರಾಷ್ಟ್ರೀಕರಣ ನೀತಿಗಳಿಂದಾಗಿ ಬಸ್ ಪರ್ಮಿಟ್‌ಗಳನ್ನು ನಿಯಂತ್ರಿಸಲಾಯಿತು. ೧೯೫೦ ರಲ್ಲಿ ಆಟೋರಿಕ್ಷಾಗಳಿಗೆ ಪರ್ಮಿಟ್ ನೀಡಿ ತೆರಿಗೆಗಳನ್ನು ನಿಗದಿಪಡಿಸಿ, ಕನಿಷ್ಟ ಪ್ರಯಾಣ ದರವನ್ನೂ ನಿರ್ಧರಿಸಲಾಯಿತು. ಹೀಗೆ ೧೯೩೯ರಲ್ಲಿ ಸ್ಥಾಪಿಸಲ್ಪಟ್ಟ ಮೈಸೂರು ಸಾರಿಗೆ ಬೋರ್ಡ್ ೧೯೫೭ ರ ವರೆಗೆ ಅಸ್ತಿತ್ವದಲ್ಲಿದ್ದು, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿತು. ಮುಂದೆ ಮೋಟಾರು ವಾಹನ ಇಲಾಖೆಯು ೧೯೫೭ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಐದು ವಿಭಾಗೀಯ ಕಛೇರಿಗಳನ್ನು ಆರಂಭಿಸಲಾಯಿತು. ೧೯೫೭ರ ಏಪ್ರಿಲ್ ೧ ರಂದು ಮೈಸೂರು ಪ್ರಾದೇಶಿಕ ಸಾರಿಗೆ ವಿಭಾಗದ ವ್ಯಾಪ್ತಿಗೆ ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳೊಳಪಟ್ಟಿದ್ದವು. ಹಿಂದೆಯೇ ಜಿಲ್ಲೆಗೊಂದೊಂದು ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ತೆರೆಯಲು ಸರ್ಕಾರವು ಮುಂದಾಯಿತು.

ಮೋಟಾರು ವಾಹನ ಇಲಾಖೆಯ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಜಿಲ್ಲಾಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವನ್ನು ೧೯೫೮ರ ಜನವರಿ ೧ ರಂದು ಆರಂಭಿಸಲಾಯಿತು. ಜಿಲ್ಲಾಧಿಕಾರಿಯು ಅದರ ಅಧ್ಯಕ್ಷರಾಗಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರು ಸದಸ್ಯರಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಯು ಪದನಿಮಿತ್ತ ಕಾರ್ಯದರ್ಶಿಯಾಗಿದ್ದು, ಇದು ಭಾಗಶಃ ನ್ಯಾಯಾಂಗದಂತೆ ಕಾರ್ಯನಿರ್ವಹಿಸುತ್ತಿತ್ತು. ವಾಹನಗಳ ಮಾಲೀಕರಿಗೆ ಆಗಬಹುದಾದ ಅನಗತ್ಯ ವಿಳಂಬವನ್ನು ತಡೆಗಟ್ಟಲು ೧೯೫೭ರ ಮೋಟಾರು ಕಾಯ್ದೆಯನ್ವಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳೂ ಸೇರಿದಂತೆ ಎಲ್ಲಾ ತಾಲ್ಲೂಕು ಖಜಾನಾಧಿಕಾರಿಗಳಿಗೂ ಲೈಸೆನ್ಸ್ ನೀಡುವ ಅಧಿಕಾರವಿತ್ತು. ಸಂಚಾರ ನಿಯಂತ್ರಣ ಪೊಲೀಸ್ ಇಲಾಖೆಯದಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಾಹನ ನೋಂದಣಿ ಹಾಗೂ ಪರವಾನಗಿ (ಪರ್ಮಿಟ್) ನೀಡುತ್ತಿದ್ದರು. ಕಡ್ಡಾಯ ವಿಮೆ ಯೋಜನೆಯನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ಚಾಲಕರು ಹಾಗೂ ನಿರ್ವಾಹಕರುಗಳಿಗೆ ಲೈಸೆನ್ಸ್ ನೀಡುವುದರ ಜೊತೆಗೆ ವಾಹನಗಳನ್ನು ನೋಂದಾಯಿಸಬೇಕಾಗಿತ್ತು. ಆ ಪ್ರಕಾರ ಇಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ

## ಸಾರಿಗೆ ಮತ್ತು ಸಂಪರ್ಕ

ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನೋಂದಾಯಿಸಲ್ಪಡುವ ವಾಹನಗಳಿಗೆ ಜಿಲ್ಲಾ ಕೋಡನ್ನು ನೀಡಲಾಗುತ್ತದೆ.

ಜಿಲ್ಲಾ ಸಾರಿಗೆ ಇಲಾಖೆಯಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿದ್ದ ಮೋಟಾರು ವಾಹನಗಳ ನೋಂದಣಿ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

### ತಾಲ್ಲೂಕಿನಲ್ಲಿದ್ದ ಮೋಟಾರು ವಾಹನಗಳ ವಿವರ

<table>
<tr><th colspan="2">ಸರಕುಸಾಗಿಸುವ ವಾಹನಗಳು</th><th>೨೦೧೨–೧೩</th><th>೨೦೧೪–೧೫</th><th>೨೦೧೫–೧೬</th></tr>
<tr><td colspan="2">ಮಲ್ಟಿ ಆಕ್ಸಲ್ಡ್/ ಆರ್ಟಿಕ್ಯಲೇಟೆಡ್ ವಾಹನಗಳು</td><td>೯೭</td><td>೫೪</td><td>೬೮</td></tr>
<tr><td colspan="2">ಟ್ರಕ್ಸ್ ಮತ್ತು ಲಾರಿಗಳು</td><td>೩೨೮</td><td>೪೩೬</td><td>೫೨೨</td></tr>
<tr><td colspan="2">ನಾಲ್ಕು ಚಕ್ರಗಳ ವಾಹನಗಳು</td><td>೩೭೬</td><td>೩೧೨</td><td>೫೬೦</td></tr>
<tr><td colspan="2">ಮೂರು ಚಕ್ರಗಳ ವಾಹನಗಳು</td><td>೨೮೦</td><td>೭೩೭</td><td>೫೫೮</td></tr>
<tr><td colspan="2">ಸ್ಟೇಜ್ ಕ್ಯಾರೇಜ್‌ಗಳು</td><td>೪೭</td><td>೭೬</td><td>೬೭</td></tr>
<tr><td colspan="2">ಒಪ್ಪಂದದ ವಾಹನಗಳು</td><td>೦೨</td><td>೦೨</td><td>೦೧</td></tr>
<tr><td colspan="2">ಖಾಸಗಿ ಸೇವಾ ವಾಹನಗಳು</td><td>೧೪</td><td>೦೫</td><td>೨೬</td></tr>
<tr><td colspan="2">ವಿದ್ಯಾ ಸಂಸ್ಥೆ ವಾಹನಗಳು</td><td>೧೦೪</td><td>೧೩</td><td>೦೮</td></tr>
<tr><td colspan="2">ಇತರೆ</td><td>೦</td><td>೦</td><td>೦</td></tr>
<tr><td rowspan="3">ಟ್ಯಾಕ್ಸಿಗಳು</td><td>ಮೋಟಾರು ಕ್ಯಾಬ್</td><td>೨೩೧</td><td>೧೬೯</td><td>೩೯೭</td></tr>
<tr><td>ಮ್ಯಾಕ್ಸಿ ಕ್ಯಾಬ್</td><td>೧೭೪</td><td>೭೧</td><td>೧೮೫</td></tr>
<tr><td>ಇತರೆ ಕ್ಯಾಬ್‌ಗಳು</td><td>೧೫೫</td><td>೦</td><td>೦</td></tr>
<tr><td colspan="2">ಆಟೋರಿಕ್ಷಗಳು/ ಮೂರು ಆಸನಗಳ ವಾಹನಗಳು</td><td>೧೪೦೬</td><td>೩೨೬</td><td>೮೬೪</td></tr>
</table>

| | | | | |
|---|---|---|---|---|
| ನಾಲ್ಕರಿಂದ ಆರು ಆಸನಗಳ ವಾಹನಗಳು | | ೧೬೦ | ೦ | ೦ |
| ದ್ವಿಚಕ್ರ ವಾಹನಗಳು | ಸ್ಕೂಟರ್‌ಗಳು | ೧೮೩೩೮ | ೦ | ೦ |
| | ಮೋಪೆಡ್‌ಗಳು | ೧೭೬೬ | ೦ | ೦ |
| | ಮೋಟರ್ ಸೈಕಲ್‌ಗಳು | ೧೮೦ | ೨೬೩೬೫ | ೨೯೯೯೩ |
| ನಾಲ್ಕು ಚಕ್ರದ ವಾಹನಗಳು | ಕಾರುಗಳು | ೩೦೨೮ | ೧೯೮೬ | ೩೨೭೦ |
| | ಜೀಪುಗಳು | ೧೨೭ | ೩೨ | ೪೮ |
| | ಓಮ್ನಿ ಬಸ್ಸುಗಳು | ೨೭ | ೦ | ೭೬ |
| ಟ್ರಾಕ್ಟರ್‌ಗಳು | | ೩೪೨೧ | ೨೫೦೪ | ೩೫೮೯ |
| ಟ್ರೆಲ್ಲರ್‌ಗಳು | | ೨೯೪೬ | ೧೯೧೯ | ೨೦೧೩ |
| ಅಂಬುಲೆನ್ಸ್ | | ೦೯ | ೦ | ೦ |
| ನಿರ್ಮಾಣ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು | | ೧೬೫ | ೦ | ೨೪ |
| ಇತರೆ | | ೧೦೫ | ೦ | ೫೬೩ |

**ಆಧಾರ: ದಾವಣಗೆರೆ ಜಿಲ್ಲಾ ಅಂಕಿ ಅಂಶ ನೋಟ.**

## ಸೇತುವೆಗಳು

೧೯೫೩ ರಲ್ಲಿ ಬಳ್ಳಾರಿ ಜಿಲ್ಲೆ ಹೊಸ ಮೈಸೂರು ರಾಜ್ಯಕ್ಕೆ ವಿಲೀನವಾಯಿತು. ಆಗ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಬಳ್ಳಾರಿ ಜಿಲ್ಲೆಯ ಕೊಟ್ಟೂರು ಮೂಲಕ ಹರಪನಹಳ್ಳಿಗೆ ಆಗಮಿಸಿದರು. ಆಗ ದೊಡ್ಡ ಮಳೆ ಬಿದ್ದು ಹಗರಿಹಳ್ಳ ತುಂಬಿ ಹರಿದಿತ್ತು. ಮುಖ್ಯಮಂತ್ರಿಗಳನ್ನು ತೆಪ್ಪದ ಮೂಲಕ ದಾಟಿಸಿ ಹರಪನಹಳ್ಳಿಗೆ ಕರೆ ತಂದರು. ಆಗ ಅವರು ಹಗರಿ ನದಿಗೆ ಸೇತುವೆ ನಿರ್ಮಾಣಕ್ಕೆ ಆಗಲೇ ಆದೇಶ ಕೊಟ್ಟರು.

ಕೆಲ ಕಾಲದ ಬಳಿಕ ಅಂದರೆ ೧೯೫೩-೫೪ ರಲ್ಲಿ ಹಗರಿ ನದಿಗೆ ಸೇತುವೆ ನಿರ್ಮಾಣ ವಾಯಿತು. ಹರಪನಹಳ್ಳಿಯಿಂದ ಹೊಸಪೇಟೆಗೆ ಹೋಗುವ ದಾರಿ ಇಟಗಿ ಮುಂದೆ ಒಂದು ಹಳ್ಳ ಬಹಳ ದೊಡ್ಡದು. ಮಳೆ ಬಿದ್ದರೆ ಹಳ್ಳ ಎರಡು ದಿನಗಳ ಕಾಲ ಹರಿಯುತ್ತಿದ್ದಿತು. ಈ ಹಳ್ಳಕ್ಕೆ ೧೯೫೫ ರಲ್ಲಿ ಒಂದು ಸೇತುವೆಯನ್ನು ನಿರ್ಮಿಸಿದರು. ಹರಪನಹಳ್ಳಿಯಿಂದ ಹರಿಹರ ಮಾರ್ಗ ಶಿವಮೊಗ್ಗ ಮತ್ತು ದಾವಣಗೆರೆಗಳನ್ನು ತಲುಪಲು ಮಧ್ಯ ಎರಡು

ದೊಡ್ಡ ಹಳ್ಳಗಳಿದ್ದು, ವಾಹನ ಚಲಿಸುವುದು ಬಹು ಪ್ರಯಾಸವಾಗಿತ್ತು. ಮಳೆಗಾಲದಲ್ಲಿ ದಾರಿ ಬಂದಾಗುತ್ತಿದ್ದಿತು. ಈ ಹಳ್ಳ ತುಂಗಭದ್ರಾ ನದಿಗೆ ಸೇರುವ ಒಂದು ದೊಡ್ಡ ಹಳ್ಳವು ಆಗಿದ್ದು, ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದಿತು. ಈ ಹಳ್ಳಿಗೆ ಸೇತುವೆಯನ್ನು ೧೯೫೭–೫೮ ರಲ್ಲಿ ನಿರ್ಮಿಸಿದರು. ಇನ್ನು ತೆಲಗಿ– ದುಗ್ಗಾವತಿ ಮಧ್ಯದ ಒಂದು ಹಳ್ಳಕ್ಕೆ ಸೇತುವೆಯನ್ನು ೧೯೯೦ ರ ಸುಮಾರಿಗೆ ನಿರ್ಮಿಸಿದರು. ಹರಪನಹಳ್ಳಿ ಪಟ್ಟಣದಿಂದ ವಿವಿಧ ಕಡೆ ಹೋಗುವ ಮಾರ್ಗಗಳು ಬಸ್ಸುಗಳಿಗೆ ಹಾಗೂ ಪ್ರಯಾಣಿಕರಿಗೆ ಹೆಚ್ಚು ಉಪಯುಕ್ತವಾಗಿದ್ದು, ಟ್ರಾಕ್ಟರ್, ಕಾರು, ಅಂಬ್ಯುಲೆನ್ಸ್, ಸ್ಕೂಟರ್, ಟ್ಯಾಕ್ಸಿಗಳು, ಸರಕು ಸಾಗಣಿಕೆ ವಾಹನಗಳಿಗೆ ಹೆಚ್ಚು ಉಪಯುಕ್ತವಾಗಿದೆ.

## ರೈಲು ಸಾರಿಗೆ

ಬ್ರಿಟೀಷ್ ವಸಾಹಾತು ಶಾಹಿ ಆಡಳಿತದಲ್ಲಿ ವಿವಿಧ ರಂಗಗಳಲ್ಲಿ ಆದ ಅಭಿವೃದ್ಧಿ ಕಾರ್ಯಗಳು ಮೂಲತಃ ವಸಾಹಾತು ಹಿತಾಸಕ್ತಿಯ ಪೂರೈಕೆಗಾಗಿ ಕೈಗೊಳ್ಳಲ್ಪಟ್ಟರೂ ಅದರಿಂದ ಜನಸಾಮಾನ್ಯರಿಗೆ ಪರೋಕ್ಷವಾಗಿ ಆದ ಲಾಭ ಗಮನಾರ್ಹ. ಹತ್ತೊಂಭತ್ತನೇಯ ಶತಮಾನದ ಪೂರ್ವಾರ್ಧ ಭಾಗದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೈಲು ಸಾರಿಗೆಯು ಪ್ರಗತಿ ಸಾಧಿಸಲಾರಂಭಿಸಿತು. ಅದರಲ್ಲೂ ಇಂಗ್ಲೆಂಡಿನಲ್ಲಿ ೧೮೩೦ರಲ್ಲಿ ಉಗಿಬಂಡಿ (ಸ್ಟೀಮ್ ಎಂಜಿನ್) ಬಳಸಿ ರೈಲು ಸಂಚಾರ ಆರಂಭಿಸಿದ್ದು ಗಮನಾರ್ಹವಾಗಿತ್ತು. ೧೮೮೮ ರ ವೇಳೆಗೆ ಫ್ರಾನ್ಸ್, ಅಮೆರಿಕಾ, ಜರ್ಮನಿ, ಹಾಲೆಂಡ್, ಇಟಲಿ, ಸ್ಪೇನ್ ಮುಂತಾದ ರಾಷ್ಟ್ರಗಳಲ್ಲೂ ರೈಲು ಸಾರಿಗೆ ಮಹತ್ವ ಪಡೆಯಿತು. ಇದು ಸಹಜವಾಗಿ ಭಾರತದಂತಹ ವಿಶಾಲವಾದ ದೇಶದ ಮೇಲೆ ಅಧಿಪತ್ಯ ಹೊಂದಿದ್ದ ಬ್ರಿಟೀಷ್‌ರನ್ನು ಎಚ್ಚರಿಸಿತು. ತತ್ಪರಿಣಾಮವಾಗಿ ಬ್ರಿಟೀಷ್‌ರಿಂದ ಭಾರತದಲ್ಲಿ ೧೮೫೩ ರಲ್ಲಿ ಪರಿಚಯಿಸಲ್ಪಟ್ಟ ರೈಲು ಸಾರಿಗೆ ದೇಶದ ವಿವಿಧ ಭಾಗಗಳೊಂದಿಗೆ ನೇರ ಸಂಪರ್ಕ ಕಲ್ಪಿಸುವುದರ ಜೊತೆಗೆ, ಸರಕು ಸಾಗಾಣಿಕೆಯನ್ನು ಸುಧಾರಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಪರೋಕ್ಷವಾಗಿ ಕಾರಣವಾಯಿತು. ಮದ್ರಾಸ್ ಪ್ರೆಸಿಡೆನ್ಸಿಯು ತನ್ನ ಆಡಳಿತ ಕೇಂದ್ರವಾದ ಮದ್ರಾಸ್ (ಚೆನ್ನೈ) ನಿಂದ ದಕ್ಷಿಣದ ವಿವಿಧ ಕೇಂದ್ರಗಳ ಮೇಲೆ ರಾಜಕೀಯ ಹಿಡಿತ, ಆರ್ಥಿಕಗಳಿಕೆ ಹಾಗೂ ಸಾಮಾಜಿಕ ನಿಯಂತ್ರಣ ಸಾಧಿಸಲು ರೈಲು ಸಾರಿಗೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯೋಜಿಸಿತ್ತು. ಹೀಗೆ ವಿವಿಧೋದ್ದೇಶಗಳ ಹಿನ್ನೆಲೆಯಲ್ಲಿ ಬ್ರಿಟೀಷ್ ಸರ್ಕಾರ ಭಾರತದಲ್ಲಿ ರೈಲುಸಾರಿಗೆಯ ನಿರ್ಮಾಣದಂತಹ ಮಹತ್ವದ ರಾಷ್ಟ್ರೀಯ ಯೋಜನೆಗೆ ಮುಂದಾದುದು, ಮುಂದೆ ನಾಡಿನ ಅಭ್ಯುದಯಕ್ಕೂ ಪರೋಕ್ಷವಾಗಿ ಕಾರಣವಾಯಿತು.

ಈ ಅವಧಿಯಲ್ಲಿ ಮೈಸೂರು ರಾಜ್ಯವು ಬ್ರಿಟೀಷ್ ಕಮೀಷನರುಗಳ ಆಡಳಿತಕ್ಕೆ ಒಳಪಟ್ಟಿದ್ದುದರಿಂದ ಮೈಸೂರು ಪ್ರಾಂತ್ಯದಲ್ಲೂ ೧೮೬೪ರಲ್ಲಿ ರೈಲು ಶಕೆ

ಆರಂಭವಾಯಿತು. ಬೌರಿಂಗ್ ಮೈಸೂರಿನ ಕಮೀಷನರ್ ಆಗಿದ್ದಾಗ, ಮೈಸೂರು ರಾಜ್ಯದಲ್ಲಿ ರೈಲುಮಾರ್ಗ ರಚನೆಗಾಗಿ ಸರ್ವೆ ಮಾಡಲು ಆದೇಶ ಹೊರಡಿಸಿದನು. ಇದಕ್ಕೆ ಸಂಬಂಧಿಸಿದಂತೆ ಕ್ಯಾಪ್ಟನ್ ಲಂಡಸೆ ಹಾಗೂ ಮುಖ್ಯ ಇಂಜಿನಿಯರ್ ಮೆಸ್ಸಾನ್ಲೇ ವರದಿಯೊಂದನ್ನು ಸಿದ್ಧಪಡಿಸಿ ೧೮೭೦ರ ಡಿಸೆಂಬರ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಿದರು. ಆ ಪ್ರಕಾರ ಬೆಂಗಳೂರು-ಮೈಸೂರು ರೈಲು ಮಾರ್ಗದ ವೆಚ್ಚವನ್ನು ೧೮೭೧ರಲ್ಲಿ ಪುನರ್ ಅಂದಾಜು ಮಾಡಲಾಯಿತಾದರೂ, ಹಣದ ಕೊರತೆಯಿಂದಾಗಿ ೧೮೭೨ರಲ್ಲಿ ತಡೆಹಿಡಿಯಲಾಯಿತು. ಬ್ರಿಟೀಷ್‌ರ ಹಿಡಿತದಲ್ಲಿದ್ದ ಮುಂಬಯಿ, ಮದ್ರಾಸ್, ಮೈಸೂರು ಮುಂತಾದ ಪ್ರಾಂತ್ಯಗಳು ೧೮೭೪-೭೬ ರ ಅವಧಿಯಲ್ಲಿ ಭೀಕರ ಬರಗಾಲಕ್ಕೆ ತುತ್ತಾದವು. ಬರಗಾಲ ಪೀಡಿತರಿಗೆ ಪರಿಹಾರ, ನೆರವು ನೀಡುವ ಸಲುವಾಗಿ ಬೆಂಗಳೂರು-ಮೈಸೂರು ಮೀಟರ್‌ಗೇಜ್ (೩-೩.೭ ಅಡಿ) ರೈಲುಮಾರ್ಗದ ಕಾಮಗಾರಿ ಕೆಲಸವನ್ನು ಕೈಗೊಳ್ಳಲು ಯೋಜಿಸಿ ಅದಕ್ಕೆ ಪೂರಕವಾಗಿ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿ ೧೮೭೭-೭೮ರ ಸಾಲಿನಲ್ಲಿ ಬೆಂಗಳೂರು-ಚನ್ನಪಟ್ಟಣಗಳ ನಡುವೆ ಮಣ್ಣನ್ನು ಅಗೆದು ಮಾರ್ಗ ಸಿದ್ಧತೆಗೆ ಪೂರಕ ಕ್ರಮ ಕೈಗೊಳ್ಳಲಾಯಿತು.

**ತಂತಿ ಕಛೇರಿ**

ದೇಶದಲ್ಲಿ ತಂತಿ ಸೇವೆ ಮೊದಲ ಬಾರಿಗೆ ಕಲ್ಕತ್ತಾದಲ್ಲಿ ೧೮೫೧ರಲ್ಲಿ ಆರಂಭವಾಯಿತು. ಅದಾದ ನಾಲ್ಕು ವರ್ಷಗಳಲ್ಲೇ ಮೈಸೂರು ಪ್ರಾಂತ್ಯದಲ್ಲೂ ಇದು ಆರಂಭವಾಯಿತು. ೧೮೭೧ರ ವೇಳೆಗೆ ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಮಾತ್ರ ತಂತಿ ಕಛೇರಿಗಳಿದ್ದವು.

ಮದ್ರಾಸು-ಬೆಂಗಳೂರು-ಮೈಸೂರು ನಡುವೆ ಟೆಲಿಗ್ರಾಫ್ ಲೈನ್ ೧೮೫೫ ರಲ್ಲಿ ಕಾರ್ಯ ಆರಂಭಿಸಿ ೧೮೮೩ ರಲ್ಲಿ ಅಂಚೆಕಛೇರಿಗಳಲ್ಲಿ ತಂತಿ ಸೇವೆಯು ಪ್ರಾರಂಭವಾಯಿತು. ಹೀಗೆ ಅವುಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ಮಾಹಿತಿ ತಂತ್ರಜ್ಞಾನ ಫ್ಯಾಕ್ಸ್, ವೆಬ್‌ಸೈಟ್, ಅಂತರ್‌ಜಾಲ, ವಿದ್ಯುನ್ಮಾನ ಅಂಚೆ, ಎಸ್.ಎಂ.ಎಸ್. ಸೇವೆಗಳು ಶುರು ಆಗಿ ಸಂಪರ್ಕ ರಂಗದಲ್ಲಿ ಕ್ರಾಂತಿಕಾರಿ ಬೆಳವಣಿಗೆಯನ್ನು ಉಂಟು ಮಾಡಿದ್ದು ತಂತಿ ಸೇವೆಗೆ ಹಿನ್ನಡೆ ಉಂಟಾಯಿತು.

**ಅಂಚೆ ಸಂಪರ್ಕ**

ಸಂಪರ್ಕ ಸಾಧನ ರಂಗದಲ್ಲಿ ಆಗಿರುವ ಕ್ರಾಂತಿಕಾರಕ ಪ್ರಗತಿಗಳ ನಡುವೆಯೂ ಅಂಚೆ ಸೇವೆ ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾವಿರಾರು ಕಿ.ಮೀ ಅಂತರದಲ್ಲಿರುವ ವ್ಯಕ್ತಿ, ಸಂಸ್ಥೆಗಳ ನಡುವೆ ಭಾವನಾತ್ಮಕ

ಸಂಬಂಧವನ್ನೂ ವ್ಯವಹಾರಿಕ ಹೊಂದಾಣಿಕೆಯನ್ನು ಮೂಡಿಸುವ ಏಕೈಕ ಸಾಧನ ಅಂಚೆ ಸಂಪರ್ಕವಾಗಿದೆ. ಹೀಗೆ ಇಂದಿಗೂ ಅರ್ಥಪೂರ್ಣವಾಗಿ ಸೇವೆ ಸಲ್ಲಿಸುತ್ತಿರುವ ಅಂಚೆಗೆ ಪಾರಂಪರಿಕ ಇತಿಹಾಸವಿದೆ.

'ಅಂಚೆ' ಪದವು 'ಹಂಸ' ಪದದ ತತ್ಸಮವಾಗಿದ್ದು, ಹಂಸ, ಪಾರಿವಾಳಗಳ ಮೂಲಕ ಸಂದೇಶ ರವಾನಿಸುವ ವಿಧಾನ ಭಾರತದಲ್ಲಿ ಕವಿ ಕಾಳಿದಾಸನ ಕಾಲಕ್ಕಾಗಲೇ ರೂಢಿಯಲ್ಲಿತ್ತು. ಆಳರಸರ ಪತ್ರ ವ್ಯವಹಾರಗಳ ರವಾನೆಗೆ ಓಲೆಗಾರ, ತಳವಾರ ಹಾಗೂ ರಾಯಸದವರಿರುತ್ತಿದ್ದು, ಬೇಹುಗಾರರೂ ಸಂದರ್ಭಾನುಸಾರ ಈ ಕಾರ್ಯವನ್ನು ಮಾಡುತ್ತಿದ್ದರು. ಈ ಕಾರ್ಯವನ್ನು ತಳವಾರರಾದಲ್ಲಿ ಕಾಲ್ನಡಿಗೆಯಲ್ಲಿ, ರಾಹುತರಾದಲ್ಲಿ ಕುದುರೆಗಳ ಮೂಲಕ ನಿರ್ವಹಿಸುತ್ತಿದ್ದರು. ಗಂಗ, ಹೊಯ್ಸಳ ಹಾಗೂ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೇ ವಿಧಾನವನ್ನು ಅನುಸರಿಸಲಾಗುತ್ತಿದ್ದು, ರಾಯಸದ ಹೆಗ್ಗಡೆ, ರಾಯಸದ ಅಧಿಕಾರಿಗಳ ಉಲ್ಲೇಖ ಅವರ ಕಾಲದ ಶಾಸನಗಳಲ್ಲಿ ಕಂಡುಬರುತ್ತದೆ. ಮುಂದೆ ಅಧಿಕಾರಕ್ಕೆ ಬಂದ ಮೈಸೂರು ಅರಸರ ಆಳ್ವಿಕೆಯಲ್ಲಿ ಇದಕ್ಕೆ ಹೆಚ್ಚಿನ ಚಾಲನೆ ಲಭಿಸಿತು. ಅದರಲ್ಲೂ ಚಿಕ್ಕದೇವರಾಜ ಒಡೆಯರ್ (೧೬೭೩–೧೭೦೪) ಕಾಲದಲ್ಲಿ ಬೇಹಿನ ಚಾವಡಿಗೆ ಸೇರಿದ ಅಂಚೆ ಹರಿಕಾರರನ್ನೊಳಗೊಂಡ ಪ್ರತ್ಯೇಕ ಶಾಖೆಯನ್ನು ೧೭೦೧ರಲ್ಲಿ ಆರಂಭಿಸಲಾಯಿತು. ಇದು ಮುಂದೆ 'ಮೈಸೂರು ಅಂಚೆ' ಎಂದೇ ಪ್ರಸಿದ್ಧವಾಯಿತು. ಬ್ರಿಟೀಷ್ ಅಂಚೆ ಪದ್ಧತಿಯೊಂದಿಗೆ ಹೋಲಿಸಿದಾಗ ಮೈಸೂರು ಅಂಚೆ ದುಬಾರಿಯಾಗಿರದೆ, ಅಂಚೆ ಶುಲ್ಕ ಕಡಿಮೆ ಇತ್ತು. ಅಂಚೆ ಕಾರ್ಯದ ಉಸ್ತುವಾರಿಗಾಗಿ ಅಂಚೆ ಬಕ್ಷಿ, ಗುಮಾಸ್ತರುಗಳಿರುತ್ತಿದ್ದು, ಬೇಹಾರಿಗಳು (ರನ್ನರ್ಸ್) ಊರಿಂದೂರಿಗೆ ಸರ್ಕಾರಿ ಹಾಗೂ ಖಾಸಗಿ ಅಂಚೆಗಳನ್ನು ಒಯ್ಯುತ್ತಿದ್ದು, ಸರ್ಕಾರಿ ಪತ್ರಗಳೇ ಅಧಿಕವಾಗಿರುತ್ತಿದ್ದವು.

ಹೈದರ್ ಹಾಗೂ ಟಿಪ್ಪು ಕಾಲದಲ್ಲಿ 'ಬೇಹಾರಿ ಚಾವಡಿ' ಹಾಗೂ ಅಂಚೆ ಶಾಖೆಗಳಿಗೆ ಹೆಚ್ಚಿನ ಮಹತ್ವ ಲಭಿಸಿತು. ಮುಂದೆ ಸಂಸ್ಥಾನವು ೧೮೦೦ ರಿಂದೀಚೆಗೆ ಬ್ರಿಟೀಷರ ಪ್ರಭಾವಕ್ಕೆ ಒಳಗಾದಾಗ ಅದರ ಪರಿಣಾಮ ಸಹಜವಾಗಿ ಮೈಸೂರು ಅಂಚೆ ವ್ಯವಸ್ಥೆಯ ಮೇಲೂ ಆಯಿತು. ಬ್ರಿಟೀಷರು ಕಲ್ಕತ್ತಾ (೧೭೭೪) ದಲ್ಲಿ ಜಿ.ಪಿ.ಓ ಅನ್ನು ಸ್ಥಾಪಿಸುವುದರೊಂದಿಗೆ ಅಂಚೆ ಸೌಕರ್ಯ ಸಾರ್ವಜನಿಕರಿಗೆ ಮುಕ್ತವಾಗಿ ಲಭಿಸುವಂತಾಯಿತು. ಮುಂದೆ ಮದ್ರಾಸ್ (೧೭೮೬), ಮುಂಬಯಿ (೧೭೮೭) ಹಾಗೂ ಬೆಂಗಳೂರು (೧೮೦೦) ಗಳಲ್ಲೂ ಜಿ.ಪಿ.ಓಗಳು ಆರಂಭಗೊಂಡವು. ಕ್ರಮೇಣ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್‌ಗಳಲ್ಲಿ 'ಇಂಪೀರಿಯಲ್ ಅಂಚೆ ಕಛೇರಿಗಳು' ತೆರೆಯಲ್ಪಟ್ಟವು. ೧೮೩೩ ರ ವೇಳೆಗೆ ಮದ್ರಾಸ್‌ನಿಂದ ಶ್ರೀರಂಗಪಟ್ಟಣಕ್ಕೆ ರವಾನೆಯಾಗುತ್ತಿದ್ದ ಪತ್ರಗಳಿಗೆ ತಲಾ ೧೧ ಆಣೆ ಅಂಚೆ ಶುಲ್ಕ ವಿಧಿಸಲಾಗುತ್ತಿತ್ತೆಂದು ೧೮೩೩ರ ಗೆಜೆಟ್ ದಾಖಲಿಸಿದೆ. ಬೆಂಗಳೂರು–ಮಂಗಳೂರು ಇಂಪೀರಿಯಲ್ ಅಂಚೆ ಮಾರ್ಗವು ಮೈಸೂರು ಮಾರ್ಗವಾಗಿ ೧೯೩೭ರ ವೇಳೆಗಾಗಲೇ ಹಾದು

ಹೋಗುತ್ತಿದ್ದು, ಟಪಾಲು ಬಂಡಿ ಹಾಗೂ ರನ್ನರ್ ಸೇವೆಗಳು ಲಭ್ಯವಿದ್ದವು. ೧೮೫೪ರ ವೇಳೆಗೆ ಜಿಲ್ಲೆ ಹಾಗೂ ತಾಲ್ಲೂಕು ಟಪಾಲು ಸೇವೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿ ಒದಗಿಸಲಾಯಿತು. ಮದ್ರಾಸ್‌ನಲ್ಲಿ ೧೮೫೫ರಲ್ಲಿ ಅಂಚೆ ಚೀಟಿಗಳನ್ನು ಜಾರಿಗೆ ತರಲಾಯಿತು. ಅದೇ ವರ್ಷ ಬೆಂಗಳೂರಿನಲ್ಲಿ ಸದ್ದರ್ ಕಛೇರಿ (ಪ್ರಧಾನ ಕಛೇರಿ)ಯು ಆರಂಭಗೊಂಡ ನಂತರ ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್‌ಗಳು ಅದರ ವ್ಯಾಪ್ತಿಗೆ ಒಳಪಟ್ಟವು. ಮದ್ರಾಸ್-ಬೆಂಗಳೂರು-ಮೈಸೂರು ಮಾರ್ಗವಾಗಿ ಊಟಿಗೆ ದೈನಂದಿನ ಭಾಂಗಿ ಅಂಚೆ ಸೇವೆಯನ್ನು ೧೮೭೫ರಲ್ಲಿ ಆರಂಭಿಸಲಾಯಿತು. ಇದರಿಂದಾಗಿ ಬೆಂಗಳೂರು-ಮೈಸೂರು ನಡುವೆ ಅಂಚೆ ಸಾಧ್ಯಗೊಂಡು ಆ ಸೇವೆ ಲಭಿಸುವಂತಾಯಿತು. ಪ್ರಯಾಣಿಕರನ್ನು ಸಾಗಿಸುವ ಪಲ್ಲಕ್ಕಿ. ಪಲ್ಲಕ್ಕಿ ಹೊರುವ ಜನ ಹಾಗೂ ಪ್ರವಾಸಿ ಮಂದಿರಗಳ ನಿರ್ವಹಣೆ ಕೂಡ ಅಂಚೆ ಇಲಾಖೆಯದಾಗಿದ್ದು, ಪ್ರವಾಸಿ ಮಂದಿರಗಳಿಗೆ ಡಾಕ್ ಬಂಗಲೆ ಎಂದೇ ಕರೆಯಲಾಗುತ್ತಿತ್ತು. ಟಪಾಲು ಬಂಡಿಗಳನ್ನು ೧೮೭೫ರಲ್ಲಿ ಎಲ್ಲಾ ಪ್ರಮುಖ ಅಂಚೆ ಮಾರ್ಗಗಳಲ್ಲೂ ಆರಂಭಿಸಲಾಯಿತು. ಅದರಲ್ಲಿ ಪ್ರಯಾಣಿಕರಿಗೂ ಪಯಣಿಸಲು ಅವಕಾಶವಿದ್ದು, ಅದಕ್ಕಾಗಿ ನಿಗದಿತ ಶುಲ್ಕವನ್ನು ವಿಧಿಸಲಾಗುತ್ತಿತ್ತು. ಕುದುರೆ ಮೇಲೆ ಕೂಡ ಅಂಚೆ ಸೇವೆಯನ್ನು ನಡೆಸಲಾಗುತ್ತಿತ್ತು.

### ದೂರವಾಣಿ

ತಂತ್ರಜ್ಞಾನದ ಪ್ರಗತಿಯಿಂದಾಗಿ ಸಂಪರ್ಕ ಮಾಧ್ಯಮಗಳಲ್ಲಿ ಆಗಿರುವ ಕ್ರಾಂತಿಕಾರಕ ಬೆಳವಣಿಗೆಗಳಲ್ಲಿ ದೂರವಾಣಿ ಸೌಲಭ್ಯ ಮಹತ್ವದ್ದಾಗಿದೆ. ದೂರವಾಣಿಯಂತಹ ಸಂಪರ್ಕ ಸಾಧನದಿಂದಾಗಿ ಇಂದು ಸಾವಿರಾರು ಕಿ.ಮೀ.ಗಳ ದೂರ ಅಂತರವೆನಿಸದೆ, ವಿಶ್ವದ ಯಾವುದೇ ಮೂಲೆಯೊಂದಿಗೆ ದೂರವಾಣಿ ಸಂಪರ್ಕವನ್ನು ಸಾಧಿಸಬಹುದಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಪ್ಲೇಗ್ ನಿಯಂತ್ರಣ ಕ್ರಮವಾಗಿ ದೂರವಾಣಿ ಸಂಪರ್ಕವನ್ನು ಮೈಸೂರು - ಬೆಂಗಳೂರು ನಡುವೆ ತಾತ್ಕಾಲಿಕವಾಗಿ ೧೮೯೯ರಲ್ಲಿ ಜೋಡಿಸಲಾಯಿತಾದರೂ, ಮೈಸೂರು-ಬೆಂಗಳೂರು ದೂರವಾಣಿ ಮಾರ್ಗವನ್ನು ೧೯೧೨ರಲ್ಲಿ ಶಾಶ್ವತವಾಗಿ ರೂಪಿಸಲಾಯಿತು.

೧೯೯೭-೯೮ ರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ೧೧ ದೂರವಾಣಿ ವಿನಿಮಯ ಕೇಂದ್ರಗಳಿದ್ದು, ೧೨೬೭ ದೂರವಾಣಿಗಳು ಕಾರ್ಯ ನಿರ್ವಹಿಸುತ್ತಿದ್ದವು. ೨೦೦೦-೦೧ ರಲ್ಲಿ ೨,೯೮೪, ೨೦೦೬-೦೭ರಲ್ಲಿ ४,೫೯೧, ೨೦೦೭-೦೮ರಲ್ಲಿ ४,೫೦೮ ಹಾಗೂ ೨೦೧೪-೧೫ರಲ್ಲಿ ೮೪೫ ದೂರವಾಣಿಗಳು ಕಾರ್ಯನಿರ್ವಹಿಸುತ್ತಿದ್ದವು. ಗ್ರಾಹಕರು ಅತ್ಯಾಧುನಿಕ ಸೌಲಭ್ಯಗಳನ್ನು ಬಳಸುತ್ತಾ ನಡೆದರು. ಮೊಬೈಲ್‌ಗಳು, ಬ್ರಾಡ್‌ಬ್ಯಾಂಡ್‌ಗಳು ದೂರವಾಣಿ ಸಂಪರ್ಕ ಕ್ಷೇತ್ರದಲ್ಲಿ ಕ್ರಾಂತಿಮಾಡಿವೆ.

## ಆಕಾಶವಾಣಿ

೨೦ ನೇಯ ಶತಮಾನದ ನಾಲ್ಕನೇಯ ದಶಕದಲ್ಲಿ ಬಳಕೆಗೆ ಬಂದ ರೇಡಿಯೋಗಳು ಸತತವಾಗಿ ಮುಂದಿನ ನಾಲ್ಕು ದಶಕಗಳ ಕಾಲ ಜನಸಾಮಾನ್ಯರ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದವು. ಆದರೆ ದೂರದರ್ಶನದಿಂದಾಗಿ ಅನಂತರ ಸ್ವಲ್ಪ ಹಿನ್ನಡೆ ಕಂಡಿದ್ದರೂ, ತಮ್ಮ ಮಹತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿವೆ.

ಅಂದಿನ ಮೈಸೂರು ಸಂಸ್ಥಾನದ ರಾಜಧಾನಿ ನಗರ ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ.ಎಂ.ವಿ.ಗೋಪಾಲಸ್ವಾಮಿಯವರು ಆಕಾಶವಾಣಿ ಕೇಂದ್ರವನ್ನು ೧೯೩೫ರಲ್ಲಿ ಆರಂಭಿಸಿದರು. ಇದನ್ನು ೧೯೪೧ರಲ್ಲಿ ಸಂಸ್ಥಾನವು ತನ್ನ ವಶಕ್ಕೆ ತೆಗೆದುಕೊಂಡಿತು. ಇದು ೧೯೫೫ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಳ್ಳುವವರೆಗೆ ಅದರ ವ್ಯಾಪ್ತಿಗೆ ಮಂಡ್ಯ ಜಿಲ್ಲೆಯೂ ಒಳಪಟ್ಟಿತು. ಅನಂತರ ಬೆಂಗಳೂರು ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿತು. ಮುಂದೆ ೧೯೭೪ರಲ್ಲಿ ಮತ್ತೆ ಮೈಸೂರಿನಲ್ಲಿ ಆಕಾಶವಾಣಿ ನಿಲಯ ಪುನರಾರಂಭವಾಯಿತು.

## ದೂರದರ್ಶನ

ಸಮೂಹ ಮಾಧ್ಯಮದಲ್ಲಿಂದು ಅತ್ಯಂತ ಮಹತ್ವದ ಪಾತ್ರವಹಿಸುತ್ತಿರುವ ದೂರದರ್ಶನದ ಬಳಕೆ ಭಾರತದಲ್ಲಿ ೧೯೫೯ರಲ್ಲಿ ಆರಂಭವಾಯಿತು. ಕರ್ನಾಟಕದಲ್ಲಿ ಇದು ಆರಂಭಗೊಂಡಿದ್ದು ೧೯೭೭ರಲ್ಲಿ. ಮುಂದೆ ೧೯೮೧ರಲ್ಲಿ ಬೆಂಗಳೂರಿನಲ್ಲಿರುವ ದೂರದರ್ಶನ ಕೇಂದ್ರ ಆರಂಭಗೊಂಡ ನಂತರ ಈ ಸೌಲಭ್ಯ ಜಿಲ್ಲೆಗೆ ೧೯೮೨ ರಿಂದ ಲಭಿಸಲಾರಂಭಿಸಿತು. ಆರಂಭದಲ್ಲಿ ದೂರದರ್ಶನಗಳ ಬಳಕೆ ಮೇಲುವರ್ಗಕ್ಕೆ ಮಾತ್ರ ಸೀಮಿತವಾಗಿದ್ದು, ೧೯೮೨ರ ವೇಳೆಗೆ ಜಿಲ್ಲೆಯಲ್ಲಿ ಕೇವಲ ೨೭ ದೂರದರ್ಶನಗಳು ಮಾತ್ರ ಲಭ್ಯವಿದ್ದ ಅಂಶ ಇದನ್ನು ಪುಷ್ಟೀಕರಿಸುತ್ತದೆ. ಆಗ ಬೆಂಗಳೂರು ದೂರದರ್ಶನ ಕೇಂದ್ರವು, ಮದ್ರಾಸ್ ಹಾಗೂ ಮುಂಬಯಿ ಕೇಂದ್ರಗಳು ವಾರದಲ್ಲಿ ನಿಗದಿಪಡಿಸಿದ ದಿನಗಳಲ್ಲಿ ಕೆಲವು ಕನ್ನಡ ಕಾರ್ಯಕ್ರಮಗಳನ್ನಷ್ಟೇ ಮರುಪ್ರಸಾರ ಮಾಡುತ್ತಿತ್ತು. ಬೆಂಗಳೂರು ದೂರದರ್ಶನ ಕೇಂದ್ರವು ಸ್ವತಂತ್ರ ಪ್ರಸಾರವನ್ನು ೧೯೮೩ಲ್ಲಿ ಆರಂಭಿಸಿತು. ಅಲ್ಲಿಂದೀಚೆಗೆ ದೂರದರ್ಶನಗಳ ಸಂಖ್ಯೆ ನಿರಂತರವಾಗಿ ಹೆಚ್ಚಲಾರಂಭಿಸಿತು. ಮಿಗಿಲಾಗಿ ಬೆಂಗಳೂರು ದೂರದರ್ಶನ ಕೇಂದ್ರದ ಕಾರ್ಯಕ್ರಮಗಳು ರಾಜ್ಯದಾದ್ಯಂತ ಏಕಕಾಲದಲ್ಲಿ ನೇರ ಪ್ರಸಾರವಾಗುವಂತಾಯಿತು.

ದಾವಣಗೆರೆ ನಗರದಲ್ಲಿ ೨೩-೦೭-೧೯೮೪ರಲ್ಲಿ ದೂರದರ್ಶನವು ರಾಷ್ಟ್ರೀಯ ಚಾನಲ್‌ಅನ್ನು ಆರಂಭಿಸಿತು. ಅದು ೧೦೦ ವ್ಯಾಟ್ಸ್ ಸಾಮರ್ಥ್ಯದ ಅಲ್ಪಶಕ್ತಿ ಪ್ರೇರಕ

ಕೇಂದ್ರವಾಗಿ ಕಾರ್ಯಾರಂಭ ಮಾಡಿತು. ೨೬-೦೭-೨೦೦೨ರಿಂದ ದಾವಣಗೆರೆಯಲ್ಲಿ ೫೦೦ ವ್ಯಾಟ್ಸ್ ಸಾಮರ್ಥ್ಯದ ದೂರದರ್ಶನ ಕೇಂದ್ರ ಆರಂಭವಾಯಿತು. ಬೆಳಗ್ಗೆ ೬ ರಿಂದ ರಾತ್ರಿ ೧೨ ರವರೆಗೆ ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ವಾರ್ತೆಗಳನ್ನು ಮರುಪ್ರಸಾರ ಮಾಡುತ್ತಿದೆ. ಚಾನಲ್ ೩೩, ಯು.ಹೆಚ್.ಎಫ್ ಬ್ಯಾಂಡ್(೫೦೦ ವ್ಯಾಟ್ಸ್) ಮೂಲಕ ಸೌಲಭ್ಯ ಪಡೆಯಲಾಗುತ್ತಿದೆ.

ಮುಖ್ಯ ವಿಷಯಗಳ ವಾರ್ತೆಗಳನ್ನು ಸಂಗ್ರಹಿಸುವ ಸ್ಟ್ರಿಂಜರ್ಸ್(Stringers) ಗಳನ್ನು ನೇಮಕ ಮಾಡಲಾಗಿರುತ್ತದೆ. ಅವರು ಮಾಹಿತಿ ಸಂಗ್ರಹಿಸಿ ಅಂತರ್‌ಜಾಲದ ಮೂಲಕ ಕೇಂದ್ರಕ್ಕೆ ಕಳುಹಿಸಿಕೊಡುತ್ತಾರೆ. ಅವರಿಗೆ ಸಂಭಾವನೆಯನ್ನೂ ನೀಡಲಾಗುತ್ತದೆ. ದಾವಣಗೆರೆಯಲ್ಲಿರುವ ಅನುರಕ್ಷಣಾ ಕೇಂದ್ರದ ವ್ಯಾಪ್ತಿಯಲ್ಲಿ ೦೮ ಕೇಂದ್ರಗಳಿದ್ದು, ೪೪ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ದಾವಣಗೆರೆ ಕಛೇರಿಯಲ್ಲಿ ೨೦೦೯ರ ಮೇ ತಿಂಗಳನಿಂದ ಶ್ರೀ ಕೆ.ಬಿ.ಸಿದ್ದಲಿಂಗಪ್ಪನವರು ೨೬-೧೧-೨೦೧೨ ರ ವರೆಗೂ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಸರ್ಕಾರದ ವ್ಯಾಪ್ತಿಯಲ್ಲಿರುವ ದೂರದರ್ಶನದ ಜೊತೆಗೆ ಖಾಸಗಿ ಚಾನಲ್‌ಗಳು ಸಮಾಜಕ್ಕೆ ಲಗ್ಗೆ ಇಡುತ್ತಿವೆ. ಉದಯ ಟಿ.ವಿ., ಕಸ್ತೂರಿ, ಸುವರ್ಣ, ಈ ಟಿ.ವಿ., ಟಿ.ವಿ.೯., ಪಬ್ಲಿಕ್ ಟಿ.ವಿ., ಝೀ ಕನ್ನಡ, ಸಮಯ, ಕಸ್ತೂರಿ ನ್ಯೂಸ್ ೨೪x೭, ಜನಶ್ರೀ, ಸಮಯ ೨೪x೭ , ಕೇಬಲ್ ಫಸ್ಟ್ ಇತ್ಯಾದಿ. ಮುಂತಾದ ಚಾನಲ್‌ಗಳು ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ತಾಲ್ಲೂಕು ಕೇಂದ್ರ ದಾವಣಗೆರೆಯಲ್ಲಿ ಕಛೇರಿಗಳನ್ನು ಹೊಂದಿ ಮಾಹಿತಿ ನೀಡಲು, ತಾಜಾ ಸುದ್ಧಿ ನೀಡಲು ಮುಂದಾಗಿವೆ. ಇವುಗಳ ಜೊತೆಯಲ್ಲಿ ಸ್ಟಾರ್ ಪ್ಲಸ್, ನ್ಯಾಷನಲ್ ಜಿಯೋಗ್ರಫಿ, ಡಿಸ್ಕವರಿ, ಪೋಗೋ, ಇ.ಎಸ್.ಪಿ.ಎನ್, ಸಿ.ಎನ್.ಎನ್., ಮುಂತಾದುವುಗಳ ಜೊತೆಯಲ್ಲಿ ತಮಿಳು, ತೆಲುಗು ಚಾನಲ್‌ಗಳೂ ಸೇವೆ ಸಲ್ಲಿಸುತ್ತಿವೆ. ತಾಲ್ಲೂಕಿನ ಹಳ್ಳಿಗಳಲ್ಲೂ ಬುಟ್ಟಿಗಳನ್ನು ಅಳವಡಿಸಿಕೊಂಡು ಖಾಸಗಿ ಕೇಬಲ್ ನೆಟ್‌ವರ್ಕ್‌ನವರು ಸೇವೆ ನೀಡುತ್ತಿದ್ದು, ಅದೊಂದು ಉದ್ಯೋಗವನ್ನು ನೀಡುವ ವೃತ್ತಿಯಾಗಿದೆ. ಈ ಎಲ್ಲಾ ಚಾನಲ್‌ಗಳ ಸದ್ಬಳಕೆಯಾಗಬೇಕಾಗಿದೆಯೇ ಹೊರತು, ದುರ್ಬಳಕೆಯಾಗಬಾರದು. ವಿದ್ಯಾಭ್ಯಾಸಕ್ಕೆ ಮಕ್ಕಳಿಗೆ ಮಾರಕವಾಗದಂತೆ ಸಮಾಜ ಪ್ರಸ್ತುತವಿರುವ ಚಾನಲ್‌ಗಳನ್ನು ಬಳಸಿಕೊಳ್ಳುವ ಅನಿವಾರ್ಯತೆ ಇದೆ.

# ಅಧ್ಯಾಯ–೮

## ಸಾರ್ವತ್ರಿಕ ಆಡಳಿತ

**ಹ**ರಪನಹಳ್ಳಿ ತಾಲ್ಲೂಕಿನ ಆಡಳಿತ ವ್ಯವಸ್ಥೆಗೆ ಐತಿಹಾಸಿಕ ಹಿನ್ನೆಲೆಯಿದೆ. ಒಂದು–ಎರಡನೆಯ ಶತಮಾನದಲ್ಲಿ ತಲೆ ಎತ್ತಿ ವಿಜಯನಗರದ ಅರಸರ ಕಾಲದವರೆಗೂ ಅಸ್ತಿತ್ವದಲ್ಲಿದ್ದ ಕೋಗಳಿ ನಾಡಿನಲ್ಲಿ ಗುರುತಿಸಿಕೊಂಡ ಹರಪನಹಳ್ಳಿ ತಾಲ್ಲೂಕು ಪ್ರದೇಶ, ಗಾವುಂಡ, ಕರಣಿಕೆ ಪಟ್ಟಣ ಶೆಟ್ಟಿಗಳ ಮೂಲಕ ಹಳ್ಳಿಗಳ ಆಡಳಿತ ನಡೆದದ್ದು ಶಾಸನಗಳಿಂದ ಗೊತ್ತಾಗುತ್ತದೆ.

ನೊಳಂಬ ಪಲ್ಲವರ ಕಾಲದ ಉಚ್ಚಂಗಿದುರ್ಗ, ಅರಸೀಕೆರೆ ಬಾಗಳಿ ಗ್ರಾಮಗಳ, ಗ್ರಾಮೀಣ, ಮಹಾಜನಗಳ ಪಾತ್ರ ಗಮನಾರ್ಹವಾಗಿದೆ. ಪ್ರಮುಖ ಅರಸರು ಈ ಗ್ರಾಮಗಳಿಗೆ ಆಗಮಿಸಿದಾಗ, ಅರಸದತ್ತಿಗಳನ್ನು ಕೊಡ ಮಾಡುವಾಗ ಮಹಾಜನಗಳನ್ನು ಕರೆದು ಅವರ ಜೊತೆ ಕೂಡ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದನು. ಅದನ್ನು ಕ್ರಿ.ಶ. ೧೦–೧೧–೧೧೯೩ ರ ಬಾಗಳಿ ಕಲ್ಲೇಶ್ವರ ದೇವಾಲಯದ ಶಾಸನ ಹೀಗೆ ಉಲ್ಲೇಖಿಸುತ್ತದೆ.

"ವೀರ ಬಲ್ಲಾಳ ದೇವನು ಬಾಳ್ಗುಳಿಯ ನೆಲೆವೀಡಿನಲ್ಲಿದ್ದಾಗ, ಆ ಸ್ಥಳದ ಕಲಿದೇವ ಸ್ವಾಮಿಯ ಬಂಡಸ್ಫುಟಿತ ಜೀರ್ಣೋದ್ಧಾರ ಮುಂತಾದುದಕ್ಕೆ ಅಲ್ಲಿ ಮಹಾಜನಗಳ ಕಾಲನ್ನು ತೊಳೆದು ನಂದಿಬೇಹೂರು ನೀಡಿದ" ಎಂದಿದೆ.

ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ಅವರ ನ್ಯಾಯಾಧೀಕರಣ ಹೀಗಿದ್ದಿತು.

೧) ಗೌಡ–ಅಧ್ಯಕ್ಷ ೨) ಮಠದ ಸ್ವಾಮಿ ಇಲ್ಲವೇ ಗ್ರಾಮ ದೇವರ ಪೂಜಾರಿ ೩) ಶಾನುಭೋಗ (ಕುಲಕರ್ಣಿ) ೪) ಬಣಕಾರ ೫) ಹುಂಡೇಕಾರ ಇವರದು ಒಂದು ಸಮಿತಿ. ಇವರು ದೇವಾಲಯದ ಕಟ್ಟೆ ಇಲ್ಲವೇ ದೇವಾಲಯದ ಒಳಗೆ ಕುಳಿತು ನ್ಯಾಯ ನಿರ್ಣಯ ತೆಗೆದುಕೊಳ್ಳುತ್ತಿದ್ದರು.

ಈ ಕಟ್ಟೆ–ದೇವಾಲಯಗಳಲ್ಲಿ ತೀರ್ಮಾನವಾಗದ ಹಲವು ಅಪರಾಧ (ಜಗಳ) ಗಳು ಅರಸರ ಕೋರ್ಟಿಗೆ ಬರುತ್ತಿದ್ದವು. ಇದರಲ್ಲಿ ೧) ಅರಸ ಅಧ್ಯಕ್ಷ ೨) ಸೈನ್ಯದ ಮುಖ್ಯಸ್ಥ ೩) ದಿವಾನ ೪) ಬೊಕ್ಕಸದ ಅಧಿಕಾರಿ ಚಿಕ್ಕತಪ್ಪು–ಅಪರಾಧ ಮಾಡಿದವರಿಗೆ–ದಂಡ ಹಾಕುತ್ತಿದ್ದರು. ದೊಡ್ಡ ತಪ್ಪಿಗೆ–ಶಿಕ್ಷೆ ವಿಧಿಸುತ್ತಿದ್ದರು. ಒಂದು–ಎರಡು ತಿಂಗಳು ಚಾವಡಿಯಲ್ಲಿ ಕೂಡಿ ಹಾಕಿ ಅವರಿಗೆ ಊಟ ಒದಗಿಸುತ್ತಿದ್ದರು.

ಬ್ರಿಟಿಷ್ ಕಮಿಷನ್ನರ ಆಡಳಿತದಲ್ಲಿ ಅನೇಕ ಸುಧಾರಣೆಗಳಾದವು. ಸ್ವಾತಂತ್ರ್ಯ ಪೂರ್ವ ಬಳ್ಳಾರಿ ಜಿಲ್ಲೆಗೆ ಒಬ್ಬರೇ ತಹಶೀಲ್ದಾರರು, ಒಬ್ಬ ತಹಶೀಲ್ದಾರ, ಬಳ್ಳಾರಿ ಮತ್ತು ಹರಪನಹಳ್ಳಿಗಳನ್ನು ನೋಡಿಕೊಳ್ಳಬೇಕಿದ್ದಿತು. ಆಗ ಮಂಡ್ರಿಗಿ ಭೀಮರಾಯರು ಕುದುರೆಯ ಮೇಲೆ ಪ್ರಯಾಣ ಮಾಡಿ ವಾರದಲ್ಲಿ ಕೆಲವು ದಿನ ಹರಪನಹಳ್ಳಿಗೆ ಮತ್ತೆ ಕೆಲವು ದಿನಗಳವರೆಗೆ ಬಳ್ಳಾರಿ ತಾಲ್ಲೂಕು ಕಛೇರಿಯ ಕೆಲಸ ನಿರ್ವಹಿಸಬೇಕಾಗಿದ್ದಿತು. ೧೮೩೨ ರಲ್ಲಿ ಹರಪನಹಳ್ಳಿ ೧) ತಾಲ್ಲೂಕು ಕಛೇರಿ ೨) ಸಬ್ ರಿಜಿಸ್ಟಾರ್ ಕಛೇರಿ ೩) ಪೊಲೀಸ್ ಠಾಣೆಗಳು ಸ್ಥಾಪನೆಯಾಗಿರುತ್ತವೆ.

ಮೈಸೂರು ಮಹಾರಾಜರ ಕಾಲದ ಬಳಿಕ ಮೈಸೂರು ಭಾಗದ ತಾಲ್ಲೂಕು ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರಿಗೆ ಅಮಲ್ದಾರ್ ಎಂಬುದಾಗಿ ಕರೆಯುತ್ತಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ಅವರಿಗೆ ತಹಶೀಲ್ದಾರರೆಂದು ಕರೆಯಲಾಗುತ್ತಿತ್ತು. ಈಗಲೂ ಅದನ್ನೇ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರೆಂದು ಕರೆಯುವರು. ಇವರ ನೆರವಿಗೆ ಶಿರಸ್ತೇದಾರರು (ಉಪ ತಹಶೀಲ್ದಾರರು) ಕಂದಾಯ ವೃತ್ತಗಳಲ್ಲಿ ಕಂದಾಯ ನಿರೀಕ್ಷಕರು, ಉಪ ವಿಭಾಗಾಧಿಕಾರಿಗಳು ಇವರ ಮೇಲಾಧಿಕಾರಿ ಗಳಾಗಿ ಜಿಲ್ಲಾಧಿಕಾರಿಗಳು ಸೂಚಿಸಿದಂತೆ ಕಾರ್ಯನಿರ್ವಹಿಸಿ, ಚುನಾವಣೆಯನ್ನು ಇವರೇ ನಡೆಸುವರು. ಜನಗಣತಿಯಲ್ಲಿ ದಂಡಾಧಿಕಾರಿಗಳಾಗಿಯೂ ಕಾರ್ಯ ನಿರ್ವಹಿಸುವರು.

**ತಾಲ್ಲೂಕು ಕಛೇರಿಯ ವಿವರಗಳು**

| ಕ್ರ. ಸಂ. | ವಿವರಗಳು | ಒಟ್ಟು |
|---|---|---|
| ೧ | ಕಛೇರಿಯ ಮುಖ್ಯಸ್ಥರು, ತಹಶೀಲ್ದಾರರು | ೦೧ |
| ೨ | ಶಿರಸ್ತೇದಾರರು | ೦೪ |
| ೩ | ತಾಲ್ಲೂಕು ಕಛೇರಿಯ ವಿಷಯ ನಿರ್ವಾಹಕರು | ೨೪ |

| | | |
|---|---|---|
| ೪ | ಉಪ ತಹಶೀಲ್ದಾರರು, ನಾಡ ಕಛೇರಿ | ೦೩ |
| ೫ | ತಾಲ್ಲೂಕಿನ ನಾಡ ಕಛೇರಿಗಳು (ತೆಲಗಿ/ಚಿಗಟೇರಿ/ ಅರಸೀಕೆರೆ) | ೦೩ |
| ೬ | ಕಂದಾಯ ಪರಿವೀಕ್ಷಕರು | ೦೪ |
| ೭ | ಗ್ರಾಮ ಲೆಕ್ಕಿಗರು | ೪೫ |

**ತಹಶೀಲ್ದಾರರು**

ತಹಶೀಲ್ದಾರರು ತಾಲ್ಲೂಕಿನ ಮುಖ್ಯ ಕಂದಾಯಾಧಿಕಾರಿಯಾಗಿದ್ದು, ತಮ್ಮದೇ ಆಗಿರುವ ಸಿಬ್ಬಂದಿಯ ಮೂಲಕ ಕರ್ತವ್ಯ ನಿರ್ವಹಿಸುತ್ತಾರೆ. ಶಿರಸ್ತೇದಾರ್‌ಗಳು, ಉಪತಹಶೀಲ್ದಾರ್‌ಗಳು, ಕಂದಾಯ ವೃತ್ತ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ಅಭಿಲೇಖಪಾಲಕ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವನ್ನು ತಹಶೀಲ್ದಾರರು ಹೊಂದಿದ್ದಾರೆ.

ತಹಶೀಲ್ದಾರರು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆ ಮತ್ತು ಕಾನೂನುಗಳು ಹೀಗಿವೆ: (೧) ಕರ್ನಾಟಕ ಭೂಸುಧಾರಣಾ ಅಧಿನಿಯಮ ೧೯೬೧ ಮತ್ತು ನಿಯಮಾವಳಿ ೧೯೭೪, (೨) ಕರ್ನಾಟಕ ಹಲವು ಇನಾಂ ರದ್ಧತಿ ಅಧಿನಿಯಮ ೧೯೭೭, (೩) ಕರ್ನಾಟಕ ಗ್ರಾಮ ನೌಕರಿಗಳ ರದ್ಧತಿ ಅಧಿನಿಯಮ ೧೯೬೧, (೪) ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪, (೫) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ ೧೯೭೪ ಮತ್ತು ನಿಯಮಾವಳಿ ೧೯೭೫, (೬) ವೃದ್ಧಾಪ್ಯ ವೇತನ ಮಂಜೂರು ಮಾಡುವುದು, (೭) ನಿರ್ಗತಿಕ ವಿಧವಾ ವೇತನ ನಿಯಮಾವಳಿ ೧೯೭೬, (೮) ಮತದಾರರ ನೋಂದಣಿ ನಿಯಮಾವಳಿ ೧೯೬೦, (೯) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ ೧೯೬೬, (೧೦) ಕರ್ನಾಟಕ ನೀರಾವರಿ ಅಧಿನಿಯಮ ೧೯೬೪, (೧೧) ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಾವಳಿ ೧೯೬೫, (೧೨) ಕರ್ನಾಟಕ ಅರಣ್ಯ ನಿಯಮಾವಳಿ ೧೯೬೯, (೧೩) ಉದ್ದಿಮೆಗಳಿಗೆ ಕರ್ನಾಟಕ ರಾಜ್ಯದ ನೆರವು ನಿಯಮಾವಳಿ ೧೯೬೬, (೧೪) ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ ೧೯೬೬, (೧೫) ಏಲಕ್ಕಿ ಅಧಿನಿಯಮ ೧೯೬೫, (೧೬) ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ ೧೯೭೪ ಮತ್ತು ಅದರಡಿಯ ನಿಯಮಾವಳಿ.

ಇಷ್ಟೇ ಅಲ್ಲದೆ ತಾಲ್ಲೂಕಿನ ದಂಡಾಧಿಕಾರಿಯಾಗಿ ತಹಶೀಲ್ದಾರರು ಹೊಂದಿರುವ ಅಧಿಕಾರ ಮತ್ತು ಕರ್ತವ್ಯಗಳು ಹೀಗಿವೆ: ೧) ದಂಡ ಪ್ರಕ್ರಿಯೆ ಸಂಹಿತೆ ೧೯೭೪, ೨) ಭಾರತ ಸಾಕ್ಷ್ಯ ಅಧಿನಿಯಮ ೧೯೬೩, ೩) ಕರ್ನಾಟಕ ಪೋಲಿಸ್ ಅಧಿನಿಯಮ, ೪) ಜೀತದಾಳು ಪದ್ಧತಿ (ನಿರ್ಮೂಲನ) ಅಧಿನಿಯಮ ೧೯೭೬, ೫) ಪ್ರಮಾಣವಚನ ಅಧಿನಿಯಮ ೧೮೯೯, ೬) ಭಾರತ–ಮುದ್ರಾಂಕ ಅಧಿನಿಯಮ ೧೮೯೯, ೭) ಭಾರತೀಯ ತಂತಿ ಅಧಿನಿಯಮ ೧೯೮೫, ೮) ನ್ಯಾಯಾಧೀಶರ (ರಕ್ಷಣೆ) ಅಧಿನಿಯಮ ೧೯೬೫, ೯) ಪ್ರಾಣಿ ಹಿಂಸೆ ತಡೆ ಅಧಿನಿಯಮ ೧೯೬೦, ೧೦) ಕರ್ನಾಟಕ ಭಿಕ್ಷಾಟನಾ (ನಿರ್ಮೂಲನ) ಅಧಿನಿಯಮ ೧೯೭೫, ೧೧) ಸಾರ್ವಜನಿಕ ಆರೋಗ್ಯ ಅಧಿನಿಯಮ ೧೯೪೪, ೧೨) ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೭, ೧೩) ನ್ಯಾಯವಾದಿಗಳ ಅಧಿನಿಯಮ ೧೯೬೧, ೧೪) ವಿದ್ಯುಚ್ಛಕ್ತಿ ಅಧಿನಿಯಮ ೧೯೧೦, ೧೫) ಸತಿಹೋಗುವ (ನಿಷೇಧ) ಅಧಿನಿಯಮ ೧೯೮೭, ೧೬) ನ್ಯಾಯಾಲಯ ನಿಂದನ (ಪ್ರತಿಬಂಧಕ) ಅಧಿನಿಯಮ ೧೯೭೧, ೧೭) ಖೈದಿಗಳನ್ನು ಗುರುತಿಸುವ ಅಧಿನಿಯಮ ೧೯೨೯, ೧೮) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಷೇಧ) ಅಧಿನಿಯಮ ೧೯೮೯, ೧೯) ಕರ್ನಾಟಕ ಆಹಾರ ಮತ್ತು ನಾಗರೀಕ ಸೇವಾ ಅಧಿನಿಯಮ ೧೯೮೯, ೨೦) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ, ೨೧) S.I.T.A. ಅಧಿನಿಯಮ (Suppression of immoral Traffic Act).

**ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಛೇರಿ**: ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನವನ್ನು ನಿರ್ವಹಿಸುವರು. ತಾಲ್ಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವರು. ೧೯೯೩ ರ ಜಿಲ್ಲಾ ಪಂಚಾಯತ್ ಕಾಯ್ದೆಯಿಂದ ಇಂದು ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ಕರೆಯಲಾಗಿದೆ. ಜಿಲ್ಲಾ ಪಂಚಾಯಿತಿ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ಅವರಿಗೆ ನೇರವಾಗಿ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗವಿರುವುದು.

**ಕಂದಾಯ ನಿರೀಕ್ಷಕರು**: ತಾಲ್ಲೂಕಿನಲ್ಲಿರುವ ನಾಲ್ಕು ಹೋಬಳಿಗಳಲ್ಲಿ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಂದಾಯ ನಿರೀಕ್ಷಕರು ಇರುವರು. ಕಂದಾಯಕ್ಕೆ ಸಂಬಂಧಿಸಿದಂತೆ ತಹಶೀಲ್ದಾರರ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವರು. ಇವರು ಭೂ ಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ ಇತರೆ ಶೇಖರಣೆ ಸರ್ಕಾರಿ ಬಾಕಿ ಸಾಲ ಮತ್ತು ಮುಂಗಡಗಳ ಮರು ಪಾವತಿ ಮುಂತಾದವುಗಳ ಶೇಖರಣೆ, ಆಹಾರ ಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ಮೇಲ್ವಿಚಾರಣೆ, ಸರ್ಕಾರಿ ಜಮೀನು ಒತ್ತುವರಿಗಳನ್ನು ಗಮನಿಸುವುದು, ಉಂಬಳಿ ಜಮೀನಿನ ದಾಖಲೆ ಸಂಯೋಜನೆ, ಭೂ ಸ್ವಾಧೀನಗಳಂತಹ ಕಂದಾಯ ಇವುಗಳ ಜೊತೆಗೆ ವೃದ್ಧಾಪ್ಯ ವಿಧವಾ ವೇತನಗಳ ತಪಾಸಣೆಗಳನ್ನು ಇವರು ನಿರ್ವಹಿಸುವರು.

## ಸಾರ್ವತ್ರಿಕ ಆಡಳಿತ

| ಕ್ರ. ಸಂ. | ಹೋಬಳಿ | ಗ್ರಾಮ ಪಂಚಾಯಿತಿ ಹೆಸರು | ಗ್ರಾಮ |
|---|---|---|---|
| ೧ | ೨ | ೩ | ೪ |
| ೧ | ಚಿಗಟೇರಿ | ಚಿಗಟೇರಿ | ಚಿಗಟೇರಿ |
| ೨ | ಚಿಗಟೇರಿ | ಮತ್ತಿಹಳ್ಳಿ | ಮತ್ತಿಹಳ್ಳಿ |
| | ಚಿಗಟೇರಿ | | ಆಲದಹಳ್ಳಿ |
| | ಚಿಗಟೇರಿ | | ಹಗರಿಶೀರನಹಳ್ಳಿ |
| | ಚಿಗಟೇರಿ | | ಎನ್.ಶೀರನಹಳ್ಳಿ |
| | ಚಿಗಟೇರಿ | | ಪುಣ್ಯನಗರ |
| ೩ | ಚಿಗಟೇರಿ | ಸಾಸ್ವಿಹಳ್ಳಿ | ಸಾಸ್ವಿಹಳ್ಳಿ |
| | ಚಿಗಟೇರಿ | | ಹುಣಿಸಿಹಳ್ಳಿ |
| | ಚಿಗಟೇರಿ | | ಹಗರಿಗುಡಿಹಳ್ಳಿ |
| | ಚಿಗಟೇರಿ | | ಕುಣೇಮಾದಿಹಳ್ಳಿ |
| | ಚಿಗಟೇರಿ | | ನಾಗರಕೊಂಡ |
| ೪ | ಚಿಗಟೇರಿ | ಕಡಬಗೇರಿ | ಕಡಬಗೇರಿ |
| | ಚಿಗಟೇರಿ | | ಕಸವನಹಳ್ಳಿ |
| | ಚಿಗಟೇರಿ | | ಜೋಶಿಲಿಂಗಾಪುರ |
| | ಚಿಗಟೇರಿ | | ಹಿಕ್ಕಿಂಗೇರಿ |
| | ಚಿಗಟೇರಿ | | ಪಾವನಪುರ |
| ೫ | ಚಿಗಟೇರಿ | ಬೆಣ್ಣಿಹಳ್ಳೀ | ಬೆಣ್ಣಿಹಳ್ಳೀ |
| | ಚಿಗಟೇರಿ | | ಕಡಕೋಳ |

| | | | |
|---|---|---|---|
| | ಚಿಗಟೇರಿ | | ಬಾಡ |
| | ಚಿಗಟೇರಿ | | ನಿಲುವಂಜಿ |
| | ಚಿಗಟೇರಿ | | ಪೃಥೇಸ್ವರ |
| | ಚಿಗಟೇರಿ | | ಲೋಲೇಶ್ವರ |
| | ಚಿಗಟೇರಿ | | ನಜೀರ್ ನಗರ |
| | ಚಿಗಟೇರಿ | | ಮುತ್ತಿಗಿ |
| | ಚಿಗಟೇರಿ | | ಹಳೇ ಓಬಳಾಪುರ |
| | ಚಿಗಟೇರಿ | | ಹೊಸ ಓಬಳಾಪುರ |
| | ಚಿಗಟೇರಿ | | ಬಸವೇಶ್ವರ ನಗರ |
| ೬ | ಚಿಗಟೇರಿ | ಮೈದೂರು | ಮೈದೂರು |
| | ಚಿಗಟೇರಿ | | ಎಂ.ಬಾವಿಹಳ್ಳಿ |
| | ಚಿಗಟೇರಿ | | ಹಗರಿಗಜಾಪುರ |
| | ಚಿಗಟೇರಿ | | ಬಳಗನೂರು |
| | ಚಿಗಟೇರಿ | | ಗೌರೀಪುರ |
| | ಚಿಗಟೇರಿ | | ಬಸವನಾಳು |
| | ಚಿಗಟೇರಿ | | ಕೆಸರಹಳ್ಳಿ |
| ೭ | ಚಿಗಟೇರಿ | ನಂದಿಬೇವೂರು | ನಂದಿಬೇವೂರು |
| | ಚಿಗಟೇರಿ | | ನಂದಿಬೇವೂರು ತಾಂಡ |
| | ಚಿಗಟೇರಿ | | ಕೊಂಗನಹೊಸೂರು |
| | ಚಿಗಟೇರಿ | | ಕಣಿವಿಹಳ್ಳಿ |

| | | | |
|---|---|---|---|
| ೮ | ಚಿಗಟೇರಿ | ನಿಚ್ಚವ್ವನಹಳ್ಳಿ | ನಿಚ್ಚವ್ವನಹಳ್ಳಿ |
| | ಚಿಗಟೇರಿ | | ಅಡವಿಮಲ್ಲಾಪುರ |
| | ಚಿಗಟೇರಿ | | ಕನಕನಬಸಾಪುರ |
| | ಚಿಗಟೇರಿ | | ವಡೆಯರಬಸಾಪುರ |
| | ಚಿಗಟೇರಿ | | ವಡೆಯರಬಸಾಪುರ ತಾಂಡ |
| | ಚಿಗಟೇರಿ | | ಹರಿಯಮ್ಮನಹಳ್ಳಿ |
| | ಚಿಗಟೇರಿ | | ಕುಮಾರನಹಳ್ಳಿ |
| | ಚಿಗಟೇರಿ | | ದ್ಯಾಪನಾಯಕನಹಳ್ಳಿ |
| ೧ | ಹರಪನಹಳ್ಳಿ ಕಸಬ | ಅಡವಿಹಳ್ಳಿ | ಅಡವಿಹಳ್ಳಿ |
| | ಹರಪನಹಳ್ಳಿ ಕಸಬ | | ಹೊಂಬಳಗಟ್ಟಿ |
| | ಹರಪನಹಳ್ಳಿ ಕಸಬ | | ತಿಪ್ಪನಾಯ್ಕನಹಳ್ಳಿ |
| | ಹರಪನಹಳ್ಳಿ ಕಸಬ | | ನಿಚ್ಚಾಪುರ |
| | ಹರಪನಹಳ್ಳಿ ಕಸಬ | | ದೇವರತಿಮ್ಮಲಾಪುರ |
| ೨ | ಹರಪನಹಳ್ಳಿ ಕಸಬ | ಬಾಗಳಿ | ಬಾಗಳಿ |
| | ಹರಪನಹಳ್ಳಿ ಕಸಬ | | ಕೋಡಿಹಳ್ಳಿ |
| | ಹರಪನಹಳ್ಳಿ ಕಸಬ | | ಶೃಂಗಾರತೋಟ |
| | ಹರಪನಹಳ್ಳಿ ಕಸಬ | | ದಡಗಾರನಹಳ್ಳಿ |
| | ಹರಪನಹಳ್ಳಿ ಕಸಬ | | ಕಾಯಕದಹಳ್ಳಿ |
| ೩ | ಹರಪನಹಳ್ಳಿ ಕಸಬ | ಮಾಡ್ಲಗೇರಿ | ಮಾಡ್ಲಗೇರಿ |
| | ಹರಪನಹಳ್ಳಿ ಕಸಬ | | ಮಾಡ್ಲಗೇರಿ ತಾಂಡ |

| | | | |
|---|---|---|---|
| | ಹರಪನಹಳ್ಳಿ ಕಸಬ | | ವಿ.ದಾದಾಪುರ |
| | ಹರಪನಹಳ್ಳಿ ಕಸಬ | | ವಿ.ದಾದಾಪುರ ತಾಂಡ |
| | ಹರಪನಹಳ್ಳಿ ಕಸಬ | | ಕಾನಹಳ್ಳಿ |
| | ಹರಪನಹಳ್ಳಿ ಕಸಬ | | ಕರೆಕಾನಹಳ್ಳಿ ತಾಂಡ |
| ೮ | ಹರಪನಹಳ್ಳಿ ಕಸಬ | ತೊಗರಿಕಟ್ಟೆ | ತೊಗರಿಕಟ್ಟಿ |
| | ಹರಪನಹಳ್ಳಿ ಕಸಬ | | ಉದ್ಗಟ್ಟಿ ತಾಂಡ |
| | ಹರಪನಹಳ್ಳಿ ಕಸಬ | | ಉದ್ಗಟ್ಟಿ ಸಣ್ಣ ತಾಂಡ |
| | ಹರಪನಹಳ್ಳಿ ಕಸಬ | | ಉದ್ಗಟ್ಟಿ ದೊಡ್ಡ ತಾಂಡ (ಬಾಪೂಜಿ ನಗರ) |
| | ಹರಪನಹಳ್ಳಿ ಕಸಬ | | ಗೌರಿಹಳ್ಳಿ |
| | ಹರಪನಹಳ್ಳಿ ಕಸಬ | | ಅಲಮರಸಿಕೇರಿ |
| | ಹರಪನಹಳ್ಳಿ ಕಸಬ | | ಮೀನಹಳ್ಳಿ ತಾಂಡ |
| | ಹರಪನಹಳ್ಳಿ ಕಸಬ | | ಯಲ್ಲಾಪುರ |
| | ಹರಪನಹಳ್ಳಿ ಕಸಬ | | ಯಲ್ಲಾಪುರ ಕೊರಚರಹಟ್ಟಿ |
| | ಹರಪನಹಳ್ಳಿ ಕಸಬ | | ನಾರಾಯಣಪುರ |
| ೫ | ಹರಪನಹಳ್ಳಿ ಕಸಬ | ಹಾರಕನಾಳು | ಹಾರಕನಾಳು |
| | ಹರಪನಹಳ್ಳಿ ಕಸಬ | | ಹುಲಿಕಟ್ಟಿ |
| | ಹರಪನಹಳ್ಳಿ ಕಸಬ | | ಕನ್ನಾಯಕನಹಳ್ಳಿ |
| | ಹರಪನಹಳ್ಳಿ ಕಸಬ | | ಈಶಾಪುರ |
| | ಹರಪನಹಳ್ಳಿ ಕಸಬ | | ಚನ್ನಹಳ್ಳಿ ತಾಂಡ |
| | ಹರಪನಹಳ್ಳಿ ಕಸಬ | | ಹಾರಕನಾಳು ಸಣ್ಣ ತಾಂಡ |

| | | | |
|---|---|---|---|
| | ಹರಪನಹಳ್ಳಿ ಕಸಬ | | ಹಾರಕನಾಳು ದೊಡ್ಡ ತಾಂಡ |
| ೬ | ಹರಪನಹಳ್ಳಿ ಕಸಬ | ಕೂಲಹಳ್ಳಿ | ಕೂಲಹಳ್ಳಿ |
| | ಹರಪನಹಳ್ಳಿ ಕಸಬ | | ಬಂಡ್ರಿ |
| | ಹರಪನಹಳ್ಳಿ ಕಸಬ | | ಬಂಡ್ರಿ ತಾಂಡ |
| | ಹರಪನಹಳ್ಳಿ ಕಸಬ | | ಚಿಕ್ಕಹಳ್ಳಿ |
| | ಹರಪನಹಳ್ಳಿ ಕಸಬ | | ಎರಡೆತ್ತಿನಹಳ್ಳಿ |
| | ಹರಪನಹಳ್ಳಿ ಕಸಬ | | ಮಾದಾಪುರ |
| ೧ | ತೆಲಗಿ ಹೋಬಳಿ | ಶಿಂಗ್ರಿಹಳ್ಳಿ | ಶಿಂಗ್ರಿಹಳ್ಳಿ |
| | ತೆಲಗಿ ಹೋಬಳಿ | | ಶಿಂಗ್ರಿಹಳ್ಳಿ ದೊಡ್ಡ ತಾಂಡ |
| | ತೆಲಗಿ ಹೋಬಳಿ | | ಶಿಂಗ್ರಿಹಳ್ಳಿ ಸಣ್ಣ ತಾಂಡ |
| | ತೆಲಗಿ ಹೋಬಳಿ | | ಸತ್ತೂರು |
| | ತೆಲಗಿ ಹೋಬಳಿ | | ಚೌಡಾಪುರ |
| | ತೆಲಗಿ ಹೋಬಳಿ | | ಗೊಲ್ಲರಹಟ್ಟಿ |
| | ತೆಲಗಿ ಹೋಬಳಿ | | ಹೊಸಹಳ್ಳಿ |
| ೨ | ತೆಲಗಿ ಹೋಬಳಿ | ಗುಂಡಗತ್ತಿ | ಗುಂಡಗತ್ತಿ |
| | ತೆಲಗಿ ಹೋಬಳಿ | | ತಲವಾಗಲು |
| | ತೆಲಗಿ ಹೋಬಳಿ | | ಕಂಬತ್ತಹಳ್ಳಿ |
| ೩ | ತೆಲಗಿ ಹೋಬಳಿ | ತೆಲಗಿ | ತೆಲಗಿ |
| | ತೆಲಗಿ ಹೋಬಳಿ | | ತೆಲಗಿ ತಿಮ್ಮಲಾಪುರ |
| ೪ | ತೆಲಗಿ ಹೋಬಳಿ | ಕುಂಚೂರು | ಕುಂಚೂರು |

| | | | |
|---|---|---|---|
| | ತೆಲಗಿ ಹೋಬಳಿ | | ಕಣವಿತಾಂಡ |
| | ತೆಲಗಿ ಹೋಬಳಿ | | ಕೆರೆತಾಂಡ |
| | ತೆಲಗಿ ಹೋಬಳಿ | | ಅರಸನಾಳು |
| ೫ | ತೆಲಗಿ ಹೋಬಳಿ | ನೀಲಗುಂದ | ನೀಲಗುಂದ |
| | ತೆಲಗಿ ಹೋಬಳಿ | | ಅನಂತನಹಳ್ಳಿ |
| | ತೆಲಗಿ ಹೋಬಳಿ | | ತಾಳೇದಹಳ್ಳಿ |
| | ತೆಲಗಿ ಹೋಬಳಿ | | ತಾಳೇದಹಳ್ಳಿ ತಾಂಡ |
| | ತೆಲಗಿ ಹೋಬಳಿ | | ಮಾಚಿಹಳ್ಳಿ |
| | ತೆಲಗಿ ಹೋಬಳಿ | | ಮಾಚಿಹಳ್ಳಿ ತಾಂಡ |
| | ತೆಲಗಿ ಹೋಬಳಿ | | ಗುರುಶಾಂತನಹಳ್ಳಿ |
| | ತೆಲಗಿ ಹೋಬಳಿ | | ಭೈರಾಪುರ |
| | ತೆಲಗಿ ಹೋಬಳಿ | | ಕೊರಚರಹಟ್ಟಿ |
| ೬ | ತೆಲಗಿ ಹೋಬಳಿ | ಕೆ.ಕಲ್ಲಹಳ್ಳಿ | ಕೆ.ಕಲ್ಲಹಳ್ಳಿ |
| | ತೆಲಗಿ ಹೋಬಳಿ | | ಹಂಪಾಪುರ |
| | ತೆಲಗಿ ಹೋಬಳಿ | | ಅರೆಮಜ್ಜಿಗೇರಿ |
| | ತೆಲಗಿ ಹೋಬಳಿ | | ಚಿಕ್ಕಮಜ್ಜಿಗೇರಿ |
| | ತೆಲಗಿ ಹೋಬಳಿ | | ವ್ಯಾಸನತಾಂಡ |
| | ತೆಲಗಿ ಹೋಬಳಿ | | ಭೀಮ್ಲಾತಾಂಡ |
| | ತೆಲಗಿ ಹೋಬಳಿ | | ಇಟ್ಟಿಗುಡಿ |
| | ತೆಲಗಿ ಹೋಬಳಿ | | ಈ॥ ಬೇವಿನಹಳ್ಳಿ |

| | | | |
|---|---|---|---|
| ೭ | ತೆಲಗಿ ಹೋಬಳಿ | ನಿಟ್ಟೂರು | ನಿಟ್ಟೂರು |
| | ತೆಲಗಿ ಹೋಬಳಿ | | ತಾವರಗುಂದಿ |
| | ತೆಲಗಿ ಹೋಬಳಿ | | ಬಸಾಪುರ |
| | ತೆಲಗಿ ಹೋಬಳಿ | | ಯರಬಾಳು |
| | ತೆಲಗಿ ಹೋಬಳಿ | | ಮತ್ತೂರು |
| ೮ | ತೆಲಗಿ ಹೋಬಳಿ | ಚಿರಸ್ಥಹಳ್ಳಿ | ಚಿರಸ್ಥಹಳ್ಳಿ |
| | ತೆಲಗಿ ಹೋಬಳಿ | | ಜಿ. ದಾದಾಪುರ |
| | ತೆಲಗಿ ಹೋಬಳಿ | | ಅಲಗಿಲವಾಡ |
| | ತೆಲಗಿ ಹೋಬಳಿ | | ಅಲಗಿಲವಾಡ ತಾಂಡ (ಶಿವಪುರ) |
| | ತೆಲಗಿ ಹೋಬಳಿ | | ಗಿರಿಯಾಪುರ ತಾಂಡ |
| ೯ | ತೆಲಗಿ ಹೋಬಳಿ | ಯಡಿಹಳ್ಳಿ | ಯಡಿಹಳ್ಳಿ |
| | ತೆಲಗಿ ಹೋಬಳಿ | | ಅಳಗಂಚಿಕೇರಿ |
| | ತೆಲಗಿ ಹೋಬಳಿ | | ಬೆಂಡಿಗೇರಿ |
| | ತೆಲಗಿ ಹೋಬಳಿ | | ಬೆಂಡಿಗೇರಿ ದೊಡ್ಡ ತಾಂಡ (ಸೇವಾನಗರ) |
| | ತೆಲಗಿ ಹೋಬಳಿ | | ಬೆಂಡಿಗೇರಿ ಸಣ್ಣ ತಾಂಡ |
| | ತೆಲಗಿ ಹೋಬಳಿ | | ಬಿಕ್ಕಿಕಟ್ಟಿ |
| | ತೆಲಗಿ ಹೋಬಳಿ | | ರಂಗಾಪುರ |
| | ತೆಲಗಿ ಹೋಬಳಿ | | ರಂಗಾಪುರ ಕ್ಯಾಂಪ್ |
| ೧೦ | ತೆಲಗಿ ಹೋಬಳಿ | ಹಲುವಾಗಲು | ಹಲುವಾಗಲು |
| | ತೆಲಗಿ ಹೋಬಳಿ | | ಗರ್ಭಗುಡಿ |

| | | | |
|---|---|---|---|
| | ತೆಲಗಿ ಹೋಬಳಿ | | ಗರ್ಭಗುಡಿ ತಾಂಡ |
| | ತೆಲಗಿ ಹೋಬಳಿ | | ವಳತಾಂಡ |
| | ತೆಲಗಿ ಹೋಬಳಿ | | ಕಣವಿ |
| ೧೧ | ತೆಲಗಿ ಹೋಬಳಿ | ದುಗ್ಗಾವತಿ | ದುಗ್ಗಾವತಿ |
| | ತೆಲಗಿ ಹೋಬಳಿ | | ಕಡತಿ |
| | ತೆಲಗಿ ಹೋಬಳಿ | | ನಂದ್ಯಾಲ |
| | ತೆಲಗಿ ಹೋಬಳಿ | | ವಟ್ಲಹಳ್ಳಿ |
| | ತೆಲಗಿ ಹೋಬಳಿ | | ಶಾಂತಿನಗರ |
| | ತೆಲಗಿ ಹೋಬಳಿ | | ಕಂಡಿಕೇರಿ |
| ೧೨ | ತೆಲಗಿ ಹೋಬಳಿ | ರಾಗಿಮಸಲವಾಡ | ರಾಗಿಮಸಲವಾಡ |
| | ತೆಲಗಿ ಹೋಬಳಿ | | ಅಣಿಮೇಗಳತಾಂಡ |
| | ತೆಲಗಿ ಹೋಬಳಿ | | ನಾಗಲಾಪುರ |
| | ತೆಲಗಿ ಹೋಬಳಿ | | ನಾಗಲಾಪುರ ತಾಂಡ |
| | ತೆಲಗಿ ಹೋಬಳಿ | | ಉದಯಪುರ ತಾಂಡ |
| | ತೆಲಗಿ ಹೋಬಳಿ | | ಶಿರಗಾನಹಳ್ಳಿ |
| | ತೆಲಗಿ ಹೋಬಳಿ | | ಶಂಕ್ರನಹಳ್ಳಿ |
| | ತೆಲಗಿ ಹೋಬಳಿ | | ಇಂಗಳಗುಂದಿ |
| | ತೆಲಗಿ ಹೋಬಳಿ | | ಟಿ.ತುಂಬಿಗೇರಿ |
| | ತೆಲಗಿ ಹೋಬಳಿ | | ಕೋಡಿತಾಂಡ |
| ೧ | ಅರಸೀಕೆರೆ ಹೋಬಳಿ | ಹಿರೇಮೇಗಳಗೇರೆ | ಹಿರೇಮೇಗಳಗೆರೆ |

| | | | |
|---|---|---|---|
| | ಅರಸೀಕೆರೆ ಹೋಬಳಿ | | ಕಾಳಾನಾಯ್ಕನತಾಂಡ |
| | ಅರಸೀಕೆರೆ ಹೋಬಳಿ | | ಪೋತಲಕಟ್ಟಿ |
| | ಅರಸೀಕೆರೆ ಹೋಬಳಿ | | ನಾಗತಿಕಟ್ಟಿ ತಾಂಡ |
| | ಅರಸೀಕೆರೆ ಹೋಬಳಿ | | ಚಿಕ್ಕಮೇಗಳಗೆರೆ |
| | ಅರಸೀಕೆರೆ ಹೋಬಳಿ | | ವಡ್ಡಿನಹಳ್ಳಿ |
| | ಅರಸೀಕೆರೆ ಹೋಬಳಿ | | ಅರೆಬಸಾಪುರ |
| | ಅರಸೀಕೆರೆ ಹೋಬಳಿ | | ಶ್ರೀಕಂಠಾಪುರ |
| | ಅರಸೀಕೆರೆ ಹೋಬಳಿ | | ಜಂಬುಲಿಂಗನಹಳ್ಳಿ |
| | ಅರಸೀಕೆರೆ ಹೋಬಳಿ | | ಲಕ್ಷ್ಮೀಪುರ |
| ೨ | ಅರಸೀಕೆರೆ ಹೋಬಳಿ | ಕಂಚಿಕೇರಿ | ಕಂಚಿಕೇರಿ |
| | ಅರಸೀಕೆರೆ ಹೋಬಳಿ | | ಹಳ್ಳಿಕೇರಿ |
| | ಅರಸೀಕೆರೆ ಹೋಬಳಿ | | ಶ್ರೀನಗರ ಕ್ಯಾಂಪ್ |
| | ಅರಸೀಕೆರೆ ಹೋಬಳಿ | | ಹೊನ್ನೇನಹಳ್ಳಿ |
| | ಅರಸೀಕೆರೆ ಹೋಬಳಿ | | ಕೋಡಿತಾಂಡ |
| | ಅರಸೀಕೆರೆ ಹೋಬಳಿ | | ವಡೇರಹಳ್ಳಿ |
| ೩ | ಅರಸೀಕೆರೆ ಹೋಬಳಿ | ಅರಸೀಕೆರೆ | ಅರಸಿಕೆರೆ |
| ೪ | ಅರಸೀಕೆರೆ ಹೋಬಳಿ | ಉಚ್ಚಂಗಿದುರ್ಗ | ಉಚ್ಚಂಗಿದುರ್ಗ |
| | ಅರಸೀಕೆರೆ ಹೋಬಳಿ | | ಕರಡಿದುರ್ಗ |
| | ಅರಸೀಕೆರೆ ಹೋಬಳಿ | | ಯು.ಬೇವಿನಹಳ್ಳಿ |
| | ಅರಸೀಕೆರೆ ಹೋಬಳಿ | | ಯು.ಬೇವಿನಹಳ್ಳಿ ದೊಡ್ಡ ತಾಂಡ |

| | | | |
|---|---|---|---|
| | ಅರಸೀಕೆರೆ ಹೋಬಳಿ | | ಯು.ಬೇವಿನಹಳ್ಳಿ ಸಣ್ಣ ತಾಂಡ |
| ೫ | ಅರಸೀಕೆರೆ ಹೋಬಳಿ | ಅಣಜಿಗೆರೆ | ಅಣಜಿಗೆರೆ |
| | ಅರಸೀಕೆರೆ ಹೋಬಳಿ | | ಹನುಮನಹಳ್ಳಿ |
| | ಅರಸೀಕೆರೆ ಹೋಬಳಿ | | ಶ್ರೀಣಿವಾಸಪುರ |
| | ಅರಸೀಕೆರೆ ಹೋಬಳಿ | | ಜಂಗಮತುಂಬಿಗೆರೆ |
| | ಅರಸೀಕೆರೆ ಹೋಬಳಿ | | ಗಡಿಗುಡಾಳ್ |
| | ಅರಸೀಕೆರೆ ಹೋಬಳಿ | | ಮಾದಿಹಳ್ಳಿ |
| | ಅರಸೀಕೆರೆ ಹೋಬಳಿ | | ಹುಣಸಿಕಟ್ಟೆ |
| ೬ | ಅರಸೀಕೆರೆ ಹೋಬಳಿ | ಹೊಸಕೋಟೆ | ಹೊಸಕೋಟೆ |
| | ಅರಸೀಕೆರೆ ಹೋಬಳಿ | | ಬೂದಿಹಾಳ್ |
| | ಅರಸೀಕೆರೆ ಹೋಬಳಿ | | ಕೆರೆಗುಡಿಹಳ್ಳಿ |
| | ಅರಸೀಕೆರೆ ಹೋಬಳಿ | | ಚಿಕ್ಕಕಬ್ಬಳ್ಳಿ |
| | ಅರಸೀಕೆರೆ ಹೋಬಳಿ | | ಕೋಣನಕಟ್ಟೆ |
| ೭ | ಅರಸೀಕೆರೆ ಹೋಬಳಿ | ತೌಡೂರು | ತೌಡೂರು |
| | ಅರಸೀಕೆರೆ ಹೋಬಳಿ | | ತೌಡೂರು ತಾಂಡ |
| | ಅರಸೀಕೆರೆ ಹೋಬಳಿ | | ಯರಬಳ್ಳಿ |
| | ಅರಸೀಕೆರೆ ಹೋಬಳಿ | | ಯರಬಳ್ಳಿ ತಾಂಡ |
| | ಅರಸೀಕೆರೆ ಹೋಬಳಿ | | ಕ್ಯಾರಕಟ್ಟಿ |
| | ಅರಸೀಕೆರೆ ಹೋಬಳಿ | | ಅರಸಾಪುರ |
| | ಅರಸೀಕೆರೆ ಹೋಬಳಿ | | ಕಾವಲಹಳ್ಳಿ |

| | | | |
|---|---|---|---|
| | ಅರಸೀಕೆರೆ ಹೋಬಳಿ | | ಗೂಳೇದಹಟ್ಟಿ |
| | ಅರಸೀಕೆರೆ ಹೋಬಳಿ | | ನೆಲಗೊಂಡನಹಳ್ಳಿ |
| | ಅರಸೀಕೆರೆ ಹೋಬಳಿ | | ಜಿಟ್ಟನಕಟ್ಟಿ |
| | ಅರಸೀಕೆರೆ ಹೋಬಳಿ | | ಬಾಲೇನಹಳ್ಳಿ |
| ೮ | ಅರಸೀಕೆರೆ ಹೋಬಳಿ | ಪುಣಭಗಟ್ಟ | ಪುಣಭಗಟ್ಟ |
| | ಅರಸೀಕೆರೆ ಹೋಬಳಿ | | ಪುಣಭಗಟ್ಟ ತಾಂಡ |
| | ಅರಸೀಕೆರೆ ಹೋಬಳಿ | | ಕಡೇಕಲ್ ತಾಂಡ |
| | ಅರಸೀಕೆರೆ ಹೋಬಳಿ | | ಚೆನ್ನಾಪುರ |
| | ಅರಸೀಕೆರೆ ಹೋಬಳಿ | | ಚೆನ್ನಾಪುರ ತಾಂಡ |
| | ಅರಸೀಕೆರೆ ಹೋಬಳಿ | | ನಂದಿಕಂಬ |
| | ಅರಸೀಕೆರೆ ಹೋಬಳಿ | | ನಂದಿಕಂಬ ತಾಂಡ |
| | ಅರಸೀಕೆರೆ ಹೋಬಳಿ | | ಮಡಕಿನಿಚ್ಚಾಪುರ |
| | ಅರಸೀಕೆರೆ ಹೋಬಳಿ | | ಮಡಕಿನಿಚ್ಚಾಪುರ ತಾಂಡ |
| | ಅರಸೀಕೆರೆ ಹೋಬಳಿ | | ಗಿಡ್ಡನಾಗೇನಹಳ್ಳಿ |
| | ಅರಸೀಕೆರೆ ಹೋಬಳಿ | | ಚಿಕ್ಕಮಟ್ಟಿತಾಂಡ |
| | ಅರಸೀಕೆರೆ ಹೋಬಳಿ | | ಡಗ್ಗಿಬಸಾಪುರ |
| | ಅರಸೀಕೆರೆ ಹೋಬಳಿ | | ಕಮ್ಮತಹಳ್ಳಿ |
| | ಅರಸೀಕೆರೆ ಹೋಬಳಿ | | ಹೊನ್ನಾಪುರ |
| ೯ | ಅರಸೀಕೆರೆ ಹೋಬಳಿ | ಚಟ್ನಿಹಳ್ಳಿ | ಚಟ್ನಿಹಳ್ಳಿ |
| | ಅರಸೀಕೆರೆ ಹೋಬಳಿ | | ನರೇಬೊಮ್ಮನಹಳ್ಳಿ |

| | | | |
|---|---|---|---|
| | ಅರಸೀಕೆರೆ ಹೋಬಳಿ | | ರಾಮಘಟ್ಟ |
| | ಅರಸೀಕೆರೆ ಹೋಬಳಿ | | ರಾಮಘಟ್ಟ ತಾಂಡ |
| | ಅರಸೀಕೆರೆ ಹೋಬಳಿ | | ದಿದ್ಗಿತಾಂಡ |
| | ಅರಸೀಕೆರೆ ಹೋಬಳಿ | | ಯು.ಕಲ್ಲಹಳ್ಳಿ |
| | ಅರಸೀಕೆರೆ ಹೋಬಳಿ | | ರಾಮನಗರ |
| | ಅರಸೀಕೆರೆ ಹೋಬಳಿ | | ಕೆಂಚಾಪುರ/ ಫಣಿಯಾಪುರ |
| | ಅರಸೀಕೆರೆ ಹೋಬಳಿ | | ಗೌಳೇರಹಟ್ಟಿ |
| | ಅರಸೀಕೆರೆ ಹೋಬಳಿ | | ಕುರೇಮಾಗನಹಳ್ಳಿ |

**ನಾಡ ಕಚೇರಿ** : ಅಧಿಕಾರ ವಿಕೇಂದ್ರಿಕರಣ ಮತ್ತು ತಾಲ್ಲೂಕು ಕಚೇರಿಗಳ ಮೇಲಿನ ವಿಫುಲ ಕಾರ್ಯಗಳನ್ನು ಹಂಚುವ ಉದ್ದೇಶಕ್ಕಾಗಿ ೧೫-೮-೧೯೮೬ ರಿಂದ ತಾಲ್ಲೂಕಿನ ಹೋಬಳಿ ಕೇಂದ್ರದಲ್ಲಿ ನಾಡ ಕಚೇರಿಯನ್ನು ಸ್ಥಾಪಿಸಲು ಯೋಚಿಸಿ ಸರ್ಕಾರ ಹರಪನಹಳ್ಳಿ ತಾಲ್ಲೂಕಿನ ನಾಲ್ಕು ಹೋಬಳಿಗಳಾದ ೧) ಹರಪನಹಳ್ಳಿ ೨) ಚಿಗಟೇರಿ ೩) ತೆಲಿಗಿ ೪) ಅರಸೀಕೆರೆಗಳಲ್ಲಿ ನಾಡ ಕಚೇರಿಗಳನ್ನು ಸ್ಥಾಪಿಸಿದೆ. ಈ ಕಚೇರಿಗೆ ಶಿರಸ್ತೇದಾರರು ಮುಖ್ಯಸ್ಥರಾಗಿ, ತಹಶೀಲ್ದಾರರ ಒಂಬತ್ತು ಕಾರ್ಯಗಳನ್ನು ನಿರ್ವಹಿಸಲು ಇವರಿಗೆ ತಿಳಿಸಿ ಸಿಬ್ಬಂದಿ ವರ್ಗವನ್ನು ನೇಮಿಸಿದೆ. ತಾಲ್ಲೂಕು ತಹಶೀಲ್ದಾರರೇ ಇವರಿಗೆ ಹತ್ತಿರದ ಮೇಲಾಧಿಕಾರಿಗಳು.

**ಗ್ರಾಮ ಲೆಕ್ಕಿಗರು** : ಪ್ರಾಚೀನ ಕಾಲದಲ್ಲಿ ಪ್ರತಿ ಗ್ರಾಮಕ್ಕೆ ಮೊದ ಮೊದಲು ಮಹಾಜನಗಳಿದ್ದು, ನಂತರದಲ್ಲಿ ಎಂಟು ಜನರು, ಸ್ವಲ್ಪ ಕಾಲದ ಬಳಿಕ ಹನ್ನೆರಡು ಜನ. ಪ್ರಮುಖರು ಗ್ರಾಮದ ಬೇರೆ ಬೇರೆ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ೧೯೪೭ ರ ವೇಳೆಗೆ ಗೌಡ, ಶಾನುಭೋಗ, ತೋಟಿ, ತಳವಾರ, ನೀರಗಂಟಿಗಳು. ೧೯೭೦ ರ ಕಾಯ್ದೆಯಂತೆ ಅವರ ಹುದ್ದೆಗಳನ್ನು ರದ್ದುಗೊಳಿಸಿ, ಲೆಕ್ಕಿಗರಿಗೆ ವಹಿಸಿದರು. ಇವರಿಗೆ ಗ್ರಾಮ ಸಹಾಯಕರಿರುವರು. ಕಂದಾಯ ವಸೂಲಿ ಇವರ ಮುಖ್ಯ ಕಾರ್ಯವಾಗಿದೆ. ಕಂದಾಯ ಶೇಖರಣೆ, ಗ್ರಾಮ ದಾಖಲೆಗಳ ಸಂರಕ್ಷಣೆ-ನಿರ್ವಹಣೆ ಇವರ ಜವಾಬ್ದಾರಿಯಾಗಿದ್ದು, ಇವರು ಜನರಿಗೂ ಸರ್ಕಾರಕ್ಕೂ ಇರುವ ಕೊಂಡಿಯಾಗಿದ್ದಾರೆ. ಗ್ರಾಮ ಸಹಾಯಕರು ಇವರ ಅಧೀನದಲ್ಲಿ ಪೂರಕವಾಗಿ ಕೆಲಸ ಮಾಡುವರು.

**ಗ್ರಾಮ ಸಹಾಯಕರು** : ಹಿಂದೆ ಗ್ರಾಮಗಳಲ್ಲಿ ಶಾನುಭೋಗ-ಕುಲಕರ್ಣಿಗೌಡರಿಗೆ ನೆರವಾಗಿ ಕಾರ್ಯನಿರ್ವಹಿಸುತ್ತಿದ್ದ ತಳವಾರ, ಓಲೆಕಾರ, ತೋಟಿ ಹುದ್ದೆಗಳ ಬದಲಿಗೆ ಸಹಾಯಕರಾಗಿ ಕೆಲಸ ಮಾಡುವವರೇ ಗ್ರಾಮ ಸಹಾಯಕರು. ಇವರು ಗ್ರಾಮ ಲೆಕ್ಕಿಗರ ದಫ್ತರನ್ನು ಭೂ ಸರ್ವೇಕ್ಷಣ ಸಂದರ್ಭದಲ್ಲಿ ಬಳಸುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸಲು ನೆರವಾಗುವರು. ಗ್ರಾಮಲೆಕ್ಕಿಗರ ಸಹಾಯಕರಾಗಿ, ಟಪ್ಪಾಲು ಮುಟ್ಟಿಸುವವರಾಗಿ, ದಫ್ತರ್‌ಗಳನ್ನು ಸಾಗಿಸುವವರಾಗಿ ಮುಂತಾದ ಅನೇಕ ಕೆಲಸಗಳನ್ನು ಮಾಡಿಕೊಡುತ್ತಾರೆ.

**ಭೂಮಾಪಕರು**: ೨೦೦೫ರಿಂದ ಭೂಮಾಪನ ಇಲಾಖೆಯು ಕಂದಾಯ ಇಲಾಖೆಯಲ್ಲಿ ವಿಲೀನಗೊಂಡಿದ್ದು, ಭೂಮಾಪಕರು ತಹಶೀಲ್ದಾರರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವರು. ಜಮೀನುಗಳ ಹದ್ದುಬಸ್ತು, ಅಳತೆ, ಪೋಡು-ದುರಸ್ತಿ, ಸರ್ಕಾರಿ ಆಸ್ತಿಗಳ ಅಳತೆ (ಕೆರೆ, ಶಾಲೆಯ ಜಮೀನು ಇತ್ಯಾದಿ) ಮುಂತಾದ ಕೆಲಸವನ್ನು ಭೂಮಾಪಕರು ನಿರ್ವಹಿಸುವರು. ಇವರ ತಾಂತ್ರಿಕ ವಿಚಾರಗಳ ಉಸ್ತುವಾರಿಗಾಗಿ ಭೂಮಾಪನ ತಪಾಸಕರು (ಪರ್ಯಾವೇಕ್ಷಕರು), ಅಧೀಕ್ಷಕರು ಹಾಗೂ ಸಹಾಯಕ ನಿರ್ದೇಶಕರು ಇರುತ್ತಾರೆ. ಇತ್ತೀಚೆಗೆ ಸರ್ಕಾರಿ ಭೂಮಾಪಕರಲ್ಲದೆ ಖಾಸಗಿ ಭೂಮಾಪಕರು ಸಹ ನೊಂದಣಿಯಾಗುವ ಜಮೀನುಗಳ ಅಳತೆ ಮಾಡಿ ನಕ್ಷೆ ತಯಾರಿಸಿ ಕೊಡುವ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಭೂಮಾಪಕರು ಜಮೀನು ಅಳೆಯಲು ಬೇಕಾಗುವ ಸರಪಳಿ, ಕ್ರಾಸ್‌ಸ್ಟಾಫ್ ಮುಂತಾದ ಸಲಕರಣೆ ಒಯ್ಯಲು ಹಾಗೂ ಜಮೀನಿನಲ್ಲಿ ಸರಪಳಿ ಹಿಡಿಯಲು ಇವರಿಗೆ ಬಾಂದು ಜವಾನ ಎಂಬ ಸೇವಕನಿರುತ್ತಾನೆ. ಜಮೀನುದಾರನಿಗೆ ಹಾಗೂ ಜಮೀನಿನ ಬಾಜೂದಾರರಿಗೆ ಅಳತೆ ಬಗ್ಗೆ ಮುಂಚಿತವಾಗಿ ನೋಟಿಸು ತಲುಪಿಸುವುದು ಸಹ ಬಾಂದು ಜವಾನನ ಕೆಲಸವಾಗಿರುತ್ತದೆ.

**ಕಂದಾಯ ಆಡಳಿತ** :

ಅತಿ ಪ್ರಾಚೀನ ಕಾಲದಿಂದಲೂ ಭೂ ಕಂದಾಯವೇ ಸರ್ಕಾರದ ಪ್ರಮುಖ ಆಧಾರವಾಗಿತ್ತು. ಭೂಮಿಯನ್ನು ತರಿ, ಖುಷ್ಕಿ, ಬಾಗಾಯತು ಎಂದು ವರ್ಗೀಕರಿಸಿ, ನೀರಾವರಿ ಸೌಕರ್ಯ, ಬೆಳೆ, ಭೂಮಿಯ ಗುಣ ಮುಂತಾದವುಗಳ ಹಿನ್ನೆಲೆಯಲ್ಲಿ ಕಂದಾಯ ನಿರ್ಧರಿಸಲಾಗುತ್ತಿತ್ತು. ಹಗ್ಗ, ಕೋಲುಗಳಿಂದ ಭೂಮಿಯನ್ನು ರಜ್ಜುಕ ಎಂಬ ಅಧಿಕಾರಿ ಅಳತೆ ಮಾಡುತ್ತಿದ್ದನು. ಸಾರ್ವತ್ರಿಕ ಆಡಳಿತ ವ್ಯವಸ್ಥೆಯಲ್ಲಿ ಕಂದಾಯ ಇಲಾಖೆಯು ಅತೀ ಮುಖ್ಯ ಹಾಗೂ ಪ್ರಾಚೀನ ಇಲಾಖೆಯಾಗಿದೆ. ಈ ಇಲಾಖೆಯು ಸ್ವಾತಂತ್ರ್ಯ ಪೂರ್ವದಲ್ಲಿ ರಾಜಸ್ವ ಇಲಾಖೆಯೆಂದು ಆರಂಭವಾಗಿತ್ತು. ಖಜಾನೆ, ಅಬಕಾರಿ, ಆಹಾರ ಮತ್ತು ನಾಗರಿಕ ಸರಬರಾಜು, ನೋಂದಣಿ ಮುಂತಾದ

ಇಲಾಖೆಗಳು ಕಂದಾಯ ಇಲಾಖೆಯ ಪರಿಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಆದರೆ ನಂತರ ಅವುಗಳೆಲ್ಲಾ ಪ್ರತ್ಯೇಕ ಅಸ್ತಿತ್ವ ಪಡೆದುಕೊಂಡವು.

ಭೂ ಆಡಳಿತ ಹಾಗೂ ಭೂ ಕಂದಾಯ ವಸೂಲಿ ಮಾಡುವುದು ಈ ಇಲಾಖೆಯ ಮುಖ್ಯ ಜವಾಬ್ದಾರಿಯಾಗಿದ್ದರೂ, ಚುನಾವಣಾ ಕಾರ್ಯ, ಜನಗಣತಿ, ಜಾನುವಾರು ಗಣತಿ, ಕಾನೂನು ಸುವ್ಯವಸ್ಥೆ ಜಾರಿ, ನೈಸರ್ಗಿಕ ವಿಕೋಪಗಳ ನಿರ್ವಹಣೆ ಮುಂತಾದ ಮಹತ್ತರವಾದ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಈ ಇಲಾಖೆಯು ಸರ್ಕಾರ ಮತ್ತು ಜನಸಾಮಾನ್ಯರ ನಡುವಿನ ಸಂಪರ್ಕ ಕೊಂಡಿಯಂತೆ ಕಾರ್ಯನಿರ್ವಹಿಸುತ್ತದೆ. ಈ ಇಲಾಖೆಯ ಅಧಿಕಾರಿಗಳು ರಾಜ್ಯ, ಜಿಲ್ಲೆಯ ಮಟ್ಟದಿಂದ ಆರಂಭಗೊಂಡು ಗ್ರಾಮೀಣರೊಂದಿಗೆ ನೇರ ಸಂಪರ್ಕ ಹೊಂದಿರುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಆಡಳಿತ ಪದ್ಧತಿ ಜಾರಿಗೆ ತರುವ ಮೊದಲೇ, ೧೮ನೇ ಶತಮಾನದ ಪ್ರಾರಂಭದಲ್ಲಿ ರೈತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಗ್ರಾಮ, ಹೋಬಳಿ, ತಾಲ್ಲೂಕು, ಉಪವಿಭಾಗ ಹಾಗೂ ಜಿಲ್ಲೆಗಳೆಂದು ವರ್ಗೀಕರಿಸಿ, ಪ್ರತಿಹಂತದಲ್ಲೂ ಕಂದಾಯ ಇಲಾಖೆಯ ಅಧಿಕಾರಿಗಳನ್ನು ನೇಮಿಸಿದ್ದರು. ಹೋಬಳಿ ಅಥವಾ ವೃತ್ತಗಳಿಗೆ ಶೇಖದಾರರನ್ನು ನೇಮಿಸಲಾಗುತ್ತಿತ್ತು. ಕ್ರಮೇಣ ಆಡಳಿತ ಸುಧಾರಣಾ ಹಂತದಲ್ಲಿ ಈ ಹುದ್ದೆಯನ್ನು 'ಕಂದಾಯ ನಿರೀಕ್ಷಕ' ಅಥವಾ 'ರಾಜಸ್ವ ನಿರೀಕ್ಷಕ' ಎಂದು ಪುನರ್ ನಾಮಕರಣ ಮಾಡಲಾಯಿತು. ಇವರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಗ್ರಾಮಲೆಕ್ಕಾಧಿಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸುತ್ತಾರೆ. ಇವರು ಗ್ರಾಮಲೆಕ್ಕಿಗರು ಮತ್ತು ತಹಶೀಲ್ದಾರರ ನಡುವಿನ ಸೇತುಕೊಂಡಿಯಾಗಿರುತ್ತಾರೆ. ಕಂದಾಯ ನಿರೀಕ್ಷಕರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡುತ್ತಾರೆ. ಆಂಶಿಕವಾಗಿ ಈ ಹುದ್ದೆಯನ್ನು ಬಡ್ತಿಯ ಮೂಲಕ ತುಂಬಲಾಗುವುದು.

ಆಡಳಿತ ಯಂತ್ರದ ನಿರ್ವಹಣೆ ಮತ್ತು ಸಮಾಜ ಕಲ್ಯಾಣ ಕಾರ್ಯಗಳ ಅನುಷ್ಠಾನಕ್ಕಾಗಿ ಭೂ ಕಂದಾಯ ಆಸ್ತಿ ತೆರಿಗೆ ಪ್ರವೇಶ ಶುಲ್ಕ, ವೃತ್ತಿ ತೆರಿಗೆ ಮೊದಲಾದ ತೆರಿಗೆಗಳನ್ನು ಬಹಳ ಹಿಂದಿನ ಕಾಲದಿಂದಲೂ ಸಂಗ್ರಹಿಸಲಾಗುತ್ತಿದೆ. ಕೃಷಿ ಪ್ರಧಾನ ಸಮಾಜದಲ್ಲಿ ಭೂ ಕಂದಾಯವು ಸರ್ಕಾರದ ಮುಖ್ಯ ಆದಾಯವಾಗಿದ್ದು, ಭೂ ಮಾಪನಗಳನ್ನು ಆದರಿಸಿದ ಖಂಡುಗ, ಕೊಳಗ, ಬಳ್ಳ ಮುಂತಾದ ಭೂ ಪ್ರಮಾಣಗಳು ಅಸ್ತಿತ್ವದಲ್ಲಿದ್ದು ಪ್ರಾಕೃತಿಕ ಅಂಶಗಳ ಜೊತೆಗೆ ಅವುಗಳನ್ನು ಆಧರಿಸಿ ಭೂ ಕಂದಾಯವನ್ನು ನಿರ್ಧರಿಸುತ್ತಿದ್ದರು. ಏಕೀಕರಣದ ನಂತರ ೧೯೬೪ ರಲ್ಲಿ ಕಂದಾಯ ಪರಿಷ್ಕರಣೆ ಸರ್ವೇಕ್ಷಣೆ ಕಾರ್ಯವನ್ನು ಕೈಗೆತ್ತಿಕೊಂಡು ಜಮೀನನ್ನು ಅಳೆದು ಹವಾಗುಣ, ನೀರಾವರಿ ಮೂಲ, ಮಾರುಕಟ್ಟೆ ಸೌಲಭ್ಯ, ಸಾರಿಗೆ ಸೌಕರ್ಯ ಮುಂತಾದುವನ್ನು ಪರಿಗಣಿಸಿತು.

**ನೀರಾವರಿ ಕರ** : ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಕೆರೆ, ಹೊಂಡ, ಕಾಲುವೆ, ಅಡವಿ ಹಳ್ಳ ಮುಂತಾದ ಜಲಮೂಲದ ನೀರಾವರಿ ಸೌಕರ್ಯ ಹೊಂದಿರುವ ಜಮೀನಿಗೆ ಶುಲ್ಕ ವಿಧಿಸಲಾಗಿದೆ. ಇದನ್ನು ಸರ್ವೆ ಇಲಾಖೆ ನೀರಿನ ಲಭ್ಯತೆಯನ್ನು ಗಮನಿಸಿ ಪ್ರತೀ ವರ್ಷ ನಿಗಧಿಪಡಿಸಲಾಗುತ್ತದೆ.

**ನಿರ್ವಹಣೆ ಕರ** : ಕರ್ನಾಟಕ ನೀರಾವರಿ ಕಾಯ್ದೆ ೧೯೬೫ ರಂತೆ ಎಕರೆಗೆ ಪ್ರತಿ ವರ್ಷಕ್ಕೆ ಇಂತಿಷ್ಟು ಎಂದು ಎರಡು ವರ್ಷಕ್ಕಿಂತ ಹೆಚ್ಚು ಅವಧಿ ಜಮೀನಿಗೆ ನೀರು ಹರಿಸದಿದ್ದರೆ, ಇದರ ಆಕರಣೆ ಮಾಡುವಂತಿಲ್ಲ.

**ನೀರಿನ ದಂಡ** : ನೀರಾವರಿ ಇಲಾಖೆ ಪರವಾನಗಿ ಪಡೆಯದೆ ನೀರನ್ನು ಬಳಸಿದರೆ, ಸಾಮಾನ್ಯ ನೀರಿನ ದರದ ೧೫ ಪಟ್ಟು ಬೇರೆ ಬೆಳೆ ಬೆಳೆದರೆ ಸಾಮಾನ್ಯ ದರದ ೧೦ ಪಟ್ಟು ಹೆಚ್ಚು ದಂಡ ವಿಧಿಸಲಾಗುತ್ತದೆ.

**ವಾರ್ಷಿಕ ಲೆಕ್ಕಾಚಾರ** : ಪ್ರತಿ ವರ್ಷ ಜೂನ್ ತಿಂಗಳ ಅಂತ್ಯಕ್ಕೆ ಪ್ರತಿಯೊಂದು ಗ್ರಾಮದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಗೊಳಿಸಿ ತಾಲ್ಲೂಕು ಕಛೇರಿಯ ದಫ್ತರಿಯೊಂದಿಗೆ ಸರ್ಕಾರಕ್ಕೆ ಕಂದಾಯ ಸಂಗ್ರಹ ವಿವರಗಳನ್ನು ಖಚಿತಪಡಿಸುವುದು.

**ಜಮಾಬಂದಿ**: ಪ್ರತಿ ಗ್ರಾಮದ ಕಂದಾಯ ಆಡಳಿತವನ್ನು ಪರಿಶೀಲಿಸುವ ಉದ್ದೇಶದಿಂದ ವಾರ್ಷಿಕ ಜಮಾಬಂದಿ ಪದ್ಧತಿ ಬಹು ಕಾಲದಿಂದಲೂ ರೂಢಿಯಲ್ಲಿದೆ. ಹಿಂದೆ ಇದನ್ನು ದಸರಾ ರಜೆಯ ನಂತರ ಆರಂಭಿಸುತ್ತಿದ್ದರು. ಪಟ್ಟಾಗಳ ವರ್ಗಾವಣೆಯು ಇದರಲ್ಲಿ ನಡೆಯುತ್ತವೆ. ಸರ್ಕಾರ ವಿವಿಧ ಕಂದಾಯಗಳ ಆಕರ, ಸ್ವೀಕಾರ, ಬಾಕಿಗಳ ಬಗ್ಗೆ ಪರಿಶೀಲನೆ ಮಾಡುವರು. ಇದನ್ನು ಜಿಲ್ಲಾಧಿಕಾರಿಗಳ ಗುಮಾಸ್ತರು ಪರೀಕ್ಷಿಸಿ ತಪ್ಪು–ಸರಿ ಅಂತಿಮಗೊಳಿಸಿ ಮಾರ್ಗ ಸೂಚನೆಗಳನ್ನು ತಿಳಿಸಿದ ಬಳಿಕ ಜಿಲ್ಲಾಧಿಕಾರಿಗಳು ಅದಕ್ಕೆ ಸಹಿ ಹಾಕುವರು ಅಥವಾ ಉಪ ವಿಭಾಗಾಧಿಕಾರಿಗಳು ಸಹಿ ಹಾಕುವರು. ಅಕ್ಟೋಬರ್–ಡಿಸೆಂಬರ್ ತಿಂಗಳಲ್ಲಿ ಈ ಕೆಲಸ ನಡೆಯುವುದು. ಹರಪನಹಳ್ಳಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಜನವರಿ ಇಲ್ಲವೇ ಫೆಬ್ರವರಿ ತಿಂಗಳಲ್ಲಿ ನಡೆಸಲಾಗುವುದು. ಜಿಲ್ಲಾಧಿಕಾರಿಗಳು ಇಲ್ಲವೇ ಉಪ ವಿಭಾಗಾಧಿಕಾರಿಗಳು ನಡೆಸುವುದು ರೂಢಿಯಲ್ಲಿರುತ್ತದೆ.

**ಭೂ ಕಂದಾಯ ಮಾಫಿ** : ಬಹು ಹಿಂದಿನ ಕಾಲದಿಂದಲೂ ಅತಿವೃಷ್ಟಿ–ಅನಾವೃಷ್ಟಿ, ಕ್ಷಾಮ ಉಂಟಾದಲ್ಲಿ ಕಂದಾಯ ಮನ್ನಾ ಮಾಡುವ ಪರಿಪಾಠವಿದೆ. ಇದನ್ನು ಶಾಸನಗಳು ಸಮರ್ಥಿಸುವುದು ವಿರಳ. ರಾಜ್ಯ ಸರ್ಕಾರ ೧೯೭೭ ರ ಕಾಯ್ದೆಯಂತೆ ಚಿಕ್ಕ ಹಿಡುವಳಿದಾರರಿಗೆ ಕಂದಾಯ ಮಾಫಿಗೆ ಅವಕಾಶವಿದೆ.

ಸರ್ಕಾರದ ಭೂಮಿಯನ್ನು ಸಮಾಜದ ದುರ್ಬಲ ವ್ಯಕ್ತಿಗಳಿಗೆ ಭೂ ರಹಿತರಿಗೆ ಅರ್ಹರಿಗೆ ಮಂಜೂರು ಮಾಡಲಾಗುತ್ತಿತ್ತು. ೧೯೬೯ ರಿಂದ ಗ್ರಾಮದಲ್ಲಿ ವಾಸಿಸುವ ಭೂ ರಹಿತರಿಗೆ ಆದ್ಯತೆಯ ಮೇಲೆ ನೀಡುವುದಾಗಿ ನಿಯಮ ಜಾರಿಯಾಯಿತು.

ಹೀಗೆ ಜಮೀನು ಪಡೆದ ವ್ಯಕ್ತಿ ಅದನ್ನು ಮೂರು ವರ್ಷಗಳ ಒಳಗೆ ಸಾಗುವಳಿ ಮಾಡಬೇಕು. ಇದೂ ಅಲ್ಲದೆ ೧೫ ವರ್ಷಗಳವರೆಗೆ ಪರಭಾರೆ ಮಾಡಬಾರದು. ಇದನ್ನು ತಹಶೀಲ್ದಾರರೇ ನೋಡಿಕೊಳ್ಳುವರು.

**ಇತರೆ ತೆರಿಗೆಗಳು** : ಭೂ ಕಂದಾಯವಲ್ಲದೆ ಸರ್ಕಾರಕ್ಕೆ ಬೇರೆ ಬೇರೆ ಮೂಲಗಳಿಂದ ಆದಾಯ ಬರುತ್ತದೆ. ೧) ಅಬಕಾರಿ ೨) ಮಾರಾಟ ೩) ಮನರಂಜನಾ ೪) ಕೃಷಿ ವರಮಾನ ೫) ವೃತ್ತಿ ೬) ಭೋಗ ಸವಲತ್ತು, ೭) ಸ್ಟ್ಯಾಂಪು ನೋಂದಣಿ ೮) ಮೋಟಾರು ವಾಹನ ೯) ಅರಣ್ಯಾಭಿವೃದ್ಧಿ ಹೀಗೆ ರಾಜ್ಯ ಬೊಕ್ಕಸಕ್ಕೆ ತೆರಿಗೆಗಳು ಸಂದಾಯವಾಗುತ್ತವೆ. ಕೇಂದ್ರ ಸರ್ಕಾರದ ತೆರಿಗೆಗಳಿಂದ ಸ್ವಲ್ಪ ಭಾಗ ರಾಜ್ಯ ಸರ್ಕಾರಕ್ಕೆ ದೊರಕುವುದು.

**ನ್ಯಾಯಾಡಳಿತ**: ಪ್ರಾಚೀನರು ತಮ್ಮಲ್ಲಿ ಜಗಳ ಉಂಟಾದರೆ ಪಂಚಾಯಿತಿ ಕಟ್ಟೆಗಳಲ್ಲಿ ಬಗೆಹರಿಸಿಕೊಳ್ಳುತ್ತಿದ್ದರು. ಆಯಾ ಜಾತಿ ಪ್ರಮುಖರು, ಗೌಡರು, ಗುರುಗಳು ಕೂಡಿ ಮುಖಾಮುಖಿ ಚರ್ಚೆಯೊಂದಿಗೆ ತೀರ್ಮಾನಕ್ಕೆ ಬರುತ್ತಿದ್ದರು. ಊರಿಂದ ಹೊರಗೆ ಜಗಳ ಹೋದರೆ ಊರವರ ಗೌರವಕ್ಕೆ ಕುಂದು ಎಂದು ಭಾವಿಸುತ್ತಿದ್ದರು. ಅರಳಿಕಟ್ಟೆ, ದೇವಾಲಯ, ಅಯ್ಯಗಳ ಚಾವಡಿ ಗ್ರಾಮದ ಮಂಟಪಗಳಲ್ಲಿ ಅಮಾವಾಸ್ಯೆ, ಹುಣ್ಣಿಮೆ ಗ್ರಹಣದ ದಿನಗಳನ್ನು ಹೊರತುಪಡಿಸಿ ರಾತ್ರಿ, ಬೆಳಗಿನ ತಂಪಾದ ಹೊತ್ತುಗಳಲ್ಲಿ ಸೇರಿ, ವ್ಯಾಜ್ಯಗಳನ್ನು ಚರ್ಚಿಸಿ ಬಗೆಹರಿಸುತ್ತಿದ್ದರು. ಅಪರಾಧಿಗಳಿಗೆ ದೈಹಿಕ, ನಗದು ಬಹಿಷ್ಕಾರ ಗಡಿಪಾರು ಜಾರಿಗೊಳಿಸುತ್ತಿದ್ದರು. ಮುಸ್ಲಿಮರಲ್ಲಿ ಜಾತಿಯ ಖಾಜಿಯ ಮೂಲಕ ಬಗೆಹರಿಸುವುದು ಸಂಪ್ರದಾಯವಾಗಿದ್ದಿತು.

ಆಂಗ್ಲರು ಭಾರತಕ್ಕೆ ಬಂದು ಅವರು ಆಳ್ವಿಕೆ ಆರಂಭಿಸಿದಾಗಿನಿಂದ ಕಂದಾಯದ ಅಧಿಕಾರಿಗಳು ನ್ಯಾಯಾಂಗ ತಹಶೀಲ್ದಾರರು ವಿಚಾರಣೆ ನಡೆಸುತ್ತಿದ್ದರು. ೧೮೩೧-೧೮೩೪ ರಲ್ಲಿ ನ್ಯಾಯಾಲಯಗಳು ಸ್ಥಾಪನೆಯಾದವು.

ಏಕೀಕರಣವಾದ ಬಳಿಕ ಕರ್ನಾಟಕ ನಾಗರಿಕ ಸಂಹಿತೆ ಸಿವಿಲ್ ಕೋಡ್ ಕಾಯ್ದೆಯನ್ನು ಜಾರಿಗೊಳಿಸಿತು. ೧೯೬೪ ರ ಕರ್ನಾಟಕ ಸಿವಿಲ್ ಕೋಡ್‌ನಂತೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಏಕರೂಪತೆ ಬಂದಿತು. ಹರಪನಹಳ್ಳಿ ತಾಲ್ಲೂಕಿನಲ್ಲಿ ದ್ವಿತೀಯ ದರ್ಜೆಯ ಸಿವಿಲ್ ಮತ್ತು ದಂಡಾಧಿಕಾರಿಗಳ ನ್ಯಾಯಾಲಯ ಸ್ಥಾಪನೆಯಾಗಿ ಸುಮಾರು ಒಂದು ನೂರು ವರ್ಷವಾಗಿರಬೇಕು. ದಿ: ೦೨-೦೯-೨೦೦೯ ಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸ್ಥಾಪನೆಯಾಯಿತು.

**ತಾಲ್ಲೂಕು ಕಾನೂನು ನೆರವು ಸಮಿತಿ** : ೧೯೮೩ ರಲ್ಲಿ ಕಾನೂನು ನೆರವು ಸಮಿತಿಯು ಅಸ್ತಿತ್ವಕ್ಕೆ ಬರುವ ಮೊದಲು ದುಡಿಯುವ ಮತ್ತು ದುರ್ಬಲ ವರ್ಗದವರ ಕಾನೂನು ನೆರವು ಮತ್ತು ಸಲಹೆ ಕೇಂದ್ರವು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಕಾನೂನು ಸಮಿತಿಯು ಎಂಟು ಸಾವಿರ ರೂಪಾಯಿಗಿಂತ ಕಡಿಮೆ ವಾರ್ಷಿಕ

ಆದಾಯವಿರುವವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ವಿಧವೆಯರು, ರಕ್ಷಣಾ ಇಲಾಖೆಯ ನೌಕರರು ಹಾಗೂ ಮಾಜಿ ಸೈನಿಕರು ಇವರಿಗೆ ಉಚಿತ ಕಾನೂನು ಸಲಹೆ, ಸೂಟ್, ಮನವಿ, ಇತರೆ ದಾವೆ ಕ್ರಿಮಿನಲ್ ಮೊಕದ್ದಮೆ ಮುಂತಾದುವುಗಳನ್ನು ನ್ಯಾಯಾಲಯದಲ್ಲಿ ಹೂಡುವಲ್ಲಿ ಕಂದಾಯ ಅಧಿಕಾರಿಗಳ ಮುಂದೆ ತಮ್ಮ ಅಹವಾಲು ಸಲ್ಲಿಸುವಲ್ಲಿ ನೋಟೀಸು ಜಾರಿಗೊಳಿಸುವಲ್ಲಿ ಉಚಿತ ಕಾನೂನು ಸೇವೆಯನ್ನು ಒದಗಿಸಬೇಕಿತ್ತು. ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಇದಕ್ಕೆ ಅಧ್ಯಕ್ಷರು, ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಧೀಶರು ಸದಸ್ಯರಿರುವರು.

**ಕಾರಾಗೃಹ**: ಪ್ರಾಚೀನ ಕಾಲದಿಂದಲೂ ಅಪರಾಧಿಗಳನ್ನು ಬಂಧಿಸಿ ಚಾವಡಿಗಳಲ್ಲಿಡುತ್ತಿದ್ದರು. ವಿಜಯನಗರದ ರಾಯರ ಕಾಲದಲ್ಲಿ ಚಿತ್ರದುರ್ಗದ ಪಾಳೆಯಗಾರ ಮತ್ತಿ ತಿಮ್ಮಣ್ಣನಾಯಕ, ಹರಪನಹಳ್ಳಿಯ ದಾದಾ ನಾಯಕರು ಸೆರೆಮನೆಯಲ್ಲಿದ್ದುದು ತಿಳಿದು ಬರುವುದು. ಹರಪನಹಳ್ಳಿ ಪಟ್ಟಣದಲ್ಲಿ ತಾಲ್ಲೂಕು ಕಛೇರಿ ಕಟ್ಟಡ ಜೊತೆಯಲ್ಲಿ ಕಾರಾಗೃಹ ಸ್ಥಾಪನೆಯಾಗಿದ್ದಿತು. ಅದನ್ನು ನಂತರ ಹಡಗಲಿಗೆ ಸ್ಥಳಾಂತರಿಸಲಾಯಿತು.

**ಪೊಲೀಸ್ ಆಡಳಿತ**: ಪ್ರಾಚೀನರು ತಮ್ಮ ಗ್ರಾಮಗಳಲ್ಲಿ ಶಾಂತಿಯನ್ನು ಕಾಪಾಡುವ ಉದ್ದೇಶದಿಂದ ಕಳ್ಳತನ-ದರೋಡೆಗಳನ್ನು ನಿವಾರಿಸುವುದಕ್ಕೆ ಗ್ರಾಮದಲ್ಲಿ ಹಿರಿಯ ಗಾವುಂಡ, ಕಿರಿಯ ಗಾವುಂಡರ ಕರ್ತವ್ಯವಾಗಿದ್ದಿತು, ನಂತರದಲ್ಲಿ ಗ್ರಾಮದ ಪಟೇಲರು, ತಳವಾರರು, ಮುಖ್ಯಸ್ಥರು ಪ್ರಮುಖರಾಗಿ ಅಪರಾಧಿಗಳನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ವಿಧಿಸುತ್ತಿದ್ದರು. ಬ್ರಿಟಿಷರು ಆಡಳಿತವನ್ನು ತಮ್ಮ ಕೈಗೆ ಎತ್ತಿಕೊಂಡ ಬಳಿಕ ೧೮೭೨ ರಲ್ಲಿಯೇ ಪೊಲೀಸ್ ಠಾಣೆ ಹರಪನಹಳ್ಳಿಯಲ್ಲಿ ಸ್ಥಾಪನೆಯಾಯಿತು. ಮಂಗಳೂರು ಕೈಮಗ್ಗದಲ್ಲಿ ಬಣ್ಣ ತಯಾರಿಸಿ ಖಾಕಿಬಟ್ಟೆಯನ್ನು ಪೊಲೀಸರಿಗೆ ಹಾಕಿದರು. ೧೯೦೧ ರಿಂದ ಸಮವಸ್ತ್ರ ಮತ್ತು ಕತ್ತಿಯನ್ನು ನೀಡಿದರು. ೧೯೪೫-೪೭ ರ ವೇಳೆಗೆ ಸಬ್‌ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೆಬಲ್‌ಗಳನ್ನು ಎಲ್ಲಾ ಠಾಣೆಗಳಲ್ಲಿ ನೇಮಿಸಲಾಯಿತು.

**ಗೃಹ ರಕ್ಷಕ ದಳ** : ಇವರು ಕಾನೂನು ಮತ್ತು ಶಾಂತಿ ಪರಿಪಾಲನೆಯಲ್ಲಿ ಪೊಲೀಸರಿಗೆ ನೆರವಾಗುವರು. ಇವರು ಸ್ವಯಂ ಸೇವಕರಾಗಿ ಇಚ್ಛೆಯುಳ್ಳ ಆರೋಗ್ಯವಂತ ನಾಗರಿಕರಿಗೆ ಪೊಲೀಸ್ ತರಬೇತಿ ನೀಡಿ ಅಗತ್ಯಗಳಿಗೆ ಇವರನ್ನು ಬಳಸಿಕೊಳ್ಳುವರು.

**ಇತರೆ ಇಲಾಖೆಗಳು**

ಪುರಾತನ ಕಾಲದಿಂದಲೂ ಒಂದು ಪರಂಪರಾನುಗತ ರಾಜ್ಯಾಡಳಿತ ವ್ಯವಸ್ಥೆಯು ವಿಜಯನಗರದ ಅರಸರು ಮತ್ತು ಆನಂತರದ ಪಾಳೇಗಾರರ ಆಳ್ವಿಕೆಯ ಕಾಲದ

ವರೆವಿಗೂ ಮುಂದುವರೆಯಿತು. ಇದರಲ್ಲಿ ರಾಜನು ಪರಮಾಧಿಕಾರ ಹೊಂದಿದ್ದನು. ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರಗಳಲ್ಲಿ ರಾಜನ ಹಾಗೂ ಪ್ರಜೆಗಳ ಹಿತಾಸಕ್ತಿಯು ಸಮಾನವೆಂದು ಪರಿಗಣಿಸಲ್ಪಟ್ಟಿದ್ದಿತು. ನ್ಯಾಯಾಡಳಿತ, ಪ್ರಜಾರಕ್ಷಣೆ, ಸಮಾಜ ವ್ಯವಸ್ಥೆ ಕಾಪಾಡುವಿಕೆ, ಅರ್ಥನಿರ್ವಹಣೆ, ಶಿಷ್ಟ ರಕ್ಷಣೆ, ದುಷ್ಟದಂಡನೆ, ಲೋಕೋಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವಿಕೆ ಮತ್ತು ಧರ್ಮಾನುಸರಣೆ ಯಂತಹ ಜವಾಬ್ದಾರಿಗಳು ಈ 'ರಾಜಧರ್ಮ'ದ ಆಡಳಿತ ಕ್ರಮಕ್ಕೆ ಒಳಪಟ್ಟಿದ್ದವು. ಈ ಆಡಳಿತ ವ್ಯವಸ್ಥೆಯಲ್ಲಿ ಶಿಸ್ತು ನಿಯಂತ್ರಿಸಲು ಹಾಗೂ ಕಾರ್ಯಕ್ರಮಗಳನ್ನು ವಿವರಿಸಲು ವಿವಿಧ ಇಲಾಖಾ ವ್ಯವಸ್ಥೆಗಳಿದ್ದವು. ಇಂತಹ ಸಾಂಪ್ರದಾಯಿಕ ವಿಭಾಗಗಳು ಮೈಸೂರು ಅರಸರ ಕಾಲದಲ್ಲೂ ಮುಂದುವರೆದವು.

ಆದರೆ, ಮೈಸೂರಿನ ಚಿಕ್ಕದೇವರಾಜ ಒಡೆಯರ್ (೧೬೭೩-೧೭೦೪) ತನ್ನ ಆಡಳಿತ ಪದ್ಧತಿಯಲ್ಲಿ ಸಮಗ್ರ ಬದಲಾವಣೆ ತಂದನು. ಆತನು ಮೊಘಲ್ ಮಾದರಿಯ ಆಡಳಿತ ಕ್ರಮವನ್ನು ರಾಜ್ಯಾಡಳಿತಕ್ಕೆ ಸರಿ ಹೊಂದುವಂತೆ ರೂಪಿಸಿಕೊಳ್ಳುವ ಸಲುವಾಗಿ ತನ್ನ ರಾಯಭಾರಿ ನಿಯೋಗವನ್ನು ಮೊಘಲ್ ಚಕ್ರವರ್ತಿಗಳ ಆಸ್ಥಾನಕ್ಕೆ ಕಳುಹಿಸಿ, ಆ ನಿಯೋಗದ ಸಲಹೆ ಮೇರೆಗೆ ಆ ಕಾಲಕ್ಕೆ ಪ್ರಸಿದ್ಧಿ ಪಡೆದ ಹದಿನೆಂಟು ಚಾವಡಿ (ವಿಭಾಗ ಅಥವಾ ಇಲಾಖೆ) ಗಳನ್ನು ಸ್ಥಾಪಿಸಿ (೧೭೦೦-೧೭೦೪) ಆಡಳಿತವನ್ನು ಸಂಪೂರ್ಣವಾಗಿ ಕೇಂದ್ರೀಕೃತಗೊಳಿಸಿದನು. ಈ ಹದಿನೆಂಟು ಚಾವಡಿಗಳೇ ಮುಂದೆ **'ಅಠಾರ ಕಚೇರಿ'** ಎಂದು ಮನ್ನಣೆ ಪಡೆದವು. ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟ ಆನಂತರವೂ ಮೈಸೂರು ಸಂಸ್ಥಾನದಲ್ಲಿ ಈ ಆಡಳಿತ ವ್ಯವಸ್ಥೆಯು ಜಾರಿಯಲ್ಲಿದ್ದಿತು. ಈ ಹದಿನೆಂಟು ಕಚೇರಿಗಳ ಸಮೂಹವು ಮೈಸೂರು, ಶ್ರೀರಂಗಪಟ್ಟಣ ಹಾಗೂ ಬೆಂಗಳೂರಿನ ಟಿಪ್ಪು ಅರಮನೆ, ಆನಂತರದಲ್ಲಿ ಈಗಿನ ಹೈಕೋರ್ಟ್‌ನ (ಉಚ್ಚ ನ್ಯಾಯಾಲಯ) ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ದಾಖಲೆಗಳು ಇವೆ. ಈಗಲೂ ಶ್ರೇಷ್ಠನ್ಯಾಯಾಲಯ ಕಟ್ಟಡವನ್ನು **'ಅಠಾರ ಕಚೇರಿ'** ಎಂದು ಗುರುತಿಸುವುದು ರೂಢಿಯಲ್ಲಿದೆ. ಈ ಚಾವಡಿಗಳು ಕ್ರಮವಾಗಿ (೧) **ನಿರೂಪದ ಚಾವಡಿ**: ಸಾರ್ವಜನಿಕರಿಂದ ಮನವಿ ಸ್ವೀಕರಿಸಿ ದಾಖಲು ಮಾಡಿ, ವರದಿ ತಯಾರಿಸುವ ಹಾಗೂ ಅವುಗಳ ವಿಲೇವಾರಿ ಮಾಡುವ ಇಲಾಖೆ, (೨) **ಆಯಕಟ್ಟಿನ ಚಾವಡಿ**: ೮೪ ಆಡಳಿತ ಘಟಕಗಳನ್ನೊಳಗೊಂಡ ಸಿವಿಲ್ ಮತ್ತು ಮಿಲಿಟರಿ ಲೆಕ್ಕಪತ್ರ ಇಲಾಖೆ, (೩). **ಮೈಸೂರು ಹೋಬಳಿ ವಿಚಾರ ಚಾವಡಿ**: ದಕ್ಷಿಣ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ಇರುವ ವಿಚಾರಣಾ ಇಲಾಖೆ, **(೪). ಪಟ್ಟಣ ಹೋಬಳಿ ವಿಚಾರ ಚಾವಡಿ**, (೫). **ಸೀಮೆ ಕಂದಾಚಾರದ ಚಾವಡಿ**: ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕ ಪತ್ರಗಳನ್ನಿಡುವುದು, ಅಗತ್ಯವಾದ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳ ವ್ಯವಹಾರ ನೋಡಿಕೊಳ್ಳುವ ಇಲಾಖೆ, (೬). **ಬಾಗಿಲ ಕಂದಾಚಾರದ ಚಾವಡಿ**: ಮಿಲಿಟರಿ ಮತ್ತು ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೇಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರ ವಿಭಾಗ, (೭). **ಸುಂಕದ ಚಾವಡಿ**: ಸರಕು ಸಾಗಾಣಿಕೆಯ

ಸುಂಕದ ಒಟ್ಟು ಲೆಕ್ಕ, ಆಮದು ಮತ್ತು ರಫ್ತು ತೆರಿಗೆ ವಿಭಾಗ, (೮). **ಪೊಮ್ಮಿನ ಚಾವಡಿ**: ವಿಶೇಷ ತೆರಿಗೆ ಇಲಾಖೆ, (೯). **ತೋಡಾಯದ ಚಾವಡಿ**: ಶ್ರೀರಂಗಪಟ್ಟಣದ ಕೆಲವು ನಿರ್ದಿಷ್ಟ ವರ್ಗಗಳಿಂದ ಮಾತ್ರ (ಸುಂಕಗಳನ್ನಾಗಿ) ಪ್ರವೇಶ ತೆರಿಗೆಯನ್ನು ವಸೂಲಿ ಮಾಡುವ ಇಲಾಖೆ, (೧೦). **ಪಟ್ಟಣ ಹೋಬಳಿ ಅಷ್ಟಗ್ರಾಮದ ಚಾವಡಿ**: ಚಿಕ್ಕದೇವರಾಜ ಸಾಗರ ನಾಲೆಯ ಕೆಳಗಿನ ಎಂಟು ಹೋಬಳಿಗಳ ಅಧಿಕಾರ ವ್ಯಾಪ್ತಿ ಉಳ್ಳ ಇಲಾಖೆ, (೧೧). **ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ,** (೧೨). **ಬೆಣ್ಣೆ ಚಾವಡಿ**: ಅರಮನೆಗೆ ಸಂಬಂಧಿಸಿದ ದನಕರುಗಳ ಸಾಕಾಣಿಕೆ, ಪ್ರತಿ ದಿನದ ಹಾಲು ಉತ್ಪನ್ನಗಳ ಸಂಗ್ರಹಣೆ, ವಿನಿಯೋಗಕ್ಕೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗ, (೧೩). **ಪಟ್ಟಣದ ಚಾವಡಿ**: ಅರಮನೆ, ಕೋಟೆ, ಕೊತ್ತಲಗಳು, ಉಗ್ರಾಣಗಳು, ಆಯುಧಾಗಾರಗಳು ಹಾಗೂ ರಾಜಧಾನಿಯಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆಯ ಇಲಾಖೆ, (೧೪). **ಬೇಹಿನ ಚಾವಡಿ**: ಇದು ಗುಪ್ತಚರ ಇಲಾಖೆ ಹಾಗೂ ತುರ್ತು ಅಂಚೆ ವ್ಯವಸ್ಥೆ, (೧೫). **ಸಮ್ಮುಖದ ಚಾವಡಿ**: ರಾಜ ಮನೆತನದವರು, ಅರಮನೆಯ ವಿವಿಧ ವಿಭಾಗಗಳ ಅಧೀನ ಸಿಬ್ಬಂದಿ ಕುರಿತಾದ ಲೆಕ್ಕಪತ್ರ ಇಲಾಖೆ, (೧೬). **ದೇವಸ್ಥಾನದ ಚಾವಡಿ** (೧೭). **ಕಬ್ಬಿಣದ ಚಾವಡಿ**: ಕಬ್ಬಿಣದ ಗಣಿಗಳು, ಕಬ್ಬಿಣ ಉಪಕರಣಗಳ ತಯಾರಿಕೆ, ವಿತರಣೆ ಇತ್ಯಾದಿಗಳಿಗೆ ಸಂಬಂಧಿಸಿದ ವ್ಯವಹಾರಗಳ ಇಲಾಖೆ ಮತ್ತು (೧೮). **ಹೊಗೆ ಸೊಪ್ಪಿನ ಚಾವಡಿ**: ಹೊಗೆ ಸೊಪ್ಪು ಕೊಳ್ಳುವುದು ಮತ್ತು ಮಾರುವುದರ ಕುರಿತಾದ ಇಲಾಖೆ. ಈ ಒಂದೊಂದು ವಿಭಾಗದಲ್ಲಿಯೂ ಒಬ್ಬ ಮೇಲ್ವಿಚಾರಕ (ಗೊತ್ತುಗಾರ), ಮೂವರು ದಾಖಲೆ ಇಡುವವರು, ಗುಮಾಸ್ತರು, ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವರು ಇರುತ್ತಿದ್ದರು. ಚಾವಡಿಗಳ ಕಾರ್ಯವಿಧಾನ, ಅದಕ್ಕೆ ಸಂಬಂಧಿಸಿದ ಗೌಪ್ಯ ವಿವರಗಳನ್ನು ರಾಜನಿಗೆ ವರದಿ ಮಾಡಲು ಬೇಹುದಳ ಇರುತ್ತಿದ್ದಿತು. ಹೀಗಾಗಿ, ಇಲಾಖೆಯ ಕುಂದುಕೊರತೆಗಳನ್ನು ತಕ್ಷಣ ಸರಿಪಡಿಸಲು ಸಾಧ್ಯವಾಗುತ್ತಿದ್ದಿತು. ಈ ಕೇಂದ್ರ ಚಾವಡಿಗಳು ಸಾಕಷ್ಟು ಅಧಿಕಾರವನ್ನೂ ಹೊಂದಿದ್ದವು.

ಆನಂತರದಲ್ಲಿ ಸರ್ಕಾರದ ಉದ್ದೇಶಗಳಿಗಾಗಿ ಒಂದು ವ್ಯವಸ್ಥಿತವಾದ ಅಂಚೆ ಇಲಾಖೆ ರೂಪುಗೊಂಡಿತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತಾವಧಿಯಲ್ಲಿ ಬ್ರಿಟೀಷ್ ಸರ್ಕಾರವು ೧೮೩೧ ರಲ್ಲಿ ಕಮೀಷನರ್ ಆಳ್ವಿಕೆಯನ್ನು ಜಾರಿಗೆ ತಂದಿತು. ಈ ಅವಧಿಯಲ್ಲಿ ಸರ್ ಮಾರ್ಕ್ ಕಬ್ಬನ್, ಲಾರ್ಡ್ ಬೌರಿಂಗ್ ಮೊದಲಾದವರ ಆಡಳಿತ ಚಾಣಾಕ್ಷತೆಯಿಂದಾಗಿ ಮೈಸೂರಿನ ಆಡಳಿತವು ಬಹಳಷ್ಟು ಸುಧಾರಿಸಿತು. ಸಂಸ್ಥಾನಿಕರ ಆಡಳಿತಾಧಿಕಾರ ಪ್ರಧಾನವಾದ ಮೇಲೆ (೧೮೮೧) ಕಮೀಷನರ್ ಹುದ್ದೆ ರದ್ದಾಯಿತು. ಮೈಸೂರು ಅರಮನೆಯಲ್ಲಿ ಇದ್ದ ಒಬ್ಬ ರೆಸಿಡೆಂಟ್ ಜೊತೆಯಲ್ಲಿ ನೇಮಕಗೊಂಡ ದಿವಾನರ ಹುದ್ದೆ ಹೆಚ್ಚು ಪ್ರಾಮುಖ್ಯ ಪಡೆಯಿತು. ಆದರೆ ಸೈನ್ಯ, ರೈಲ್ವೆ, ತಂತಿ, ನಾಣ್ಯ, ದಂಡು ಪ್ರದೇಶಗಳ ಮೇಲೆ ಬ್ರಿಟೀಷ್ ಹತೋಟಿ

ಮುಂದುವರೆಯಿತು. ಕಮೀಷನರ್ ನೇತೃತ್ವದ ಆಡಳಿತ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವ ಅನೇಕ ವಿಭಾಗಗಳನ್ನು ಕಬ್ಬನ್ ಸ್ಥಾಪಿಸಿದನು. ಅವುಗಳೆಂದರೆ ಕಂದಾಯ, ಅಂಚೆ, ಆರಕ್ಷಕ ದಳ, ಲೋಕೋಪಯೋಗಿ (ಕಾಮಗಾರಿ), ಸೈನ್ಯ, ವೈದ್ಯಕೀಯ, ಜಾನುವಾರು, ನ್ಯಾಯ ಮತ್ತು ಶಿಕ್ಷಣ ಇಲಾಖೆ. ಸ್ವಾತಂತ್ರ್ಯಪೂರ್ವದ ಸಂಸ್ಥಾನಿಕರ ಆಡಳಿತ ಮತ್ತು ಬ್ರಿಟೀಷ್ ಪ್ರಾಂತ್ಯಗಳಲ್ಲಿಯ ಆಡಳಿತ ವ್ಯವಸ್ಥೆಯನ್ನು ನಮ್ಮ ರಾಜ್ಯವು ಅಳವಡಿಸಿಕೊಂಡಿತು.

೧೮೮೧ರ ಮಾರ್ಚ್ ತಿಂಗಳಲ್ಲಿ ರಾಜ್ಯದ ಆಡಳಿತವನ್ನು ರಾಜವಂಶಕ್ಕೆ ಬಿಟ್ಟುಕೊಟ್ಟಾಗ ಸಾಮಾನ್ಯ ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ, ವಿದ್ಯಾ ಇಲಾಖೆ ಮತ್ತು ಸೈನ್ಯದಳ ಈ ನಾಲ್ಕು ಇಲಾಖೆಗಳು ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮುಂದೆ ಈ ಇಲಾಖೆಗಳು ದೊಡ್ಡದಾಗಿ ಬೆಳೆದಂತೆ ಪ್ರತ್ಯೇಕ ಇಲಾಖೆಗಳನ್ನು ಸೃಷ್ಟಿಸಿ ಅಧಿಕಾರಿಗಳನ್ನು ನೇಮಿಸಲಾಯಿತು. ಹೀಗೆ ಉಂಟಾದ ಹೊಸ ಇಲಾಖೆಗಳೆಂದರೆ–ಅರಣ್ಯ ಮತ್ತು ಶಾಂತಿಪಾಲನೆ ಇಲಾಖೆ (೧೮೮೫), ಅಬಕಾರಿ ಇಲಾಖೆ (೧೮೮೯), ಮುಜರಾಯಿ ಇಲಾಖೆ (೧೮೯೧), ಗಣಿ ಇಲಾಖೆ(೧೮೯೪), ಕಂದಾಯ ಇಲಾಖೆ (೧೯೦೨), ವ್ಯವಸಾಯ ಇಲಾಖೆ (೧೯೧೨) ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (೧೯೧೩). ಭಾರತವು ಸ್ವತಂತ್ರಗೊಂಡಾಗ ಜಿಲ್ಲಾ ಕೇಂದ್ರದಲ್ಲಿ ಹಲವಾರು ಇಲಾಖಾ ಕಚೇರಿಗಳಿದ್ದು ಅವು ಇಂತಿದ್ದವು: ಜಿಲ್ಲಾ ನ್ಯಾಯಾಧೀಶ, ಜಿಲ್ಲಾ ಪೋಲೀಸ್ ಅಧೀಕ್ಷಕ, ವಲಯ ಅರಣ್ಯಾಧಿಕಾರಿ, ಕಾರ್ಯನಿರ್ವಾಹಕ ಅಭಿಯಂತರು, ಜಿಲ್ಲಾ ವೈದ್ಯಾಧಿಕಾರಿ, ಪಾನ ನಿರೋಧ ನಿರೀಕ್ಷಕ, ಜಿಲ್ಲಾ ಮಂಡಳಿಯ ಶಾಲೆಗಳ ಆಡಳಿತಾಧಿಕಾರಿ, ಜಿಲ್ಲಾ ವ್ಯವಸಾಯ ಅಧಿಕಾರಿ, ನೈರ್ಮಲ್ಯ ಹಾಗೂ ದೇವಿ ಹಾಕುವ ಪರಿಶೀಲನಾಧಿಕಾರಿ ಕಛೇರಿ ಮುಂತಾದವು.

ಈ ಹಿನ್ನೆಲೆಯಲ್ಲಿ, ಆಡಳಿತ ನಡೆಸುವ ಜನಪರ ಸರ್ಕಾರಗಳು ಜನತೆಯ ಕಲ್ಯಾಣಕ್ಕಾಗಿ ಹೊಸ ಹೊಸ ಯೋಜನೆಗಳನ್ನು ಕಾಲಕಾಲಕ್ಕೆ ರೂಪಿಸಿ, ಅವುಗಳ ಅನುಷ್ಠಾನಕ್ಕಾಗಿ ಹೆಚ್ಚಿನ ಹೊಣೆಗಾರಿಕೆಯನ್ನು ವಿವಿಧ ಇಲಾಖೆಗಳಿಗೆ ವಹಿಸುತ್ತಾ ಬಂದಿವೆ. ಅದಕ್ಕಾಗಿ, ಅವಶ್ಯವೆನಿಸಿದಾಗ ಹೊಸ ಇಲಾಖೆಗಳನ್ನು ಸಹ ಸೃಷ್ಟಿ ಮಾಡಿ, ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ತಾಲ್ಲೂಕಿನಲ್ಲಿ ಕೃಷಿ ಇಲಾಖೆ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ, ಉಪನೋಂದಣ ಅಧಿಕಾರಿಗಳ ಕಛೇರಿ, ತಾಲ್ಲೂಕು ಖಜಾನೆ, ಮೀನುಗಾರಿಕೆ ಕಛೇರಿ, ತೋಟಗಾರಿಕೆ, ಸಾರ್ವಜನಿಕ ಆಸ್ಪತ್ರೆ ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿ, ಪಶು ವೈದ್ಯ ಇಲಾಖೆ, ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಅಭಿಯಂತರರ ಕಛೇರಿ, ಪುರಸಭೆ, ಬೆಸ್ಕಾಂ,

ಸಹಾಯಕ ಭೂಮಾಪನ ಅಧಿಕಾರಿಗಳ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಹಕಾರ ಸಂಘಗಳ ಇಲಾಖೆ, ಕೈಗಾರಿಕಾ ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಅಂಚೆ ಮತ್ತು ತಂತಿ ಕಛೇರಿ, ದೂರವಾಣಿ ವಿನಿಮಯ ಕೇಂದ್ರ, ನೀರಾವರಿ ಅಭಿಯಂತರರ ಕಛೇರಿ, ಗೃಹ ನಿರ್ಮಾಣ ಮಂಡಳ ಮುಂತಾದ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.

## ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಾಚೀನ ನಾಗರೀಕತೆಯ ಹೆಗ್ಗುರುತಾದ ಸ್ಥಳೀಯ ಸ್ವಯಂಮಾಡಳಿತ ವ್ಯವಸ್ಥೆಗೆ ನಾಡಿನಲ್ಲಿ ಸುಧೀರ್ಘ ಪರಂಪರೆ ಇದೆ. ಜೀವನದ ನಾಗರಿಕ ಆಡಳಿತ, ಶಿಕ್ಷಣ ಮುಂತಾದ ವಿವಿಧ ರಂಗಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಮೂಲಕ ರಾಷ್ಟ್ರೀಯ ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪಟ್ಟಣಗಳ ಕುರಿತಾದ ಮಾಹಿತಿ ಲಭಿಸಿದ್ದು, ಆಗಲೂ ಸಹ ವ್ಯವಸ್ಥಿತವಾದ ಪೌರಾಡಳಿತವಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಕಾಲದಲ್ಲಿ ಆಡಳಿತವು ರಾಜರ ಕೈಯಲ್ಲಿ ಕೇಂದ್ರೀಕೃತವಾಗಿದ್ದರೂ, ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮನ್ನಣೆ ಇತ್ತು. ಹಳ್ಳಿ, ಪಟ್ಟಣ ಹಾಗೂ ನಗರ ಸಮುದಾಯಗಳು ಅವಶ್ಯಕತೆಗನುಗುಣವಾಗಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ನಾಗರಿಕ ಅವಶ್ಯಕತೆಗಳನ್ನು ಒದಗಿಸುವುದರ ಜೊತೆಗೆ ಇವು ತಮ್ಮ ಪ್ರದೇಶಗಳ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದ್ದವು.  ಅಂದಿನ ಕಾಲದ ರಾಜರು ಈ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದರಲ್ಲದೆ ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನೂ ಒದಗಿಸಿದ್ದರು. ಇಂದಿನ ಪ್ರಜಾಸತ್ತೆ ಮಾದರಿಯ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಹೆಚ್ಚು ಮಾನ್ಯತೆ ಪಡೆಯುತ್ತಿದೆ. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಆಡಳಿತವು, ತುಮಕೂರು ಜಿಲ್ಲೆಯನ್ನೂ ಒಳಗೊಂಡಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೆನಿಸಿದ ಪಂಚಾಯಿತಿ ಅಥವಾ ಶಾಸನ ಬದ್ಧ ಸ್ವಯಂ ಆಡಳಿತ ಹೊಂದಿದ್ದ ಪ್ರಾತಿನಿಧಿಕ ಕೂಟಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದದ್ದು ಇತಿಹಾಸದಿಂದ ತಿಳಿದುಬರುತ್ತದೆ.

ದೇಶದ ಪ್ರತಿ ಹಳ್ಳಿಯೂ ಸಣ್ಣ ಗಣರಾಜ್ಯದಂತೆ (ರಿಪಬ್ಲಿಕ್) ತನ್ನದೇ ಆದ ಸ್ವಾಯತ್ತತೆ ಪಡೆದಿತ್ತು.  ಹಳ್ಳಿಯ ಎಲ್ಲಾ ಮುಖ್ಯಸ್ಥರು ಸಮಾವೇಶಗೊಂಡು ಮುಖ್ಯವಾದ ಸ್ಥಳೀಯ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಅಂತಹ ಸಮಾವೇಶ ಅಥವಾ ಸಭೆಗಳ ಹಕ್ಕು ಮತ್ತು ಬಾಧ್ಯತೆಗಳಿಗೆ ಸರ್ಕಾರದ ರಕ್ಷಣೆ ಇದ್ದಿತು.

ಕರ್ನಾಟಕದ ಶಿಲಾಶಾಸನಗಳು ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ. ಊರು ಮತ್ತು ಪಟ್ಟಣಗಳಲ್ಲಿ ವಿವಿಧ ಜಾತಿ, ಕೂಟ ಹಾಗೂ ಬೀದಿಗಳನ್ನು ಪ್ರತಿನಿಧಿಸುವ ಸಭೆಗಳು ನಡೆಯುತ್ತಿದ್ದವು. ಗ್ರಾಮಸಭೆಯನ್ನು ಕೆಲವೊಮ್ಮೆ ಐವತ್ತೊಕ್ಕಲು, ಮೂವತ್ತೊಕ್ಕಲು ಎಂದು ಸಂಖ್ಯಾ ವಾಚಕದಿಂದ ಕರೆಯಲಾಗುತ್ತಿದ್ದು, ಸಂಖ್ಯೆಯು ಕುಟುಂಬಗಳ ಸಂಖ್ಯಾ ಸೂಚಕವಾಗಿದ್ದವು. ಶಾಸನಗಳಲ್ಲಿ ಕುಣಿಗಲ್–೩೦೦ ಎಂಬ ನಾಡುಗಳ ಉಲ್ಲೇಖ ದೊರೆಯುತ್ತದೆ. ಗ್ರಾಮಗಳ ಗುಂಪನ್ನು ಕಂಪಣ, ನಾಡು, ವಿಷಯ, ವೇಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೇ ಶತಮಾನದಲ್ಲಿ, 'ನಾಡು' ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ನಾಡಿನ ಪ್ರಭುವನ್ನು ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಆಡಳಿತ ವ್ಯವಸ್ಥೆಯು ಅನೇಕ ಹಳ್ಳಿಗಳ ಒಕ್ಕೂಟವಾಗಿದ್ದು, ಅದನ್ನು ನಾಡಸಭೆ ಎಂದು ಕರೆಯಲಾಗುತ್ತಿತ್ತು. ನಾಡಸಭೆಯ ಮುಖ್ಯಸ್ಥ ನಾಡಗೌಡನಾಗಿದ್ದು ಈ ಹುದ್ದೆಯು ಅನುವಂಶಿಕವಾಗಿತ್ತು. ನ್ಯಾಯ ವಿತರಣೆ, ನೀರಾವರಿ ಸೌಲಭ್ಯ ಒದಗಿಸುವುದು ಹಾಗೂ ಸಾಮೂಹಿಕ ಅಭಿವೃದ್ಧಿ–ಕಾರ್ಯ ಕೈಗೊಳ್ಳುವುದು ಈ ಸಭೆಯ ತೀರ್ಮಾನಕ್ಕೆ ಸೇರಿತ್ತು. ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಛತ್ರ, ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳ ನಿರ್ಮಾಣ ಹಾಗೂ ನಿರ್ವಹಣೆ, ಭೂ ರಕ್ಷಣೆ, ಕೆರೆ ಕುಂಟೆಗಳ ನಿರ್ಮಾಣ, ವೀರಗಲ್ಲು ಮಹಾಸತಿ–ಕಲ್ಲುಗಳನ್ನು ನೆಡಿಸುವುದು, ಸಂತ್ರಸ್ತರಿಗೆ ಪರಿಹಾರ ಹಾಗೂ ದೇವಾಲಯಗಳಲ್ಲಿ ನಂದಾದೀಪ ವ್ಯವಸ್ಥೆ ಮುಂತಾದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳು ನಾಡಸಭೆಯ ಜವಾಬ್ದಾರಿಯಾಗಿತ್ತು. ಗ್ರಾಮ ಮಟ್ಟದಲ್ಲಿ ಗ್ರಾಮ ಸಭೆಗಳು ರಚನೆಗೊಂಡಿದ್ದು ಅವೂ ಸಹ ನಾಡಸಭೆಯಂತೆ ಮೇಲಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಜಿಲ್ಲೆಯ ಗ್ರಾಮಗಳನ್ನು ವಾಡಿ, ಹುಂಡಿ, ಹಟ್ಟಿ, ಬೀಡು, ವಾರು, ಕೊಪ್ಪಲು, ಪಳ್ಳಿ, ಪಾಲ ಮುಂತಾಗಿ ಕರೆಯಲಾಗುತ್ತಿತ್ತು. ಗ್ರಾಮಕೂಟಗಳಿಗೆ ಊರ ಹದಿನೆಂಟು ಜಾತಿ, ಊರ ಸಮಸ್ತರು, ಊರ ಒಕ್ಕಲು, ಎಳಮೆ ಮುಂತಾಗಿ ಸಂಬೋಧಿಸಲಾಗುತ್ತಿತ್ತು. ಅವುಗಳಿಗೆ ಅನುವಂಶಿಕ ಮುಖಂಡರು ಇರುತ್ತಿದ್ದು ಅವು ರಾಜ್ಯದ ಆಡಳಿತ ಹಿಡಿತಕ್ಕೆ ಒಳಪಡದೆ ದಕ್ಷವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಗ್ರಾಮಸಭೆಗಳು ಸಾಮಾನ್ಯವಾಗಿ ದೇವಸ್ಥಾನ ಇಲ್ಲವೇ ಮಂಟಪಗಳಲ್ಲಿ ಸೇರುತ್ತಿದ್ದವು. ಪುದುವಟ್ಟುಗಳನ್ನು ನಿರ್ಮಿಸುವುದು ಹಾಗೂ ಧರ್ಮದ ರಕ್ಷಣೆ, ಸಭೆಗಳ ಹೊಣೆಯಾಗಿತ್ತು. ಈ ಸಭೆಗಳು ಮುಂದೆ ವಿಜಯನಗರ ಅರಸರು, ಹೈದರ್–ಟಿಪ್ಪು ಹಾಗೂ ಮೈಸೂರು ಅರಸರ ಆಡಳಿತವಿದ್ದಾಗಲೂ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ವಿಜಯನಗರ ಕಾಲದ ಶಾಸನದಲ್ಲಿ ಹತ್ತುಬೀದಿಗಳ ವರ್ತಕರು ಮತ್ತಿತರರೊಂದಿಗೆ ಅಲ್ಲಿಯ ಹಂಜಮಾನ(ಮುಸಲ್ಮಾನ)ರೂ ಊರಿನ ಸಭೆಗಳಲ್ಲಿ ಉಪಸ್ಥಿತರಿರುತ್ತಿದ್ದರೆಂದು ಉಲ್ಲೇಖವಿದೆ. ರಾಜಾಡಳಿತವಿದ್ದ ಪ್ರಾಂತಗಳ ಪೈಕಿ ಮೈಸೂರು, ತಿರುವಾಂಕೂರು ಹಾಗೂ ಕೊಚ್ಚಿ ರಾಜ್ಯಗಳಲ್ಲಿ ಮಾತ್ರ ಪುರಸಭಾ

ಶಾಸನಗಳನ್ನು ರೂಪಿಸಲಾಗಿ, ಆ ರಾಜ್ಯಗಳಲ್ಲಿ ಪೌರಾಡಳಿತವು ಉಚ್ಛ್ರಾಯ ಸ್ಥಿತಿಯಲ್ಲಿ ಮುಂದುವರಿದದ್ದು ಕಂಡುಬರುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯ ಒಂದೇ ಕಡೆ ವಾಸಿಸುತ್ತಿದ್ದು, ಅಂತಹ ಓಣಿ ಅಥವಾ ಸ್ಥಳವನ್ನು ಅಗ್ರಹಾರಗಳು ಎಂದು ಕರೆಯಲಾಗುತ್ತಿದ್ದು ಅವೂ ಸಹ ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಗಳಾಗಿದ್ದವು. ಇವುಗಳ ಆಡಳಿತವನ್ನು ಬ್ರಾಹ್ಮಣ ಮುಖಂಡರು ನೋಡಿಕೊಳ್ಳುತ್ತಿದ್ದರು. ಊರೊಡೆಯ ಪ್ರಮುಖ ಅಧಿಕಾರಿಯಾಗಿದ್ದನು. ಆರನೇಯ ಶತಮಾನದ ಶಾಸನಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ. ಅಗ್ರಹಾರದ ಕೆಲಸ ಕಾರ್ಯಗಳನ್ನು ಗ್ರಾಮ ಕಾರ್ಯವೆಂದೂ ಅವುಗಳ ನೀತಿ ಸಂಹಿತೆಯನ್ನು 'ಸಮಯ', 'ಮರ್ಯಾದೆ' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದ್ದು, ಮಹಾಜನರಿಗೆ ಸರ್ಕಾರ ಪುರಸ್ಕಾರ ನೀಡುತ್ತಿತ್ತು.

ಭಾರತದಲ್ಲಿ ಬ್ರಿಟೀಷ್ ಆಡಳಿತ ಕಾಲದಲ್ಲಿ ಅಂದರೆ ೧೮೬೨ರಷ್ಟು ಹಿಂದೆಯೇ ಮೈಸೂರು ರಾಜ್ಯದ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಪೌರಸಮಿತಿಗಳ ರಚನೆಯಾಗಿತ್ತು. ಮುಂದೆ ೧೮೬೪ರ ಹೊತ್ತಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಗೊಂಡವು. ೧೮೮೨ರಲ್ಲಿ ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಗಳ ಸುಧಾರಣೆ ಬಗೆಗಿನ ಗೊತ್ತುವಳಿ (ರೆಝೂಲ್ಯೂಶನ್) ಹಾಗೂ ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರುಗಳ ಪ್ರಗತಿಪರ ಕಾರ್ಯಕ್ರಮಗಳನ್ನು ಆಧರಿಸಿ ೧೯೦೪ರಲ್ಲಿ ಹೊರಡಿಸಲಾದ 'ದಿ ಮೈಸೂರ್ ರೆಗ್ಯೂಲೇಶನ್ ೨''ನ್ನು ೧೯೦೪ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರೂಪುಗೊಂಡವು. ಚುನಾಯಿತ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದಿರುವಂತಹ ನ್ಯೂನ್ಯತೆಗಳಿಂದಾಗಿ ಸ್ಥಳೀಯ ಮಂಡಳಿಗಳು ನ್ಯಾಯಯುತವಾಗಿ ಪಾತ್ರವಹಿಸುವಲ್ಲಿ ವಿಫಲಗೊಂಡವು. ಸ್ವಾತಂತ್ರ್ಯಾನಂತರ ಈ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ೧೯೫೧ರ ಅಧಿನಿಯಮ ಮತ್ತು ೧೯೮೪ರ ಹೊಸ ಪಂಚಾಯತ್‌ರಾಜ್ ಕಾನೂನುಗಳ ಮೂಲಕ ಸರ್ಕಾರವು ಸ್ವಯಂಮಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವಲ್ಲಿ ಯಶಸ್ವಿಯಾಗಿದೆ.

**ನಾಡು, ನಾಡಸಭೆ**

ಶಾಸನಗಳಲ್ಲಿ 'ನಾಡು' ಮತ್ತು ಮಹಾನಾಡಿನಬಗ್ಗೆ ಉಲ್ಲೇಖಗಳಿದ್ದು ಹತ್ತನೇ ಶತಮಾನದ ಮಧ್ಯಭಾಗದಲ್ಲಿ 'ನಾಡು', ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಒಂದುಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಯಾಗಿ ರೂಪುಗೊಂಡ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ನಾಡು ಹಲವಾರು ಗ್ರಾಮಗಳ ಗುಂಪಾಗಿದ್ದು, ಅದನ್ನು ಕಂಪಣ, ಸ್ಥಾನ, ವೇಂಟೆ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು.

ಇಂತಹ ನಾಡಿನ ಮುಖ್ಯಾಧಿಕಾರಿ (ಮುಖ್ಯಸ್ಥ) ಯನ್ನು ಗೌಂಡಪ್ರಭು, ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಗೌಡ ಅಥವಾ ನಾಡಗೌಂಡ ಹುದ್ದೆಯು ಅನುವಂಶಿಕವಾಗಿತ್ತು. ಹಳ್ಳಿಗಳ ಒಕ್ಕೂಟದಿಂದಾದ ಈ ಸಭೆಯನ್ನು ನಾಡಸಭೆ ಎಂದು ಕರೆಯುತ್ತಿದ್ದರು. ನಾಡ ಶಾನುಭೋಗರನ್ನು ನಾಡಸಭೆ ಆಯ್ಕೆ ಮಾಡುತ್ತಿತ್ತು. ದೇವಾಲಯಗಳಲ್ಲಿ ನಂದಾದೀಪ, ಅಗ್ಗಿಷ್ಟಿಕೆ ಮುಂತಾದ ಸೇವೆಗಳನ್ನು ನಾಡಸಭೆ ಏರ್ಪಡಿಸುತ್ತಿತ್ತು. ಈ ಸಭೆಗಳನ್ನು ಇಂದಿನ ತಾಲ್ಲೂಕು ಇಲ್ಲವೆ ಮಂಡಲ ಪಂಚಾಯಿತಿಗಳಿಗೆ ಹೋಲಿಸಬಹುದಾಗಿದೆ. ಸಭೆಯು ಹತ್ತು ಹಲವು ವರ್ಗದ ಜನರನ್ನೊಳಗೊಂಡಿದ್ದಿತು. ನಾಡಸಭೆಯ ಪ್ರಮುಖ ಕರ್ತವ್ಯಗಳಲ್ಲಿ ನ್ಯಾಯ ನಿರ್ಣಯ, ದೇಗುಲಗಳ ನಿರ್ಮಾಣ, ನೀರಾವರಿ ಸೌಲಭ್ಯ ಹಾಗೂ ಇನ್ನಿತರ ಸಾಮೂಹಿಕ ಅಭಿವೃದ್ಧಿ ಕಾರ್ಯಗಳು ಸೇರಿರುತ್ತಿದ್ದವು. ಅರವಟ್ಟಿಗೆ ನಡೆಸುವುದು, ವೀರಗಲ್ಲು, ಮಹಾಸತಿಗಲ್ಲು ನೆಡಿಸುವುದು, ಸುಂಕದಕಟ್ಟೆಗಳ ನಿರ್ಮಾಣ ಸಹ ಭೂ ಹಗರಣ ಬಗೆಹರಿಸುವುದು, ಮುಂತಾದ ಇನ್ನಿತರ ಕರ್ತವ್ಯಗಳು ಸಹ ನಾಡಸಭೆಯಿಂದ ನಿರ್ವಹಿಸಲ್ಪಡುತ್ತಿದ್ದವು. ನಾಡಸಭೆ ಮತ್ತು ಪಟ್ಟಣಸಭೆ, ನಗರಸಭೆ ಇಲ್ಲವೆ ನಗರ ವ್ಯಾಪಾರಿ ಸಭೆಗಳ ನಡುವೆ ಮಧುರವಾದ ಹೊಂದಾಣಿಕೆ ಇತ್ತು. ಎರಡೂ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇವು ಆಗಾಗ್ಗೆ ಸಭೆ ಸೇರಿ ತಮ್ಮ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳುತ್ತಿದ್ದು, ಆ ಭಾಗದ ಜನರ ಹಿತಾಸಕ್ತಿಗೆ ಅನುಕೂಲವಾಗುವಂತೆ ಆಡಳಿತ ನಿರ್ವಹಿಸುತ್ತಿದ್ದವು.

**ಮಹಾನಾಡು**

ಹಲವಾರು ನಾಡುಗಳು ಹಾಗೂ ನಗರ ಪ್ರದೇಶಗಳನ್ನೊಳಗೊಂಡ ವಿಸ್ತೃತವಾದ ಸ್ವಯಂಮಾಡಳಿತ ಸಂಸ್ಥೆಯನ್ನು "ಮಹಾನಾಡು" ಎಂದು ಕರೆಯಲಾಗುತ್ತಿತ್ತು. ಅವು ಸುಮಾರು ೧೨ ಹಾಗೂ ೧೩ನೇ ಶತಮಾನದಿಂದ ಕಾರ್ಯರೂಪಕ್ಕೆ ಬಂದಿದ್ದು ತಿಳಿದುಬರುತ್ತದೆ. ಮಹಾ ನಾಡುಗಳನ್ನು ಈಗಿನ ಜಿಲ್ಲಾ ಪರಿಷತ್ತು ಇಲ್ಲವೆ ಜಿಲ್ಲಾ ಪಂಚಾಯತ್ ಸಭೆಗೆ ಹೋಲಿಸಬಹುದಾಗಿದೆ. ಮಹಾನಾಡನ್ನು ಪದಿನಾಡು (ಹತ್ತು ನಾಡುಗಳ ಒಕ್ಕೂಟ) ಮತ್ತು ಪದಿನಾಲ್ಕು ನಾಡು (ಹದಿನಾಲ್ಕು ನಾಡು) ಎಂದು ಸಂಖ್ಯಾ ಸೂಚಕದಿಂದ ಕರೆಯಲಾಗುತ್ತಿತ್ತು. ಈ ಮಹಾ ನಾಡುಗಳ ಸಭೆಗಳು ನಾಡಸಭೆಗಳಂತೆ ಆಗಾಗ್ಗೆ ಸೇರದೆ (ಅಪರೂಪವಾಗಿ) ವಿರಳವಾಗಿ ಸೇರುತ್ತಿದ್ದದ್ದು ತಿಳಿದುಬರುತ್ತದೆ. ಈ ಸಭೆಗಳಿಗೆ ಆಡಳಿತ ಹಾಗೂ ಹೊಣೆಗಾರಿಕೆಯ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರ ಪ್ರತಿನಿಧಿಗಳು, ವೃತ್ತಿಪರ ಸಂಘಟನೆಗಳ ಸದಸ್ಯರು, ರಾಜಪ್ರತಿನಿಧಿಗಳು ಹಾಗೂ ಆ ಪ್ರದೇಶದ ಜನಸಾಮಾನ್ಯರಿಂದ ತುಂಬಿರುತ್ತಿತ್ತು. ಮಹಾನಾಡುಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೇಲೆ

ತಮ್ಮ ಪ್ರಭಾವ ಬೀರಬಲ್ಲವಾಗಿದ್ದವು. ಇವು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿಯ ನೀರಾವರಿ ಸೌಲಭ್ಯ, ನ್ಯಾಯ ವ್ಯವಸ್ಥೆ, ತೆರಿಗೆ ವಿಧಿಸುವಿಕೆ ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಂಮಾಧಿಕಾರ ಹಾಗೂ ಸ್ವಾವಲಂಬನೆ ಹೊಂದಿದ್ದು, ಪ್ರಭುತ್ವವೂ ಈ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿತ್ತು.

**ಪೌರಾಡಳಿತ**

ಗಂಗರ ಕಾಲದಲ್ಲಿ ಅವರ ರಾಜಾಡಳಿತಕ್ಕೆ ಒಳಪಟ್ಟ ಪಟ್ಟಣಗಳಲ್ಲಿ ಪೌರಸಭೆಗಳಿದ್ದವೆಂದು ಹಾಗೂ ಪಟ್ಟಣಗಳ ನಿರ್ಮಾಣ, ನಾಗರಿಕ ಸೌಲಭ್ಯ ಧರ್ಮಛತ್ರಗಳ ನಿರ್ವಹಣೆ ಮುಂತಾದ ಪ್ರಮುಖ ಕಾರ್ಯಗಳನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವರ್ತಕರದೇ ಪ್ರಾಧಾನ್ಯತೆ ಇರುತ್ತಿದ್ದು, ಗಾಣಿಗರು, ಕುಂಬಾರರು, ಕಾರ್ಮಿಕರು, ಮೇದರು, ಪಂಚಮರು ಹಾಗೂ ಲೇವಾದೇವಿದಾರರೂ ಇವರೊಂದಿಗೆ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲಾ ೧೮ ಪ್ರಕೃತಿಯ (ಜಾತಿಯ)ವರ ಪ್ರಾತಿನಿಧ್ಯ ಪಟ್ಟಣ ಸಭೆಗಳಲ್ಲಿ ಇರುತ್ತಿದ್ದ ಬಗ್ಗೆ ಶಾಸನಗಳಲ್ಲಿ ದಾಖಲೆ ದೊರೆಯುತ್ತದೆ. ಪೌರಾಡಳಿತ ಸಭೆಯ ಸಂವಿಧಾನಕ್ಕೆ 'ಆಚಾರ ವ್ಯವಸ್ಥೆ' ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗಸಂಸ್ಥೆಗಳ ಬಗ್ಗೆಯು ಶಾಸನಗಳಲ್ಲಿ ಪ್ರಸ್ತಾಪವಿದೆ.

ಮಧ್ಯಕಾಲೀನ ಯುಗದಲ್ಲಿ ಪ್ರಾರಂಭಗೊಂಡ ಪೌರಾಡಳಿತವು ಗ್ರಾಮದ ಆಡಳಿತಕ್ಕಿಂತ ಸ್ವಲ್ಪ ಭಿನ್ನವಾಗಿದ್ದು ವೈವಿಧ್ಯಮಯವಾಗಿತ್ತು. ಪೌರಸಭೆಗಳಿಗೆ ಸರ್ಕಾರ (ರಾಜರಿಂದ) ದಿಂದ ನಿಯುಕ್ತನಾದ 'ತಳವಾರ' ನೆಂಬ ಅಧಿಕಾರಿ ಇರುತ್ತಿದ್ದನು. ಪಟ್ಟಣದ ನಾಗರಿಕರ ಆಸ್ತಿಪಾಸ್ತಿ ರಕ್ಷಣೆ ಅವನ ಕೆಲಸವಾಗಿತ್ತು. ಪೌರಸಭೆಗಳಲ್ಲಿ ಪೌರಾಧ್ಯಕ್ಷ, ಸೇನಭೋವ(ಶಾನುಭೋಗ), ಮಣಿಗಾರ, ಮುಮಗಿಗಳಲ್ಲದೆ ವ್ಯಾಪಾರಿ ಸಂಘಗಳ ಪ್ರತಿನಿಧಿಗಳೂ ಇರುತ್ತಿದ್ದರು. ಪೌರಸಭೆಗಳು ಪಟ್ಟಣದಲ್ಲಿಯ ಮನೆಗಳು, ಎಣ್ಣೆಗಾಣ ವಿವಿಧ ಕಸುಬುಗಳಲ್ಲಿ ನಿರತರಾದವರ ಮೇಲೆ ಹಾಗೂ ವ್ಯಾಪಾರ ಮಳಿಗೆದಾರರ ಮೇಲೆ ತೆರಿಗೆ ವಿಧಿಸುತ್ತಿದ್ದು, ಬ್ರಾಹ್ಮಣರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ವಾಸದ ಮನೆಗಳು ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಬಿಕ್ಕಟ್ಟು ಅಥವಾ ವ್ಯಾಜ್ಯಗಳನ್ನು ಸಭೆ ಬಗೆಹರಿಸುತ್ತಿತ್ತು.

ಬೆಲೆ ನಿಯಂತ್ರಣ, ತೆರಿಗೆ ನಿರ್ವಹಣೆ, ಬೀದಿ ಹಾಗೂ ಮನೆಗಳ ನೈರ್ಮಲ್ಯ ಕಾಪಾಡುವುದು, ಪಟ್ಟಣಕ್ಕೆ ಬಂದು ಹೋಗುವವರ ಲೆಕ್ಕ ಇಡುವುದು ಹಾಗೂ ರಾಜನಿಗೆ ಮೇಲಿನ ಎಲ್ಲಾ ಜವಾಬ್ದಾರಿಗಳ ನಿರ್ವಹಣೆಯ ವರದಿ ಒಪ್ಪಿಸುವುದು ಪುರಸಭೆಯ ಕರ್ತವ್ಯಗಳಾಗಿತ್ತು. ಪೌರಸಭೆಗಳು ಹೆಚ್ಚಿನ ಸ್ವಯಂಮಾಧಿಕಾರ ಹೊಂದಿದ್ದು ರಾಜನು ಈ ಸಭೆಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿದ್ದನು.

**ಆಧುನಿಕ ಕಾಲದ ಸ್ವಯಂಮಾಡಳಿತ ವ್ಯವಸ್ಥೆ**

ಬ್ರಿಟೀಷ್ ಆಡಳಿತ ಕಾಲದಲ್ಲಿ ಪೌರಸಮಿತಿಗಳು ರಚನೆಗೊಂಡವು. ೧೮೬೪ರಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಯಾದ ಬಗ್ಗೆ ದಾಖಲೆಗಳಿವೆ. ೧೯೦೬ರ ಪುರಸಭೆಗಳ ೭ನೇಯ ಅಧಿನಿಯಮದ ಪ್ರಕಾರ ಹಲವು ಪುರಸಭೆಗಳು ರೂಪುಗೊಂಡವು. ಆದರೆ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದ್ದರಿಂದ ಸ್ಥಳೀಯ ಮಂಡಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲಗೊಂಡವು.

ಈ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕಾಗಿ ೧೯೧೮ರಲ್ಲಿ ಮೈಸೂರು ಸರ್ಕಾರವು ಎರಡು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ, ೧. ಎಂ.ಕಾಂತರಾಜ ಅರಸು ಅಧ್ಯಕ್ಷತೆಯ 'ಸ್ಥಳೀಯ ಸ್ವಯಂಮಾಧಿಕಾರ ಸಮಿತಿ' ಮತ್ತು ೨. ದಿವಾನ್‌ಬಹದ್ದೂರ್ ಸಿ. ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯ ಸ್ಥಳೀಯ ಹಣಕಾಸು ಸಮಿತಿ. ಸ್ಥಳೀಯ ಮಂಡಳಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಈ ಸಮಿತಿಗಳು ಪರಿಶೀಲಿಸ ಬೇಕಾಗಿತ್ತು. ಎಲ್ಲಾ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕೆಂದೂ ಹಾಗೂ ತಾಲ್ಲೂಕು ಮಂಡಳಿಗಳಿಗೆ ಮುಕ್ತ ಅಧಿಕಾರವಿರಬೇಕೆಂದೂ ಆ ಸಮಿತಿಗಳು ಶಿಫಾರಸ್ಸು ಮಾಡಿದ್ದವು. ೧೯೦೬ರ ಪುರಸಭಾ ನಿಯಮಗಳಿಗೆ ತಿದ್ದುಪಡಿ ಮಾಡುವ ನೂತನ ಮಸೂದೆಯನ್ನು ೧೯೧೭ನೇಯ ಜೂನ್ ೨೯ರಂದು ಮಂಡಿಸಲಾಯಿತು. ೧೯೧೮ರ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮ ಪಂಚಾಯಿತಿಗಳ ೬ನೇಯ ಅಧಿನಿಯಮವು, ಎಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಿಸಿದ ಕಾನೂನನ್ನು ಪುನರ್ ರೂಪಿಸಿತಲ್ಲದೆ, ಹೆಚ್ಚು ಅಧಿಕಾರ ಹೊಂದಿದ ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಅವಕಾಶವಿದ್ದಿತು. ಹೀಗೆ ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾದ ಸ್ವಯಂಮಾಡಳಿತ ಸಂಸ್ಥೆಗಳು ಸ್ಥಾಪಿತವಾದವು. ೧೯೧೮ರ ಅಧಿನಿಯಮದ ಪ್ರಕಾರ ತಾಲ್ಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ವಿವಿಧ ಜನಾಂಗಗಳಿಗೆ ಪ್ರಾತಿನಿಧ್ಯ ಒದಗಿಸುವ ನಿಯಮಗಳನ್ನು ರೂಪಿಸಲಾಯಿತು. ದೊಡ್ಡ ಮತ್ತು ಸಣ್ಣ ಪೌರ ಮಂಡಳಿಗಳಿಗೆ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಕೊಡಲಾಯಿತು. ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳು ನಿರ್ವಹಿಸುತ್ತಿದ್ದ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮಂಡಳಿಗಳೂ ಪದನಿಮಿತ್ತ ಉಪಾಧ್ಯಕ್ಷರನ್ನು ಹೊಂದಿದ್ದವು. ನಗರ ಮತ್ತು ಪುರಸಭೆಗಳಿಗೆ ಅಧ್ಯಕ್ಷರು ಆಯ್ಕೆಯಾದ್ದರಿಂದ ಜಿಲ್ಲಾಧಿಕಾರಿಗಳು ಅವುಗಳ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟರು. ಕ್ರಮೇಣ ಅಧಿಕಾರವನ್ನು ವಿಕೇಂದ್ರಿಕರಣ ಗೊಳಿಸಬೇಕೆಂಬ ಬ್ರಿಟೀಷರ ಅಖಿಲ

ಭಾರತ ಧೋರಣೆಯಂತೆ ಸರ್ಕಾರದ ಹತೋಟಿಯನ್ನು ಇನ್ನಷ್ಟು ಸಡಿಲಗೊಳಿಸಿ, ಮಂಡಳಿಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸಲಾಯಿತಲ್ಲದೆ ಕೆಲವು ಆಯ್ದ ಮಂಡಳಿಗಳಿಗೆ ಪ್ರಾಥಮಿಕ ಶಿಕ್ಷಣ ನಿರ್ವಹಿಸುವ ಅಧಿಕಾರ ವಹಿಸಲಾಯಿತು.

೧೯೨೧ರ ಮೈಸೂರು ಸ್ಥಳೀಯ ಬೋರ್ಡುಗಳು ಮತ್ತು ಗ್ರಾಮಪಂಚಾಯಿತಿಗಳ ತಿದ್ದುಪಡಿ ನಿಬಂಧನೆಯ ಪ್ರಕಾರ, ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನ ಕೊಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಗಮನಕೊಟ್ಟು ಅದನ್ನು ಜಿಲ್ಲಾ ಮಂಡಳಿಗಳ ಆಡಳಿತ ವ್ಯಾಪ್ತಿಗೆ ತರಲಾಯಿತು. ಮಂಡಳಿಗೆ ಶಿಕ್ಷಣ ಕರವನ್ನು ವಿಧಿಸಲು ಅಧಿಕಾರವಿತ್ತು.

**ಪಂಚಾಯಿತಿಗಳ ರಚನೆ**

ಹಲವು ಗ್ರಾಮಗಳ ಗುಂಪಿಗೆ ಒಂದರಂತೆ ೧೯೧೯ರಲ್ಲಿ ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕ ಸಂಪನ್ಮೂಲಗಳಿದ್ದು ಅವುಗಳ ಆಡಳಿತಕ್ಕೆ ನಾಮಕರಣಗೊಂಡ ಅಧ್ಯಕ್ಷರಿದ್ದರು. ಅವುಗಳ ಪ್ರಗತಿ ಸಮಾಧಾನಕರವಾಗಿದ್ದರೆ ಚುನಾವಣೆಯ ಹಕ್ಕನ್ನು ಕೊಡಲಾಗುತ್ತಿತ್ತು. ಆಯ್ದ ಕೆಲವು ತಾಲ್ಲೂಕು ಪಂಚಾಯತ್‌ಗಳಿಗೆ ನ್ಯಾಯ ಪಂಚಾಯಿತಿ ನಿಯಮ ಹಾಗೂ ಅರಣ್ಯ ಪಂಚಾಯಿತಿ ನಿಯಮಗಳ ಪ್ರಕಾರ ಅಧಿಕಾರ ವಹಿಸಲಾಯಿತಲ್ಲದೆ, ಮುಜರಾಯಿ ಸಂಸ್ಥೆಗಳ ಮೇಲಿನ ಹತೋಟಿ ಮತ್ತು ಗ್ರಾಮಗಳ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಯನ್ನೂ ವರ್ಗಾಯಿಸಲಾಯಿತು. ಪಂಚಾಯಿತಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ಹಾಗೂ ಹತೋಟಿಯ ಅಧಿಕಾರವನ್ನು ಅಮಲ್ದಾರ್ (ತಹಸೀಲ್ದಾರ್) ಅವರಿಗೆ ನೀಡಲಾಯಿತು. ಈ ಕ್ರಮದಿಂದಾಗಿ ಜಿಲ್ಲಾ, ತಾಲ್ಲೂಕು, ಅಂತರ–ತಾಲ್ಲೂಕು ಮತ್ತು ಅಂತರ–ಗ್ರಾಮ ಸೌಲಭ್ಯಗಳ ಮೇಲೆ ಅಂದರೆ ನೈರ್ಮಲ್ಯೀಕರಣ, ಸಂಪರ್ಕವ್ಯವಸ್ಥೆ, ವೈದ್ಯಕೀಯ, ಶಿಕ್ಷಣ ಮುಂತಾದ ಎಲ್ಲಾ ಸೌಲಭ್ಯಗಳನ್ನು ನೀಡಲು ಜಿಲ್ಲಾ ಮಂಡಳಿಗಳಿಗೆ ಸಂಪೂರ್ಣ ಅಧಿಕಾರ ದೊರಕಿದಂತಾಯಿತು. ತಾಲ್ಲೂಕು ಮಂಡಳಿಗಳನ್ನು ರದ್ದುಗೊಳಿಸಿದ್ದರಿಂದ ೧೯೨೭ರ ಫೆಬ್ರವರಿ ಒಂದರಿಂದ ಜಿಲ್ಲಾ ಮಂಡಳಿಗಳನ್ನು ಪುನರ್‌ರಚಿಸಲಾಯಿತು. ೧೯೨೮–೨೯ರಲ್ಲಿ ಪುರಸಭಾ ನಿಯಮವನ್ನು ತಿದ್ದುಪಡಿಗೊಳಿಸಿ, ಮಹಿಳೆಯರು ಪುರಸಭೆಗಳ ಸದಸ್ಯರಾಗುವುದಕ್ಕೆ ಅವಕಾಶ ಕಲ್ಪಿಸಲಾಯಿತು. ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ಹತೋಟಿ ಮತ್ತು ಹಣಕಾಸಿನ ಹೊಣೆಯನ್ನು ಸ್ಥಳೀಯ ಮಂಡಳಿಗಳಿಗೆ ವಹಿಸುವ ಮುಖ್ಯ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣ ಅಧಿನಿಯಮವನ್ನು ೧೯೩೦ರಲ್ಲಿ ಅಂಗೀಕರಿಸಿ, ೧೯೩೧ನೇ ಜುಲೈ ಒಂದರಿಂದ ಜಾರಿಗೊಳಿಸಲಾಯಿತು.

**ಮೈಸೂರು ಪುರಸಭೆಗಳ ಅಧಿನಿಯಮ ೧೯೩೩**

೧೯೩೩ರ ಮೈಸೂರು ಪುರಸಭೆಗಳ ಅಧಿನಿಯಮ, ಮೈಸೂರು ಸಣ್ಣ ಪುರಸಭೆಗಳ ಅಧಿನಿಯಮ ಹಾಗೂ ನಗರ ಪುರಸಭೆಗಳ ಅಧಿನಿಯಮ, ಇವು ನಗರ ಪ್ರದೇಶಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯ ಕಾನೂನುಗಳಾಗಿದ್ದವು. ೧೯೩೯ರ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲಾ ಮಂಡಳಿಗೂ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿದ್ದು, ಸರ್ಕಾರಿ ಅಧಿಕಾರಿ ಮತ್ತು ನಾಮಕರಣ ಸದಸ್ಯರ ಸಂಖ್ಯೆ ಕಡಿಮೆಯಾಯಿತು. ಸ್ಥಳೀಯ ಸಂಸ್ಥೆಗಳು, ಅದರಲ್ಲೂ ಗ್ರಾಮೀಣ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸಿ, ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ನೆರವಾಗುವಂತೆ ಮಾಡಲಾಯಿತು. ೧೯೪೭ ರಲ್ಲಿ ಹೊರಡಿಸಲಾದ ಅಧಿಕೃತ ಆಜ್ಞೆಗಳ ಮೂಲಕ ತೀವ್ರ ಪ್ರಚಾರ, ಗ್ರಾಮ ಸುಧಾರಣೆಗೆ ತರಬೇತಿಗೊಂಡ ಗ್ರಾಮೀಣ ಕಾರ್ಯಕರ್ತರನ್ನು ನಿಯೋಜಿಸುವುದು ಮುಂತಾದ ಹಲವಾರು ಹೊಸ ಯೋಜನೆಗಳನ್ನು ಜಾರಿಗೊಳಿಸ ಲಾಯಿತು. ಭಾರತ ಸ್ವಾತಂತ್ರ್ಯಗಳಿಸಿದ ಬಳಿಕ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಸ್ವತಂತ್ರ ಹಾಗೂ ಪರಿಣಾಮಕಾರಿಗೊಳಿಸಲಾಯಿತು.

**ಮೈಸೂರು ಪುರಸಭೆಗಳ ಅಧಿನಿಯಮ-೧೯೫೧**

ಈ ಕಾಯ್ದೆ ಪ್ರಥಮವಾಗಿ ಸಣ್ಣ ಹಾಗೂ ದೊಡ್ಡ ಪುರಸಭೆಗಳೆಂಬ ತಾರತಮ್ಯವನ್ನು ತೊಡೆದು ಹಾಕಿತು. ಈ ಕಾನೂನಿನನ್ವಯ ಎಲ್ಲಾ ಪುರಸಭೆಗಳಲ್ಲಿ ವಯಸ್ಕ ಮತದಾನದ ಮೂಲಕ ಚುನಾಯಿತರಾದ ಸದಸ್ಯರು ತಮ್ಮೊಳಗಿಂದಲೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಪಡೆದುಕೊಂಡರು. ಪುರಸಭೆಗಳಿಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಸಲು ಅವಕಾಶವಿತ್ತು. ಅಧ್ಯಕ್ಷರು ಸಭೆಗಳನ್ನು ಕರೆದು ಕಲಾಪ ನಡೆಸುವ ಅಧಿಕಾರ ಹೊಂದಿದ್ದರು. ಪುರಸಭೆ ಕಾರ್ಯಾಲಯದ ಅಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿಯ ಮೇಲ್ವಿಚಾರಣೆ ಹಾಗೂ ಆಡಳಿತ ಮತ್ತು ಜನಹಿತ ಕಾರ್ಯ ಕೈಗೊಳ್ಳುವ ಜವಾಬ್ದಾರಿಯನ್ನು ಅಧ್ಯಕ್ಷರು ಹೊಂದಿದ್ದರು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಕಾರ್ಯ ನಿರ್ವಹಿಸಬೇಕಾಗಿತ್ತು. ಆಡಳಿತಾತ್ಮಕ ದೃಷ್ಟಿಯಿಂದ ಪುರಸಭಾ ಚಟುವಟಿಕೆಗಳನ್ನು ಈ ಮುಂದಿನಂತೆ ವಿಂಗಡಿಸಲಾಗಿತ್ತು. ೧. ನೈರ್ಮಲ್ಯ ೨. ಆರೋಗ್ಯ ೩. ರಕ್ಷಣೆ ೪.ಸಾರ್ವಜನಿಕ ಸೌಕರ್ಯ ಹಾಗೂ ೫. ಜನಹಿತ ಕಾರ್ಯಕ್ರಮಗಳು. ಇವುಗಳಲ್ಲದೆ ತಂಗುದಾಣ ಹಾಗೂ ಉದ್ಯಾನಗಳ ನಿರ್ಮಾಣ, ಗ್ರಂಥಾಲಯ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ ಮುಂತಾದ ಸೌಕರ್ಯಗಳನ್ನು ತೆರಿಗೆದಾರರಿಗೆ ಒದಗಿಸುವ ವಿಶೇಷ ಅಧಿಕಾರವನ್ನು ಪುರಸಭೆಗಳು ಪಡೆದುಕೊಂಡವು.

**ವೆಂಕಟಪ್ಪ ಸಮಿತಿ**

ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ೧೯೪೯ರಲ್ಲಿ ವಿ.ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ೧೯೫೦ರ ಜೂನ್ ೧೨ ರಂದು ತನ್ನ ವರದಿಯನ್ನು ಸಲ್ಲಿಸಿತು. ಅದರ ಶಿಫಾರಸ್ಸುಗಳನ್ನು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮಗಳಲ್ಲಿ ಅಳವಡಿಸಲಾಯಿತು. ತತ್ಪರಿಣಾಮ ವಾಗಿ ಎರಡು ಹಂತದ ಸ್ಥಳೀಯ ಸ್ವಯಂಮಾಡಳಿತ ವ್ಯವಸ್ಥೆಗಳು ರೂಪುಗೊಂಡವು. ಅವುಗಳಲ್ಲಿನ ಜಿಲ್ಲಾ ಮಂಡಳಿಗಳನ್ನು ಪಂಚಾಯಿತಿಗಳು ಪರೋಕ್ಷವಾಗಿ ಚುನಾಯಿಸಿದ್ದವು. ಆದರೆ ಚುನಾವಣೆಗಳನ್ನು ನಡೆಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೧೯೫೪ರ ಮಾರ್ಚ್ ೧ ರಿಂದ ಜಿಲ್ಲಾ ಮಂಡಳಿಗಳ ಕೆಲಸ ಸ್ಥಗಿತಗೊಂಡಿತು.

೧೯೫೩ರಲ್ಲಿ ಡಿ.ಹೆಚ್. ಚಂದ್ರಶೇಖರಯ್ಯ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಇನ್ನೊಂದು ವಿಚಾರಣಾ-ಸಮಿತಿಯು ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವ ಅಥವಾ ತಾಲ್ಲೂಕು ಮಂಡಳಿಗಳನ್ನು ಪ್ರಾರಂಭಿಸುವ ಅವಶ್ಯಕತೆಗಳ ಬಗ್ಗೆ ಪರಿಶೀಲನೆ ನಡೆಸಿ, ೧೯೫೪ರಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಿತು. ೧.ತಾಲ್ಲೂಕು ಮಂಡಳಿಗಳ ಸದಸ್ಯರುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವುದು. ೨.ತಾಲ್ಲೂಕು ಮಂಡಳಿಗಳನ್ನು ಪುನರಾರಂಭಿಸುವುದು ಹಾಗೂ ೩.ತಾಲ್ಲೂಕು ಮಂಡಳಿಯ ಸದಸ್ಯತ್ವದ ಮೂರನೇ ಒಂದು ಭಾಗವನ್ನು ಗ್ರಾಮಪಂಚಾಯಿತಿ ಮತ್ತು ಪುರಸಭಾ ಮಂಡಳಿಗಳ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗವನ್ನು ತಾಲ್ಲೂಕಿನಲ್ಲಿನ ನೇರ ಚುನಾವಣೆಯ ಮೂಲಕ ಭರ್ತಿ ಮಾಡುವುದು. ಆದರೆ ರಾಜ್ಯ ಪುನರ್ವಿಂಗಡಣೆಯಿಂದಾಗಿ ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಲಿಲ್ಲ. ರಾಜ್ಯ ಪುನರ್ವಿಂಗಡಣೆಯಾದ ಬಳಿಕ ಜಾರಿಗೆ ತರಲಾದ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ (೧೯೫೯)ವು ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಜಾರಿಯಾಯಿತು.

**೧೯೫೬ರ ನಂತರದ ಬೆಳವಣಿಗೆಗಳು**

ರಾಜ್ಯ ಪುನರ್ವಿಂಗಡಣೆಯ ನಂತರ ಸ್ಥಳೀಯ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿ ಯಾಗಿ ಕೆಲಸ ಮಾಡಲು ಏಕರೂಪವಾದ ಮತ್ತು ಹೆಚ್ಚು ವ್ಯಾಪಕವಾದ ಹೊಸ ಕಾನೂನಿನ ಅವಶ್ಯಕತೆ ಇತ್ತು. ಏಕೆಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರ ಸಹಭಾಗಿತ್ವದಿಂದ ಕೈಗೊಳ್ಳಬೇಕಾಗಿತ್ತು. ಹಾಗಾಗಿ ದೇಶದ ಇತರೆಡೆಗಳಂತೆ

ಕರ್ನಾಟಕದಲ್ಲೂ ೧೯೫೭ರ ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಅನ್ವಯ 'ಪಂಚಾಯತ್ ರಾಜ್'ಪದ್ಧತಿಯನ್ನುಜಾರಿಗೊಳಿಸಲಾಯಿತು. ಅದರಂತೆ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯) ಯ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ರೂಪಿಸಲ್ಪಟ್ಟು, ಅದರಂತೆ ಗ್ರಾಮಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ಅಧಿಕೃತ ಜವಾಬ್ದಾರಿ ವರ್ಗಾಯಿಸಲ್ಪಟ್ಟು, ಯೋಜಿತ ಕಾರ್ಯಕ್ರಮ ಹಾಗೂ ರೂಪಿಸಲ್ಪಟ್ಟ ಗುರಿಗಳನ್ನು ಇವು ಈಡೇರಿಸಬೇಕಾಗಿತ್ತು. ಪುನರ್ವಿಂಗಡಣೆಯ ಸಮಯದಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾಯ್ದೆಗಳನ್ನು ರದ್ದುಪಡಿಸಿ ಈ ಹೊಸಕಾಯ್ದೆಯನ್ನು ೧೯೬೦ರ ನವೆಂಬರ್ ಒಂದರಿಂದ ಜಾರಿಗೊಳಿಸಲಾಯಿತು. ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಗ್ರಾಮ ಸ್ವರಾಜ್ಯದ ಗುರಿಯನ್ನು ಹೊಂದಿದ್ದ ಏಕೀಕೃತ ಕರ್ನಾಟಕದ ಮೊದಲನೆಯ ಶಾಸನ ಇದಾಗಿದ್ದು, ಅನಂತರ ೧೯೫೯ರ ಅಧಿನಿಯಮವನ್ನು; ೧೯೬೧ರಲ್ಲಿ ೨೬ನೇಯ, ೧೯೬೪ರಲ್ಲಿ ೨೨ನೇಯ, ೧೯೬೫ರಲ್ಲಿ ೫ನೇಯ, ೧೯೭೦ರಲ್ಲಿ ೭ನೇಯ ಹಾಗೂ ೧೯೭೪ರಲ್ಲಿ ೨೧ನೇಯ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಯಿತು. ೧೯೮೩ರಲ್ಲಿ ಮತ್ತು ೧೯೯೩ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು.

## ಜಿಲ್ಲಾ ಅಭಿವೃದ್ಧಿ ಸಮಿತಿ

ಜಿಲ್ಲೆಯಲ್ಲಿ ಹಳೆಯ ಜಿಲ್ಲಾ ಮಂಡಳಿಗಳನ್ನು ರದ್ದುಪಡಿಸಿ ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಜಿಲ್ಲೆಗಳಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುವ ಇತರ ಸ್ಥಳೀಯ ಸಂಸ್ಥೆಗಳಾದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು, ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣಪಂಚಾಯಿತಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಈ ಸಮಿತಿಯ ಹೊಣೆಯಾಗಿದ್ದಿತು. ಇದಕ್ಕೆ ಜಿಲ್ಲಾಧಿಕಾರಿಯವರು ಪದನಿಮಿತ್ತ ಅಧ್ಯಕ್ಷರಾಗಿದ್ದು ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿದ್ದರು. ಅಲ್ಲದೆ, ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆ ಮತ್ತು ಶಾಸನಸಭಾ ಸದಸ್ಯರು ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯಸಭೆ ಸದಸ್ಯರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ನಾಮಕರಣಗೊಂಡ ಕೆಲವು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರುತ್ತಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ವಾರ್ಷಿಕ ಆಯವ್ಯಯವನ್ನು ಪರಿಶೀಲಿಸಿ ಮಂಜೂರು ಮಾಡುವುದು, ಅವುಗಳ

ಕಾರ್ಯವನ್ನು ಪರಾಮರ್ಶೆ ಮಾಡುವುದು ಮತ್ತು ಅವು ಸರಾಗವಾಗಿ ಕೆಲಸ ಮಾಡುವುದಕ್ಕೆ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಈ ಸಮಿತಿಯು ಮಾಡುತ್ತಿತ್ತು.

**ತಾಲ್ಲೂಕು ಅಭಿವೃದ್ಧಿ ಮಂಡಳಿಗಳು**

ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹಿಂದಿನ ಮೈಸೂರು ರಾಜ್ಯದಲ್ಲಿನ ಜಿಲ್ಲಾ ಅಧೀನ ಗ್ರಾಮ ಅಭಿವೃದ್ಧಿ ಪ್ರಾತಿನಿಧಿಕ ಮಂಡಳಿಗಳಾಗಿದ್ದು, ಮೈಸೂರು ಸ್ಥಳೀಯ ಮಂಡಳಿಗಳ ಮಾದರಿಯಲ್ಲೇ ಪ್ರತಿಯೊಂದು ತಾಲ್ಲೂಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಆಗಿನ ಸಹಾಯಕ ಆಯುಕ್ತರು ಅದರ ಮುಖ್ಯಸ್ಥರಾಗಿದ್ದರು. ಈ ಮಂಡಳಿಗಳಲ್ಲಿ ೧೨ ಮಂದಿ ಸದಸ್ಯರಿರುತ್ತಿದ್ದರು. ಅವರಲ್ಲಿ ನಾಲ್ವರು ಪದನಿಮಿತ್ತರಾಗಿದ್ದು, ಇನ್ನು ನಾಲ್ವರು ಚುನಾಯಿತರು ಮತ್ತು ಮೂವರನ್ನು ಸರ್ಕಾರ ನಾಮಕರಣ ಮಾಡುತ್ತಿತ್ತು. ಉಳಿದೊಬ್ಬರು ಪುರಸಭೆಯಿಂದ ಚುನಾಯಿತರಾಗುತ್ತಿದ್ದರು. ಜಿಲ್ಲಾ ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಈ ತಾಲ್ಲೂಕು ಮಂಡಳಿಗಳು ಒಂದು ವರ್ಷದಲ್ಲಿ ಕನಿಷ್ಟ ಆರು ಸಲವಾದರೂ ಸಭೆ ಸೇರಬೇಕಾಗಿದ್ದಿತು. ೧೯೧೮ರ ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯು ಜಾರಿಯಾಗಿ ೧೯೦೨ರ ಕಾಯ್ದೆಯನ್ನು ರದ್ದು ಮಾಡಲಾಯಿತು. ಈ ಹೊಸ ಕಾಯ್ದೆಯನ್ವಯ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಪ್ರಮಾಣವನ್ನು ಗಣನೀಯವಾಗಿ ಏರಿಸಲಾಯಿತು. ಇದರಲ್ಲಿ ಪ್ರಮುಖ ಸಮುದಾಯಗಳಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡಲಾಯಿತು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸ್ವತಂತ್ರ ಅಧಿಕಾರಗಳನ್ನು ನೀಡಲಾಯಿತು. ಇಲ್ಲಿಯವರೆಗೆ ಜಿಲ್ಲಾ ಮತ್ತು ತಾಲ್ಲೂಕು ಪ್ರಗತಿ ಸಮಿತಿಗಳು ನಿರ್ವಹಿಸುತ್ತಿದ್ದ ಜಿಲ್ಲೆಗಳಲ್ಲಿನ ಆರ್ಥಿಕ ಅಭಿವೃದ್ಧಿ ಕೆಲಸವನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಮತ್ತು ಪಂಚಾಯಿತಿಗಳ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಸ್ಥಳೀಯ ಮಂಡಳಿಗಳು ಆರ್ಥಿಕ ಅಭಿವೃದ್ಧಿಗೆ ಗಮನ ನೀಡಬೇಕೆಂದೂ ಮತ್ತು ಶಿಕ್ಷಣ ಸುಂಕವನ್ನು ವಿಧಿಸಬೇಕೆಂದೂ ಸೂಚಿಸಲಾಯಿತು.

**ತಾಲ್ಲೂಕು ಮಂಡಳಿಗಳ ಪುನರ್ ರಚನೆ**

ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ರಾಜ್ಯ ಪುನರ್ವಿಂಗಡಣೆ ನಂತರ ೧೯೬೦ರಲ್ಲಿ ಅಂದರೆ ಅವು ಆರಂಭಗೊಂಡು ೩೩ ವರ್ಷಗಳ ಬಳಿಕ ಪುನರುಜ್ಜೀವನ ಗೊಳಿಸಲಾಯಿತು. ೧೯೫೯ರ ಕರ್ನಾಟಕ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ, ಗ್ರಾಮಾಂತರ ಸ್ಥಳೀಯ ಸ್ವಯಂ ಸರ್ಕಾರದಲ್ಲಿ

ಮೂರು ಹಂತಗಳನ್ನು ಮಾಡಲಾಗಿದ್ದು, ಅದರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯು ಪ್ರಧಾನ ಪಾತ್ರವನ್ನು ಹೊಂದಿದ್ದಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತಿ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ೧೯ಕ್ಕೆ ನಿಗದಿಪಡಿಸಲಾಗಿದ್ದಿತು. ಆದರೆ ಆ ತಾಲ್ಲೂಕಿನ ಜನಸಂಖ್ಯೆಯು ಒಂದು ಲಕ್ಷ ಅಥವಾ ಅದಕ್ಕೂ ಹೆಚ್ಚಿರಬೇಕಾಗಿದ್ದಿತು. ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ೧೫ ಸದಸ್ಯರಿರುತ್ತಿದ್ದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ಮೂಲ ಕಾಯ್ದೆಯಲ್ಲಿ ನಾಲ್ಕು ವರ್ಷಗಳಿದ್ದ ಈ ಸಂಸ್ಥೆಗಳ ಅವಧಿಯನ್ನು ಐದು ವರ್ಷಗಳಿಗೆ ಏರಿಸಲಾಯಿತು. ತಾಲ್ಲೂಕಿನಿಂದ ಚುನಾಯಿತರಾದ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ಪರಿಣಾಮಕಾರಿ ಸಮನ್ವಯ ವಿರಬೇಕೆಂದು ಕಾಯ್ದೆಯಲ್ಲಿ ಸೂಚಿಸಲಾಗಿತ್ತು. ರಸ್ತೆಗಳನ್ನು ನಿರ್ಮಿಸುವುದು, ಕುಡಿಯುವ ನೀರಿನ ಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೊಳ್ಳುವುದು, ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದು ಮುಂತಾದವು ಮಂಡಳಿಗಳ ಮುಖ್ಯ ಕಾರ್ಯಗಳಾಗಿದ್ದವು. ಇದರ ಜೊತೆಗೆ ಸರ್ಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ, ಈ ಮಂಡಳಿಗಳ ಜವಾಬ್ದಾರಿಯಾಗಿತ್ತು.

ಮಂಡಳಿಗಳು ಸಂಬಂಧಪಟ್ಟ ತಾಲ್ಲೂಕುಗಳ ಭೂ-ಕಂದಾಯದ ಶೇ.೫೦ ರಷ್ಟು ಭಾಗ ವಾರ್ಷಿಕ ಅನುದಾನಕ್ಕೆ ಅರ್ಹವಾಗಿದ್ದು, ಇದರ ಜೊತೆಗೆ ಸರ್ಕಾರವು ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇ.೧೦ರಷ್ಟು ಮೊಬಲಗು ದೊರೆಯುತ್ತಿದ್ದಿತು. ಅಲ್ಲದೆ ಮಂಡಳಿಗಳ ಸ್ಥಿರ ಆಸ್ತಿಗಳ ಮೇಲೆ ಸುಂಕವನ್ನು ಮತ್ತು ಮಾರಾಟಕ್ಕೆ ತಂದ ಜಾನುವಾರುಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವಿದ್ದಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚಾಗಿ ಸರ್ಕಾರದ ಅನುದಾನವನ್ನು ಅವಲಂಬಿಸಿದ್ದವು. ಆ ಪ್ರದೇಶದ ಎಲ್ಲಾ ಭೂ ಕಂದಾಯವನ್ನು ಆಯಾ ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ೬೦:೪೦ರ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತಿತ್ತು. ೧೯೮೭ರಿಂದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಬದಲಾಗಿ ತಾಲ್ಲೂಕು ಪಂಚಾಯಿತಿ ಸಮಿತಿಗಳು ಕಾರ್ಯನಿರತವಾಗಿವೆ.

## ಪಟ್ಟಣ ಪಂಚಾಯಿತಿಗಳು

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಕಲಂ ೩ರ ಪ್ರಕಾರ ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ

ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಮಧ್ಯವರ್ತಿ ಸ್ವಯಂ ಆಡಳಿತ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಜನಸಂಖ್ಯೆಯು ೫೦೦೦ಕ್ಕೂ ಹೆಚ್ಚಿದ್ದು ವಾರ್ಷಿಕ ವರಮಾನವು ರೂ. ೧೦,೦೦೦ ಗಳಿಗಿಂತ ಹೆಚ್ಚಿದ್ದರೆ, ಅಂತಹ ಹಳ್ಳಿಯನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಘೋಷಿಸುತ್ತಿತ್ತು. ಪಟ್ಟಣ ಪಂಚಾಯಿತಿಯಲ್ಲಿ ೧೧ ರಿಂದ ೧೯ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೫ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಕಾಯ್ದೆ ಜಾರಿಗೆ ಬಂದ ಮೇಲೆ ಮೊದಲಿನ ಪಟ್ಟಣ ಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳೆಂದು (೧೯೮೭ರಿಂದ) ಪುನರ್‌ರಚಿಸಲಾಯಿತು.

ಪಟ್ಟಣದ ನೈರ್ಮಲ್ಯವನ್ನು ಪೌರ ಕಾರ್ಮಿಕರು ಮತ್ತು ಇತರೆ ಮೇಲ್ವಿಚಾರಕ ಸಿಬ್ಬಂದಿ ಕಾಪಾಡುತ್ತಿದ್ದರು. ಸಾಮಾನ್ಯವಾಗಿ ಸಂತೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಬಂದು ಹೋಗುವ ಜನರಿಗೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ವಿಶೇಷ ಧನ ಸಹಾಯವನ್ನು ಒದಗಿಸುತ್ತಿತ್ತು.

## ಗ್ರಾಮ ಪಂಚಾಯಿತಿಗಳು

ಆಧುನಿಕ ಗ್ರಾಮಪಂಚಾಯಿತಿ ಪದ್ಧತಿಯನ್ನು ಒಂದು ಸ್ಥಳೀಯ ಆಡಳಿತ ಘಟಕವಾಗಿ ಜಾರಿಗೊಳಿಸುವುದಕ್ಕೆ ಮೊದಲು ಹಳ್ಳಿಯ ನೈರ್ಮಲ್ಯವನ್ನು ೧೮೯೮ರ ಗ್ರಾಮ ನೈರ್ಮಲ್ಯ ನಿಬಂಧನೆಯಡಿಯಲ್ಲಿ ಆರೋಗ್ಯ ಇಲಾಖೆಯು ನೋಡಿಕೊಳ್ಳುತ್ತಿತ್ತು. ೧೮೯೧ಕ್ಕಿಂತ ಹಿಂದೆಯೇ ಈ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಜಾಡಮಾಲಿಗಳನ್ನು ನೇಮಿಸಿಕೊಂಡಿದ್ದಕ್ಕೆ ದಾಖಲೆಗಳಿವೆ. ನಂತರ ೧೯೧೪ರಲ್ಲಿ ಹಳ್ಳಿಯ ಅಭಿವೃದ್ಧಿ ಯೋಜನೆಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಜಾರಿಗೆ ತಂದರು. ೧೯೧೮ರ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ನಿಬಂಧನೆಗಳನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಗ್ರಾಮಪಂಚಾಯಿತಿಗಳು ಶಾಸನಬದ್ಧವಾಗಿ ಸ್ಥಾಪನೆಗೊಂಡವು. ಅದೇ ಪ್ರಕಾರ, ೧೯೧೯ರಲ್ಲಿ ಹಳ್ಳಿಗಳ ಒಂದು ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರಚನೆಗೊಂಡಿದ್ದು, ಅದಕ್ಕೆ ಪ್ರತ್ಯೇಕವಾದ ಸಂಪನ್ಮೂಲಗಳನ್ನು ಗುರ್ತಿಸಲಾಗಿದ್ದು, ಅವುಗಳಿಗೆ ನಾಮಕರಣ ಮಾಡಿದ ಅಧ್ಯಕ್ಷರಿದ್ದರು. ನಂತರ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಎಲ್ಲಾ ಹಳ್ಳಿಗಳಿಗೆ ಪಂಚಾಯಿತಿಗಳನ್ನು ಶಾಸನಬದ್ಧ ಆಧಾರದ ಮೇಲೆ ರಚಿಸಬೇಕೆಂದೂ ಪ್ರತಿ ಪಂಚಾಯಿತಿಯಲ್ಲಿ ಐದಕ್ಕೆ ಕಡಿಮೆ ಇಲ್ಲದಂತೆ, ೧೨ಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿದ್ದು ಅವರಲ್ಲಿ ಅರ್ಧದಷ್ಟು ಜನರನ್ನು ಚುನಾಯಿಸಬೇಕೆಂದೂ ಸಲಹೆ ಮಾಡಲಾಯಿತು. ಪಂಚಾಯಿತಿಯ ಅಧ್ಯಕ್ಷರನ್ನು ಪ್ರಾರಂಭದ ಹಂತದಲ್ಲಿ

ಸರ್ಕಾರವು ನೇಮಿಸುತ್ತಿತ್ತು. ಪಂಚಾಯಿತಿಗಳಿಗೆ ಕಡ್ಡಾಯ ಮತ್ತು ಐಚ್ಛಿಕ ಎಂಬ ಎರಡು ವಿಧವಾದ ಕಾರ್ಯಗಳಿದ್ದವು. ಮೊದಲನೆಯದರಲ್ಲಿ ಹಳ್ಳಿಯ ನೈರ್ಮಲ್ಯ ಮತ್ತು ಸಂಪರ್ಕ, ಎರಡನೆಯದರಲ್ಲಿ ನಿವಾಸಿಗಳ ಆರೋಗ್ಯ ಮತ್ತು ಮೂಲ ಸೌಕರ್ಯಗಳು ಸೇರಿದ್ದವು. ಪಂಚಾಯಿತಿಗಳಿಗೆ ಮನೆ, ಅಂಗಡಿ, ಖಾಲಿ ನಿವೇಶನ ಮತ್ತು ಹಿತ್ತಲುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಅಧಿಕಾರ ನೀಡಲಾಗಿತ್ತು.

ನಂತರ ೧೯೨೬ರ ಮೈಸೂರು ಜಿಲ್ಲಾ ಮಂಡಳಿಗಳ ನಿಬಂಧನೆ ಮೂರರಂತೆ ಪಂಚಾಯಿತಿಗಳನ್ನು ಜಿಲ್ಲಾ ಮಂಡಳಿಗಳ ಆಡಳಿತಾತ್ಮಕ ನಿಯಂತ್ರಣದಿಂದ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣದಡಿಯಲ್ಲಿ ತರಲಾಯಿತು. ಅವುಗಳು ಸಮರ್ಪಕ ಕಾರ್ಯನಿರ್ವಹಣೆಗೆ ಅವುಗಳ ನಿಯಂತ್ರಣ, ತಪಾಸಣೆ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ತಹಸೀಲ್ದಾರರಿಗೆ ನೀಡಲಾಗಿತ್ತು. ೧೯೫೯ರ ವರೆಗೆ ಜಿಲ್ಲೆಗಳಲ್ಲಿನ ಗ್ರಾಮಪಂಚಾಯಿತಿಗಳು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು.

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆಯು ೧೯೮೫ರ ವರೆಗೆ ಜಾರಿಯಲ್ಲಿತ್ತು. ಅದರ ಪ್ರಕಾರ ೧೫೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೧೦,೦೦೦ ಮೀರದಂತಹ ಜನಸಂಖ್ಯೆಯ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರೂಪುಗೊಂಡಿತು. ಪ್ರತಿಯೊಂದು ಪಂಚಾಯಿತಿಯೂ ೧೧ಕ್ಕಿಂತ ಕಡಿಮೆಯಿಲ್ಲದೆ, ೧೯ ಕ್ಕಿಂತ ಹೆಚ್ಚಿಲ್ಲದೆ ಸದಸ್ಯರನ್ನು ಹೊಂದಿತ್ತು.

**ಆರ್ಥಿಕ ಸಂಪನ್ಮೂಲಗಳು**

ಪ್ರತಿ ಗ್ರಾಮ ಪಂಚಾಯಿತಿಗೆ ಆಯಾ ಹಳ್ಳಿಯ ಭೂ-ಕಂದಾಯದ ಶೇ.೩೦ ರಷ್ಟು ಮತ್ತು ಶೇ.೧೦ರಷ್ಟು ವಿಶೇಷ ಉದ್ದೇಶಗಳಿಗಾಗಿ ವಿವೇಚನಾಧೀನ ಅನುದಾನವು ದೊರೆಯುತ್ತಿತ್ತು. ಪಂಚಾಯಿತಿಯು ತನ್ನ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನ, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ ಮತ್ತು ಹಬ್ಬಗಳು, ಮನೋರಂಜನೆ, ವಾಹನ (ಮೋಟಾರು ವಾಹನಗಳ ಹೊರತು) ಇವುಗಳ ಮೇಲೆ ತೆರಿಗೆಯನ್ನೂ, ಬಸ್ ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣ, ಮತ್ತು ಜಲಾಗಾರಗಳ ಮೇಲೆ ಶುಲ್ಕವನ್ನೂ ವಿಧಿಸಬಹುದಾಗಿತ್ತು. ಪಂಚಾಯಿತಿಯ ಹಂತದಲ್ಲಿ ಗ್ರಾಮ ಲೆಕ್ಕಿಗನು ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸುತ್ತಿದ್ದನು. ವಾರ್ಷಿಕ ರೂ. ೧೨,೦೦೦ ಗಳಿಗಿಂತ ಹೆಚ್ಚು ಆದಾಯವಿರುವ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು.

## ಪಂಚಾಯತ್ ರಾಜ್ ಕಾನೂನು

ಪಂಚಾಯತಿರಾಜ್ ವ್ಯವಸ್ಥೆಯ ಪರಿಕಲ್ಪನೆಯ ಮೂಲ ಉದ್ದೇಶವು ಆಡಳಿತದಲ್ಲಿ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಜಾರಿಗೆ ತಂದು ತನ್ಮೂಲಕ ಪ್ರಜೆಗಳಿಗೆ ನೇರವಾಗಿ ಆಡಳಿತದಲ್ಲಿ ಹೆಚ್ಚಿನ ಅಧಿಕಾರ ಪ್ರಾಪ್ತಿ ಮಾಡಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ ಆಗುವಂತೆ ನೋಡಿಕೊಳ್ಳುವುದೇ ಆಗಿದೆ. ಇದಕ್ಕಾಗಿ ಸರ್ಕಾರ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯತ್ ರಾಜ್ ಕಾನೂನನ್ನು ೧೯೮೩ರಲ್ಲಿ ಜಾರಿಗೆ ತಂದಿತು. ಈ ಕಾನೂನಿನಂತೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು, ಆಡಳಿತದ ವಿವಿಧ ಹಂತಗಳಲ್ಲಿ ವಿಕೇಂದ್ರಿಕರಣ ಹಾಗೂ ಸಾರ್ವಜನಿಕರ ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ಸಹಯೋಗ ನೀಡುವಂತೆ ಮಾಡುವುದೂ ಸರ್ಕಾರದ ಉದ್ದೇಶವಾಗಿತ್ತು. ಈ ಕಾನೂನಿನನ್ವಯ ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಈ ಹೊಸ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯಿತಿ ಜಾರಿಗೆ ಬರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲ್ಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರತ್ಯೇಕ ಹಣಕಾಸಿನ ಅಧಿಕಾರ ಇರಲಿಲ್ಲ. ಅವು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ನಡೆಸಲ್ಪಡುತ್ತಿದ್ದವು. ಈ ಆಡಳಿತ ವ್ಯವಸ್ಥೆಯು ೧೯೯೨ ರವರೆಗೆ ಮುಂದುವರಿಯಿತು.

**೧೯೫೯ರ ಕಾಯ್ದೆ:** ಮೈಸೂರು ರಾಜ್ಯದಲ್ಲಿ ೧೯೫೬ರಲ್ಲಿ ಹೊಸ ಕಾನೂನು ಜಾರಿಗೆ ಬಂದಿತು. ನೂತನ ಶಾಸನ ವೆಂಕಟಪ್ಪ ಮತ್ತು ಚಂದ್ರಶೇಖರಯ್ಯ ಸಮಿತಿ ಹಾಗೂ ರಾಷ್ಟ್ರಮಟ್ಟದಲ್ಲಿನ ಬಲವಂತರಾಯ್ ಮೆಹ್ತ ಸಮಿತಿ ಶಿಫಾರಸ್ಸುಗಳನ್ನೊಳಗೊಂಡಿದ್ದಿತು. ಇವುಗಳಿಂದ ೧೯೫೬ರಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪಿತವಾಗಲು ತನ್ನದೇ ಆದ ಪ್ರಭಾವವನ್ನು ಬೀರಿತು. ೧೯೫೯ರಲ್ಲಿ ಜಾರಿಗೆ ಬಂದ ಶಾಸನವೆಂದರೆ "ಮೈಸೂರು (ಕರ್ನಾಟಕ) ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮ ೧೯೫೯. ಇದರ ಮೂಲ ಉದ್ದೇಶ ಪ್ರಜೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವಂತೆ ಉತ್ತೇಜಿಸುವುದು ಮತ್ತು ಪ್ರಜೆಗಳಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ಅಧಿಕಾರವನ್ನು ವರ್ಗಾಯಿಸುವುದು". ೧೯೫೯ರಲ್ಲಿ ಮೂರು ಹಂತಗಳಿರುವ ಸ್ಥಳೀಯ ಸರ್ಕಾರ ವ್ಯವಸ್ಥೆ ಜಾರಿಗೆಬಂದಿತು. ಇವುಗಳು ಗ್ರಾಮ ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಲಹಾ

ಸಮಿತಿ. ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ನೇರ ಚುನಾವಣೆಗಳಿದ್ದವು. ತಾಲ್ಲೂಕು ಮಂಡಳಿಗಳ ಅಧ್ಯಕ್ಷರುಗಳು ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದರು.

ಗ್ರಾಮ ಪಂಚಾಯಿತಿಗೆ ನೇರ ಚುನಾವಣೆ ಇತ್ತು. ಗ್ರಾಮ ಪಂಚಾಯಿತಿಯ ವ್ಯಾಪ್ತಿ ಒಂದು ಕಂದಾಯ ಗ್ರಾಮ ಅಥವಾ ಕೆಲವು ಗ್ರಾಮಗಳು, ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಟ ೧೧, ಗರಿಷ್ಠ ೧೯ ಸದಸ್ಯರಿದ್ದರು. ಗ್ರಾಮ ಪಂಚಾಯಿತಿಯ ಬಜೆಟ್‌ಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯ ಅನುಮೋದನೆಯನ್ನು ಪಡೆಯಬೇಕಿತ್ತು. ಕೆಲವು ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಪಂಚಾಯಿತಿಗೆ ನೀಡಲಾಗಿತ್ತು. ಉದಾಹರಣೆಗೆ ಭೂ–ಕಂದಾಯದಲ್ಲಿನ ಒಂದು ಪಾಲು ಗ್ರಾಮ ಪಂಚಾಯಿತಿಗಳಿಗೆ ಸೇರುತ್ತಿತ್ತು.

ತಾಲ್ಲೂಕು ಅಭಿವೃದ್ಧಿ ಮಂಡಳಿ ನೇರ ಚುನಾಯಿತ ಸ್ವಯಂಮಾಡಳಿತ ಸಂಸ್ಥೆಯಾಗಿತ್ತು. ಈ ಮಂಡಳಿಯಲ್ಲಿ ೧೫ ರಿಂದ ೧೯ ಸದಸ್ಯರಿದ್ದು, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಪದನಿಮಿತ್ತ ಸದಸ್ಯರಾಗಿದ್ದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದರು. ಸರ್ಕಾರ ನೀಡಿದ ಅನುದಾನ, ಭೂ–ಕಂದಾಯದ ಶೇಕಡಾವಾರು ಪಾಲು ಮತ್ತು ನೀರಿನ ದರ ಇವುಗಳು ಆದಾಯದ ಮೂಲಗಳಾಗಿದ್ದವು. ಜಿಲ್ಲಾ ಅಭಿವೃದ್ಧಿ ಸಲಹಾ ಸಮಿತಿಯಲ್ಲಿ ಚುನಾಯಿತ ಸದಸ್ಯರಿರುತ್ತಿರಲಿಲ್ಲ.

ಜಿಲ್ಲಾ ಸಮಿತಿಯ ಸದಸ್ಯರು ಸೇರಿದಂತೆ ಜಿಲ್ಲಾ ಅಭಿವೃದ್ಧಿ ಮಂಡಳಿಯಲ್ಲಿ ೧) ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರುಗಳು, ೨) ಜಿಲ್ಲೆಯಿಂದ ಚುನಾಯಿತರಾದ ರಾಜ್ಯ ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಸಂಸತ್ ಸದಸ್ಯರು, ೩) ೧೫ಕ್ಕೆ ಮೀರದಂತೆ ಸರ್ಕಾರದಿಂದ ನೇಮಕಗೊಂಡ ಜಿಲ್ಲಾ ಮಟ್ಟದ ಅಧಿಕಾರಿಗಳು, ೪) ಒಬ್ಬ ಮಹಿಳೆ; ಒಬ್ಬ ಪರಿಶಿಷ್ಟ ಜಾತಿಯ ಸದಸ್ಯರು ಪ್ರತಿನಿಧಿಸುವ ಸದಸ್ಯರು ಮತ್ತು ೫) ಜಿಲ್ಲಾಧಿಕಾರಿಗಳು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಂಸ್ಥೆಯು ಸಲಹಾ ಸಂಸ್ಥೆಯಾಗಿದ್ದು, ಬೇರೆ ಯಾವ ಸಿಬ್ಬಂದಿಯನ್ನು ಹೊಂದಿರಲಿಲ್ಲ.

ವಿಭಾಗಾಧಿಕಾರಿಗಳಿಗೆ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ನಿಯಂತ್ರಿಸುವ ಅಧಿಕಾರವಿತ್ತು. ಈ ಸಂಸ್ಥೆಗಳನ್ನು ಅಮಾನತ್ತು ಮಾಡುವ ಹಾಗೂ ವಿಸರ್ಜಿಸುವ ಅಧಿಕಾರವನ್ನು ವಿಭಾಗಾಧಿಕಾರಿಗಳಿಗೆ ನೀಡಲಾಗಿತ್ತು.

**ಕೊಂಡಜ್ಜಿ ಬಸಪ್ಪ ಸಮಿತಿ**: ೧೯೬೨ರಲ್ಲಿ ಕೊಂಡಜ್ಜಿ ಬಸಪ್ಪ ಸಮಿತಿ ರಚಿಸಿ ಅದಕ್ಕೆ "ಪಂಚಾಯತ್ ರಾಜ್ ಸಮಿತಿ" ಎಂದು ಕರೆಯಲಾಯಿತು. ಈ ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಇದರಲ್ಲಿ ಮುಖ್ಯವಾದುವೆಂದರೆ: ೧) ಜಿಲ್ಲಾ ಅಭಿವೃದ್ಧಿ

ಸಲಹಾಸಮಿತಿಗಳ ಬದಲು ಜಿಲ್ಲಾ ಪರಿಷತ್ತುಗಳ ಸ್ಥಾಪನೆ, ೨) ಜಿಲ್ಲಾ ಪರಿಷತ್ತುಗಳಿಗೆ ನೇರ ಚುನಾವಣೆ, ೩) ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ, ೪) ಸಂಸತ್ ಮತ್ತು ರಾಜ್ಯ ಶಾಸಕಾಂಗ ಸದಸ್ಯರುಗಳಿಗೆ ಮತದಾನದ ಹಕ್ಕಿಲ್ಲದ ಸಹ ಸದಸ್ಯತ್ವ, ೫) ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು, ೬) ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಮುಂದುವರಿಯತಕ್ಕದ್ದು, ೭) ಗ್ರಾಮಸಭೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು, ೮) ನ್ಯಾಯ ಪಂಚಾಯಿತಿಗಳನ್ನು ಸ್ಥಾಪಿಸುವುದು ಮತ್ತು ೯) ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು.

ಸಮಿತಿಯ ವರದಿಯನ್ನು ಅವಲಂಬಿಸಿ ಮೈಸೂರು ಪಂಚಾಯತ್‌ರಾಜ್ ಕರಡು ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸಲಾಯಿತು. ಕಾರಣಾಂತರದಿಂದ ಮಸೂದೆ ಅಂಗೀಕಾರವಾಗಲಿಲ್ಲ. ಆದರೂ ಈ ಸಮಿತಿಯ ಮೂಲಭೂತ ಶಿಫಾರಸ್ಸುಗಳನ್ನು ಕಾರ್ಯರೂಪ ಗೊಳಿಸಲಾಯಿತು. ೧೯೭೭ರ ತುರ್ತು ಪರಿಸ್ಥಿತಿಯ ನಂತರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾಪಕ್ಷ ಪಂಚಾಯತ್ ರಾಜ್ ಸಂಸ್ಥೆಗಳ ಸುಧಾರಣೆಗಳ ಬಗ್ಗೆ ಸಲಹೆ ಮಾಡಲು ಶ್ರೀ ಅಶೋಕ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿಯು ಕ್ರಾಂತಿಕಾರಿ ಶಿಫಾರಸ್ಸುಗಳುಳ್ಳ ವರದಿಯನ್ನು ೧೯೭೮ರಲ್ಲಿ ಸಲ್ಲಿಸಿತು. ವರದಿಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಮಂಡಲ ಪಂಚಾಯಿತಿ ಎಂಬ ಎರಡು ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಸೌಲಭ್ಯವಿರಬೇಕೆಂದು ಅಭಿಪ್ರಾಯಪಟ್ಟಿತು.

ಕರ್ನಾಟಕದಲ್ಲಿ ಜನತಾ ಪಕ್ಷದ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಿತು. ಅಧಿಕಾರ ವಿಕೇಂದ್ರೀಕರಣಕ್ಕೆ ಅಪಾರ ಆಸ್ಥೆಯನ್ನು ಹೊಂದಿದ್ದ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾವಣೆಗೆ ಮುಂದಾಯಿತು. ಶ್ರೀ ಕೊಂಡಜ್ಜಿ ಬಸಪ್ಪ ಸಮಿತಿ ಶಿಫಾರಸ್ಸು ಆಧರಿಸಿದ ಮಸೂದೆ ಹಾಗೂ ಶ್ರೀ ಅಶೋಕ ಮೆಹತಾ ಸಮಿತಿಯ ವರದಿ ಕರ್ನಾಟಕದಲ್ಲಿ ನೂತನ ಪಂಚಾಯತ್ ರಾಜ್ ವ್ಯವಸ್ಥೆಗೆ ಪ್ರೇರಣೆ ಹಾಗೂ ಸ್ಫೂರ್ತಿ ನೀಡಿತು.

ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ವಿಕೇಂದ್ರೀಕರಣದಲ್ಲಿ ಅಚಲವಾದ ನಂಬಿಕೆ ಇಟ್ಟಿದ್ದರು. ಅವರ ಪರಿಶ್ರಮದ ಫಲವೇ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೯೮೩ರ ಪ್ರಕಾರ ಜಾರಿಗೆ ಬಂದಿತು. ಈ ಶಾಸನಕ್ಕೆ ಜುಲೈ ೧೦, ೧೯೮೫ರಂದು ರಾಷ್ಟ್ರಪತಿಗಳ ಅನುಮೋದನೆ (ಅಂಕಿತ) ದೊರೆಯಿತು. ದಿ: ೧-೪-೧೯೮೭ ರಿಂದ ಪಂಚಾಯತ್

ರಾಜ್ ಸಂಸ್ಥೆಗಳು ಕಾರ್ಯಾರಂಭ ಮಾಡಿದವು. ಈ ಕಾಯ್ದೆಯಡಿಯಲ್ಲಿ ಸ್ಥಾಪಿತವಾದ ಸಂಸ್ಥೆಗಳ ಸ್ವರೂಪವನ್ನು ಈ ಕೆಳಗೆ ಕೊಡಲಾಗಿದೆ.

೧. **ಗ್ರಾಮಸಭೆ**: ಗ್ರಾಮಸಭೆ ಈ ವ್ಯವಸ್ಥೆಯ ಮೂಲ ಹಂತ. ಯಾವುದೇ ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತನ್ನ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಚುನಾಯಿತನಾಗಲು ಅರ್ಹನಾಗಿರುತ್ತಾನೆ. ರಾಜ್ಯದಲ್ಲಿದ್ದ ೨೭,೦೨೪ ಗ್ರಾಮಗಳಿಗೆ ಪ್ರತಿ ಗ್ರಾಮಕ್ಕೊಂದು ಗ್ರಾಮಸಭೆಯಿದ್ದು, ಇವು ವರ್ಷದಲ್ಲಿ ಎರಡು ಸಲ ಸಭೆ ಸೇರುತ್ತವೆ. ಗ್ರಾಮಸಭೆ ಅಭಿವೃದ್ಧಿ ಕಾರ್ಯಕ್ರಮ, ಸಮಸ್ಯೆಗಳ ಪರಿಶೀಲನೆ ಮತ್ತು ಚರ್ಚೆ ಮಾಡುವುದು. ಫಲಾನುಭವಿಗಳ ಆಯ್ಕೆ, ಕನಿಷ್ಠ ಅವಶ್ಯಕತೆಗಳೂ ಸೇರಿದಂತೆ ಸ್ಥಳೀಯ ಅಭಿವೃದ್ಧಿಗೆ ಯೋಜನೆ ತಯಾರಿಕೆ ಮುಂತಾದವು ಗ್ರಾಮಸಭೆಯ ಪ್ರಕಾರ್ಯಗಳಾಗಿದ್ದವು.

**೨.ಮಂಡಲ ಪಂಚಾಯಿತಿ**: ೮,೦೦೦ ರಿಂದ ೧೨,೦೦೦ ಜನಸಂಖ್ಯೆಗೆ ಒಂದು ಮಂಡಲ ಪಂಚಾಯಿತಿ ಇರುತ್ತದೆ, ೪೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯ, ಚುನಾಯಿತ ಸದಸ್ಯರಿಂದ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ಹಾಗೂ ಹಿಂದುಳಿದ ವರ್ಗಗಳಿಂದ ಯಾರೂ ಚುನಾಯಿತರಾಗದ ಪಕ್ಷದಲ್ಲಿ ಈ ವರ್ಗಗಳಿಂದ ಇಬ್ಬರು ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕಿತ್ತು.

೩. **ತಾಲ್ಲೂಕು ಪಂಚಾಯತ್ ಸಮಿತಿ**: ತಾಲ್ಲೂಕು ಪಂಚಾಯಿತಿ ಸಮಿತಿಗೆ ನೇರವಾದ ಚುನಾಯಿತ ಸದಸ್ಯರಿರುವುದಿಲ್ಲ. ತಾಲೂಕನ್ನು ರಾಜ್ಯ ವಿಧಾನಸಭೆಯಲ್ಲಿ ಪ್ರತಿ ನಿಧಿಸುವ ಶಾಸಕರು ಇದರ ಅಧ್ಯಕ್ಷರು. ತಾಲ್ಲೂಕಿನ ಎಲ್ಲಾ ಮಂಡಲ ಪಂಚಾಯಿತಿಗಳ ಪ್ರಧಾನರು ಮತ್ತು ಜಿಲ್ಲಾ ಪರಿಷತ್ತಿಗೆ ತಾಲ್ಲೂಕಿನಿಂದ ಚುನಾಯಿತರಾದ ಸದಸ್ಯರುಗಳು ಇದರ ಸದಸ್ಯರಾಗಿರುತ್ತಿದ್ದರು. ಇವರ ಪ್ರಮುಖ ಕರ್ತವ್ಯವೆಂದರೆ– ಮಂಡಲ ಪಂಚಾಯಿತಿಗಳ ಕಾರ್ಯಗಳ ಸಂಯೋಜನೆ ಹಾಗೂ ಮಂಡಲ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವುದು.

೪. **ಜಿಲ್ಲಾ ಪರಿಷತ್ತು**: ೨೮,೦೦೦ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯರಿದ್ದು, ಜಿಲ್ಲೆಯಿಂದ ಸಂಸತ್ ಹಾಗೂ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಚುನಾಯಿತರಾದ ಶಾಸಕರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯರು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಧ್ಯಕ್ಷರಿಗೆ ರಾಜ್ಯ ಸರ್ಕಾರದ ರಾಜ್ಯ ಮಂತ್ರಿಗಳ ಸ್ಥಾನ ಹಾಗೂ ಉಪಾಧ್ಯಕ್ಷರಿಗೆ ಉಪಸಚಿವರ ಸ್ಥಾನ ಮಾನ ದೊರಕುತ್ತದೆ.

೫. **ರಾಜ್ಯ ಅಭಿವೃದ್ಧಿ ಪರಿಷತ್ತು**: ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಜ್ಯಮಟ್ಟದ ಸಂಸ್ಥೆಯಾಗಿ ರಾಜ್ಯ ಅಭಿವೃದ್ಧಿ ಪರಿಷತ್ತು

ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು, ರಾಜ್ಯಮಂತ್ರಿ ಮಂಡಲದ ಆರು ಜನ ಸಚಿವರು ಇದರ ಸದಸ್ಯರಾಗಿರುತ್ತಾರೆ. ಅಭಿವೃದ್ಧಿ ಆಯುಕ್ತರು ಈ ಪರಿಷತ್ತಿನ ಸದಸ್ಯ– ಕಾರ್ಯದರ್ಶಿಗಳಾಗಿರುತ್ತಾರೆ. ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪಂಚಾಯತ್ ರಾಜ್ ಕಾರ್ಯಕಲಾಪಗಳ ಬಗ್ಗೆ ಪರಿಶೀಲಿಸಿ, ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಇದರ ಪ್ರಮುಖ ಕರ್ತವ್ಯವಾಗಿದೆ.

೬. **ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ**: ಜಿಲ್ಲಾ ಪರಿಷತ್ತಿನಲ್ಲಿ ಶೇಕಡ ೨೫ರಷ್ಟು ಸ್ಥಾನಗಳನ್ನು ಮಹಿಳೆಯರಿಗೂ, ಶೇ. ೧೫ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಶೇ.೩ರಷ್ಟು ಸ್ಥಾನಗಳನ್ನು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿರಿಸಲಾಗಿತ್ತು. ಜನವರಿ ೧೯೮೭ರಲ್ಲಿ ೨,೪೭೯ ಮಂಡಲ ಪಂಚಾಯಿತಿಗಳಿಗೆ ಮತ್ತು ೨೦ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳು ನಡೆದವು. ಜಿಲ್ಲಾ ಪಂಚಾಯಿತಿಗಳು ಬಹುತೇಕ ಆರ್ಥಿಕ ಸಂಪನ್ಮೂಲಗಳನ್ನು ರಾಜ್ಯ ಸರ್ಕಾರದ ಸಂಚಿತ ನಿಧಿಯಿಂದ ಪಡೆಯುತ್ತಿದ್ದವು. ಇದಲ್ಲದೆ ಸರ್ಕಾರ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅನುದಾನ ಮತ್ತು ಸಾಲವನ್ನು ನೀಡುವ ಸೌಲಭ್ಯವಿತ್ತು. ಮಂಡಲ ಪಂಚಾಯಿತಿಗಳಿಗೆ ಕೆಲವು ತೆರಿಗೆ ಮತ್ತು ಶುಲ್ಕಗಳನ್ನು ವಿಧಿಸುವ, ವಸೂಲಿ ಮಾಡುವ ಮತ್ತು ವಿನಿಯೋಗಿಸುವ ಅಧಿಕಾರವಿತ್ತು. ಸಂವಿಧಾನದ ಹನ್ನೊಂದನೆಯ ಅನುಸೂಚಿಯು ತಿಳಿಸುವಂತೆ ಪಂಚಾಯಿತಿಗಳು ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಾರ್ವಜನಿಕ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ, ಸಾರ್ವಜನಿಕ ವಿತರಣೆ, ನೀರಾವರಿ ಮತ್ತು ಅಂತರ್ಜಲ ಸಂಪನ್ಮೂಲಗಳು, ರಸ್ತೆಗಳು, ಕಟ್ಟಡಗಳು, ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳು, ಇತ್ಯಾದಿ. ಗ್ರಾಮೀಣ ಅಭಿವೃದ್ಧಿಗಳಿಗೆ ಸಂಬಂಧಿಸಿದ ಬಹುಮುಖ್ಯವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವು.

**ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (೧೯೯೩)**: ಸ್ಥಳೀಯ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಿ, ಅವುಗಳ ಕಾರ್ಯ ವಿಧಾನವನ್ನು ಉತ್ತಮಗೊಳಿಸುವ ಉದ್ದೇಶದಿಂದ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ಪಂಚಾಯತ್ ರಾಜ್ ಕಾನೂನನ್ನು ಸರ್ಕಾರ ೧೯೯೩ ಮೇ ೧೦ ರಂದು ಜಾರಿಗೆ ತಂದಿತು. ಇವುಗಳನ್ನು ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿ ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ದೇಶದಲ್ಲಿಯೇ ಪ್ರಥಮ ಪಂಚಾಯತ್ ರಾಜ್ ಕಾಯ್ದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ,

ಹಿಂದುಳಿದ ವರ್ಗಗಳಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿತ್ತು.

**ಗ್ರಾಮ ಪಂಚಾಯಿತಿಯ ರಚನೆ**

ಸಾಮಾನ್ಯವಾಗಿ ೫,೦೦೦ ಕ್ಕಿಂತ ಕಡಿಮೆ ಇಲ್ಲದ ಮತ್ತು ೭,೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣಿಸಲಾಗುತ್ತದೆ. ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಹಾಸನ, ಕೊಡಗು, ಶಿವಮೊಗ್ಗ, ಉಡುಪಿ, ಚಾಮರಾಜನಗರ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ ಕ್ಕಿಂತ ಕಡಿಮೆಯಿಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಗಣನೆಗೆ ಪರಿಗಣಿಸದೆ, ಅವಶ್ಯಕ ಎಂದು ಕಂಡುಬರುವಲೆಲ್ಲಾ ಸರ್ಕಾರವು ವಿಶೇಷ ಪ್ರಕರಣವೆಂದು ಬೆಳಗಾವಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಹಾಸನ, ಕೊಡುಗು, ಶಿವಮೊಗ್ಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ(ಹತ್ತು ಕಿ.ಮೀ ವ್ಯಾಸದ) ಒಳಗಿರುವ ಪ್ರದೇಶವನ್ನು ಸರ್ಕಾರವು ಗ್ರಾಮಪಂಚಾಯಿತಿ ಎಂದು ನಿರ್ಧರಿಸಬಹುದಾಗಿದೆ. ಪ್ರತಿ ೪೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ  ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಲಾಗುವುದು. ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಸದಸ್ಯರುಗಳ ಮೀಸಲಾತಿ ವಿವರಗಳನ್ನು ಮುಂದೆ ನೀಡಲಾಗಿದೆ.

## ಜಿಲ್ಲೆಯಲ್ಲಿ ೨೦೧೫ ರಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರ ಮೀಸಲಾತಿ ವಿವರ.

| ಕ್ರ. ಸಂ. | ತಾಲ್ಲೂಕಿನ ಹೆಸರು | ಒಟ್ಟು ಗ್ರಾಮ ಪಂಚಾಯಿತಿ ಗಳ ಸಂಖ್ಯೆ | ಒಟ್ಟು ಸ್ಥಾನಗಳ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ | ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಗೆ ವರ್ಗವಾರು ಸಂಖ್ಯೆಯ ವಿವರ | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | | | | ಅನುಸೂಚಿತ ಜಾತಿ | | | ಅನುಸೂಚಿತ ಪಂಗಡ | | | ಹಿಂದುಳಿದ ಅ ವರ್ಗ | | | ಹಿಂದುಳಿದ ಬ ವರ್ಗ | | | ಸಾಮಾನ್ಯ | | |
| | | | | | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು | ಸಾ | ಮ | ಒಟ್ಟು |
| ೧ | ದಾವಣಗೆರೆ | ೩೬ | ೫೪೯ | ೫೪೯ | ೬೦ | ೮೦ | ೧೪೦ | ೩೧ | ೫೩ | ೮೪ | ೧೪ | ೩೩ | ೪೭ | ೭ | ೨ | ೯ | ೧೫೪ | ೧೧೫ | ೨೬೯ |
| ೨ | ಹರಿಹರ | ೨೫ | ೩೯೭ | ೩೭೯ | ೨೫ | ೩೨ | ೫೭ | ೧೩ | ೩೧ | ೪೪ | ೨೫ | ೪೧ | ೬೬ | ೯ | ೮ | ೧೭ | ೧೧೦ | ೮೫ | ೧೯೫ |
| ೩ | ಹೊನ್ನಾಳಿ | ೪೫ | ೫೩೨ | ೫೩೨ | ೫೧ | ೭೫ | ೧೨೬ | ೭ | ೪೮ | ೫೫ | ೨೭ | ೪೪ | ೭೧ | ೭ | ೩ | ೧೦ | ೧೬೪ | ೧೦೬ | ೨೭೦ |
| ೪ | ಚನ್ನಗಿರಿ | ೬೧ | ೭೩೫ | ೭೩೫ | ೮೨ | ೧೧೧ | ೧೯೩ | ೩೨ | ೭೬ | ೧೦೮ | ೨೪ | ೪೯ | ೭೩ | ೧೦ | ೩ | ೧೩ | ೨೦೬ | ೧೪೨ | ೩೪೮ |
| **೫** | **ಹರಪ್ಪನಹಳ್ಳಿ** | **೩೫** | **೬೦೮** | **೬೦೪** | ೭೧ | ೮೮ | **೧೫೯** | **೪೫** | **೬೦** | **೧೦೫** | ೧೦ | **೩೦** | **೪೦** | **೮** | ೨ | ೧೦ | **೧೬೧** | **೧೨೯** | **೨೯೦** |
| ೬ | ಜಗಳೂರು | ೨೨ | ೩೯೭ | ೩೯೭ | ೪೭ | ೫೯ | ೧೦೬ | ೪೭ | ೫೭ | ೧೦೪ | ೩ | ೫ | ೮ | ೦ | ೦ | ೦ | ೯೭ | ೮೨ | ೧೭೯ |
| | **ಒಟ್ಟು** | **೨೨೪** | **೩೨೧೮** | **೩೧೯೬** | **೩೩೬** | **೪೪೫** | **೭೮೧** | **೧೭೫** | **೩೨೫** | **೫೦೦** | **೧೦೩** | **೨೦೨** | **೩೦೫** | **೪೧** | **೧೮** | **೫೯** | **೮೯೨** | **೬೫೯** | **೧೫೫೧** |

**ಆಧಾರ: ರಾಜ್ಯ ಚುನಾವಣಾ ಆಯೋಗ, ಬೆಂಗಳೂರು**

ಮಂಡಲ ಪಂಚಾಯಿತಿಗಳ ಆಡಳಿತ ವಿಧಾನಗಳಲ್ಲಿದ್ದ ಲೋಪದೋಷಗಳನ್ನು ಗುರುತಿಸಿ, ಅವುಗಳ ಕಾರ್ಯವ್ಯಾಪ್ತಿ ಮೊಟಕುಗೊಳಿಸಿ, ಗ್ರಾಮ ಪಂಚಾಯಿತಿಗಳನ್ನು ಪುನಃ ಅಸ್ತಿತ್ವಗೊಳಿಸಲಾಯಿತು. ಗ್ರಾಮದ ಸಾರ್ವಜನಿಕ ವೇದಿಕೆಯಾಗಿದ್ದ ಗ್ರಾಮಸಭೆಯನ್ನು ಸದೃಢಗೊಳಿಸಲಾಯಿತು. ಕಾನೂನಿನ ತಿದ್ದುಪಡಿ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಲಾಯಿತು. ಪ್ರತಿ ಗ್ರಾಮ ಪಂಚಾಯಿತಿಗೆ ಪ್ರಾರಂಭದಲ್ಲಿ ರೂ. ಒಂದು ಲಕ್ಷಗಳ ವಾರ್ಷಿಕ ಅನುದಾನ ಒದಗಿಸಲಾಗಿತ್ತು. ಈ ಹಣವು ನೀರು ಪೂರೈಕೆ ಮತ್ತು ದೀಪ ವ್ಯವಸ್ಥೆಗೆ ಮಾತ್ರ ಬಳಕೆಯಾಗಬೇಕಾಗಿತ್ತು. ಪ್ರಸ್ತುತ ಈ ವಾರ್ಷಿಕ ಅನುದಾನವನ್ನು ಐದು ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

**ಶಾಸನಬದ್ಧ ಅನುದಾನ**: ಸರ್ಕಾರವು ಗ್ರಾಮ ಪಂಚಾಯಿತಿಗಳು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗುವಂತೆ ಹೆಚ್ಚು ಮುಕ್ತ ಅನುದಾನ ನೀಡಲು ಕ್ರಮಕೈಗೊಂಡಿದೆ. ೧೯೯೩ರಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿದ್ದ ಶಾಸನಬದ್ಧ ಅನುದಾನ ಕೇವಲ ರೂ. ಒಂದು ಲಕ್ಷ ಮಾತ್ರ ಆಗಿತ್ತು. ಇದನ್ನು ರೂ. ೩.೫ ಲಕ್ಷಗಳಿಗೆ ಹೆಚ್ಚಿಸಲಾಯಿತು. ೨೦೦೩ರಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಶಾಸನಬದ್ಧ ಅನುದಾನವನ್ನು ರೂ. ಐದು ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ನೇರ ಬಿಡುಗಡೆ ಮಾಡುವ ವಿಧಾನವನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನ್ನು ನವೆಂಬರ್ ೨೦೦೩ ರಿಂದ ಜಾರಿಗೆ ತರಲಾಗಿದೆ.

ನೀರು ಪೂರೈಕೆ ಮತ್ತು ಬೀದಿ ದೀಪಗಳಿಗೆ ಬಳಸಿದ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡುವಲ್ಲಿ ಗ್ರಾಮ ಪಂಚಾಯಿತಿಗಳು ಎಸ್ಕಾಂಗಳಿಗೆ ನಿಯಮಿತವಾಗಿ ತುಂಬಲು ವಿವರವಾದ ಕೈಪಿಡಿಯನ್ನು ಸರ್ಕಾರವು ೨೦೦೪ ರಿಂದ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಕೈಗೊಂಡ ಕಾಮಗಾರಿಗಳು, ಬರ ಪರಿಹಾರ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳ್ಳಬೇಕು. ಅವುಗಳ ಗುಣಮಟ್ಟದಲ್ಲಿ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಗಳು ಪ್ರಮಾಣೀಕರಿಸದ ಹೊರತು ಅಂತಹ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡತಕ್ಕದ್ದಲ್ಲ ಎಂಬ ಸೂಚನೆಗಳನ್ನು ಸರ್ಕಾರ ಹೊರಡಿಸಿದೆ.

ಗ್ರಾಮ ಪಂಚಾಯಿತಿ ಸದಸ್ಯರ ತರಬೇತಿಗಾಗಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ನೋಡಲ್ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಇಲ್ಲಿ ಸ್ಥಾಪಿಸಿರುವ ಉಪಗ್ರಹ ಕೇಂದ್ರದ ಮೂಲಕ ಪ್ರಸಾರ ಮಾಡಲು

ರಾಜ್ಯಾದ್ಯಂತ ಎಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ ಒಂದು ಕಡೆ ದೃಶ್ಯ, ಎರಡು ಕಡೆ ವಾಕ್ ಶ್ರವಣ ಮೂಲಕ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಚಲನಚಿತ್ರಗಳು, ಸ್ಥಳೀಯ ಅಂತರ ಸಂವಾದ ಮತ್ತು ಸಮುದಾಯ ಸಂಘಟನೆಯಂತಹ ವಿಷಯಗಳನ್ನು ಅಳವಡಿಸಲಾಗಿದೆ. ಪಂಚಾಯತ್ ರಾಜ್ ಇತಿಹಾಸ ಮತ್ತು ರಚನೆ, ಗ್ರಾಮಸಭೆ, ಗ್ರಾಮಪಂಚಾಯಿತಿ ನಿಯಮಗಳು ಮತ್ತು ಪಂಚಾಯತ್ ಆಯವ್ಯಯ, ಲೆಕ್ಕಪತ್ರ ಮತ್ತು ಜಮಾಬಂದಿ, ಶಿಕ್ಷಣ, ಆರೋಗ್ಯ, ಪೌಷ್ಠಿಕತೆ, ಶಿಶುಸಂರಕ್ಷಣೆ, ನೀರು ನೈರ್ಮಲ್ಯ ಕುರಿತು ವಲಯವಾರು ವಿಚಾರಗಳು ಮತ್ತು ಸಾಮಾನ್ಯ ಆಸ್ತಿಪಾಸ್ತಿಗಳು, ಒಟ್ಟಾರೆ ಅಭಿವೃದ್ಧಿ ಮತ್ತು ಸ್ಥಳೀಯ ಯೋಜನೆ ರೂಪಿಸುವಿಕೆಯಲ್ಲಿ ಗ್ರಾಮ ಪಂಚಾಯಿತಿ ಪಾತ್ರ, ಮಾಹಿತಿ ಹಕ್ಕು ಮತ್ತು ಸ್ಥಳೀಯ ಕಂದಾಯ ಸಂಗ್ರಹಣೆ ಸೇರಿದಂತೆ ಸಾಮಾನ್ಯ ವಿಷಯಗಳನ್ನು ಅಳವಡಿಸಲಾಗಿದೆ. ಅಲ್ಲದೆ ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

## ಗ್ರಾಮ ಪಂಚಾಯಿತಿಗಳ ಕಂಪ್ಯೂಟರೀಕರಣ

ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಕಂಪ್ಯೂಟರೀಕರಿಸುವ ಪ್ರಮುಖ ಸಾಹಸ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಜಮೀನುಗಳ ಸರ್ವೇ ನಂ, ಅವುಗಳ ವಿವರಗಳು, ಸರ್ವಕುಟುಂಬ ಸಮೀಕ್ಷೆ ಮತ್ತು ಆಸ್ತಿ ತೆರಿಗೆ ಇತ್ಯಾದಿ ಅಗತ್ಯವಾದ ತಂತ್ರಾಂಶಗಳನ್ನು ಈಗಾಗಲೇ ಅಭಿವೃದ್ಧಿಪಡಿಸಿದೆ. ತಂತ್ರಾಂಶ ಕುರಿತಂತೆ ತರಬೇತಿದಾರರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಸಿಬ್ಬಂದಿಗೆ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಲಯಗಳ ಯೋಜನೆ ಜನವಸತಿಗಳ ೨೦ ವಲಯಗಳ ಸುಮಾರು ೩೭೫ ಅಂಶಗಳಲ್ಲಿ ಮಾಹಿತಿಯನ್ನು "ಸಾಮಾನ್ಯಮಾಹಿತಿ" ಎಂಬ ಶೀರ್ಷಿಕೆಯಡಿ ಸಂಗ್ರಹಿಸಿ ಅಂತರ್ಜಾಲ ತಾಣ (ವೆಬ್‌ಸೈಟ್)ದಲ್ಲಿ ಅಳವಡಿಸಲಾಗಿದೆ. ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾಪಂಚಾಯಿತಿ ಅಧ್ಯಕ್ಷರ ಕಛೇರಿ, ವಿಧಾನಸೌಧ, ಶಾಸಕರಭವನ, ಬಹುಮಹಡಿ ಕಟ್ಟಡ, ಎಲ್ಲಾ ಸಚಿವಾಲಯ ಹಾಗೂ ಇಲಾಖಾ ಕಾರ್ಯದರ್ಶಿಗಳ ಕೊಠಡಿಗಳಲ್ಲಿ ಈ ಮಾಹಿತಿಯುಳ್ಳ 'ಕಿಯೋಸ್ಕ್‌ಗಳನ್ನು' ಸಾರ್ವಜನಿಕರ ಮಾಹಿತಿಗಾಗಿ ಇಡಲಾಗಿದೆ. ಈ ಮಾಹಿತಿಯನ್ನು ಪ್ರತಿ ವರ್ಷವೂ ಪರಿಷ್ಕರಿಸುವುದರಿಂದ ತಾಜಾ ಮಾಹಿತಿ ಲಭ್ಯವಾಗಿ ಪಂಚಾಯಿತಿಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

**ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿ ರಚನೆ**: ಗ್ರಾಮ ಪಂಚಾಯಿತಿಯು ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

**೧) ಉತ್ಪಾದನಾ ಸಮಿತಿ**

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ ಇರುತ್ತದೆ.

**೨) ಸಾಮಾಜಿಕ ನ್ಯಾಯ ಸಮಿತಿ**

(ಎ) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತದೃಷ್ಟಿಗಳಿಗೆ ಉತ್ತೇಜನ ನೀಡುವುದಕ್ಕೆ.

(ಬಿ) ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಶೋಷಣೆಗಳಿಂದ ಅಂತಹ ಜಾತಿಗಳಿಗೆ ಮತ್ತು ವರ್ಗಗಳಿಗೆ ರಕ್ಷಣೆ ಕೊಡುವುದಕ್ಕೆ.

(ಸಿ) ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ ಕಾರ್ಯನಿರ್ವಹಿಸುತ್ತದೆ.

**೩) ಸೌಕರ್ಯಗಳ ಸಮಿತಿ**

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯಗಳ ಸಮಿತಿಯಿದೆ.

ಗ್ರಾಮ ಪಂಚಾಯಿತಿಯ ಆಡಳಿತ ವಿಭಾಗವು ಅನೇಕ ಖಾಸಗಿ ಹಾಗೂ ನೇಮಕ ಸದಸ್ಯರುಗಳನ್ನು ಹೊಂದಿದ್ದು, ೧) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮೂರು ಅಥವಾ ಐದು ಜನ ಸದಸ್ಯರು ಇರುತ್ತಾರೆ. ೨) ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಯ ಪದನಿಮಿತ್ತ ಸದಸ್ಯ ಸಭಾಪತಿಯಾಗಿರುತ್ತಾರೆ. ಉಪಾಧ್ಯಕ್ಷನು ಸಾಮಾಜಿಕ ನ್ಯಾಯಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ. ೩) ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಪಕ್ಷ ಒಬ್ಬ ಮಹಿಳಾ ಸದಸ್ಯೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು.

ಪ್ರತಿಯೊಂದು ಸಮಿತಿಯು, ಗೊತ್ತುಪಡಿಸಿರುವ ರೀತಿಯಲ್ಲಿ ರೈತರ, ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವಕ ಮಂಡಳಿಗಳ ಮತ್ತು ಸರ್ಕಾರವು ಅಂಗೀಕರಿಸಿದ ಇತರ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು, ಪಂಚಾಯಿತಿ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನಾ ಸಮಿತಿಗೆ ಕೋ-ಆಪ್ಟ್ ಮಾಡಿಕೊಳ್ಳತಕ್ಕದ್ದು.

## ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಗಳು

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಗ್ರಾಮ ಪಂಚಾಯಿತಿ ಮಟ್ಟದ ನೌಕರನಾಗಿದ್ದು, ಆತನು ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ಹಾಗೂ ಯೋಜನೆಗಳನ್ನು ನಿರ್ವಹಿಸಲು ಬದ್ಧನಾಗಿರತಕ್ಕದ್ದು.

೨. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ೧೯೯೩ ರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳು/ಅಧಿಕಾರಗಳನ್ನು ನಿರ್ವಹಿಸತಕ್ಕದ್ದು.

೩. ಗ್ರಾಮ ಪಂಚಾಯತ್ ನಿಧಿಯ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಆಫೀಸ್‌ರ್ (Drawing and Disbursing Officer) ಆಗಿ ಕರ್ತವ್ಯ ನಿರ್ವಹಿಸತಕ್ಕದ್ದು.

೪. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ, ವಿಶೇಷ ಸಭೆ ನಡೆಸುವುದು ಹಾಗೂ ನಿರ್ಣಯಗಳನ್ನು ಜಾರಿಗೊಳಿಸುವುದು.

೫. ಗ್ರಾಮ ಪಂಚಾಯಿತಿಯ ಲೆಕ್ಕಗಳ ಮತ್ತು ಬಜೆಟ್ ಮಂಡನೆ ಮಾಡಲು ಸಂಪೂರ್ಣ ಜವಾಬ್ದಾರಿ ಹೊಂದಿರತಕ್ಕದ್ದು.

೬. ಗ್ರಾಮ ಪಂಚಾಯತ್‌ನ ತೆರಿಗೆ ವಸೂಲಾತಿ ಮೇಲ್ವಿಚಾರಣೆ.

೭. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಮರ್ಪಕ ಮತ್ತು ಸಕಾಲಿಕ ಅನುಷ್ಠಾನ.

೮. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮಾಸಿಕ ಪ್ರಗತಿ ವರದಿ ಸಲ್ಲಿಸುವುದು.

೯. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಮೇಲ್ವಿಚಾರಣೆ, ಎಂ.ಐ.ಎಸ್.ನಿರ್ವಹಣೆ ಹಾಗೂ ಸದರಿ ಯೋಜನೆಯಡಿ ಹೊರಡಿಸುವ ಸರ್ಕಾರದ ಎಲ್ಲಾ ನಿರ್ದೇಶನಗಳನ್ನು ಪಾಲಿಸುವುದು.

೧೦. ಪಂಚತಂತ್ರ ತಂತ್ರಾಂಶ, ಇ–ಪಂಚಾಯತ್ ಮತ್ತು ಇ–ಸ್ವತ್ತು ಮೊದಲಾದ ಕಂಪ್ಯೂಟರ್ ಆಧಾರಿತ ಕಾರ್ಯಕ್ರಮಗಳ ನಿರ್ವಹಣೆ.

೧೧. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮಾಹಿತಿ ಕ್ರೋಢೀಕರಣ ಹಾಗೂ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ

೧೨. ೨೦೦೫ ರ ಮಾಹಿತಿ ಹಕ್ಕು ಅಧಿನಿಯಮದಡಿ ಮೇಲ್ಮನವಿ ಪ್ರಾಧಿಕಾರವಾಗಿ ಕರ್ತವ್ಯ ನಿರ್ವಹಣೆ.

೧೩. ಸಕಾಲ ಸೇವೆಗಳ ನಿರ್ವಹಣೆ

೧೪. ಕಾಲಕಾಲಕ್ಕೆ ಸರ್ಕಾರದಿಂದ ವಹಿಸಬಹುದಾದ ಇತರೆ ಕಾರ್ಯಗಳು.

**ತಾಲ್ಲೂಕು ಪಂಚಾಯಿತಿಯ ರಚನೆ**

ಕರ್ನಾಟಕದಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ಈ ಕೆಳಗಿನ ಸದಸ್ಯರನ್ನು ಹೊಂದಿರುವಂತೆ ರಚಿಸಲಾಗಿದೆ.

೧. ಪ್ರತಿ ೧೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬರಂತೆ ಚುನಾಯಿತ ಸದಸ್ಯರಿರುತ್ತಾರೆ.

೨. ಯಾವ ಲೋಕಸಭಾ ಮತ್ತು ರಾಜ್ಯ ವಿಧಾನಸಭಾ ಸದಸ್ಯರ ಚುನಾವಣಾ ಕ್ಷೇತ್ರಗಳು ತಾಲ್ಲೂಕಿನ ಒಳಗೆ ಇದ್ದ ತಾಲ್ಲೂಕನ್ನು ಪೂರ್ತಿ ಅಥವಾ ಭಾಗಶಃ ಪ್ರತಿನಿಧಿಸುತ್ತಾರೋ ಆ ಸದಸ್ಯರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ.

೩. ತಾಲ್ಲೂಕಿನಲ್ಲಿ ಮತದಾರರಾಗಿ ನೋಂದಾಯಿತವಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು ಸದಸ್ಯರಾಗಿರುತ್ತಾರೆ.

೪. ತಾಲ್ಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಲ್ಲಿ ೫/೧ ಭಾಗದಷ್ಟು ಅಧ್ಯಕ್ಷರು ಚೀಟಿ ಎತ್ತುವ ಮೂಲಕ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಒಂದು ವರ್ಷ ಅವಧಿಗೆ ಆಯ್ಕೆ ಮಾಡುತ್ತಾರೆ. ಅಲ್ಲದೆ ಒಮ್ಮೆ ತಾಲ್ಲೂಕು ಪಂಚಾಯಿತಿಗೆ ಅಧ್ಯಕ್ಷರಾದವರು ಎರಡನೇ ಅವಧಿಗೆ ಅಧ್ಯಕ್ಷರಾಗಲು ಅರ್ಹರಿರುವುದಿಲ್ಲ.

ತಾಲ್ಲೂಕಿನಲ್ಲಿ ೨೦೧೬ ರಲ್ಲಿ ನಡೆದ ದಾವಣಗೆರೆ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಆಯ್ಕೆಯಾದ ಒಟ್ಟು ಸದಸ್ಯರ ಮೀಸಲಾತಿ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಜಿಲ್ಲೆಯಲ್ಲಿ ೨೦೧೬ರಲ್ಲಿ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ತಾಲ್ಲೂಕು ಪಂಚಾಯ್ತಿ ಸದಸ್ಯರ ವಿವರ**

| ಕ್ರ. ಸಂ. | ತಾಲ್ಲೂಕು ಪಂಚಾಯಿತಿಗಳು | ಒಟ್ಟು ಸದಸ್ಯರ ಸಂಖ್ಯೆ | ವರ್ಗವಾರು ಮೀಸಲಿರಿಸಿದ ಸ್ಥಾನಗಳು | | | | |
|---|---|---|---|---|---|---|---|
| | | | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ ವರ್ಗ (ಅ) | ಹಿಂದುಳಿದ ವರ್ಗ (ಬ) | ಸಾಮಾನ್ಯ |
| ೧ | ದಾವಣಗೆರೆ | ೨೫(೧೩) | ೬(೩) | ೪(೨) | ೨(೧) | ೦(೦) | ೧೩(೭) |
| ೨ | ಹರಿಹರ | ೧೫(೧೮) | ೨(೧) | ೨(೧) | ೨(೨) | ೧(೦) | ೮(೪) |
| ೩ | ಹೊನ್ನಾಳಿ | ೨೨(೧೧) | ೫(೩) | ೨(೧) | ೩(೨) | ೧(೦) | ೧೧(೫) |

| | | | | | | | |
|---|---|---|---|---|---|---|---|
| ೪ | ಚನ್ನಗಿರಿ | ೨೯(೧೫) | ೮(೪) | ೪(೨) | ೨(೧) | ೦(೦) | ೧೫(೮) |
| **೫** | **ಹರಪ್ಪನಹಳ್ಳಿ** | **೨೬(೧೩)** | **೭(೪)** | **೪(೨)** | **೨(೧)** | **೦(೦)** | **೧೩(೬)** |
| ೬ | ಜಗಳೂರು | ೧೬(೮) | ೪(೨) | ೪(೨) | ೦(೦) | ೦(೦) | ೮(೪) |

**ಆಧಾರ: ರಾಜ್ಯ ಚುನಾವಣಾ ಆಯೋಗ.**

### ಜಿಲ್ಲಾ ಪಂಚಾಯಿತಿ ರಚನೆ

ಪ್ರತಿ ಜಿಲ್ಲೆಗೊಂದು ಜಿಲ್ಲಾ ಪಂಚಾಯಿತಿ ಇದ್ದು, ಪ್ರತಿ ೪೦,೦೦೦ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ೩೦,೦೦೦ ಜನಸಂಖ್ಯೆಗೆ ಒಬ್ಬರಂತೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ೧೮,೦೦೦ ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬರಂತೆ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಹಾಗೂ ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ಸದಸ್ಯರು ಹಾಗೂ ಜಿಲ್ಲೆಯ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರುಗಳು ಇರುತ್ತಾರೆ. ಹೊಸದುರ್ಗ ತಾಲ್ಲೂಕಿನಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು ಆರು ಮಂದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಗೊಂಡಿರುತ್ತಾರೆ.

### ಜಿಲ್ಲಾ ಯೋಜನಾ ಸಮಿತಿ

ರಾಜ್ಯಾಂಗದ ೭೪ನೇ ತಿದ್ದುಪಡಿಯ ಕಲಂ ೨೪೩ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳು ಹಾಗೂ ಪಟ್ಟಣ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಯೋಜನೆಗಳನ್ನು ಈ ಸಮಿತಿಯು ಸಮಗ್ರೀಕರಿಸಿ ಪಂಚಾಯಿತಿ ಮತ್ತು ಪುರಸಭೆಗಳ ನಡುವೆ ಪ್ರಾದೇಶಿಕ ಯೋಜನೆ ರೂಪಿಸುವುದು, ನೀರು ಹಂಚಿಕೆ ಮತ್ತು ಇತರೆ ಪ್ರಾಕೃತಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನೂ ಸೇರಿ ಸಾಮಾನ್ಯ ಆಸಕ್ತಿಯ ವಿಚಾರಗಳಿಗೆ ಸಂಬಂಧಪಟ್ಟಂತೆ ಇಡಿಯಾಗಿ ಪರಿಗಣಿಸಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುತ್ತದೆ. ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ, ಹಣಕಾಸು ಮತ್ತು ಇತರ ಸಂಪನ್ಮೂಲಗಳ ಲಭ್ಯತೆಯ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಯೋಜನಾ ಸಮಿತಿ ಕಾರ್ಯತಂತ್ರವನ್ನು ರೂಪಿಸುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳು ಮಾರ್ಗದರ್ಶನವನ್ನು ಮಾಡುತ್ತವೆ. ಸ್ಥಳೀಯ ಸಂಸ್ಥೆಗಳು ತಯಾರಿಸುವ ಪಂಚವಾರ್ಷಿಕ ಯೋಜನೆಗಳನ್ನು ಚರ್ಚಿಸಿ, ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸುವ ಕಾರ್ಯಗಳ ಅನುಷ್ಠಾನದ ಮೌಲ್ಯಮಾಪನ ಅಧ್ಯಯನಗಳನ್ನು

ಕೈಗೊಳ್ಳುವ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ಹಾಗೂ ಇತರೆ ವಿಷಯಗಳಲ್ಲಿ ಸಮನ್ವಯ ಸಾಧಿಸುವ ವಿಶೇಷ ಅಧ್ಯಯನಗಳನ್ನು, ವಿಚಾರ ಸಂಕಿರಣಗಳನ್ನು ಹಾಗೂ ಹೊಸ ಸುಧಾರಣೆಗಳನ್ನು ತರುವ ಪ್ರಕಾರ್ಯಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ವಹಿಸಲಾಗಿದೆ.

ಪಂಚಾಯತ್ ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ರಾಜ್ಯ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ. ಈ ಸಂಸ್ಥೆಗಳಿಗೆ ಪ್ರತಿ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ" (ಸಿ.ಇ.ಓ) ಎಂದು ಕರೆಯಲಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರನ್ನು ಮೂರನೆಯ ಎರಡು (⅔) ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವುದಕ್ಕೆ ಸಹಾಯಕವಾಗುತ್ತದೆ.

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯಿತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಸಭೆಯಲ್ಲಿ ನಿರ್ಣಯಿಸಿದ ಗೊತ್ತುವಳಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕೆ ಇದೆ. ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

### ಪಂಚಾಯಿತಿಗಳಿಗೆ ಬಹುಮಾನ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ

ಸರ್ಕಾರ ೧೯೯೬ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ. ಒಂದು ಲಕ್ಷ, ರೂ. ೫೦ ಸಾವಿರ ಮತ್ತು ರೂ. ೨೫ ಸಾವಿರ), ತಾಲ್ಲೂಕು ಪಂಚಾಯಿತಿಗಳಿಗೂ ಮೂರು ಬಹುಮಾನಗಳನ್ನು (ರೂ. ಎರಡು ಲಕ್ಷ, ರೂ. ಒಂದು ಲಕ್ಷ, ಮತ್ತು ರೂ. ೫೦ ಸಾವಿರ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ ರೂ. ಐದು ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿ ಕೊಡಲಾಗಿದೆ.

ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇದ್ದ ಜಿಲ್ಲಾ ಪರಿಷತ್ತುಗಳ ಸ್ಥಾನದಲ್ಲಿ ಹೆಚ್ಚು ಬಲಿಷ್ಠ ಹಾಗೂ ವಿಶಿಷ್ಟ ಅಧಿಕಾರಗಳುಳ್ಳ ಜಿಲ್ಲಾ ಪಂಚಾಯಿತಿ ರಚಿಸಲಾಯಿತು. ಗ್ರಾಮೀಣ ಜನತೆಯ ಆಶೋತ್ತರಗಳಿಗನುಗುಣವಾಗಿ ಸರ್ಕಾರವು ಕೈಗೊಳ್ಳುವ ಬಹುತೇಕ ಅಭಿವೃದ್ಧಿ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಿಲ್ಲಾ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳ್ಳುತ್ತವೆ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯು ಆಯಾ ಜಿಲ್ಲೆಯಲ್ಲಿ ಬರುವ ಪುರಸಭೆ, ನಗರಸಭೆ, ಮಹಾನಗರಪಾಲಿಕೆ, ನೈರ್ಮಲ್ಯ ಮಂಡಳಿ, ಅಧಿಸೂಚಿತ ಪ್ರದೇಶ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಹೊರತುಪಡಿಸಿ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದೆ. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗದವರಿಗೆ ಕಾನೂನಿನನ್ವಯ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ. ಮಹಿಳೆಯರಿಗೆ ಚುನಾಯಿತ ಸದಸ್ಯ ಬಲದ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಎಲ್ಲಾ ಚುನಾಯಿತ ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

### ಹರಪನಹಳ್ಳಿ ಪುರಸಭೆ

ಪಟ್ಟಣದ ವಸತಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಖಾಲಿ ನಿವೇಶನಗಳು ಇವುಗಳಿಂದ ಕಂದಾಯವನ್ನು ಸಂಗ್ರಹಿಸುವುದಲ್ಲದೇ, ತರಕಾರಿ ಮಾರುಕಟ್ಟೆ ಬಾಡಿಗೆ, ಮಟನ್ ಸ್ಟಾಲ್ ಹರಾಜು, ವಾರದ ಸಂತೆ, ಪುಟ್‌ಪಾತ್ ಜಾಗ ಹರಾಜು, ನೀರಿನ ತೆರಿಗೆ ಮುಂತಾದವುಗಳು ಆದಾಯದ ಸಂಪನ್ಮೂಲಗಳಾಗಿವೆ. ಪುರಸಭೆಯು ಪಟ್ಟಣಗಳ ರಸ್ತೆಗಳು, ಚರಂಡಿ, ಬೀದಿ ದೀಪ, ನೈರ್ಮಲ್ಯತೆ ಮುಂತಾದ ನಾಗರಿಕ ಸೌಲಭ್ಯಗಳನ್ನು ನಿರ್ವಹಿಸುತ್ತದೆ.

ಹರಪನಹಳ್ಳಿ ಪಟ್ಟಣಕ್ಕೆ ತುಂಗ ಭದ್ರ ನದಿಯಿಂದ ನೀರಿನ ಪೂರೈಕೆ ಮಾಡುತ್ತಿದ್ದು, ನದಿಯಲ್ಲಿ ನೀರಿನ ಹರಿವು ಕಡಿಮೆ ಇದ್ದ ಸಂದರ್ಭದಲ್ಲಿ ಪಟ್ಟಣದ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಿಂದ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ೩೫ ಕೊಳವೆಬಾವಿಗಳು, ೦೩ ಪಂಪಿಂಗ್ ಸ್ಟೇಷನ್ ಹಾಗೂ ೧೦ ನೀರು ಸಂಗ್ರಾಹಕಗಳಿವೆ. ಟ್ಯಾಂಕ್‌ಗಳ ಕ್ಷಮತೆ ೫.೦೦ ಲಕ್ಷ ಲೀಟರ್‌ನ ೦೩ ಟ್ಯಾಂಕ್‌ಗಳು, ೧೦.೦೦ ಲಕ್ಷ ಲೀಟರ್‌ನ ೦೨ ಟ್ಯಾಂಕ್‌ಗಳು, ೪.೦೦

ಲಕ್ಷ ಲೀಟರ್‌ನ ೦೧ ಟ್ಯಾಂಕ್, ೦.೭೫ ಲಕ್ಷ ಲೀಟರ್‌ನ ೦೨ ಟ್ಯಾಂಕ್‌ಗಳು, ೧.೦೦ ಲಕ್ಷ ಲೀಟರ್‌ನ ೦೧ ಟ್ಯಾಂಕ್‌ಗಳಿದ್ದು, ಇವುಗಳ ಒಟ್ಟು ಸಂಗ್ರಹಣ ಕ್ಷಮತೆ ೪೧.೫ ಲಕ್ಷ ಲೀಟರ್‌ಗಳಾಗಿವೆ. ೫೦ ಸಾರ್ವಜನಿಕ ಕೊಳಾಯಿಗಳು, ೪,೪೦೩ ಗೃಹಬಳಕೆ ಹಾಗೂ ೬೨ ವಾಣಿಜ್ಯ ಸಂಪರ್ಕಗಳಿದ್ದವು. ಪಟ್ಟಣದಲ್ಲಿ ದಿನವಹಿ ತಲಾವಾರು ನೀರು ಬಳಕೆ ಪ್ರಮಾಣ ೩.೭೬ ಎಲ್.ಪಿ.ಸಿ.ಡಿ ಆಗಿದೆ. ಪುರಸಭೆಗೆ ೧೯೫೪ ರಲ್ಲಿ ವಿದ್ಯುತ್ ಸಂಪರ್ಕ ದೊರೆತಿರುತ್ತದೆ. ಪುರಸಭೆ ವ್ಯಾಪ್ತಿಯಲ್ಲಿ ೩,೮೦೦ ಟ್ಯೂಬ್‌ಲೈಟ್‌ಗಳನ್ನು, ೧,೪೨೦ ಸೋಡಿಯಂ ವೇಪರ್ ದೀಪಗಳನ್ನು, ೧೩ ಹೈಮಾಸ್ಟ ದೀಪಗಳನ್ನು ಹಾಗೂ ೨೪೦ ಎಲ್.ಇ.ಡಿ. ದೀಪಗಳನ್ನು ಅಳವಡಿಸಲಾಗಿದೆ. ಇದಕ್ಕಾಗಿ ರೂ.೮೧.೭೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹೆಚ್ಚಿನ ವಿವರಗಳಿಗೆ ಮುಂದೆ ನೀಡಿರುವ ಕೋಷ್ಟಕಗಳನ್ನು ನೋಡಿ.

### ೨೦೧೩ ರಲ್ಲಿ ನಡೆದ ಹರಪನಹಳ್ಳಿ ಪುರಸಭಾ ಚುನಾವಣೆಯಲ್ಲಿ ಆಯ್ಕೆಗೊಂಡ ಸದಸ್ಯರುಗಳ ಮೀಸಲಾತಿ ವಿವರ.

| ಸ್ಥಾನಗಳ ವಿವರ | ಪುರುಷ | ಮಹಿಳೆ | ಒಟ್ಟು |
|---|---|---|---|
| ಸಾಮಾನ್ಯ ವರ್ಗ | ೮ | ೪ | ೧೨ |
| ಹಿಂದುಳಿದ ವರ್ಗ 'ಎ' | ೫ | ೨ | ೭ |
| ಹಿಂದುಳಿದ ವರ್ಗ 'ಬ' | ೧ | ೧ | ೨ |
| ಪರಿಶಿಷ್ಟ ಜಾತಿ | ೧ | ೧ | ೨ |
| ಪರಿಶಿಷ್ಟ ಪಂಗಡ | ೩ | ೧ | ೪ |
| **ಒಟ್ಟು** | **೧೮** | **೯** | **೨೭** |

**ಆಧಾರ: ಪುರಸಭೆ, ಹರಪನಹಳ್ಳಿ .**

### ಹರಪನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ ೨೦೧೩-೧೪ ರಿಂದ ೨೦೧೭-೧೮ ರವರೆಗೆ ನೀರು ಸರಬರಾಜಿಗಾಗಿ ಮಾಡಿದ ವೆಚ್ಚದ ವಿವರ

| ವರ್ಷ | ವೆಚ್ಚ (ರೂ ಲಕ್ಷಗಳಲ್ಲಿ) |
|---|---|
| ೨೦೧೩-೧೪ | ೧೪೪.೧೨ |
| ೨೦೧೪-೧೫ | ೧೯೯.೨೩ |
| ೨೦೧೫-೧೬ | ೪೨೭.೩೬ |
| ೨೦೧೬-೧೭ | ೨೮೬.೬೭ |
| ೨೦೧೭-೧೮ | ೩೭೭.೫೧ |

**ಆಧಾರ: ಪುರಸಭೆ, ಹರಪನಹಳ್ಳಿ.**

## ಹರಪನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ೨೦೧೦-೧೧ ರಿಂದ ೨೦೧೭-೧೮ ರವರೆಗೆ ವಿವಿಧ ಮೂಲ ಸೌಕರ್ಯ ಒದಗಿಸಲು ಮಾಡಿದ ವೆಚ್ಚದ ವಿವರ

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦ -೧೧ | ೨೦೧೧ -೧೨ | ೨೦೧೨ -೧೩ | ೨೦೧೩ -೧೪ | ೨೦೧೪ -೧೫ | ೨೦೧೫ -೧೬ | ೨೦೧೬ -೧೭ | ೨೦೧೭ -೧೮ |
|---|---|---|---|---|---|---|---|---|
| ಜನಾರೋಗ್ಯ ಮತ್ತು ನೈರ್ಮಲ್ಯ | ೩.೦೩ | ೨.೪೨ | ೨.೯೯ | ೧೪.೦೧ | ೫.೩೨ | ೩೭.೧೭ | ೬೮.೩೬ | ೧೨.೪೭ |
| ನೀರು ಸರಬರಾಜು | ೧೧೬.೨೬ | ೧೧೨.೮೮ | ೨೧೯.೬೨ | ೧೪೮.೧೨ | ೧೯೯.೨೩ | ೪೨೭.೩೬ | ೨೮೬.೬೭ | ೩೭೭.೫೧ |
| ಸಾರ್ವಜನಿಕ ಕಾಮಗಾರಿ | ೫೨.೩೫ | ೨೭.೫೨ | ೧೪೭.೭೨ | ೧೦೯.೭೨ | ೬೩.೩೬ | ೫೧.೬೦ | ೫೨.೨೮ | ೫೬.೮೬ |
| ರಸ್ತೆಮತ್ತು ದೀಪ ನಿರ್ವಹಣೆ | ೩೫೫.೨೪ | ೫೪.೮೪ | ೧೦೭.೧೮ | ೧೨೩.೦೮ | ೮೦.೮೨ | ೧೭೯.೦೦ | ೭೬.೦೨ | ೬೬೭.೯೧ |
| ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೩೨೫.೩೦ | ೩೦.೮೮ | ೧೫೨.೪೦ | ೩೧.೧೮ | ೩೦.೨೨ | ೮೬.೧೧ | ೧೩.೮೪ | ೭೬.೫೮ |
| ಇತರೆ | ೮೦.೩೬ | ೧.೫೭ | ೦.೭೭ | ೫.೯೨ | ೧೪.೯೭ | ೨೦.೪೮ | ೨.೧೯ | ೪.೭೫ |

**ಆಧಾರ: ಪುರಸಭೆ, ಹರಪನಹಳ್ಳಿ.**

## ಹರಪನಹಳ್ಳಿ ಪುರಸಭೆಯ ಆದಾಯ ಮತ್ತು ವೆಚ್ಚಗಳ ವಿವರ

(ರೂ.ಗಳಲ್ಲಿ)

| ವರ್ಷಗಳು | ಆದಾಯ | ವೆಚ್ಚ |
|---|---|---|
| ೨೦೧೧-೧೨ | ೧೦,೧೧,೪೦,೨೬೪.೦೦ | ೭,೫೦,೩೬,೮೫೮.೦೦ |
| ೨೦೧೨-೧೩ | ೯,೧೯,೪೯,೬೧೪.೦೦ | ೯,೧೪,೭೬,೨೩೦.೦೦ |
| ೨೦೧೩-೧೪ | ೧೦,೬೭,೦೦,೯೨೦.೦೦ | ೯,೭೩,೪೫,೬೦೫.೦೦ |
| ೨೦೧೪-೧೫ | ೧೦,೩೭,೪೦,೨೪೪.೦೦ | ೯,೪೧,೨೪,೬೩೪.೦೦ |
| ೨೦೧೫-೧೬ | ೧೭,೭೧,೦೭,೭೫೫.೦೦ | ೮,೫೭,೬೭,೫೬೫.೦೦ |
| ೨೦೧೬-೧೭ | ೨೧,೬೮,೬೨,೮೪೩.೦೦ | ೧೩,೭೧,೮೩,೯೬೩.೦೦ |
| ೨೦೧೭-೧೮ | ೧೫,೬೬,೮೦,೨೨೮.೦೦ | ೨೦,೨೮,೩೨,೬೭೪.೦೦ |

**ಆಧಾರ: ಪುರಸಭೆ, ಹರಪನಹಳ್ಳಿ.**

## ಹರಪನಹಳ್ಳಿ ಪುರಸಭೆಯ ಸ್ವರ್ಣಜಯಂತಿ ಶಹರಿರೋಜ್‌ಗಾರ್ ಯೋಜನೆಯಲ್ಲಿ ಮಾಡಿದ ಪ್ರಗತಿ ವಿವರ.

(ರೂ.ಲಕ್ಷಗಳಲ್ಲಿ)

| ವಿವರ | ೨೦೧೦-೧೧ | | ೨೦೧೧-೧೨ | | ೨೦೧೨-೧೩ | | ೨೦೧೩-೧೪ | | ೨೦೧೪-೧೫ | | ೨೦೧೫-೧೬ | | ೨೦೧೬-೧೭ | | ೨೦೧೭-೧೮ | |
|---|---|---|---|---|---|---|---|---|---|---|---|---|---|---|---|---|
| | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ | ಅ | ವೆ |
| ತರಬೇತಿ ಕಾರ್ಯಕ್ರಮ | ೨.೩೧ | ೨.೩೨ | ೫.೩೨ | ೫.೩೨ | ೨.೨೧ | ೨.೨೦ | ೩.೬೨ | ೩.೫೭ | ೬.೯೬ | ೬.೯೬ | ೫.೬೧ | ೫.೬೧ | ೨.೮೨ | ೨.೮೨ | ೫.೦೬ | – |
| ಸಾಮಾಜಿಕ ಸೇವೆ | ೦.೭೬ | ೦.೭೬ | ೦.೯೫ | ೦.೯೫ | ೦.೯೬ | ೦.೯೬ | ೧.೫೦ | ೧.೪೭ | – | – | ೦.೪೦ | ೦.೪೦ | – | – | – | – |
| ನಗರ ಕೂಲಿ ಉದ್ಯೋಗ | ೧.೨೧ | ೧.೨೧ | ೩.೬೯ | ೩.೬೯ | ೨.೩೨ | ೨.೧೨ | ೦.೨೮ | ೦.೨೮ | – | – | – | – | – | – | – | – |
| ನಿರಂತರ ಉಳಿತಾಯ ಗುಂಪು ರಚನೆ | ೧.೦೦ | ೧.೦೦ | ೧.೪೦ | ೧.೪೦ | ೧.೨೦ | ೧.೨೦ | ೦.೯೦ | ೦.೯೦ | ೨.೭೦ | ೨.೭೦ | ೧.೩೦ | ೧.೩೦ | ೦.೫೨ | ೦.೫೨ | ೦.೬೦ | ೦.೬೦ |
| ದ್ವಾಕ್ರಾ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೩.೦೦ | ೦.೩೮ | ೦.೩೮ | ೦.೬೦ | ೦.೬೦ | – | – | – | – |
| ಮೂಲಭೂತ ಸೌಕರ್ಯ | – | – | – | – | – | – | – | – | ೦.೧೬ | ೦.೧೬ | – | – | – | – | – | – |
| ಸ್ವಯಂ ಉದ್ಯೋಗ ಯೋಜನೆ | ೨.೫೦ | ೨.೫೦ | ೪.೦೦ | ೪.೦೦ | ೮.೦೦ | ೮.೦೦ | ೯.೦೦ | ೯.೦೦ | ೧.೬೦ | ೧.೬೦ | ೧.೨೦ | ೧.೨೦ | ೦.೫೪ | ೦.೫೪ | ೦.೬೪ | – |

ಆಧಾರ: ಪುರಸಭೆ, ಹರಪನಹಳ್ಳಿ. ಸೂಚನೆ: ಅ-ಅನುದಾನ, ವೆ-ವೆಚ್ಚ.

## ಅಧ್ಯಾಯ–೯

# ಶಿಕ್ಷಣ ಮತ್ತು ಕ್ರೀಡೆ

ಪ್ರಾಚೀನ ಋಷಿ–ಮುನಿಗಳ ಕಾಲದಲ್ಲಿ ಆಶ್ರಮ, ಗುರುಕುಲಗಳು ವಿದ್ಯಾಕೇಂದ್ರಗಳಾಗಿದ್ದವು. ಗುರುಗಳು ವಿದ್ಯೆಯನ್ನು ಮೌಖಿಕವಾಗಿ ಹೇಳುವುದು ಹೆಚ್ಚಾಗಿದ್ದಿತು, ಲಿಖಿತ ರೂಪದ ವಿದ್ಯೆ ನಂತರದಲ್ಲಿ ಉಂಟಾಯಿತು. ೧೨ ವರ್ಷಗಳ ಕಾಲ ಗುರುಕುಲದಲ್ಲಿ ಮಕ್ಕಳು ಇರಲೇಬೇಕಿದ್ದಿತು. ಗುರುಕುಲದಲ್ಲಿ ವೇದಾಂತ ವಿಚಾರಗಳ ಜೊತೆ–ಜೊತೆಗೆ ವ್ಯವಹಾರಿಕವಾದ ಅಕ್ಷರ, ಶಾಸ್ತ್ರಾಭ್ಯಾಸ, ಅಂಕಗಣಿತ ಅಧ್ಯಯನಕ್ಕೆ ಒತ್ತುಕೊಡಲಾಗಿದ್ದಿತು. ವೃತ್ತಿ ಶಿಕ್ಷಣವು ಅವರ ಕುಲಕಸಬು ಆಗಿಯೇ ನಡೆದು ಬಂದಿತ್ತು.

ಕಾಲಗತಿಸಿದಂತೆ ದೇವಾಲಯಗಳಲ್ಲಿ, ಮಠಗಳಲ್ಲಿ ಜೈನರ ಬಸದಿ–ಮಠಗಳು, ಬ್ರಾಹ್ಮಣರ ಬ್ರಹ್ಮಪುರಿ, ಶೈವರ ಶಿವಪುರಿಗಳಲ್ಲಿ ಶಿಕ್ಷಣ ಕೇಂದ್ರಗಳಾದವು. ಬಾಲಬೋಧ ಅಕ್ಷರಾಭ್ಯಾಸ, ಅಂಕಗಣಿತ, ಹಣಕಾಸು, ತೂಕ, ಅಳತೆಗಳ ವಿಚಾರ ಅಧ್ಯಯನವಾಗಿದ್ದಿತು. ಕೂಲಿಮಠ, ಸಾಲಿಮಠ, ಸಂಜೆಮಠ, ಅಯ್ಯಗಳ ಮಠ ಮುಂತಾದವು. ಇಸ್ಲಾಂ ಮತ್ತು ಕ್ರೈಸ್ತರು ಆಗಮಿಸಿದ ಬಳಿಕ ಕಾನ್ವೆಂಟ್, ಮದರಸಾಗಳು ಶಿಕ್ಷಣ ನೀಡಲು ಪ್ರಾರಂಭಿಸಿದವು.

ಹರಪನಹಳ್ಳಿ ತಾಲ್ಲೂಕು ಕೆರೆಗುಡಿಹಳ್ಳಿ ಕ್ರಿ.ಶ. ೧೨–೧೨–೧೧೧೧ ರ ಶಾಸನದಲ್ಲಿ ಪಾಂಡ್ಯರು ನೊಳಂಬೇಶ್ವರ ದೇವರ ಪೂಜಾ ಮತ್ತು ಓದುವ ಮಕ್ಕಳಿಗೆ ಭೂ ದಾನ ಮಾಡಿದರು ಎಂಬುವ ಉಲ್ಲೇಖವಿದೆ. ಇದೇ ತಾಲ್ಲೂಕಿಗೆ ಸೇರಿದ ಅರಸೀಕೆರೆ ಗ್ರಾಮದ ಕೆರೆಯ ಕಟ್ಟೆಯ ಬಳಿಯ ಹೊಲದಲ್ಲಿ ನಿಂತಿರುವ ಶಾಸನ ಕ್ರಿ.ಶ. ೧೬–೧೧–೧೬೩೧ ರಂದು ಶನಿವಾರ ರಾಮದೇವರಾಯರ ಕುಮಾರ ಬಾಗಳಿ ಬಸವಪ್ಪನಾಯಕ ಅಯ್ಯನವರು ಅರಸೀಕೆರೆ ಮುರಿಗಿ ಸಾಂತರಾವುತನ ಮಗ ಗಿರಿಮಲ್ಲಣ್ಣನ ಮಗ

ಬಸವಯ್ಯನಿಗೆ ರಾಉ (ತ) ಪ್ರೀತಿಗೆ ವಿದ್ಯಾದಾನಕ್ಕೆ ಕೊಟ್ಟ ಅರಸರ ಮರದ ಪೆಟ್ಟಿಗೆ ಎಂದಿದೆ.

ಪಾಳೆಯಗಾರರ ಕಾಲದಲ್ಲಿ ಕಾವ್ಯ, ಪುರಾಣ, ರಾಮಾಯಣ, ಮಹಾಭಾರತ, ಜೈಮಿನಿ ಭಾರತ, ಪುಣ್ಯ ಪುರುಷರ ಕಥೆಗಳು, ಸೋಮೇಶ್ವರ ಶತಕ, ನಿಜಲಿಂಗ ಶತಕ, ಶಿವಭಕ್ತಿಸಾರ, ಹರಿಶ್ಚಂದ್ರ ಕಾವ್ಯ, ಓದು, ಬರಹ, ಗಣಿತ ಮೊದಲಾದುವುಗಳನ್ನು ಬ್ರಾಹ್ಮಣ ಪುರೋಹಿತರು ಮತ್ತು ಶೈವ ಗುರುಗಳು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. ತಾಲ್ಲೂಕಿನಲ್ಲಿ ೨೦೧೧ ರ ಜನಗಣತಿ ಪ್ರಕಾರ ಪುರುಷರ ಸಾಕ್ಷರರ ಸಂಖ್ಯೆ ೧,೦೨,೮೫೩ ಇದ್ದು, ಮಹಿಳೆಯರ ಸಾಕ್ಷರರ ಸಂಖ್ಯೆ ೭೫,೯೫೦ ಇದ್ದು, ಒಟ್ಟು ಸಾಕ್ಷರರ ಪ್ರಮಾಣ ೧,೭೮,೮೦೩ ಇದೆ.

**ಹರಪನಹಳ್ಳಿ ತಾಲ್ಲೂಕಿನ ಸಾಕ್ಷರತೆ ವಿವರ**

| ಅಕ್ಷರಸ್ಥರು | | | | | ಸಾಕ್ಷರತೆ ಪ್ರಮಾಣ(%) | | | | |
|---|---|---|---|---|---|---|---|---|---|
| ಗ್ರಾಮೀಣ | | ನಗರ | | ಒಟ್ಟು | ಗ್ರಾಮೀಣ | | ನಗರ | | ಒಟ್ಟು |
| ಗಂಡು | ಹೆಣ್ಣು | ಗಂಡು | ಹೆಣ್ಣು | | ಗಂಡು | ಹೆಣ್ಣು | ಗಂಡು | ಹೆಣ್ಣು | |
| ೮೬,೮೯೦ | ೬,೨೪,೩೫ | ೧೫,೯೬೩ | ೧೩,೫೧೫ | ೧,೭೮,೮೦೩ | ೭೬.೭೭ | ೫೭.೬೨ | ೭೬.೭೧ | ೬೭.೧೯ | ೬೮.೧೩ |

ಹರಪನಹಳ್ಳಿ ಪಟ್ಟಣದಲ್ಲಿ ಮೊಟ್ಟ ಮೊದಲು ಒಂದು ಪ್ರಾಥಮಿಕ ಶಾಲೆ ಕ್ರಿ.ಶ. ೧೮೮೧ ರಲ್ಲಿ ಸ್ಥಾಪನೆಯಾಯಿತು. ಕ್ರಿ.ಶ. ೧೮೯೧ ಜೂನ್ ೩೦ ರಂದು ಸ್ವಂತ ಕಟ್ಟಡ ನಿರ್ಮಾಣವಾಯಿತು. ಎರಡನೇ ಹಂತದಲ್ಲಿ ಕ್ರಿ.ಶ.೧೬-೦೬-೧೯೨೫ರಲ್ಲಿ ಅದಕ್ಕೆ ಹೊಂದಿಕೊಂಡು ಮತ್ತೊಂದು ಕಟ್ಟಡ ಕಟ್ಟಲಾಯಿತು. ಬಳ್ಳಾರಿ ಜಿಲ್ಲಾ ಬೋರ್ಡಿನ ಆಗಿನ ಅಧ್ಯಕ್ಷರಾದ ಶ್ರೀ ಗೋಪಾಲಸ್ವಾಮಿ ಮದಲಿಯಾರ್ ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಇದರಲ್ಲಿ ಪ್ರೌಢಶಾಲೆಯು ನಡೆಯುತ್ತಿದೆ.

ತಾಲ್ಲೂಕಿನಲ್ಲಿ ಪ್ರಥಮ ಬಾರಿಗೆ ರಾಜಸೋಮಶೇಖರ ನಾಯಕರ ನರ್ಸರಿ ಶಾಲೆ-೨೧-೩-೧೯೭೪ ರಲ್ಲಿ ಪ್ರಾರಂಭವಾಯಿತು. ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ ೩೭ ಇದ್ದು, ಇವು ಎಲ್ಲಾ ಖಾಸಗಿ ಶಾಲೆಗಳಾಗಿವೆ.

## ಶಿಕ್ಷಣ ಮತ್ತು ಕ್ರೀಡೆ

**ಹರಪನಹಳ್ಳಿ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜಯಡಿ ಅಂಗನವಾಡಿ ಕೇಂದ್ರ, ಅಂಗನವಾಡಿ ಶಿಕ್ಷಕಿಯರ ಸಂಖ್ಯೆ, ಅಂಗನವಾಡಿ ಕಟ್ಟಡಗಳು ಹಾಗೂ ಸ್ತ್ರೀಶಕ್ತಿ ಸಂಘಗಳ ಮಾಹಿತಿ ವಿವರ.**

| ಕ್ರ.ಸಂ. | ವಿವರ | ಸಂಖ್ಯೆ |
|---|---|---|
| ೧ | **ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ** | **೩೮೧** |
| | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಸಂಖ್ಯೆ | ೩೮೦ |
| | ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ/ ಸಹಾಯಕಿಯರ ಸಂಖ್ಯೆ | ೩೪೮ |
| **ಅಂಗನವಾಡಿ ಕೇಂದ್ರಗಳು ನಡೆಯುತ್ತಿರುವ ಸ್ಥಳಗಳ ವಿವರ** | | |
| ೨ | ಸ್ವಂತ ಅಂಗನವಾಡಿ ಕಟ್ಟಡಗಳ ಸಂಖ್ಯೆ | ೨೯೯ |
| | ಶಾಲಾ ಕಟ್ಟಡ | ೧೭ |
| | ಇತರೆ | ೬೫ |
| | **ಒಟ್ಟು** | **೩೮೧** |
| | | |
| ೩ | ಸ್ತ್ರೀ ಶಕ್ತಿ ಸಂಘಗಳ ವಿವರ | ೭೦೧ |

**ಶಿಕ್ಷಣ**

| **ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ** | |
|---|---|
| | |
| **೧)ಕಿರಿಯ ಪ್ರಾಥಮಿಕ ಶಾಲೆಗಳು** | |
| ಶಾಲೆಗಳ ಸಂಖ್ಯೆ | ೧೬೦ |
| ಒಟ್ಟು ದಾಖಲಾತಿ | |
| ಹುಡುಗರು | ೧೩,೯೩೮ |

| | |
|---|---|
| ಹುಡುಗಿಯರು | ೧೩,೪೫೫ |
| ಒಟ್ಟು ದಾಖಲಾತಿ | ೨೭,೩೯೩ |
| **೨) ಹಿರಿಯ ಪ್ರಾಥಮಿಕ ಶಾಲೆಗಳು** | |
| ಶಾಲೆಗಳ ಸಂಖ್ಯೆ | ೧೭೦ |
| ಒಟ್ಟು ದಾಖಲಾತಿ | |
| ಹುಡುಗರು | ೬,೯೪೭ |
| ಹುಡುಗಿಯರು | ೬,೮೬೧ |
| ಒಟ್ಟು ದಾಖಲಾತಿ | ೧೩,೮೦೮ |
| **೩) ಪ್ರೌಢ ಶಾಲೆಗಳು** | |
| ಶಾಲೆಗಳ ಸಂಖ್ಯೆ | ೫೭ |
| ಒಟ್ಟು ದಾಖಲಾತಿ | |
| ಹುಡುಗರು | ೪,೦೨೫ |
| ಹುಡುಗಿಯರು | ೩,೮೭೭ |
| ಒಟ್ಟು  ದಾಖಲಾತಿ | ೭,೯೦೨ |
| **೪) ಪ್ರಾಥಮಿಕ ಶಾಲೆ ಶಿಕ್ಷಕರ ಸಂಖ್ಯೆ** | |
| ಪುರುಷರು | ೮೦೮ |
| ಮಹಿಳೆಯರು | ೬೩೬ |
| ಒಟ್ಟು | ೧,೪೪೪ |
| ವಿದ್ಯಾರ್ಥಿ ಶಿಕ್ಷಕರ ಅನುಪಾತ | ೩೭.೫೬ |
| ಒಟ್ಟು ದಾಖಲಾತಿ (ಸಂಖ್ಯೆಗಳಲ್ಲಿ) | ೪೧,೨೦೧ |
| **೫) ಪ್ರೌಢಶಾಲೆ ಶಿಕ್ಷಕರ ಸಂಖ್ಯೆ** | |
| ಪುರುಷರು | ೩೩೯ |

| | |
|---|---|
| ಮಹಿಳೆಯರು | ೬೨ |
| ಒಟ್ಟು | ೪೩೧ |
| ವಿದ್ಯಾರ್ಥಿ ಶಿಕ್ಷಕರ ಅನುಪಾತ | ೧೮ |
| **ಒಟ್ಟು ದಾಖಲಾತಿ (ಸಂಖ್ಯೆಗಳಲ್ಲಿ)** | **೧೯೦೨** |
| | |
| **ಪದವಿ ಪೂರ್ವ ಕಾಲೇಜುಗಳು** | **೨೦೧೫-೧೬** |
| ೧) ಕಾಲೇಜುಗಳ ಸಂಖ್ಯೆ | ೧೮ |
| ೨) ಉಪನ್ಯಾಸಕರ ಸಂಖ್ಯೆ | |
| ಎ) ಪುರುಷರು | ೧೧೨ |
| ಬಿ) ಮಹಿಳೆಯರು | ೨೩ |
| ೩) ಪದವಿ ಪೂರ್ವ(ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ (೧ನೇ ಮತ್ತು ೨ನೇ ವರ್ಷ) | |
| ಎ) ಸರ್ಕಾರಿ | |
| ಅ) ಹುಡುಗರು | ೪೭೪ |
| ಆ) ಹುಡುಗಿಯರು | ೫೧೫ |
| ಬಿ) ಖಾಸಗಿ-(ಅನುದಾನಿತ) | |
| ಅ) ಹುಡುಗರು | ೧,೭೪೧ |
| ಆ) ಹುಡುಗಿಯರು | ೬೭೯ |
| ಸಿ) ಖಾಸಗಿ-(ಅನುದಾನರಹಿತ) | |
| ಅ) ಹುಡುಗರು | ೧,೨೫೨ |
| ಆ) ಹುಡುಗಿಯರು | ೮೮೧ |
| ೪) ಸಾಮಾನ್ಯ ಪದವಿ ಕಾಲೇಜುಗಳು - ಸರ್ಕಾರಿ ಕಾಲೇಜುಗಳ ಸಂಖ್ಯೆ | ೧ |

| | |
|---|---|
| ಮೊದಲ ವರ್ಷದಿಂದ ಅಂತಿಮ ವರ್ಷದವರೆಗೆ | |
| ಅ) ಹುಡುಗರು | ೬೧೩ |
| ಆ) ಹುಡುಗಿಯರು | ೫೬೨ |
| ಇ) ಒಟ್ಟು | ೧,೧೭೫ |
| ೫) ಸಾಮಾನ್ಯ ಪದವಿ ಕಾಲೇಜುಗಳು–ಖಾಸಗಿ | |
| ಅ) ಕಾಲೇಜುಗಳ ಸಂಖ್ಯೆ | ೩ |
| ಆ) ಮೊದಲ ವರ್ಷದಿಂದ ಅಂತಿಮ ವರ್ಷದ ವರೆಗೆ (ಅನುದಾನಿತ+ಅನುದಾನರಹಿತ) | |
| ಎ) ಹುಡುಗರು | ೮೯೩ |
| ಬಿ) ಹುಡುಗಿಯರು | ೬೩೨ |
| ಸಿ) ಒಟ್ಟು | ೧,೫೨೫ |

**ಮಾಹಿತಿ ಮೂಲ: ದಾವಣಗೆರೆ ಜಿಲಾ ಅಂಕಿ ಅಂಶಗಳ ನೋಟ ೨೦೧೫–೧೬**

## ಕ್ರೀಡೆ

ಪ್ರಾಚೀನ ಕಾಲದಲ್ಲಿ ಕುಸ್ತಿ ಆಟಕ್ಕೆ ಹೆಚ್ಚು ಪ್ರಾತಿನಿಧ್ಯವಿದ್ದಿತು. ಮೊದಲು ಶಾಲೆಗಳಲ್ಲಿ ಕುಸ್ತಿ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದರು. ಕಾಲ ಬದಲಾದಂತೆ ಕುಸ್ತಿ ಶಿಕ್ಷಕರು ದೈಹಿಕ ಶಿಕ್ಷಕರಾದರು. ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳ ಕೊನೆಯ ದಿನ ದುಂಡಿ ಎತ್ತುವ, ಕಬ್ಬಿನ ಹೊರೆ ಎತ್ತುವ, ರೋಣಗಲ್ಲನ್ನು ಎತ್ತುವ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದರು. ಹಿರಿಯರು ಮನೆಗಳಲ್ಲಿ ಹುಲಿ ಮನೆ, ಪಗಡೆ, ಹಾವು–ಏಣಿ, ಒಂಟಿ–ಕುದುರೆ ಆಡಿದ–ರೆ, ಮಕ್ಕಳು ಕುಂಟಾಬಿಲ್ಲೆ, ಲಗೋರಿ, ಕೋಲಾಟ, ಚಿನ್ನಿದಾಂಡು, ಗೋಲಿ, ಬುಗುರಿ, ಕಬಡ್ಡಿ, ಕಣ್ಣು ಮುಚ್ಚಾಲೆ, ಹುಲಿ–ಕರಡಿ ಇವು ಮೊದಲಿನಿಂದಲೂ ಹಳ್ಳಿಗಳಲ್ಲಿ ಆಡುತ್ತಿದ್ದ ಕ್ರೀಡೆಗಳು.

ನಂತರದ ಕಾಲದಲ್ಲಿ ಇವುಗಳ ಸ್ಥಾನದಲ್ಲಿ ಜಿಮ್ನಾಸ್ಟಿಕ್‌ಗಳು ಪ್ರಾರಂಭವಾದವು. ಕ್ರಿಕೆಟ್, ಫುಟ್‌ಬಾಲ್, ಟೆನಿಸ್, ಕಬಡ್ಡಿ, ಖೋಖೋ ಮೊದಲಾದ ಆಧುನಿಕ ಆಟಗಳು ತಲೆ ಎತ್ತಿದವು. ಲಯನ್ಸ್ ಕ್ಲಬ್‌ಗಳು, ರೋಟರಿ ಬಾಲ ಭವನಗಳು ಯುವಕರ–ಯುವತಿಯರ ಸಂಘ ಸಂಸ್ಥೆಗಳು, ವಿವಿಧ ಕ್ರೀಡಾ ಚಟುವಟಿಕೆಗಳು ಕಂಡವು. ೧೯೭೫

ರಲ್ಲಿ ಆರಂಭವಾದ ಜಿಲ್ಲಾ ಯುವ ಜನ ಸೇವಾ ಕ್ರೀಡಾಧಿಕಾರಿಗಳನ್ನು ೧೯೭೪ ರಿಂದ ನೇಮಕ ಮಾಡಿದರು. ಈ ಅಧಿಕಾರಿಯು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ನಿಯಂತ್ರಣದಲ್ಲಿರುವರು. ಇವರು ಕೇಂದ್ರೀಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಕಾರ್ಯ ನಿರ್ವಹಿಸುವ ನೆಹರು ಯುವ ಕೇಂದ್ರವು ಯುವಕ-ಯುವತಿ ಹಾಗೂ ಮಹಿಳಾ ಮಂಡಳಿಗಳನ್ನು ಗ್ರಾಮೀಣ ಮಟ್ಟದಲ್ಲಿ ಸ್ಥಾಪಿಸಲು ನೆರವಾದವು. ಇದಕ್ಕೆ ರಾಜ್ಯ ಸರ್ಕಾರ ಯುವ ಜನ ಸೇವೆ ಮತ್ತು ಕ್ರೀಡಾಂಗಣ ಇಲಾಖೆಯು ಆರ್ಥಿಕ ನೆರವು ನೀಡಿತು. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಹರಪನಹಳ್ಳಿ ತಾಲ್ಲೂಕಿನಿಂದ ಕ್ರೀಡಾ ಪಟುಗಳು ಬೆಳಕಿಗೆ ಬರುವುದು ಕಂಡುಬರುತ್ತಿದೆ.

**ಹರಪನಹಳ್ಳಿ ತಾಲ್ಲೂಕಿನ ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ, ಸಾಧನೆಗೈದ ವಿವರ**

| ಕ್ರ. ಸಂ. | ಕ್ರೀಡಾಪಟುಗಳ ಹೆಸರು | ಭಾಗವಹಿಸಿದ ಪಂದ್ಯಾವಳಿ | ವರ್ಷ |
|---|---|---|---|
| ೧ | ಜಾವೀದ್ ಭಾಷಾ | ಅಖಿಲ ಭಾರತ ಪೈಕಾ ಗ್ರಾಮೀಣ ಕ್ರೀಡಾಕೂಟ ಸಿಲಿಗುರಿ, ಪಶ್ಚಿಮ ಬಂಗಾಳದಲ್ಲಿ ನಡೆದ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. | ೨೦೧೦-೧೧ |
| ೨ | ಟಿ. ಜಾಕೀರಾ | ಅಖಿಲ ಭಾರತ ಪೈಕಾ ಗ್ರಾಮೀಣ ಕ್ರೀಡಾಕೂಟ ಸಿಲಿಗುರಿ, ಪಶ್ಚಿಮ ಬಂಗಾಳದಲ್ಲಿ ನಡೆದ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. | ೨೦೧೦-೧೧ |
| ೩ | ಪ್ರತೀಕ್ಷಾ | ಅಖಿಲ ಭಾರತ ಪೈಕಾ ಗ್ರಾಮೀಣ ಕ್ರೀಡಾಕೂಟ ಸಿಲಿಗುರಿ, ಪಶ್ಚಿಮ ಬಂಗಾಳದಲ್ಲಿ ನಡೆದ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. | ೨೦೧೦-೧೧ |
| ೪ | ಸಾನಿಯಾ | ದಕ್ಷಿಣ ಭಾರತ ಸಬ್ ಜ್ಯೂನಿಯರ್ ಖೋ-ಖೋ ಪಂದ್ಯಾವಳಿ, ವಿಜಯವಾಡ, ಆಂಧ್ರಪ್ರದೇಶದಲ್ಲಿ, ಬಂಗಾಳದಲ್ಲಿ ನಡೆದ ಪಂದ್ಯಾವಳಿಯಲ್ಲಿ ಭಾಗವಹಿಸಿರುತ್ತಾರೆ. | ೨೦೧೧-೧೨ |
| ೫ | ರಾಜು .ಪಿ | ಸಬ್ ಜ್ಯೂನಿಯರ್ ರಾಷ್ಟ್ರಮಟ್ಟದ ಖೋ-ಖೋ ಚಾಂಪಿಯನ್ ಷಿಪ್, ಬೊಕಾರೋ, ಜಾರ್ಖಂಡ್‌ನಲ್ಲಿ ನಡೆದ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. | ೨೦೧೧-೧೨ |

| | | | |
|---|---|---|---|
| ೬ | ಕಲಾರಿ | ಅಖಿಲ ಭಾರತ ಪೈಕಾ ಗ್ರಾಮೀಣ ಕ್ರೀಡಾಕೂಟ ಅದಿಲಾಬಾದ್, ಆಂಧ್ರ ಪ್ರದೇಶದಲ್ಲಿ ನಡೆಯಲಿರುವ ಪಂದ್ಯಾವಳಿಗೆ ರಾಜ್ಯ ತಂಡದಿಂದ ಆಯ್ಕೆಯಾಗಿರುತ್ತಾರೆ. | ೨೦೧೨-೧೩ |
| ೭ | ಸಾನಿಯಾ | ಅಖಿಲ ಭಾರತ ಪೈಕಾ ಗ್ರಾಮೀಣ ಕ್ರೀಡಾಕೂಟ ಅದಿಲಾಬಾದ್, ಆಂಧ್ರ ಪ್ರದೇಶದಲ್ಲಿ ನಡೆಯಲಿರುವ ಪಂದ್ಯಾವಳಿಗೆ ರಾಜ್ಯ ತಂಡದಿಂದ ಆಯ್ಕೆಯಾಗಿರುತ್ತಾರೆ. | ೨೦೧೨-೧೩ |
| ೮ | ಎಂ. ಸಾವಿತ್ರಿ | ಪಂದ್ಯ ಉತ್ತರ ಪ್ರದೇಶದ ಇಟಿವ್ಹಾ ಸಫಾಯಿ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದು | ೨೦೧೨-೧೩ |
| ೯ | ಟಿ. ಜಾಕೀರಾ | ಪಂದ್ಯ ಉತ್ತರ ಪ್ರದೇಶದ ಇಟಿವ್ಹಾ ಸಫಾಯಿ ಕ್ರೀಡಾಕೂಟ ಭಾಗವಹಿಸಿದ್ದು | ೨೦೧೨-೧೩ |

## ಅಧ್ಯಾಯ–೧೦

# ಸಾಹಿತ್ಯ ಮತ್ತು ಸಂಸ್ಕೃತಿ

**ಶಾಸನ ಕವಿಗಳು** : ಹರಪನಹಳ್ಳಿ ತಾಲ್ಲೂಕಿನಲ್ಲಿ ೨೨೬ ಶಾಸನಗಳು ಈವರೆಗೂ ದೊರಕಿದ್ದು, ಹದಿಮೂರು ಜನ ಕವಿ–ಅಪಿಕಾರರ ಹೆಸರುಗಳು ದಾಖಲಾಗಿವೆ. ಕೆಲ ಶಾಸನಗಳಲ್ಲಿ ತ್ರಿಪದಿ–ಸಾಂಗತ್ಯಗಳನ್ನು ಕಾಣಬಹುದು.

**ಪ್ರಾಚೀನ ಕೃತಿಕಾರರು**

**ದೇವಕವಿ** : ಇವರು ಕ್ರಿ.ಶ ೧೧–೦೫–೧೫೮೨ ರಲ್ಲಿ ಬಾಗಳಿ ಗ್ರಾಮದಲ್ಲಿ ಜನಿಸಿರುತ್ತಾರೆ. ಇವರು ಮರುಳಸಿದ್ದೇಶ್ವರ ಕಾವ್ಯ ಎಂಬ ಈ ಕೆಳಗಿನ ಕೃತಿಯನ್ನು ರಚಿಸಿರುತ್ತಾರೆ.

**ಹೇಳಿದನು ದೇವಸುತ ಹೇಳೆನುತಲಿ ಕೃತಿಯ ।**
**ಶಾಲಿವಾಹನ ಶಕಂ ಸಾಗುತಿರೆ ಸಾವಿರದ**
**ಮೇಲೆ ಐನೂರು ವಂಬೈನೆಯ ಸರ್ವಜಿತು ಸಂವತ್ಸರ**
**ವೆಂದೆನಿಸುವ ಕಾಲದೊಳು ವೈಶಾಖ ಶುದ್ಧ ಪೌರ್ಣಮಿ ಯೊಳಗಾ ।**
**ವೇಳೆಯೊಳು ಮರುಳಸಿದ್ದೇಶ್ವರ ಕೃತಿಯ ಕೇಳಿ ಶರಣ ಸಂತತಿ ॥**

**ಹಿರಿಯಣ್ಣ ಕವಿ** : ಇವರು ಉಚ್ಚಂಗಿದುರ್ಗದಲ್ಲಿ ಕ್ರಿ.ಶ ೧೭೭೮ ರಲ್ಲಿ ಜನಿಸಿರುತ್ತಾರೆ. ಇವರು ಹಯರತ್ನ ಶ್ರೇಣಿ  ಎಂಬ ಕೃತಿಯನ್ನು ರಚಿಸಿರುತ್ತಾರೆ.

**ಧರೆಗಧಿಕವುಚ್ಚಂಗಿ ಗಿರಿಯಲಿ**
**ಮೆರೆವ ದುರ್ಗಾಂಬಿಕೆಯ ಸಿರಿಪದ**
**ಸರಸಿಜ ಭ್ರಮರಾಯ ಮಾನಕವೀಂದ್ರ ಹಿರಿಯಣ್ಣ**
**ವಿರಚಿಸಿದ ಹಯರತ್ನ ಶ್ರೇಣಿಯ**
**ಲೊರೆದ ––––––––––––––––॥**

ತನ್ನ ಒಡೆಯ ಹರಪನಹಳ್ಳಿಯ ಅರಸ ಬಸವಪ್ಪ ನಾಯಕನ ಪುರೋಹಿತನೆಂದು ಹೇಳಿರುವನು.

**ಮಹಲಿಂಗ ರಂಗ ಕವಿ** : ಇವರು ೧೭ ನೇ ಶತಮಾನದಲ್ಲಿ ಉಚ್ಚಂಗಿದುರ್ಗದಲ್ಲಿ ಜನಿಸಿರುತ್ತಾರೆ. ಇವರು ಅನುಭವಾಮೃತವೆಂಬ ಈ ಕೆಳಗಿನ ಕೃತಿಯನ್ನು ರಚಿಸಿರುತ್ತಾರೆ.

**ಸುಲಿದ ಬಾಳೆಯ ಹಣ್ಣಿನಂದದಿ**
**ಕಳೆದ ಸಿಗುರಿಗ ಕಬ್ಬಿನಂದದಿ**
**ಅಳಿದ ಉಷ್ಣದ ಹಾಲಿ ನಂದದಿ ಸುಲಭವಾಗಿರ್ಪ**
**ಲಲಿತವಹ ಕನ್ನಡದ ನುಡಿಯಲಿ**
**ತಿಳಿದು ತನ್ನೊಳು ತನ್ನ ಮೋಕ್ಷವ**
**ಗಳಿಸಿ ಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು.**

ಇವರ ಸಮಾಧಿ ದಾವಣಗೆರೆ ರೇಲ್ವೆ ಹಳಿ ಹತ್ತಿರವೆಂದು ಹೇಳುವರು.

**ಹರಪನಹಳ್ಳಿ ತಾಲ್ಲೂಕು ಶಾಸನ ಕವಿಗಳು**

| | | |
|---|---|---|
| ೧) ಕವಿ | – | ಆಸ್ಕಂದ ದೇವ. |
| ಗ್ರಾಮ | – | ಯರಬಾಳು ಹರಪನಹಳ್ಳಿ–ತಾ. |
| ಕಾಲ | – | ಕ್ರಿ.ಶ. ೭–೧೨–೧೧೨೨ |
| ೨) ಕವಿ | – | ಕಲ್ಲೋಜ |
| ಗ್ರಾಮ | – | ನಿಟ್ಟೂರು |
| ಕಾಲ | – | ೧೩ನೇ ಶತಮಾನ |
| ೩) ಕವಿ | – | ಚನ್ನೋಜ |
| ಗ್ರಾಮ | – | ಬಾಗಳಿ |
| ಕಾಲ | – | ೧೨–೧–೯೯೧ |
| ೪) ಕವಿ | – | ಕೊಳಕರಣಿ ಕಾಳಯ |
| ಗ್ರಾಮ | – | ಬಾಗಳಿ |
| ಕಾಲ | – | ೨೪–೧೨–೧೧೦೮ |

| | | |
|---|---|---|
| ೫) ಕವಿ | – | ಚಟ್ಟೋಜ |
| ಗ್ರಾಮ | – | ಬಾಗಳಿ |
| ಕಾಲ | – | ಕ್ರಿ.ಶ.೯೭೨ |
| ೬ ಕವಿ | – | ಛಂದೋಜನಮಗಹಂಪ |
| ಗ್ರಾಮ | – | ಬಾಗಳಿ |
| ಕಾಲ | – | ಕ್ರಿ.ಶ.೯೮೭ |
| ೭) ಕವಿ | – | ಮಣ್ಡಳಿಕ ಬಿಜ್ಜರಸನ ಪೆರ್ಗಡೆ ಕಾಳಿದಾಸಯ್ಯ |
| ಗ್ರಾಮ | – | ಬಾಗಳಿ |
| ಕಾಲ | – | ಕ್ರಿ.ಶ.೧೦೩೫ |
| ೮) ಕವಿ | – | ನಾಕೋಜ ಸಿವಪಾದ ಶೇಖರಂ |
| ಗ್ರಾಮ | – | ಬಾಗಳಿ |
| ಕಾಲ | – | ಕ್ರಿ.ಶ.೧೦೬೮ |
| ೯) ಕವಿ | – | ಗೋಬಲಿ ಬಾವಿಯ ಸೇನಬೋವ |
| ಗ್ರಾಮ | – | ನಂದಿಬೇವೂರು |
| ಕಾಲ | – | ಕ್ರಿ.ಶ.೧೫೫೭ |
| ೧೦) ಕವಿ | – | ಪೊಟ್ಟಿಗ – ಗಚ್ಚಚ್ಚ |
| ಗ್ರಾಮ | – | ನಂದಿಬೇವೂರು |
| ಕಾಲ | – | ಕ್ರಿ.ಶ.೧೧೫೪ |
| ೧೧) ಕವಿ | – | ಮಳ್ಳಿಯಣ್ಣ |
| ಗ್ರಾಮ | – | ದುಗ್ಗಾವತಿ |
| ಕಾಲ | – | ಕ್ರಿ.ಶ.೧೧೨೬ |
| ೧೨) ಕವಿ | – | ಭರ್ಮದೇವ |
| ಗ್ರಾಮ | – | ಹಿರೇಮ್ಯಾಗಳಗೇರಿ |
| ಕಾಲ | – | ಕ್ರಿ.ಶ.೧೦೬೧ |

**ತೆಗ್ಗಿನ ಮಠದ ಶ್ರೀಗಳು**: ಇವರ ಪೂರ್ಣ ಹೆಸರು ಶ್ರೀ ಚಂದ್ರಮೌಳೇಶ್ವರ ಸ್ವಾಮಿ.ಹಡಗಲಿ ತಾಲ್ಲೂಕಿನ ನಾಗತಿಬಸಾಪುರ ಇವರ ಜನ್ಮಸ್ಥಳ. ಇವರು ಎಂ.ಎ. ಪದವೀಧರರಾಗಿದ್ದು, ಕಲಬುರಗಿ ಶರಣಬಸಪ್ಪ ಅಪ್ಪ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ, ಹರಿಹರ ಶ್ರೀಶೈಲ ಕಾಲೇಜಿನ ಪ್ರಾಂಶುಪಾಲರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ತಾಲ್ಲೂಕಿನ ತೆಗ್ಗಿನ ಮಠದ ಪಟ್ಟಾಧಿಕಾರಿಗಳಾಗಿ ನೇಮಕವಾದ ಬಳಿಕ ೬೩ ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಭವ್ಯವಾದ ಮಠವನ್ನು ನಿರ್ಮಿಸಿರುವರು. ಸಾಹಿತಿ ಹಾಗೂ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವರು. ತಾಲ್ಲೂಕಿನ ಕೆಲ ಹಳ್ಳಿಗಳಲ್ಲಿ ಸಾಂಸ್ಕೃತಿಕ ಇತಿಹಾಸವು ಹೆಚ್ಚು ಪ್ರಾಚೀನವು ಮತ್ತು ಪುರಾತನವು ಆಗಿದೆ.

**'ಎಸ್.ನಿಜಲಿಂಗಪ್ಪ'**

ಕರ್ನಾಟಕದ ಏಕೀಕರಣಕ್ಕೆ ಹೋರಾಡಿದ ರಾಜಕಾರಣಿಗಳಲ್ಲಿ ಪ್ರಮುಖರು ಇವರು ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯೂ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕದ ಏಕೀಕರಣಕ್ಕೆ ಹೋರಾಡಿದ ನಿಜಲಿಂಗಪ್ಪ ನವರು ಎರಡು ಅವಧಿಗಳಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಎಸ್. ನಿಜಲಿಂಗಪ್ಪ ನವರನ್ನು ನವಕರ್ನಾಟಕದ ನಿರ್ಮಾತೃ ಎಂದು ಕರ್ನಾಟಕದ ಜನತೆ ನೆನೆಪಿಸಿಕೊಳ್ಳುತ್ತಾರೆ. ಶರಾವತಿ ಜಲವಿದ್ಯುತ್ ಯೋಜನೆ ಮತ್ತು ಕಾಳಿ ವಿದ್ಯುತ್ ಯೋಜನೆಯ ಪ್ರಮುಖ ರೂವಾರಿ ಇವರಾಗಿದ್ದಾರೆ. ಚಿಕ್ಕಂದಿನಲ್ಲಿ ತಮ್ಮ ಹಳ್ಳಿಯ "ವೀರಪ್ಪ ಮಾಸ್ತರ" ರಿಂದ ಸಾಂಪ್ರದಾಯಿಕವಾಗಿ ಅಕ್ಷರಾಭ್ಯಾಸ ಮಾಡಿದ ನಿಜಲಿಂಗಪ್ಪನವರು, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ೧೯೨೪ರಲ್ಲಿ ಪದವೀಧರರಾಗಿ ಉತ್ತೀರ್ಣರಾದರು. ೧೯೨೧–೧೯೨೪ ರ ಅವಧಿಯಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಾಗಿದ್ದರು. ಶ್ರೀ ಬಸವೇಶ್ವರ ಮತ್ತು ಶಿವಶರಣರ ನೀತಿ–ಸಾಧನೆಗಳನ್ನು ಅಭ್ಯಾಸ ಮಾಡಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ನಿಜಲಿಂಗಪ್ಪನವರು, ಗಾಂಧೀಜಿಯವರ ವಿಚಾರಧಾರೆಯಿಂದಲೂ ಪ್ರಭಾವಿತರಾದರು. ಚಿತ್ರದುರ್ಗವನ್ನು ತಮ್ಮ ಕರ್ಮಭೂಮಿಯಾಗಿ ಸ್ವೀಕರಿಸಿದ ನಿಜಲಿಂಗಪ್ಪನವರು ಅಂದಿನ ಚಿತ್ರದುರ್ಗ ಜಿಲ್ಲೆಯ ಏಳಿಗೆಗಾಗಿ ಶ್ರಮವಹಿಸಿದ್ದಾರೆ. ೧೯೩೬ರಲ್ಲಿ ತಮ್ಮ ರಾಜಕೀಯ ಜೀವನವನ್ನು ತಡವಾಗಿಯೇ ಪ್ರಾರಂಭಿಸಿದ ನಿಜಲಿಂಗಪ್ಪನವರು, ಎನ್.ಎಸ್. ಹರ್ಡೀಕರರ ಸಹಾಯದಿಂದ ಕಾಂಗ್ರೆಸ್ ಸೇರಿದರು.ಪ್ರಾರಂಭದಲ್ಲಿ ಸಾಮಾನ್ಯ ಸದಸ್ಯನಾಗಿ ಸೇರಿ ನಂತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಕೊನೆಗೆ ೧೯೬೮ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾದರು. ಇಂದಿರಾ ಗಾಂಧಿಯವರ ಜೊತೆ ರಾಜಕೀಯ ಭಿನ್ನಾಭಿಪ್ರಾಯ ಹೊಂದಿದ ಕೆಲವು ಹಿರಿಯ ಕಾಂಗ್ರೆಸ್ ನಾಯಕರೊಡನೆ ಸೇರಿ ಕಾಂಗ್ರೆಸ್ (ಓ) ಪಕ್ಷದ ಸ್ಥಾಪನೆಗೆ ಕಾರಣರಾದರು.

ನಿಜಲಿಂಗಪ್ಪನವರಿಗೆ ಕರ್ನಾಟಕ ಸರ್ಕಾರ ನೀಡುವ ಪ್ರತಿಷ್ಠಿತ ಕರ್ನಾಟಕ ರತ್ನ ಪ್ರಶಸ್ತಿಯ ಗೌರವ ದೊರಕಿದೆ.

**ಗಾಂಧಿ ಶ್ರೀ ಇಜಾರಿ ವಾಸುಪಾಲಪ್ಪ:** ಹರಪನಹಳ್ಳಿ ತಾಲ್ಲೂಕಿನ ಹರಪನಹಳ್ಳಿ ಪಟ್ಟಣ ವಾಸುಪಾಲಪ್ಪನವರ ಜನ್ಮಸ್ಥಳ. ಇವರು ರಾಜಕೀಯದಲ್ಲಿ ತೊಡಗಿದ್ದು, ಹರಪನಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಸಹಕಾರ ಸಂಘಗಳ ಅಧ್ಯಕ್ಷರಾಗಿದ್ದರು. ಕ್ರಿ.ಶ.೧೯೪೧ ರಲ್ಲಿ ಸತ್ಯಾಗ್ರಹದಲ್ಲಿ ೬ ತಿಂಗಳು ಸೆರೆ ಅನುಭವಿಸಿದರು. ಕ್ರಿ.ಶ.೧೯೩೫–೩೬ ರಲ್ಲಿ ಬಿಹಾರದಲ್ಲಿ ಭೂಕಂಪ ಸಂಭವಿಸಿತು. ಅದರ ಪರಿಹಾರಕ್ಕೆ ಒಂದು ಸಮಿತಿ ಸ್ಥಾಪಿಸಿ, ಶ್ರೀ ಬಾಬು ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಆಗ ಶ್ರೀ ಬಾಬು ರಾಜೇಂದ್ರ ಪ್ರಸಾದರು ಬಳ್ಳಾರಿಯಿಂದ ಹರಪನಹಳ್ಳಿಗೆ ಆಗಮಿಸಿದರು. ವಾಸುಪಾಲಪ್ಪನವರು ಕೇವಲ ಮೂರು ತಾಸುಗಳಲ್ಲಿ ೨೦೦೦–೦೦ ರೂ ಹಣವನ್ನು ಸಂಗ್ರಹಿಸಿ ಕೊಟ್ಟರು.

ಕ್ರಿ.ಶ.೧೯೩೪ ಶುಕ್ರವಾರ ಸಂಜೆ ನಾಲ್ಕು ಗಂಟೆಗೆ ಮಹಾತ್ಮ ಗಾಂಧೀಜಿಯವರು ಹರಪನಹಳ್ಳಿಗೆ ಆಗಮಿಸಿ ಜಿಲ್ಲಾ ಬೋರ್ಡ್ ಪ್ರೌಢ ಶಾಲೆಯಲ್ಲಿ ವಸತಿ ಮಾಡಿದ್ದರು. ಮರು ದಿನ ಬೆಳಗ್ಗೆ ಗಾಂಧೀಜಿ ಹರಿಜನರ ಅಭಿವೃದ್ಧಿಗೆ ಹಣ ಸಂಗ್ರಹಣೆಗೆ ಆರಂಭಿಸಿದರು. ಸರ್ವಶ್ರೀ ವಾಸುಪಾಲಪ್ಪ, ನೆಲ್ಲಕುದುರಿ ಗುರುಬಸಪ್ಪ, ಇಜಂತಕರ್ ನಾರಾಯಣಪ್ಪನವರು, ಒಂದೊಂದು ಬೆಳ್ಳಿ ತಟ್ಟೆಗಳನ್ನು ಮತ್ತು ಬೆಳ್ಳಿ ರೂಪಾಯಿಗಳನ್ನು ಗಾಂಧೀಜಿಗೆ ಅರ್ಪಿಸಿದರು. ಅವರು ಅವುಗಳನ್ನು ಹರಾಜು ಹಾಕಿ ಹಣ ಸಂಗ್ರಹಿಸಿದರು. ಮೂವತ್ತನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಕ್ರಿ.ಶ.೧೯೪೭ ಮೇ ತಿಂಗಳಲ್ಲಿ ಮೂರು ದಿನಗಳ ಕಾಲ ಹರಪನಹಳ್ಳಿಯ ಜಿಲ್ಲಾ ಬೋರ್ಡ್–ಇಂದಿನ ಸರಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆಯಿತು. ಅದಕ್ಕೆ ವಾಸುಪಾಲಪ್ಪನವರು ಸ್ವಾಗತ ಸಮಿತಿಗೆ ಅಧ್ಯಕ್ಷರಾಗಿ ಅದ್ದೂರಿಯಾಗಿ ನಡೆಸಿಕೊಟ್ಟರು.

**ಎಸ್.ಬಿ. ಹನುಮಂತಪ್ಪ:** ಇವರು ಹರಪನಹಳ್ಳಿ ತಾಲ್ಲೂಕಿನ ತೆಲಿಗಿ ಗ್ರಾಮದಲ್ಲಿ ಜನಿಸಿರುತ್ತಾರೆ. ಇವರು ಬಿ.ಎ., ಎಲ್.ಎಲ್.ಬಿ ಪದವಿಯನ್ನು ಮುಗಿಸಿ ವೃತ್ತಿಯಲ್ಲಿ ನ್ಯಾಯವಾದಿಗಳಾಗಿ ಕಾರ್ಯ ಆರಂಭಿಸಿ ನಂತರ ಬ್ರಿಟಿಷ್ ಸೈನ್ಯದ ಅಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ೧೯೬೧ ರಲ್ಲಿ ಬೆಂಗಳೂರಿನಲ್ಲಿ ವಿಧಾನಮಂಡಲದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ೧೯೭೬ ರಲ್ಲಿ ನಿವೃತ್ತರಾದರು. ಇವರು ಶಾಸಕಾಂಗ ಇತಿಹಾಸ ಕುರಿತು ನಾಲ್ಕು ಗ್ರಂಥಗಳನ್ನು ರಚಿಸಿರುತ್ತಾರೆ.

**ಪತ್ರಿಕೋದ್ಯಮ** : ಶ್ರೀಯುತರಾದ ಬಾದನ ಹಟ್ಟಿ ಹನುಮಂತರಾವ್, ಶ್ರೀ ಗುಡಿಹಳ್ಳಿ ನಾಗರಾಜ ಇವರು ಬೆಂಗಳೂರಿನ ಪ್ರಜಾವಾಣಿಯ ಉಪ ಸಂಪಾದಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

**ಜಾನಪದ** : ಸೂತ್ರದ ಗೊಂಬೆಯಾಟ ಈ ತಾಲ್ಲೂಕಿನಲ್ಲಿ ಬಹು ಪ್ರಸಿದ್ಧವಾದ ಜಾನಪದ ಪ್ರಕಾರ. ಹಲುವಾಗಲು ಗ್ರಾಮದಲ್ಲಿ ಎರಡು ತಂಡಗಳಲ್ಲಿ ಕಂಡು ಬರುವ ಪ್ರಮುಖ ಜಾನಪದ ಕಲೆ ಮತ್ತು ಕಲಾವಿದರುಗಳೆಂದರೆ,

೧) ಶ್ರೀ ಶಕ್ತಿ ಗೊಂಬೆಯಾಟ,

೨) ಶ್ರೀ ಮಾರುತಿ ಗೊಂಬೆಯಾಟ, ಅಂತರ್ ರಾಜ್ಯ ಸೂತ್ರ ಗೊಂಬೆಯಾಟ (ಕಲಾವಿದ ಬಡಿಗೇರ ದೇವೇಂದ್ರಪ್ಪನವರು ಅವರು ನಿಧನರಾಗಿರುವರು)

೩) ಸೋಬಾನ ಪದ ಹೇಳುವ ಯಲಿಸವ್ವ ಈ ತಾಲ್ಲೂಕಿನ ಉಚ್ಚಂಗಿದುರ್ಗದವರು,

೪) ಮತ್ತಿಹಳ್ಳಿ ಗ್ರಾಮದ ಗೊಂದಲಿಗರು.

೫) ಮಲಿಕಿನ ಕೋಲು ಕುಣಿತ ಮಾಡುವವರು ಮಾಡಲಗೇರಿಯವರು.

೬) ಲಾವಣಿಕಾರ ಸತ್ತೂರು ಇಮಾಮ್ ಸಾಹೇಬರು.

**ರಂಗಭೂಮಿ** : ಶ್ರೀ ಹಾದಿ ಬಸವೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿ, ಸುಮಾರು ೧೯೪೫ ರಿಂದ ೧೯೬೦ ರ ವರೆಗೆ ತಿರುಗಾಡಿದ ನೀಲಗಾರ ಈಶ್ವರಪ್ಪ ಹರಪನಹಳ್ಳಿಯವರು. ಗೋಣಿಬಸವೇಶ್ವರ ನಾಟ್ಯ ಸಂಘ ಬಾಗಳಿ ಶ್ರೀ ಮರಿಕೊಟ್ರಯ್ಯ, ಹರಪನಹಳ್ಳಿ, ಶ್ರೀ ವೀರಯ್ಯ ಗವಾಯಿಗಳು ಚಿಗಟೇರಿ. ಪ್ರಸಿದ್ಧ ಬೆಂಡುವಾದ್ಯ ಕಲಾವಿದರಾದ ತೆಲಿಗಿ ತಿಮಲಾಪುರದ ತಿಪ್ಪಣ್ಣ–ಹೊನ್ನಪ್ಪನವರು. ತೆಲಿಗಿ ಮಹಮದ್ ಸಾಹೇಬರು, ಕುಂಚೂರು ಪುಟ್ಟಪ್ಪ, ಅತೀ ಉತ್ತಮ ತಬಲಾ ವಾದಕ ನೇಕಾರ ಸಣ್ಣಪ್ಪ ಕುಂಚೂರು. ರಂಗ ಭೂಮಿ ಕಲಾವಿದೆ ಸೋಗಿ ಶ್ರೀಮತಿ ನಾಗರತ್ನಮ್ಮ ಮುಂತಾದ ರಂಗಭೂಮಿ ಕಲಾವಿದರು ತಾಲ್ಲೂಕಿನವರಾಗಿದ್ದಾರೆ.

**ಚಿತ್ರಕಲೆ** : ಈ ತಾಲ್ಲೂಕಿನ ಬಣಗಾರ ಹೊನ್ನಪ್ಪ, ಬಡಿಗೇರ ರಾಮಚಂದ್ರಪ್ಪ ಹಲುವಾಗಲು, ಕೆ. ಶ್ರೀನಿವಾಸ ಹರಪನಹಳ್ಳಿ ಮತ್ತು ವಿ.ಕೆ. ಜೈನ್ ಹರಪನಹಳ್ಳಿ ನವರು ಚಿತ್ರಕಲೆಯಲ್ಲಿ ಪ್ರಸಿದ್ಧರಾಗಿದ್ದಾರೆ.

**ಆಧುನಿಕ ಬರಹಗಾರರು**

**ಹರಪನಹಳ್ಳಿ ಭೀಮವ್ವ**

ಹರಪನಹಳ್ಳಿ ಭೀಮವ್ವ (ಜುಲೈ ೬, ೧೮೨೩ – ಜನವರಿ ೧೧, ೧೯೦೩) ಅವರು ದಾಸ ಸಾಹಿತ್ಯದಲ್ಲಿ ಪ್ರಮುಖ ಕೊಡುಗೆಯನ್ನಿತ್ತ ಅಪರೂಪದ ಮಹಿಳೆ ಎನಿಸಿದ್ದಾರೆ. ಇವರ ಕಾವ್ಯನಾಮ 'ಭೀಮೇಶ ಕೃಷ್ಣ'. ಇವರನ್ನು ಜನ 'ಅವ್ವನವರೂ' ಎಂದೂ ಹೇಳುತ್ತಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಸ ಸಾಹಿತ್ಯದ ಕೊಡುಗೆ ವೈಶಿಷ್ಟ್ಯಪೂರ್ಣವಾದದ್ದು. ಕರ್ನಾಟಕದ ಧಾರ್ಮಿಕ ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನವೂ ಅಷ್ಟೇ ವಿಶಿಷ್ಟತೆಯಿಂದ ಕೂಡಿದೆ. ಇವರ ಕೀರ್ತನೆಗಳಲ್ಲಿ ಲೋಕಾನುಭವವಿದೆ. ಅಷ್ಟೇ ಅಲ್ಲ, ಲೌಕಿಕ ವಿಡಂಬನೆಯ ಮೂಲಕ ಜನರ ಮಾನಸಿಕ ವಿಕಾಸ ಸಾಧಿಸುವ ಗುಣವೂ ಇದೆ.

ಸುಮಾರು ೧೩೯ ಜನ ದಾಸರು ದಾಸಪರಂಪರೆಯಲ್ಲಿ ಆಗಿ ಹೋಗಿದ್ದಾರೆ. ಅವರಲ್ಲಿ ಪುರುಷ ವರ್ಗವೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಈ ಮನುಪ್ರಣೀತ ಪುರುಷ ಜಗತ್ತಿನಲ್ಲಿ ಸಹಜ. ಅಲ್ಲದೆ ಸ್ತ್ರೀಗೆ ಈ ಜಗತ್ತಿನಲ್ಲಿ ಬಂಧನಗಳೂ ಅಗಣಿತ. ಅಂಥ ಬಂಧನಗಳನ್ನು ಹರಿದೆಸೆದಾಗಲೇ ಅಲ್ಲವೇ ಅಕ್ಕನಂಥ ರತ್ನ ಜನ್ಮ ತಾಳುವುದು. ಆದರೆ ಎಲ್ಲರಿಗೂ ಎಲ್ಲಾ ಬಂಧನಗಳಿಗೆ ಮೋಕ್ಷ ಕಾಣಿಸಲು ಲೌಕಿಕ ಜಗತ್ತಿನ ಆಗುಹೋಗುಗಳಿಗೆ ಬೆನ್ನು ತಿರುಗಿಸಲು ಸಾಧ್ಯವೇ? ಸಂಸಾರದಲ್ಲಿದ್ದುಕೊಂಡೇ ಲೌಕಿಕ ಜಗತ್ತಿನಲ್ಲಿ ಈ ಭೌತಿಕ ಜಗತ್ತಿನಲ್ಲಿ ತನ್ನ ಎಲ್ಲಾ ಕರ್ತವ್ಯಗಳನ್ನು ಮಾಡುತ್ತಲೇ ಮುಕ್ತಿಯ ಸೋಪಾನವನ್ನು ತಾನು ಸ್ವತಃ ಏರುವುದಲ್ಲದೇ ತನ್ನಂಥ ನಾರಿಯರಿಗೆ ದಾರಿ ತೋರಿಸಿದವರಲ್ಲಿ ನಮ್ಮ ಹರಿದಾಸಿಯರಲ್ಲಿ ಪ್ರಮುಖರಾದವರು ಹೆಳವನ ಕಟ್ಟೆ ಗಿರಿಯಮ್ಮ ಹಾಗೂ ಹರಪನಹಳ್ಳಿಯ ಭೀಮವ್ವನವರು.

ಭೀಮವ್ವನವರು ೧೮೨೩ರ ಜುಲೈ ೬ನೇ ತಾರೀಖು ನಾರಾಯಣ ದೇವರ ಕೆರೆ ಎಂಬ ಊರಲ್ಲಿ ನರೇಭಟ್ಟರ ವಂಶದ ರಘುನಾಥಾಚಾರ್ಯ ಮತ್ತು ರಾಘಮ್ಮ ದಂಪತಿಗಳ ಮಗಳಾಗಿ ಜನಿಸಿದರು. ಇವರ ಹುಟ್ಟುಹೆಸರು ಕಮಲಾಕ್ಷಿ. ಇವರು ಹುಟ್ಟಿದ ಕೆಲವು ತಿಂಗಳುಗಳವರೆಗೆ ಇವರ ಮೈಮೇಲೆ ಚಕ್ರಗಳೂ, ಕಾಲುಗಳಲ್ಲಿ ಪದ್ಮಗಳೂ ಇದ್ದುವಂತೆ. ಪುಟ್ಟ ಮಗು ಅಳತೊಡಗಿದಾಗಲೆಲ್ಲಾ ತೊಟ್ಟಿಲು ತೂಗುತ್ತಾ ಹರಿನಾಮ ಹಾಡಿದರೆ ಕೂಡಲೇ ಸುಮ್ಮನಾಗುತ್ತಿತ್ತಂತೆ.

ಭೀಮವ್ವನ ನೆನಪಿನ ಶಕ್ತಿಯೂ ಘನವಾಗಿತ್ತು. ಹಾಗಾಗಿಯೇ ಅವರು ಸಾವಿರಾರು ಕೀರ್ತನೆಗಳನ್ನೂ ನೂರಾರು ನುಡಿಗಳ ಕಥನ ಕೀರ್ತನೆಗಳನ್ನೂ ಬಾಯಿಂದಲೇ ನಿರರ್ಗಳವಾಗಿ ಹೇಳುತ್ತಿದ್ದರು. ಮಗು ಆರು ವರ್ಷದವಳಿರುವಾಗಲೇ ಆಕೆಗೆ ಶ್ರೀ ವೇದವ್ಯಾಸ ದೇವರ ದರ್ಶನವಾಗಿತ್ತು. ಅಂದಿನಿಂದಲೇ ಅವಳಲ್ಲಿ ಗುರುತರ ಬದಲಾವಣೆ ಕಾಣಿಸಿಕೊಂಡಿತ್ತು. ಈಕೆಗೆ ೧೧ ವರ್ಷವಾದಾಗ ರಾಯದುರ್ಗ ತಾಲ್ಲೂಕಿನ ಹರೇ ಸಮುದ್ರ ಗ್ರಾಮದ ಗೋಪಾಲಪ್ಪ ಎಂಬುವರ ವಂಶದ ಮುನಿಯಪ್ಪನವರ ಜೊತೆ ಮದುವೆಯಾಯಿತು. ವರನ ವಯಸ್ಸು ೪೫ ವರ್ಷ. ಅವರಿಗೆ ಇದು ಮೂರನೆಯ ಮದುವೆ. ಮದುವೆಯಾದ ೧೪ ವರ್ಷಕ್ಕೆ ಇವರಿಗೆ ಒಬ್ಬ ಮಗ ಹಾಗೂ ನಾಲ್ಕು ವರ್ಷಗಳ ನಂತರ ಮಗಳೂ ಜನಿಸಿದರು. ಇವರ ೩೫ನೇ ವರ್ಷಕ್ಕೆ ಪತಿ ವಿಯೋಗವಾಯಿತು. ಇಲ್ಲಿಂದ ಇವರ ಜೀವನ ಮಾರ್ಗ ಬದಲಾಯಿತು.

ಒಂದು ದಿನ ಮಧ್ಯಾಹ್ನ ಮಲಗಿದಾಗ ಕನಸಿನಲ್ಲಿ ಒಂದು ಮಹಾ ಅರಣ್ಯದಲ್ಲಿ ಇವರು ಒಂದು ಮರದ ಕೆಳಗೆ ಮಲಗಿದ್ದಾರೆ. ಆಗ ಒಬ್ಬ ತಂಬೂರಿ ಹಿಡಿದ ಮುನಿ (ನಾರದರು) ಒಂದು ಕೃಷ್ಣ ಸರ್ಪದೊಡನೆ ಬಂದಿದ್ದ. ಆ ಸರ್ಪಕ್ಕೆ ಈಕೆಯ ನಾಲಿಗೆಯ ಮೇಲೆ ಮೂರಕ್ಷರ ಬರೆಯಲು ಹೇಳಿದ್ದ. ಆ ನಂತರವೇ ಇವರು ಕೀರ್ತನೆಗಳನ್ನು ರಚಿಸಲು ಪ್ರಾರಂಭಿಸಿದ್ದು.

ಇವರ ಮೊದಲ ಹಾಡು 'ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹನ ಭಕ್ತನೇ' ಎಂಬುದು. ಮೊದಲೆಲ್ಲಾ ಇವರು ತಮಗೆ ಬಂದ ಹಾಡುಗಳನ್ನು ಪ್ರಕಟಪಡಿಸಿರಲಿಲ್ಲ. ಇದರಿಂದಾಗಿ ಹೊಟ್ಟೆನೋವು, ತಲೆನೋವುಗಳನ್ನು ಅನುಭವಿಸಬೇಕಾಯಿತು. ಅಲ್ಲದೆ ಆ ಮುನಿಯು ಪದೇ ಪದೇ ಸ್ವಪ್ನದಲ್ಲಿ ಕಾಣಿಸಿಕೊಂಡು 'ನಾನು ಹೇಳಿಕೊಟ್ಟ ಮಂತ್ರವನ್ನೇಕೆ ಹೇಳುತ್ತಿಲ್ಲ?' ಎಂದು ಗದರತೊಡಗಿದ್ದ. ಸ್ವಪ್ನದಲ್ಲಿ ಬಂದಾಗ ಈಕೆ ಅದೇ ಮುನಿಯನ್ನು ತನ್ನ ಹಾಡುಗಳಿಗೆ ಮುದ್ರಿಕೆಯನ್ನು ಸೂಚಿಸಲು ಹೇಳಿದಾಗ ಆತನೇ 'ಭೀಮೇಶಕೃಷ್ಣ' ಎಂದು ಬಳಸಲು ಸಲಹೆಯಿತ್ತನಂತೆ. ಮುಂದೆ ಕೂಡಾ ಇವರು ಅನೇಕ ಹಾಡುಗಳನ್ನು ರಚಿಸಿದರೂ ತನ್ನನ್ನು ಜನ ಆಡಿಕೊಂಡು ನಕ್ಕಾರೆಂಬ ಹೆದರಿಕೆಯಿಂದ ಸುಮ್ಮನೆ ಇದ್ದಾಗ, ಇವರ ತಮ್ಮನ ಹೆಂಡತಿಯ ಕನಸಿನಲ್ಲಿ ಬಂದ ಆ ಮುನಿಯು ಈ ವಿಷಯವನ್ನು ಹೇಳಿದನಂತೆ.

ಅಂದಿನಿಂದ ಇವರು ತಮ್ಮ ಕೀರ್ತನೆಗಳನ್ನು ಪ್ರಚಾರಗೊಳಿಸಿದರಂತೆ. ಮುಂದೆ ಇವರು ಕನಸಿನಲ್ಲಿ ಕಂಡುದೆಲ್ಲವೂ ಕೀರ್ತನೆ ಹಾಡುಗಳ ರೂಪದಲ್ಲಿ ಬರತೊಡಗಿದವು. ಗೋಪಿಕಾಸ್ತ್ರೀಯರು ಉದ್ಧವನೆದುರು ಮಾಡಿದ ಪ್ರಲಾಪ, ಮುಯ್ಯದ ಹಾಡು, ಸುಭದ್ರಾ ಕಲ್ಯಾಣ, ರತಿ ಕಲ್ಯಾಣ, ನಳಚರಿತ್ರೆ, ಸತ್ಯಭಾಮೆಯು 'ಪತಿದಾನ ಕೊಟ್ಟ ಹಾಡು' ಮುಂತಾದ ದೊಡ್ಡ ಕೀರ್ತನೆಗಳನ್ನಲ್ಲದೆ ಸಣ್ಣ ಪುಟ್ಟ ಕೀರ್ತನೆಗಳನ್ನೂ ಇವರು ಮೂಡಿಸಿದರು.

ಕೀರ್ತನೆ, ಸುಳಾದಿ, ಉಗಾಭೋಗ ಹೀಗೆ ಮೂರು ಪ್ರಕಾರಗಳಲ್ಲಿಯೂ ಭೀಮವ್ವನವರು ಕೃತಿ ರಚನೆ ಮಾಡಿದ್ದು, ೧೪೩ ಸಣ್ಣ ಕೀರ್ತನೆಗಳನ್ನೂ, ೧೯೩ ದೊಡ್ಡ ಕೀರ್ತನೆಗಳನ್ನೂ ರಚಿಸಿದ್ದಾರೆ. ಇನ್ನೂ ಒಂದು ಆಶ್ಚರ್ಯದ ಸಂಗತಿ ಎಂದರೆ ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಶ್ರಾವಣ ಮಾಸದ ಶುಕ್ರವಾರ ಹಾಗೂ ಶನಿವಾರಗಳಂದು ಲಕ್ಷ್ಮೀದೇವಿಯನ್ನು ಗಡಿಗೆಯ ರೂಪದಲ್ಲಿ ಕೂಡಿಸಿ ಪೂಜಿಸುವಾಗ ಹಾಡುಗಳು, ಮಂಗಳಗೌರಿಯ ಹಾಡುಗಳು, ಅಲ್ಲದೆ ಜಲಕ್ರೀಡೆ ಹಾಡುಗಳು ಇತ್ಯಾದಿ ಕಥನ, ಕವನಗಳೆಲ್ಲವೂ ಭೀಮವ್ವನವರಿಂದ ರಚಿತಗೊಂಡಿವೆ. ಇವರ ಕಥಾ ವಸ್ತುಗಳು ಸಾಮಾನ್ಯವಾಗಿ ರಾಮಾಯಣ, ಮಹಾಭಾರತ, ಭಾಗವತದ ಘಟನೆಗಳೇ ಆಗಿವೆ. ದ್ರೌಪದಿ ವಸ್ತ್ರಾಪಹರಣದ ಸಮಯದ ಸೀರೆಗಳ ವರ್ಣನೆ, ಇತರ ಕಾವ್ಯಗಳಲ್ಲಿಯ ಆಭರಣಗಳು, ಭಕ್ಷ್ಯ ಭೋಜನಗಳ ವರ್ಣನೆ ಮುಂತಾದವು ತುಂಬಾ ಸುಂದರವಾಗಿವೆ.

ಹೆಣ್ಣಿಗೆ ಮುತ್ತೈದೆತನ, ಸಂತಾನ ಪ್ರಾಪ್ತಿ ಇವುಗಳ ಮಹತ್ವವನ್ನು ತೋರುವ ಮನೋಭಾವ ಭೀಮವ್ವನವರ ಕಾವ್ಯಗಳಲ್ಲಿ ಎದ್ದು ಕಾಣುತ್ತದೆ. ಹಸೆಗೆ ಕರೆಯುವ ಆರತಿಯ ಹಾಡು, ಉರುಟಣೆಯ ಹಾಡು ಇತ್ಯಾದಿ ಸಂಪ್ರದಾಯದ ಹಾಡುಗಳನ್ನೂ ಭೀಮವ್ವನವರು ರಚಿಸಿದ್ದಾರೆ. ಅಷ್ಟೇ ಅಲ್ಲದೆ, ಮಧ್ವಮತದ ತತ್ವಗಳೂ ಅವರ ಕೀರ್ತನೆಗಳಲ್ಲಿ ಕಂಡುಬರುತ್ತವೆ. ಪಂಚವಿಧ ಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಇವುಗಳಿಂದ ಇವರು ಭಗವಂತನನ್ನು ಸ್ತುತಿಸಿದ್ದಾರೆ.

ಭೀಮವ್ವನವರ ಕಾವ್ಯಗಳಲ್ಲಿಯ ಸಂಭಾಷಣಾ ತಂತ್ರದ ವೈಶಿಷ್ಟ್ಯವನ್ನು ನೋಡಬೇಕೆಂದರೆ ಸತ್ಯಭಾಮೆ, ಪಾರ್ವತಿ, ಸತ್ಯಭಾಮ–ರುಕ್ಮಿಣಿ ಸಂವಾದದಲ್ಲಿ ನೋಡಬಹುದು. ರುಕ್ಮಿಣಿ ತಾನು ಪಟ್ಟದ ರಾಣಿ, ಸತ್ಯಭಾಮೆ ಮೆಚ್ಚಿ ಬಂದವಳು ಎಂದು ಮೂದಲಿಸಿದರೆ – ಸತ್ಯಭಾಮೆಯು, ತಂದೆ ತಾಯಿ ಅಣ್ಣಂದಿರನ್ನು ವಂಚಿಸಿ ಪತ್ರ ಬರೆದು ಒಲಿಸಿಕೊಂಡು ಓಡಿಬಂದವಳು ಎಂದು ಹಳಿಯುತ್ತಾಳೆ. ಈ ರೀತಿ ಕಥೆಯನ್ನು ಪಾತ್ರಗಳ ಬಾಯಿಂದಲೇ ಹೇಳಿಸುವ ರೀತಿ ಅನನ್ಯವಾದದ್ದು. ಅಸಾಮಾನ್ಯ ಗ್ರಹಣಶಕ್ತಿ, ಸ್ಮರಣಶಕ್ತಿ, ಧಾರಣ ಹಾಗೂ ಪ್ರತಿಭೆ ಮೆಚ್ಚುವಂತಹದು. ಹರಪನಹಳ್ಳಿ ಭೀಮವ್ವನವರು ಕ್ರಿ. ಶ. ೧೯೦೩ನೇ ಜನವರಿ ತಿಂಗಳ ೧೧ನೇ ತಾರೀಖು ಅಂದರೆ ಪುಷ್ಯ ಶುದ್ಧ ೧೩, ಮುಕ್ಕೋಟಿ ದ್ವಾದಶಿಯ ದಿನ ಮಧ್ಯಾಹ್ನದಲ್ಲಿ ನಿಧನರಾದರು. (ಮಾಹಿತಿ ಕೃಪೆ : ಕರ್ಮವೀರ ಪತ್ರಿಕೆಯಲ್ಲಿ ಶ್ರೀಮತಿ ಮಾಲತಿ ಮುದಕವಿ ಅವರ ಲೇಖನ)

**ಟಿ. ಹೆಚ್. ಎಂ. ಸದಾಶಿವಯ್ಯ**: ಇವರು ಹರಪನಹಳ್ಳಿ ತಾಲ್ಲೂಕಿನಲ್ಲಿ ಜನಿಸಿದ್ದು, ಎಂ.ಎ.,ಎಲ್‌ಎಲ್‌ಬಿ ಪದವಿಯನ್ನು ಮುಗಿಸಿದ್ದು, ವೃತ್ತಿಯಲ್ಲಿ ನ್ಯಾಯಾಧೀಶರಾಗಿದ್ದು, ೧೯೪೭ ರ ಆದವಾನಿ ಬಳ್ಳಾರಿ ಜಿಲ್ಲೆಯ ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ಪೂರ್ವ ಕರ್ನಾಟಕ ಗಡಿ ನಿರ್ಣಯ, ಅಕ್ಕನ ಹಂಬಲ, ಆಂಧ್ರಪ್ರದೇಶದ ಅಜ್ಞಾತ ಕವಿಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

**ಹರಪನಹಳ್ಳಿಯ ಹೈಯಾತ್ ಶಾಸ್ತ್ರಿಗಳು** : ಇವರು ೧೮೮೨ ರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಜನಿಸಿದ್ದು, ಹರಪುರಿ ಪಂಚಾಂಗವನ್ನು ರಚಿಸಿರುತ್ತಾರೆ.

**ಚಿಕ್ಕೇರೂರು ಗೋವಿಂದಾಚಾರ್ಯರು**: ಇವರು ಹರಪನಹಳ್ಳಿ ಪಟ್ಟಣದಲ್ಲಿ ಜನಿಸಿದ್ದು, ತಾಲ್ಲೂಕು ಕಛೇರಿಯಲ್ಲಿ ದಾಖಲೆ ರಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಹರಪನಹಳ್ಳಿ ಪಾಳೇಗಾರರು, ನಾರಾಯಣದೇವರ ಚರಿತ್ರೆ, ಬಿದಿರಹಳ್ಳಿ ಕ್ಷೇತ್ರ ಮಹಾತ್ಮೆ, ತಿಮಲಾಪುರದಯ್ಯ ಚರಿತ್ರೆ ಹಾಗೂ ಪ್ರಸನ್ನ ವೆಂಕಟರಮಣ ಚರಿತ್ರೆ ಕೃತಿಗಳನ್ನು ರಚಿಸಿದ್ದು, ಎಲ್ಲಾ ಕೃತಿಗಳು ಹಸ್ತಪ್ರತಿ ರೂಪದಲ್ಲಿದ್ದು, ಮುದ್ರಣಗೊಂಡಿಲ್ಲವೆಂದು

ತಿಳಿದುಬರುತ್ತದೆ.

**ಮುತ್ತಿಗಿ ಆನಂದರಾವ್** : ಇವರು ಹರಪನಹಳ್ಳಿ ತಾಲ್ಲೂಕಿನಲ್ಲಿ ಜನಿಸಿದ್ದು, ಎಂ.ಎ ಪದವಿಯನ್ನು ಹೊಂದಿದ್ದು, ಮಂಗಳೂರು ಸರಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಹರಿಶ್ಚಂದ್ರ. ವೇದಾವತಿ, ಜೀವನ ಸಂಗ್ರಾಮ, ನಟರಾಜ–ನಾಟಕ, ಏರಿಳಿತ–ಕಾದಂಬರಿ ಮುಂತಾದ ಕೃತಿಗಳನ್ನು ರಚಿಸಿರುತ್ತಾರೆ.

**ಹಾಸ್ಯ ಸಾಹಿತಿ–ಬೀಚಿ (ಭೀಮಸೇನ್‌ರಾವ್):**

**ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು**
**ಚೆನ್ನೆಂದು ದೊಡ್ಡವರ ಅನುಕರಿಸ ಬೇಡ**
**ಏನಾಯ್ತು ಮರಿಕತ್ತೆ ? ಚೆಲುವಿತ್ತು. ಮುದ್ದಿತ್ತು**
**ತನ್ನಪ್ಪನಂತಾಗಿ ಹಾಳಾಯ್ತೊ ತಿಂಮ**
**– (ಅಂದನಾ ತಿಂಮ)**

ಬರಹಗಾರನ ವೈಯಕ್ತಿಕ ಪ್ರತಿಭೆ ಜಡ ಅನುಕರಣೆಯ ಮರಳಿನಲ್ಲಿ ಇಂಗಿ ಹೋಗಬಾರದು. ಇದು ಬೀಚಿ ಅವರ ದೃಷ್ಟಿಕೋನ. ಈ ದೃಷ್ಟಿಯನ್ನು ಕಂಡೇ ಇರಬೇಕು ತುಂಬ ಗಂಭೀರ ಬರಹಗಾರರಾದ ಶಂ.ಬಾ. ಜೋಶಿಯವರು ಬೀಚಿ ಯವರನ್ನು "ತನ್ನನ್ನು ತಾನೇ ರೂಪಿಸಿಕೊಂಡ ಅಪೂರ್ವ ಸ್ವಯಂಭೂ" ಎಂದೂ ವರ್ಣಿಸಿದ್ದಾರೆ.

ಬೀಚಿ ಪ್ರಸಿದ್ಧ ಇಂಗ್ಲಿಷ್ ಕಾದಂಬರಿಗಳ ನಗೆತುಣುಕುಗಳ ಭಾವಸಾಮಗ್ರಿಯನ್ನು ಕನ್ನಡಕ್ಕೆ ಇಳಿಸಿದ್ದಾರೆ ನಿಜ. ಆದರೆ ಅವರ ಭಾಷಾಪ್ರಜ್ಞೆಯಲ್ಲಿ ಕನ್ನಡದ ಛಾಪು ಇದೆ. ಶಬ್ದದ ವಿಶಿಷ್ಟ ಸತ್ವದಿಂದಲೇ ವಿಚಾರಗಳನ್ನು ಕೆದಕಬೇಕೆಂಬ ಆರೋಗ್ಯಕರ ವ್ಯಂಗ್ಯಶೀಲತೆಯಿದೆ. "ಮಾನವನ ಬಾಳು ಗೋಪುರದ ಗಡಿಯಾರ. ತಲೆ ಎತ್ತಿದರೆ ಮಾತ್ರ ಕಾಣುತ್ತದೆ. ಎತ್ತಲು ತಲೆ ಎಂಬುದೊಂದು ಬೇಕು. ಎತ್ತಬೇಕು ಎಂಬುದು ಅದಕ್ಕೆ ತೋಚಬೇಕು. ಅಲ್ಲವೆ? ಅದಕ್ಕಾಗಿ ಮನುಷ್ಯನೆಂಬ ಪ್ರಾಣಿ ಊರ್ಧ್ವಮುಖಿ. ಗಡಿಯಾರ ಅಂಬುದು ಅದಕ್ಕೆ ತೋಚಬೇಕು. ಬರೀ ಕಂಡರೂ ಸಾಲದು. ಅದರ ಮುಳ್ಳುಗಳ ಲೆಕ್ಕಾಚಾರ ತಿಳಿದಿರಬೇಕು". ಹೀಗೆ ಶಬ್ದಮುಖವಾಗಿ ಪ್ರತಿಮಾತ್ಮಕವಾಗಿ ಬರೆಯುವ ಶಕ್ತಿಯನ್ನು ಅವರು ರೂಢಿಸಿಕೊಂಡಿದ್ದಾರೆ. ಈ ಬಗೆಯ ವ್ಯಂಗ್ಯ ಶೈಲಿಯೇ ಅವರ ದೊಡ್ಡ ಕೊಡುಗೆ.

ಭಾಷೆಯ ಬೇರುಗಳೊಳಗೆ ನೀರಿನಂತೆ ಇಳಿದುಕೊಂಡು ಅದರ ಒಳಮೈಯ ಇಕ್ಕಟ್ಟಾದ ಸ್ಥಳಗಳನ್ನೆಲ್ಲ ಶೋಧಿಸುವ ಕೆಲಸ ಕೈಗೊಂಡವರು ಬೀಚಿ. ಇದರ

ಪರಿಣಾಮವಾಗಿ ಶಬ್ದದ ಬೆನ್ನಹತ್ತಿ ಅದರ ವಕ್ರಗತಿಗಳನ್ನೆಲ್ಲ ತೋರಿಸಿಕೊಡುವುದು. ಹಾಸ್ಯದೃಷ್ಟಿಯನ್ನಿರಿಸಿಕೊಂಡು ಶಬ್ದದ ಆಚೆ ಈಚೆಯ ವಿಚಾರದ ಮಗ್ಗುಲುಗಳನ್ನು ತೋರಿಸಿ ಕೊಡುವುದು ಅವರಿಗೆ ಸಾಧ್ಯವಾಯಿತು. ಈ ದೃಷ್ಟಿಯಿಂದ ಹಾಸ್ಯ ವಿಶ್ಲೇಷಣೆ ಶಬ್ದಶೋಧಗಳೆರಡನ್ನೂ ಒಂದೇ ಮೈಯಲ್ಲಿ ಸಾಧಿಸಿದ ಕೀರ್ತಿ ಬೀಚಿಯವರಿಗೆ ಸಲ್ಲುತ್ತದೆ. ಆಧುನಿಕ ಕನ್ನಡ ಹಾಸ್ಯ ಪರಂಪರೆ ಬಹುಮುಖಿಯಾದದ್ದು, ಆರ್. ನರಸಿಂಹಾಚಾರ್, ಗೊರೂರು, ಪಡಕೋಣೆ ರಮಾನಂದರಾಯ ಇವರುಗಳಲ್ಲಿ ಹಾಸ್ಯ ಪ್ರಸಂಗಗಳ ನವಿರಾದ ವಸ್ತು ವಿವರಣೆಯಿದೆ. ರಾಶಿ, ರಾಜರತ್ನಂ, ಎ.ಎನ್. ಮೂರ್ತಿ ರಾವ್, ಲಾಂಗೂಲಾಚಾರ್ಯ ಇವರುಗಳ ಹಾಸ್ಯದಲ್ಲಿ ಆತ್ಮೀಯತೆಯ ಲೇಪವಿದೆ. ನಾಡಿಗೇರ್ ಸೋದರರು, ನಾ. ಕಸ್ತೂರಿ, 'ಎನ್.ಕೆ.', ಎಚ್.ಕೆ. ರಂಗನಾಥ್ ಇವರುಗಳು ಶುದ್ಧಹಾಸ್ಯದ ಅಬ್ಬರದ ದರ್ಶನ ಮಾಡಿಕೊಡುತ್ತಾರೆ. ಶ್ರೀರಂಗ, ಕಾರಂತ ಇವರ ಹಾಸ್ಯದ ಹಿನ್ನೆಲೆಯಲ್ಲಿ ವಿಚಾರದ ಬೆಟ್ಟವೇ ಇರುತ್ತದೆ. ರಾ.ಕು., ಅ.ರಾಸೇ., ದಾಶರಥಿ ದೀಕ್ಷಿತ್, ಸುನಂದಮ್ಮ ಮೊದಲಾದವರು ತಮ್ಮ ವಿಚಿತ್ರ ದೃಷ್ಟಿಕೋನದಿಂದ ಹಾಸ್ಯಪ್ರಕರಣಗಳನ್ನು ಮಥಿಸುತ್ತಾರೆ. ಬೀಚಿ ಶಬ್ದದ ಬೆನ್ನು ಹಿಡಿದು ಹಾಸ್ಯದ ಒಳಸೆಲೆಗಳನ್ನು ಶೋಧಿಸುವ ಅನನ್ಯ ಪಂಥದ ಬರಹಗಾರರಾಗಿದ್ದಾರೆ.

''ಬೀಚಿ''. ಕನ್ನಡ-ಹೂಣ ಲಿಪಿಗಳ ಎರಡು ತಲೆ ಕರುವಿನಂತೆ ವಿಚಿತ್ರವಾಗಿ ಕಾಣುವ ಈ ಹೆಸರು ನಿಜವಾಗಿ ಅಚ್ಚಕನ್ನಡದ 'ಬೀಚಿ'ಯೇ ಅವರ ನಿಜವಾದ ಹೆಸರು, ಹೆದರಿಕೆ ಹುಟ್ಟಿಸುವಂತ ಬಲಶಾಲಿಯಾದ ಹೆಸರೇ, ರಾಯಸಂ ಭೀಮಸೇನರಾವ್. ಈ ಬಗ್ಗೆ ಅವರೇ ವಿವರಣೆ ನೀಡಿದ್ದಾರೆ.

''ಪಾರ್ಥಸಾರಥಿ ಪಾಚು ಆಗುತ್ತಾನೆ. ನಾರಾಯಣ ನಾಣಿ. ಅಂತೆಯೇ ಭೀಮಸೇನ ಬೀಚಿಯಾದ ಅವರಿವರ ಬಾಯಲ್ಲಿ, ಹಾಗಾದುದೇ ಒಳಿತಾಯಿತು. ಸದಾ ಕರುಳಿನ ಬೇನೆಯಿಂದ ನರಳುವ ಈ ಹೊಟ್ಟೆರೋಗಿ 'ಭೀಮಸೇನ' ಹೇಗಾದಾನು?'' ಹೀಗಾಗಿ ಈ 'ಕಾಚಿಕಡ್ಡಿ ಪೈಲುವಾನ' ಅವರ ಅಮ್ಮನ ಮುದ್ದಿನ ನುಡಿಗತ್ತರಿಗೆ ಸಿಲುಕಿ 'ಬೀಚಿ'ಯಾದ.

ಅವರ ಜೀವನ ಚರಿತ್ರೆಯ ಒಂದು ಪುಟ ಅವರೇ ಬರೆದ 'ಬೀಚಿ ಲೈಪೋಗ್ರಾಫಿ' ಯಲ್ಲಿದೆ.

| | | |
|---|---|---|
| ಹುಟ್ಟಿದ ತಾರೀಖು | : | ೨೩-೪-೧೯೧೩ |
| ಶಿಕ್ಷಣ | : | ಎಸ್.ಎಸ್.ಎಲ್.ಸಿ. ಪಾಸು ೧೯೩೦ |
| ನೌಕರಿಗೆ ಸೇರಿದ್ದು | : | ಪೋಲೀಸ್ ಖಾತೆಯಲ್ಲಿ ಅಟೆಂಡರ್ ೧೯೩೧ |
| ಪ್ರಥಮ ಲೇಖನ ಮುದ್ರಣ | : | ಪ್ರಜಾಮತ (ಮದ್ರಾಸ್) ೧೯೩೩ |
| ಮದುವೆ | : | ಜಮಖಂಡಿ ಶ್ರೀನಿವಾಸಚಾರ್ಯರ ಮಗಳು |

ಸೌ.ಸೀತಾಬಾಯಿ ಅವರೊಡನೆ. ೧೯೩೩ (ಶ್ರಾವಣ)

ಪ್ರಥಮ ಸಂತಾನ : ೧೯೪೦

ಪ್ರಥಮ ಪುಸ್ತಕ ಪ್ರಕಟಣೆ : ೧೯೪೬

ಕೆಲಸದಲ್ಲಿ ಬಡ್ತಿ : ಸೂಪರಿಂಟೆಂಡೆಂಟ್,
ಸ್ಪೆಷಲ್ ಬ್ರಾಂಚ್ ಸಿ.ಐ.ಡಿ. ಬೆಂಗಳೂರು
(ರಾಜ್ಯದಲ್ಲಿ ಈ ತರಹದ್ದು ಹುದ್ದೆ ಇದೊಂದೇ)

ಪಿಂಚಣಿ : ೧೯೬೮

ಪಿಂಚಣಿ ಹಣ : ರೂ. ೧೩೩

ವಿಶೇಷ ಉಲ್ಲೇಖನೀಯ : ಹುಟ್ಟುವುದು, ಮದುವೆ.

ಬೀಚಿ ಹರಪನಹಳ್ಳಿಯ ಹುರುಪಿನ ಜೀವ. ಅವರೇ ತಮ್ಮ ಬಾಲ್ಯದ ಬಗೆಗೂ ಹೇಳಿಕೊಂಡಿದ್ದಾರೆ: ''ಪರಾವಲಂಬಿ ಜೀವಿ ನಾನಲ್ಲ. ಹುಟ್ಟುತ್ತಲೇ ತಂದೆ, ತಾಯಿ ಇಲ್ಲ. ಬಡವರಾದ ಸೋದರತ್ತೆ ಅವರು ಉಳಿದ ತಂಗಳ ಹಾಕಿ ಸಾಕಿದರು.... ಎಸ್ಸೆಸ್ಸೆಲ್ಸಿ ಮುಗಿಸುವುದೇ ಒಂದು ಪ್ರಯಾಸವಾಯಿತು–ಶಾಲೆಗೆ ಫೀಜು ಕಟ್ಟುವುದಕ್ಕೆ ಗತಿಯಿಲ್ಲದೆ, ಅಲ್ಲಿಗೆ ಮುಗಿಯಿತು ವಿದ್ಯಾಭ್ಯಾಸದ ಕತೆ''. ಅವರಿಗೆ ಬಾಲ್ಯದಲ್ಲಿ ಅಕ್ಷರಾಭ್ಯಾಸವಾದದ್ದು ತೆಲುಗಿನಲ್ಲಿ. ಸೋದರಮಾವ ವೃತ್ತಿಯಲ್ಲಿ ಅರ್ಚಕರು. ಅವರ ಮನೆಯಲ್ಲಿ 'ಮೇಲುಕರಟದ ತುರಿಯಿಂದ ಬೆಳೆದವನು' ಎಂದು ಬೀಚಿ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅವರು ಕನ್ನಡ ಕಲಿತಿದ್ದೇ ಎಸ್.ಎಸ್.ಎಲ್.ಸಿ. ವೇಳೆಗೆ (ಅಥವಾ ಆಗಲೂ ಅಲ್ಲ. I learnt Kannada after I became an author-ಇದು ಅವರದೇ ಮಾತು) ಪೋಲೀಸ್ ಇಲಾಖೆಯಲ್ಲಿ ಅಖಂಡವಾಗಿ ಮೂವತ್ತೆರಡು ವರ್ಷ ಸೇವೆ. ಬಹುಶಃ ಇವರ ಹುಡುಕುಗಣ್ಣು, ಚುಚ್ಚು ಮಾತು, ಝಾಡಿಸುವ ಮನೋಧರ್ಮ ಇವೆಲ್ಲ ಬಹುಮಟ್ಟಿಗೆ ಆ ಡಿಪಾರ್ಟ್‌ಮೆಂಟಿನ ಪ್ರಸಾದ ಎನ್ನಿಸುತ್ತದೆ. ಇದನ್ನು ಮನಸ್ಸಿನಲ್ಲಿರಿಸಿಕೊಂಡೇ

ಎಂ.ಎನ್.ವ್ಯಾಸರಾವ್ ಬೀಚಿಯವರನ್ನು ಕುರಿತ ಒಂದು ಪದ್ಯದಲ್ಲಿ–

**ಕಾಲಮಾನಗಳನಾಚೆ ನೂಕಿ**
**ಸವೆದು ಸತ್ತವುಗಳ ಬೆದಕಿ ಕೆದಿಕಿ**
**ಸದಾ ತನಿಖೆಯಲ್ಲಿರುವ ಮನಸು**

ಎಂದಿದ್ದಾರೆ. ಬೀಚಿ ಬರವಣಿಗೆಗೆ ಇಳಿದದ್ದು ಒಂದು ಆಕಸ್ಮಿಕವೇ. ಅದರಲ್ಲೂ ಹಾಸ್ಯದ ಬರವಣಿಗೆಗೆ ಅವರಿಗೆ ಪ್ರೇರಣೆ ಬಂದದ್ದು ಇನ್ನೊಂದು ಆಕಸ್ಮಿಕ. ಹಾಸ್ಯಪ್ರಜ್ಞೆಯೇನೋ ಅವರಲ್ಲಿ ಧಾರಾಳವಾಗಿತ್ತು. ಆದ್ದರಿಂದ ಏನನ್ನೂ ಬರೆಯದಿದ್ದರೂ ಹಾಸ್ಯಗಾರರಾಗಿರುವವರನ್ನು ಅವರು ಮೆಚ್ಚಿದ್ದಾರೆ.

“ಎಂದು ನೀನು ಹಾಸ್ಯ ಲೇಖಕನಾದಿ?” ಎಂಬುದಕ್ಕೆ ಉತ್ತರ ಸಿಕ್ಕಿತು. ಆದರೆ ನೀನೆಂದು ಹಾಸ್ಯಗಾರನಾದಿ ಎಂಬ ಪ್ರಶ್ನೆಗೆ ಉತ್ತರ ಹೇಳುವುದು ತುಂಬ ಕಷ್ಟ. ಹಾಸ್ಯಗಾರ ಅವನು ಹುಟ್ಟುವ ಮೊದಲೇ ಹಾಸ್ಯಗಾರನಾಗಿರುತ್ತಾನೆ. ಆಮೇಲೆ ಅವನು ಲೇಖಕನಾದರೆ ಹಾಸ್ಯ ಲೇಖಕನಾಗುತ್ತಾನೆ. ಇಲ್ಲದಿದ್ದರೆ ಬರಿಯ ಹಾಸ್ಯಗಾರನಾಗಿಯೇ ಉಳಿಯುತ್ತಾನೆ. ಅಂಥ ಹುಟ್ಟು ಹಾಸ್ಯಗಾರರು ನಮ್ಮಲ್ಲಿ ಹೇರಳವಾಗಿದ್ದಾರೆ.

“ಬೀಚಿ ಅವರಿಗೆ ಬರೆಯುವ ಅಭ್ಯಾಸ ಇರಲಿಲ್ಲ ಮಾತ್ರವಲ್ಲ. ‘ಕನ್ನಡದಲ್ಲಿ ಬರೆಯುವುದು ಓದುವುದು ಅಷ್ಟೇನೂ ಗೌರವದ ಕೆಲಸವಲ್ಲ’, ಎಂಬ ಭಾವನೆಯೂ ಇತ್ತು. ಕನ್ನಡ ಸಾಹಿತ್ಯ ಗ್ರಂಥಗಳ ಪರಿಚಯವೇ ಇಲ್ಲದಿದ್ದ ಬೀಚಿಯಂಥ ತರುಣನನ್ನು ಸಾಹಿತ್ಯ ಜಗತ್ತಿನ ಗುರುತ್ವಾಕರ್ಷಣೆಗೆ ಒಳಪಡಿಸಿದವರೆಂದರೆ ಅ.ನ. ಕೃಷ್ಣರಾಯರು. ಅವರ ಸಂಧ್ಯಾರಾಗ ಬೀಚಿಯವರ ಮನಸ್ಸನ್ನು ಸೆಳೆದ ಕಾದಂಬರಿ. ಈ ಕಾದಂಬರಿಯ ಪರಿಚಯವಾದುದೂ ಒಂದು ಸ್ವಾರಸ್ಯಕರ ವಿಷಯವೇ. ಇವರ ಪತ್ನಿ ಕನ್ನಡ ಭಕ್ತೆ. ಕನ್ನಡ ಪುಸ್ತಕ ಓದುವ ಹವ್ಯಾಸ ಆಕೆಯದು. ಬೀಚಿ ಸ್ವಲ್ಪ ತಿರಸ್ಕಾರದ ಭಾವದಿಂದಲೇ ಒಂದು ಪುಸ್ತಕದ ಅಂಗಡಿಗೆ ಹೋದರಂತೆ. “ಒಂದು ಕನ್ನಡದ ಪುಸ್ತಕ ಕೊಡಿ. ಯಾವುದಾದರೂ ಚಿಂತೆಯಿಲ್ಲ. ರೈಲ್ವೆ ಟೈಮ್ ಟೇಬಲ್ ಪುಸ್ತಕಕೊಟ್ಟರೂ ಅಡ್ಡಿಯಿಲ್ಲ. ಆದರೆ ಕನ್ನಡದಲ್ಲಿ ಅಚ್ಚಾಗಿರಬೇಕು” ಎಂದರಂತೆ! ಪುಣ್ಯಕ್ಕೆ ಅಂಗಡಿಯಾತ ಕೊಟ್ಟ ಪುಸ್ತಕ ‘ಸಂಧ್ಯಾರಾಗ’. ಅದನ್ನು ಓದಿದ ಬೀಚಿ ಸದ್ದಿಲ್ಲದೆ ಕನ್ನಡ ಪ್ರೇಮಿಯಾದರು. ಬಳ್ಳಾರಿಯಲ್ಲಿದ್ದ ಗೆಳೆಯ ಕೋ. ಚೆನ್ನಬಸಪ್ಪ ಅವರ ಕಾಟದಿಂದ, ಕೋ.ಚೆ. ಸಂಪಾದಕರಾಗಿದ್ದ ರೈತವಾಣಿ ವಾರಪತ್ರಿಕೆಯಲ್ಲಿ ‘ಬೇವಿನಕಟ್ಟೆ ತಿಂಮ’ ಎಂಬ ಸ್ಥಿರ ಶೀರ್ಷಿಕೆಯಲ್ಲಿ ಹಾಸ್ಯ ಲೇಖನಗಳನ್ನು ಬರೆದು ಅನಂತರ ಪಾ.ಪು.ಅವರ ‘ವಿಶಾಲ ಕರ್ನಾಟಕ’ ದಿನಪತ್ರಿಕೆಯಲ್ಲಿ ‘ಕೆನೆ ಮೊಸರು’ ಸ್ಥಿರ ಶೀರ್ಷಿಕೆಯಡಿಯಲ್ಲಿ ನಿತ್ಯವೂ ಹರಟೆಗಳನ್ನು ಬರೆದರು.

ಅವರು ನಾಟಕ ಪ್ರೇಮಿಯೂ ಆಗಿದ್ದರು. ಒಂದು ನಾಟಕ ಬರೆದು ಬಳ್ಳಾರಿಯ ಜನರ ಕೆಂಗಣ್ಣಿನ ಕೃಪೆಗೆ ಪಾತ್ರರಾದರು. ಅವರು ಬರೆದ ಮೊದಲ ನಾಟಕ “ಯದ್ವಾತದ್ವಾ ಅಥವಾ ದೇವರ ಆತ್ಮಹತ್ಯೆ” ಬರೆದ ಹುರುಪಿನಲ್ಲೇ ಗೆಳೆಯರನ್ನು ಕೂಡಿಸಿ ಬಳ್ಳಾರಿಯಲ್ಲಿ ಆಡಿಯೂ ಬಿಟ್ಟರು. ಬೀಚಿಯವರೇ ದೇವರ ವೇಷ ಹಾಕಿ ರಂಗಭೂಮಿಯ ಮೇಲೆ ಟೈಯಿಂದ ಉರುಲು ಹಾಕಿಕೊಂಡು ‘ಆತ್ಮಹತ್ಯೆ’ ಮಾಡಿಕೊಂಡರು. ಮರುದಿನ ಅವರ ಅವಸ್ಥೆ ಬೇಡ. ಉತ್ತಮ ಜಾತಿಯವರೆಂದು ಭ್ರಮಿಸಿಕೊಂಡ ಅನೇಕರು ಬೀಚಿಯ ಮೇಲೆ ತಮ್ಮ ಜುಟ್ಟಿನಿಂದಲೇ ಕೆಂಡ ಕಾರಿದರಂತೆ. ಆ ಜನಗಳ ತಪೋಜ್ವಾಲೆ ಎಂದೋ ತಣ್ಣಗಾಗಿದ್ದರಿಂದ ಬೀಚಿಯವರು ಬಳ್ಳಾರಿ ರಾಘವರ ಸಕಾಲಿಕ ಸಹಾಯದಿಂದಾಗಿ ಉಳಿದುಕೊಂಡರಂತೆ.

೧೯೪೭ರಲ್ಲಿ ಪ್ರಕಟಿತಗೊಂಡ ‘ರೇಡಿಯೋ ನಾಟಕ’ಗಳಿಂದ ಹಿಡಿದು ತಾವು ತೀರಿಕೊಳ್ಳುವವರೆಗೂ ಬೀಚಿ ಬರವಣಿಗೆಗೆ ವಿಶ್ರಾಂತಿ ಎಂಬುದೇ ಇರಲಿಲ್ಲ. ಐವತ್ತಕ್ಕೂ

ಹೆಚ್ಚಿನ ಕೃತಿಗಳನ್ನು ನೀಡಿದ ಅವರ ರಚನೆಗಳಲ್ಲಿ ಹಲವಾರು, ಪುನರ್ ಮುದ್ರಣದ ಭಾಗ್ಯವನ್ನು ಕಂಡಿವೆ. 'ತಿಂಮನ ತಲೆ' ಯಂತೂ ಹನ್ನೊಂದಕ್ಕೂ ಹೆಚ್ಚಿನ ಬಾರಿ ಮುದ್ರಣಗೊಂಡಿದೆ. ಬೀಚಿ ಸತ್ಕಾರ ಸಮಿತಿಯವರು ಅವರ ಅರವತ್ತನೇ ಹುಟುಹಬ್ಬದ ಸನ್ಮಾನದ ಸಂದರ್ಭದಲ್ಲಿ ಬೆಳೆಗಾಂವಿಯಿಂದ ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಹಾರ ಕುಲಕರ್ಣಿ ಇವರುಗಳ ಸಂಪಾದಕತ್ವದಲ್ಲಿ ಹೊರತಂದಿರುವ 'ತಿಂಮಾಯಣ'ದ ಪರಿವಿಡಿಗಳಲ್ಲಿ ಅವರ ಕೃತಿಗಳ ಪೂರ್ಣವಿವರ ಇದೆ. ಬೀಚಿಯವರ ಬರವಣಿಗೆಯನ್ನು ಮುಖ್ಯವಾಗಿ ಕಾದಂಬರಿ, ನಾಟಕ, ಕಥೆ, ಹರಟೆ, ಪದ್ಯ ಎಂದು ವಿಂಗಡಿಸಬಹುದು. ಅವರ 'ದಾಸಕೂಟ' ಕನ್ನಡದಲ್ಲಿಯೇ ಮೊತ್ತ ಮೊದಲ ಹಾಸ್ಯಪ್ರಧಾನ ಕಾದಂಬರಿ. ಇದರ ಒಂದು ಪಾತ್ರದ ಬೆಳವಣಿಗೆ ಮುಂದಿನ 'ಸತೀ ಸೂಳೆ' ಕಾದಂಬರಿಯ ವಸ್ತು. 'ಸರಸ್ವತಿ ಸಂಹಾರ', 'ಖಾದಿ ಸೀರೆ', 'ಬೆಂಗಳೂರು ಬಸ್ಸು', 'ಏರದ ಬಳೆ', 'ಮೇಡಮ್ಮನ ಗಂಡ', 'ಟೆಂಟ್ ಸಿನೆಮಾ', 'ಆರಿದ ಚಹಾ', 'ಬಿತ್ತಿದ್ದೇ ಬೇವು' ಮೊದಲಾದ ಮೂವತ್ತಕ್ಕೂ ಹೆಚ್ಚಿನ ಕಾದಂಬರಿಗಳನ್ನು ಅವರು ಬರೆದಿದ್ದಾರೆ. ಕನ್ನಡದಲ್ಲಿ ಬರುತ್ತಿದ್ದ ಬರಿಯ ಕಾಲ್ಪನಿಕವಾದ ಅಸಂಬದ್ಧ ಪತ್ತೇದಾರಿ (detective) ಕಾದಂಬರಿಗಳ ವ್ಯಂಗ್ಯಾನುಕರಣದ ಫಲವಾಗಿ ಅವರ 'ಸತ್ತವನು ಎದ್ದು ಬಂದಾಗ' ಎಂಬ 'Detective' ಕಾದಂಬರಿ ಮೂಡಿತು. ಸಾಯದೇ ಇದ್ದವನನ್ನು ಶೋಧಿಸುವ ಮೋಜಿನ ಈ ಕಾದಂಬರಿ ತುಂಬ ಜನಪ್ರಿಯವಾಯಿತು. ಅನಕೃ ಅವರನ್ನು ತಮ್ಮ ಗುರುವಾಗಿ ಸ್ವೀಕರಿಸಿದ ಬೀಚಿ ತಮ್ಮ ವಿಶಿಷ್ಟ ವ್ಯಂಗ್ಯಶೈಲಿಯನ್ನು ಮಾತ್ರ ಉಳಿಸಿಕೊಂಡು ಜನಪ್ರಿಯತೆ, ರೋಚಕತೆ, ರೋಮಾಂಚಕತೆಗಳ ವೈಭವದ ಜಾಡಿನಲ್ಲಿ ನುಗ್ಗಿಬಿಟ್ಟರು. ಕಾದಂಬರಿಕಾರ ಬೀಚಿಯವರು ಕಂಡ ಜಗತ್ತು ಬೇರೆ. ಪೋಲೀಸ್ ವಿಭಾಗಲ್ಲಿದ್ದುದರಿಂದ ಸಾಮಾನ್ಯರಿಗೆ ತಲಸ್ಪರ್ಶಿಯಾಗಿ ಕಾಣದ ಒಂದು ಅಧೋ ಲೋಕ ಇವರ ಕಣ್ಣಿಗೆ ಬಿದ್ದು ಸಮಾಜದ ಈ ವರ್ಗದ ಜನರ ಸಮಸ್ತ ಅನುಭವವನ್ನು ಸೆರೆಹಿಡಿಯಲು ಯತ್ನಿಸಿದ್ದಾರೆ. ಇವರೊಂದಿಗೆ ಬದುಕಿನಲ್ಲಿ ಸಂಪನ್ನತೆಯ ಪರ್ವತಗಳಂತೆ ತಲೆ ಎತ್ತಿ ನಿಲ್ಲಬಯಸುವ ಜನರನ್ನು ಬೆರೆಸುತ್ತಾರೆ. ಪ್ರಣಯ ಚಿಂತನದ ರೋಚಕ ವರ್ಣನೆಗೆ ಮನ ಸೋತಿದ್ದಾರೆ. ಕಾದಂಬರಿಕಾರರಾಗಿ ಅವರು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳ ಪತನವನ್ನು ವ್ಯಾಖ್ಯಾನಿಸುತ್ತಾರೆ. ದೇಶದ ಸ್ವಾತಂತ್ರ್ಯದ ಸಂಧಿಕಾಲದಲ್ಲಿ ಅವರು ಬರೆದ 'ದಾಸಕೂಟ' ಇಂಥ ಮೌಲ್ಯಗಳ ಸ್ಥಿತಿಸ್ಥಾಪಕ ಗುಣವನ್ನು ಬಯಲಿಗೆಳೆಯುವ ಒಂದು ಸಾರ್ಥಕ ಪ್ರಯತ್ನ. ರಾಷ್ಟ್ರನಾಯಕರ ಮತ್ತು ಅವರ ಅನು'ನಾಯಿ'ಗಳ ವ್ಯಕ್ತಿತ್ವದ ಸುತ್ತ ಬೆಳೆದುಕೊಳ್ಳುವ ಪೊಳ್ಳು, ಕ್ರಿಯಾ ಹೀನತೆಯನ್ನು ವಾಗಾಡಂಬರದಿಂದ ಮೆಚ್ಚಿಕೊಳ್ಳುವ ಪ್ರವೃತ್ತಿ ಮತ್ತು ಜನತೆಯ ಸಮಯ ಸಾಧಕ ವೃತ್ತಿ ಬಾಲಬಡುಕುತನಗಳಿಂದಾಗಿ ಮರೆಯಲ್ಲೇ ನರಳುವ ಪ್ರಾಮಾಣಿಕತೆ–ಈ ಎರಡು ರಾಜಕೀಯ ಪತನಗಳನ್ನು ಅವರು ಹಲವಾರು ಕಾದಂಬರಿಗಳಲ್ಲಿ ವಿಶ್ಲೇಷಿಸಲು ಯತ್ನಿಸಿದ್ದಾರೆ. ಸಮಾಜದ ಕಂದಾಚಾರಗಳು ಮತ್ತು

ವರ್ಗ ಕಲಹಗಳು ಸಿಡಿಸುತ್ತಿರುವ ಸಾಮಾಜಿಕ ಬೇನೆಗಳನ್ನು ಅವರ 'ಎಲ್ಲರೂ ಸಂಪನ್ನರೇ', 'ಸರಸ್ವತಿಯ ಸಂಹಾರ' ಮೊದಲಾದ ಕೃತಿಗಳು ಪರಿಚಯಿಸಲು ಯತ್ನಿಸಿವೆ. ಮೂರನೆಯ ಬಗೆಯ ಕಾದಂಬರಿಗಳಲ್ಲಿ ಲೈಂಗಿಕ ಕಾಮನೆಗಳು ತುಂಬ ಕಟ್ಟುಪಾಡಿಗೆ ಒಳಗಾದಾಗ ಏನೇನು ವಿಕಾರಗಳನ್ನು ತಾಳಬಹುದು ಎಂಬ ವಿವರಗಳಿವೆ. ಅಸಹಜ ಮನೋವಿಕಾರಗಳಿಂದ ನರಳುವ ಪಾತ್ರಗಳ ವರ್ಣನೆ ಈ ಕಾದಂಬರಿಗಳಲ್ಲಿವೆ. ಇಲ್ಲಿ ಕಾದಂಬರಿಗಳ ವಸ್ತುವಿಗಿಂತ ಬೀಚಿಯವರ ಅಪೂರ್ವ ವ್ಯಂಗ್ಯ ನಿರೂಪಣ ಪದ್ಧತಿಯ ವೀಕ್ಷಕ ವಿವರಣೆ ಮತ್ತು ಶಬ್ದ ಜಾಲಗಳ ಮಶಾಲಿನಲ್ಲಿ ಉತ್ಸವದೇವರೇ ಮಾಯವಾಗುವ ಭಯವೂ ಉಂಟು. ನಿರೂಪಕನಾದ ಬೀಚಿಯವರ 'ಭಾಷಣ ಪ್ರಿಯತೆ'ಯಿಂದಾಗಿ ವಸ್ತು ಕಳೆಗೆಡುವ ಸಂಭವಕ್ಕೂ ಈ ಬಗೆಯ ಕಾದಂಬರಿಗಳು ಲಕ್ಷ್ಯಗಳಾಗಬಲ್ಲವು. ನೈಜಲೋಕದಿಂದಲೇ ಅಪಾರವಾದ ವೈವಿಧ್ಯಮಯ ಪಾತ್ರಗಳನ್ನು ಎತ್ತಿಕೊಳ್ಳಬಲ್ಲ ಬೀಚಿ ನಾಲ್ಕು ಗ್ರಾಮು ಸೆರೆ (ಹೆಂಡ) ಎಂಟು ಗ್ರಾಮು ಕೋಪದ ಕಂಡಕ್ಟರ್ ಕೇಶವರಾಯ, ಬಸವಿ, ಬಸಮ್ಮ, ಚಂದ್ರಮ್ಮ, ಆಚಾರ್ಯರು, ಶಿವಮ್ಮ, ಇನ್ಸ್‌ಪೆಕ್ಟರ್ ಶಾಮಂಣ, ಕಾಲೇಜು ಕನ್ಯೆಯರು ಇಂಥ ನೂರಾರು ಜೀವನ ಪಾತ್ರಗಳನ್ನು ಕಾಣಿಸಿಕೊಟ್ಟಿದ್ದಾರೆ.

ಬೀಚಿಯವರಿಗೆ ತುಂಬ ಕೀರ್ತಿ ತಂದುಕೊಟ್ಟ ಕೃತಿಗಳ ಪೈಕಿ ಹನ್ನೊಂದನೆಯ ಅವತಾರ, ರೇಡಿಯೋ ನಾಟಕಗಳು ಇವೆರಡು ಮುಖ್ಯವಾದುವು. 'ಏಕೀಕರಣ'ದಂಥ ರೇಡಿಯೋ ನಾಟಕ ಕರ್ನಾಟಕದ ಸಮಗ್ರತೆಯ ಆಶಯದಲ್ಲಿಯೂ ಅದರ ಭಾಷಾವೈವಿಧ್ಯಗಳನ್ನು ವಿಪುಲ ಸಾಕ್ಷ್ಯಾಧಾರಗಳಿಂದ ಪ್ರದರ್ಶಿಸುವ ಶುದ್ಧಾಂಗ ಹಾಸ್ಯನಾಟಕ. 'ಹನ್ನೊಂದನೆಯ ಅವತಾರದ' ಎರಡು ನಾಟಕಗಳಲ್ಲೂ ''ದೇಭ'' ಎಂದು ಬೀಚಿ ಜನಪ್ರಿಯಗೊಳಿಸಿದ ದೇಶಭಕ್ತ ಹೇಗೆ ನಮ್ಮ ದೇಶದ 'ಹನ್ನೊಂದನೆಯ ಅವತಾರ'ವಾಗಿದ್ದಾನೆ ಎಂಬುದನ್ನು ತುಂಬ ಅಬ್ಬರದಿಂದ ವ್ಯಂಗ್ಯವಾಗಿ ಕಾಣಿಸಲಾಗಿದೆ. ನವ ರಾಜಕಾರಣಿಗಳಿಂದ ನಮ್ಮ ರಾಜಕೀಯ ಹಾಗೂ ನೈತಿಕ ಮೌಲ್ಯ ಹೇಗೆ ಕುಸಿಯುತ್ತಿದೆ ಎಂಬುದರ ಧ್ವನಿಪೂರ್ಣ ಸಮೀಕ್ಷೆಯೂ ಈ ನಾಟಕಗಳಲ್ಲಿವೆ.

ಬೀಚಿಯವರ ಬರವಣಿಗೆಯ ಕಾವಿನಿಂದ ಪುಷ್ಟಗೊಂಡವುಗಳೆಂದರೆ ಅವರ ಹಾಸ್ಯ ಬರಹಗಳು, ಚುಟುಕುಗಳು, ನಗೆಹನಿಗಳು, ತಿಂಮ ದರ್ಶನಗಳು, ತಿಂಮರಸಾಯನಗಳು, ಹರಟೆಗಳು, ತಿಂಮನ ತಲೆ, ಹುಚ್ಚು ಹುರುಳು, ಚಿನ್ನದ ಕಸ, ಬೆಳ್ಳಿ ತಿಂಮ ನೂರೆಂಟು ಹೇಳಿದ, ಅಮ್ಮಾವ್ರ ಕಾಲ್ಗುಣ, ಹೆಂಡತಿ ನಕ್ಕಾಗ, ಸಂಪನ್ನರಿದ್ದಾರೆ ಎಚ್ಚರಿಕೆ, ಉತ್ತರ ಭೂಪ, ತಿಂಮಿಕ್ಷನರಿ, ಅಂದನಾ ತಿಂಮ ಮೊದಲಾದ ಹಾಸ್ಯಕೃತಿಗಳು ವಾಸ್ತವವಾಗಿ ಬೀಚಿ ಕಥೆ ಬರೆಯಲಿ, ಹರಟೆ ಬರೆಯಲಿ, ನಾಟಕ, ಕಾದಂಬರಿಯನ್ನೇ ಬರೆಯಲಿ ಅವರ ಮೊದಲ ಗಮನ ಮಾತಿನ ಕಡೆಗೆ. ಹೀಗಾಗಿ ಅವರ ವಿಚಾರಗಳ ಸಂಚಾರದ ವೇಗ ಕಡಿಮೆ, ಮಾತಿನ ಪ್ರವಾಹದಲ್ಲಿ ಸೆಳೆತ ಹೆಚ್ಚು ಎಂಬ ಆಕ್ಷೇಪಣೆಗೆ ಅವಕಾಶವಿದೆಯಾದರೂ ಅವರು ಮಾತನ್ನು ಹರಡಿಸುವ

ಬಗೆಯನ್ನು ಅವರ ಹರಟೆಗಳು ಚೆನ್ನಾಗಿ ದುಡಿಸಿಕೊಂಡಿವೆ. ಅವರ ಯಾವುದೇ ಪ್ರಬಂಧ ತೆಗೆದುಕೊಂಡರೂ (ಉದಾ: ಸ್ವಂತ ಸುಳ್ಳುಗಾರರು, ಆ ದಡ ಕಂಡವರು, ಕಾರ್ಪೊರೇಷನ್ ಕಸದ ಗಾಡಿ, ನರ–ಸಿಂಹ, ಪಂಚಪಷ್ಠಿ ಕಸಾಸ ನಾಟಕಂ, ಯಾರೀ ನಾಗರಾಜ, ಇತ್ಯಾದಿ) ವಸ್ತುವಿನ ಗುರುತ್ವಾಕರ್ಷಣೆಯಿಂದ ತೀರ ತಪ್ಪಿಸಿಕೊಳ್ಳದ ಹಾಗೆ ಅದರ ಮೆಲುವಲಯದಲ್ಲಿ ಮಾತಿನ ಕೋಶ ಹಾರಾಡುತ್ತಿರುತ್ತದೆ. ಬೀಚಿ ವಿಷಯವನ್ನು ಹರಡುವ ರೀತಿಯೇ ಹಾಗೆ. ಗೀತಾ ಕುಲಕರ್ಣಿ ಒಂದು ಬೇಸರದ ಗಳಿಗೆಯಲ್ಲಿ ಬೀಚಿಯವರಿಗೆ ತನ್ನ 'ಒಂಟಿ'ಯಾದವಳು ನಾಳೆ 'ಆನಿ' (ಆನೆ) ಯಾಗುತ್ತಿದ್ದೀಯೆ' ಎಂದು ಉತ್ತರ ಕೊಟ್ಟರಂತೆ. ತಿಂಮನನ್ನು ನಾಯಿಗೆ ಹೋಲಿಸುತ್ತಾ ಸರಳವಾಗಿ ಆರಂಭಿಸುವ ಬೀಚಿ ಆ ಪ್ರತಿಮೆಯ ಅಂತರಂಗಕ್ಕೇ ಇಳಿದುಬಿಡುತ್ತಾರೆ.

''ಕಚ್ಚುವದೊಂದೇ ತಿಂಮನ ಕಸುಬಲ್ಲ. ಚಿನ್ನಾಟವಾಡುತ್ತಾ ಒಡೆಯನ ಕೈ ಮೈ ನೆಕ್ಕುತ್ತ ಮಮತೆಯ ನಾಯಿಯಂತೆ ಇಡೀ ಸಮಾಜವನ್ನೇ ನೆಕ್ಕುತ್ತಾನೆ, ತನ್ನ ಉರುಟಾದ ನಾಲಿಗೆಯಿಂದ. ಗಾಯವಿದ್ದವರಿಗೆ ನೋವಾಗಬಹುದು, ನಂಜಾಗ ಬಹುದು, ಗುಣವೂ ಆಗಬಹುದು. ಮನಸ್ಸಿನಂತೆ ಮಹದೇವ''.

ಇದು 'ತಿಂಮ' ಕನ್ನಡದಲ್ಲಿ ಬೆಳೆದ ಬಗೆಯೂ ಹೌದು. ಬೀಚಿ ಬೆಳೆದ ಬಗೆಯೂ ಹೌದು. ಬೀಚಿ ಎಲ್ಲ ವಿಷಯಗಳಲ್ಲೂ ತಲೆಹಾಕಲು ಒಂದು ಒಳ್ಳೆಯ ಪಾತ್ರ ಪ್ರತಿಮೆಯನ್ನು ಬಳಸಿಕೊಂಡರು. ಅದೇ ತಿಂಮ, ಬೀಚಿ ತಿಂಮತನ ಈ ಶಬ್ದಗಳನ್ನು ವ್ಯಾಪಕ ಅರ್ಥದಲ್ಲಿ ಬಳಸಿದ್ದಾರೆ. 'ಬಿಂದು' ಕನ್ನಡದ ಎಲ್ಲ ವರ್ಗಾಕ್ಷರಗಳ ಮುಂದೆ ಸಮಾನವಾಗಿ ಬರುವ ಶಬ್ದ ಅಲ್ಲವೆ? ತಿಂಮ 'ತಿಮ್ಮ'ನಾಗದೆ 'ತಿಂಮ'ನಾದದ್ದೂ ಇಂಥ ಒಂದು ವಿಶಿಷ್ಟ ಉಪಯೋಗಕ್ಕಾಗಿಯೇ. ಇವನು ಹುಟ್ಟಿದ್ದೂ ಒಂದು ವಿಚಿತ್ರ ಸನ್ನಿವೇಶದಲ್ಲೇ. ಬೀಚಿ ಒಮ್ಮೆ ಆಸ್ಪತ್ರೆಯಲ್ಲಿ ನರಳುತ್ತಿದ್ದರಂತೆ. (ಅಂದರೆ ಮನೆಯಲ್ಲಿ ನರಳುತ್ತಲೇ ಇರಲಿಲ್ಲ ಎಂದರ್ಥವಲ್ಲ, ಇರಲಿ!) ಹೊತ್ತು ಕಳೆಯಲು ತುಂಬ ಓದುತ್ತಿದ್ದರು. ವೋಡ್‌ಹೌಸ್‌ನ 'ಆಮ್ನಿ ಬಸ್', ಥ್ಯಾಂಕ್ಯೂ ಜೀವ್ಸ್' ಇವುಗಳನ್ನು ಓದುತ್ತಿದ್ದಾಗ ಕನ್ನಡದಲ್ಲೂ ಜೀವ್ಸ್ ನಂತಹ ಒಂದು ಪಾತ್ರದ ಸೃಷ್ಟಿ ಅಗತ್ಯ ಎಂದುಕೊಂಡರು. ಫಲವಾಗಿ 'ತಿಂಮ' ಹುಟ್ಟಿಕೊಂಡ. ತಿಂಮನ ವಿಷಯದಲ್ಲಿ ಬೀಚಿ ಹೀಗೆ ಹೇಳುತ್ತಾರೆ:

''ತಿಂಮ ಯಾರು?''

''ಯಾವೊಬ್ಬ ತಿರುಮಲರಾಯ ನನ್ನಾಗಲಿ, ತಿಂಮಪ್ಪ ನನ್ನಾಗಲಿ ಮುಂದಿಟ್ಟು ಕೊಂಡು ಇದನ್ನು ಬರೆದಿಲ್ಲ.''

''ಮಕ್ಕಳ ಆಟದಲ್ಲಿ, ಗೆಳೆಯರ ಕೂಟದಲ್ಲಿ, ಹಿರಿಕಿರಿಯರ ಕಿರಿಹಿರಿತನಗಳಲ್ಲಿ, ಚತುರರ ಹೆಡ್ಡತನದಲ್ಲಿ, ದಡ್ಡರ ದೊಡ್ಡತನದಲ್ಲಿ ಕಂಡು ಕೇಳಿದ ಚೇಷ್ಟೆಗಳಿಗೆಲ್ಲಾ – ಪಾಪ! ತಿಂಮನನ್ನೇ ನಾಯಕನನ್ನಾಗಿ ಒಡ್ಡಿದ್ದೇನೆ.

‘‘ತಿಂಮನ ನಗು ದೇಹವಾದರೆ ಆ ನಗುವಿನ ಹಿಂದೆ ಹುದುಗಿಕೊಂಡಿರುವ ನೋವೇ ಜೀವ, ಅದನ್ನು

ಗುರುತಿಸದಿದ್ದರೆ ದೊರೆಯುವುದು ತಿಂಮನ ಹೆಣ ಮಾತ್ರ’’.

ಬೀಚಿಯವರ ಭಾಷಾಸಾಧನೆಗೆ ಸಹಾಯಕವಾಗಿರುವ ಅವರ ಶ್ರವಣಾಭಿರುಚಿ ಉನ್ನತ ಮಟ್ಟದ್ದು. ಕೇಳಿದ ಮಾತನ್ನು ಅದೇ ಉಚ್ಚಾರ ಕ್ರಮದಲ್ಲಿ ಉಲ್ಲೇಖಿಸಲು ಅವರು ಪ್ರಯತ್ನಿಸುತ್ತಾರೆ. ಜನ ಬಳಸುವ ಒಂದು ಶಬ್ದಕ್ಕೆ ಏನೆಲ್ಲ ಅರ್ಥ, ಅನರ್ಥ, ಅಪಾರ್ಥ, ಹೀನಾರ್ಥ, ನಾನಾರ್ಥಗಳನ್ನು ಕಲ್ಪಿಸಬಹುದು, ಶಬ್ದವನ್ನು ಹದವಾಗಿ ತಿರುವಿ ಬಿಡಿ ಭಾಗಗಳನ್ನು ಹೇಗೆ ತೆರೆದಿಡಬಹುದು ಎಂದು ತಿಳಿಯಬಯಸುವವರು ಬೀಚಿಯವರ ಬರಹದ ವೈಖರಿಯನ್ನು ಗಮನಿಸಬೇಕು. ಚಿಕ್ಕಿನುಂಗುರಕೆ ಮನಸೋತ ನಾರಿಯಂತೆ ಅವರು ಧ್ವನಿಯ ಮೋಡಿಗೆ ಮರುಳಾಗುತ್ತಾರೆ. ಅವರ ಮಾತುಗಳ ಹಿಂದೆ ಈ ಧ್ವನಿಸಂಪತ್ತನ್ನು ಸೂರೆಮಾಡುವ ದೃಷ್ಟಿಕೋನವಿದೆ. ‘‘ಆಕಾರ ಏನಿದ್ದರೇನು? ಆಡಿರುವದಷ್ಟೇ ಮುಖ್ಯ. ಅಂತೆ ಶಬ್ದಕ್ಕಲ್ಲ ಧ್ವನಿಗೆ ಪ್ರಾಧಾನ್ಯ. ಇದನ್ನು ಗುರುತಿಸಿದರೆ ನನಗೆ ಉಪಕಾರ’ ಎನ್ನುತ್ತಾರೆ ಬೀಚಿ. ಹೀಗಾಗಿ ಅವರಿಗೆ ಸಾಹಿತ್ಯ ಪರಿಷತ್ತಿನ ‘ಕನ್ನಡ–ಕನ್ನಡ ನಿಘಂಟು’ ಅಂದ ಕೂಡಲೇ ‘‘ಹೆರಲಾರದ ಬಸುರಿ’’ ಎಂಬ ವ್ಯಾಖ್ಯಾನ ಸಾಧ್ಯವಾಗುತ್ತದೆ. ‘ಆಕಳಿಕೆ’ಯಲ್ಲಿ ಅವರು ಲೀಲಾಜಾಲವಾಗಿ ಆsssಕಳಿಕೆಯನ್ನು ಕಾಣುತ್ತಾರೆ. ‘ಮಗಳನ್ನು ಬೆಂಗಳೂರಿಗೆ ಕೊಟ್ಟಿದೆ’ ಎಂದು ಯಾರೋ ಅಂದರೆ ‘ಆ್ಞ.... ಇಡೀ ಬೆಂಗಳೂರಿಗೆ?’ – ಎನ್ನುತ್ತಾರೆ. ಸೀತಾ ಪರೀಕ್ಷಣ ಮಾಡಿದ ರಾಮನನ್ನು ಅವರ ಭಾಷಾಮುಖ ಕಂಡಿರುವ ಬಗೆ ಹೀಗಿದೆ:

‘‘ಶ್ರೀರಾಮ ಅಸಲು ಅಕ್ಕಸಾಲಿಗ–ಹೆಂಡತಿಯನ್ನೇ ಬೆಂಕಿಯಲ್ಲಿ ಪುಟಕ್ಕೆ ಹಾಕಿ ಪರೀಕ್ಷೆ ಮಾಡಿದ.’’

ಹರಟೆಯಲ್ಲಿ ಬೀಚಿಯವರ ಈ ಭಾಷಾ ವಿಲಾಸವನ್ನು ಒಂದು ಉದಾಹರಣೆಯಿಂದ ಗಮನಿಸಬಹುದು. ‘ಆ ದಡ ಕಂಡವರು’ ಎಂಬ ಹಾಸ್ಯ ಪ್ರಬಂಧ ಇದು. ಪುರೋಹಿತರೊಬ್ಬರು ಬೆಳಗ್ಗೆ ಹನ್ನೊಂದಕ್ಕೆ ನಾಯಕನ ಮನೆಗೆ ಬರುತ್ತಾರೆ. ಮಧ್ಯಾಹ್ನ ಹನ್ನೆರಡಕ್ಕೆ ಏಳುವ ನಾಯಕ ಈ ‘ಬಾಗಿಲು ಬಡಿವ ಜನರ’ ಮೇಲೆ ಸಿಟ್ಟು ಮಾಡಿಕೊಳ್ಳುವ ರೀತಿ ನೋಡಿ:

‘‘ಬಾಗಿಲು ಬಡಿಯುವ ಮೂರ್ಖರಿಗೆ ಬುದ್ಧಿ ಕಲಿಸಬೇಕಾದರೆ ಒಂದೇ ಮಾರ್ಗ– ಬಡಗಿಯನ್ನು ಕರೆಯಿಸಿ ಆ ಬಾಗಿಲನ್ನೇ ತೆಗೆಯಿಸಿ ಒಳಕ್ಕೆ ಇಡಬೇಕು’’.

ಈ ಶಾಸ್ತ್ರಿಯ ಹೆಸರು ‘ಲೋಕ ಕಲ್ಯಾಣಶಾಸ್ತ್ರಿ’, ‘ಪರೋಪಕಾರವೇ ತನ್ನ ವ್ಯಂಗ್ಯ ಮನೋಧರ್ಮ ಎಂದು ಅವಕಾಶ ಸಿಕ್ಕಾಗಲೆಲ್ಲ ಹೇಳಿಕೊಳ್ಳುವ ಜಾತಿ. ಅರ್ಥಮಾಡಿಕೊಳ್ಳಲಾರದ ಹುಂಬ. ‘‘ಹುಚ್ಚುಮುಂಡೆ ಗಂಡ ಎಂದು ಒಬ್ಬಳು ಬೈದರೆ ಅವಳು ನನ್ನನ್ನು ಗಂಡ ಅಂದಳು ಎಂದು ಹೆಮ್ಮೆಯಿಂದ ಊರಲ್ಲೆಲ್ಲ ಹೇಳಿಕೊಂಡು

ಬರುವ'' ಭಂಡ. ಅವರು ನಾಯಕನನ್ನು ಎಲ್ಲಿಗೋ ಕರೆದೊಯ್ಯಬೇಕಿತ್ತು. ತಾವು ಬರುವ ಮೊದಲೇ ನಾಯಕ ಸ್ನಾನ ಮಾಡಿರುತ್ತಾನೆಂದು ಅವರು ತಿಳಿದಿದ್ದರಂತೆ. ನಾಯಕ ಹೇಳುತ್ತಾನೆ:

''ತಮ್ಮ ದರ್ಶನ ಮಾಡಿಕೊಂಡ ನಂತರ ಹೇಗೂ ಮತ್ತೊಮ್ಮೆ ಸ್ನಾನ ಆಗಬೇಕು. ಎರಡೆರಡು ಸ್ನಾನ ಆಗುವುದು ತಪ್ಪಿತು ಸದ್ಯ''. ಬಂದ ಶಾಸ್ತ್ರಿಗಳು ಆಚಾರವಂತರು. ವಯಸ್ಸಾದವರು. ಆ ದಡ ಕಂಡವರು. ಅವರು ಕಾಫಿ ಕುಡಿಯಲಿಲ್ಲ. ಅಮಾವಾಸ್ಯೆ ದಿನ ಮುಖ ತೊಳೆಯದೆ ನಾಯಕ ಕಾಫಿ ಹೀರುವುದನ್ನು ಆಕ್ಷೇಪಿಸಿರುತ್ತಾರೆ.

ಯಾರೋ ಹಿರಿಯ ಅಧಿಕಾರಿಗಳು ನಾಯಕನ ಸ್ನೇಹಿತರಂತೆ. ಅವರಿಂದ ಒಂದು ಉಪಕಾರ ಗಿಟ್ಟಿಸಿಕೊಳ್ಳಲು ಶಾಸ್ತ್ರಿ ಬಂದಿದ್ದರು. ನಾಯಕನಿಗೆ ಬೇಸರ.

''ಸ್ನೇಹಕ್ಕಾಗಿ ಸ್ನೇಹ ಎಂಬುದು ಬೇಡವೇ ಬೇಡ ಈ ಜೀವನದಲ್ಲಿ? ಬ್ಯಾಂಕ್ ಚೆಕ್‌ನಂತೆ ಸ್ನೇಹ ವಿಶ್ವಾಸಗಳನ್ನೂ ಕ್ಯಾಷ್ ಮಾಡಿಸಬೇಕೆ?''

ಶಾಸ್ತ್ರಿಗಳು ನಾಯಕನಿಗೆ ಮೈ ಕೈ ತಗುಲಿಸುತ್ತ ಮಾತಾಡುತ್ತಾರೆ. ನಾಯಕನ ವ್ಯಾಖ್ಯಾನ:

''ಅದು ಅವರ ಅಭ್ಯಾಸ-ಇದಕ್ಕೆ ಕಾರಣ, ಹೆಚ್ಚಾಗಿ ಸ್ತ್ರೀಯರೊಂದಿಗೆ ಶಾಸ್ತ್ರಿಗಳ ವ್ಯವಹಾರವೆಲ್ಲ''.

ಅವರು ಬಂದದ್ದು ಯಾಕೆ ಗೊತ್ತೆ ? ನಾಯಕ ತನ್ನ ಸ್ನೇಹಿತರಾದ ಸಾಹೇಬರಿಗೆ ಹೇಳಿ ಶಾಸ್ತ್ರಿಗಳ ಅಣ್ಣನ ಮಗನನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿಸಬೇಕಂತೆ. ಕಾರಣ ಅವರು ಶಾಸ್ತ್ರಿಗಳ ವೈರಿಯಾಗಿದ್ದ ಅಣ್ಣನ ಮಗ ಅಲ್ಲವೆ? ಅವನಿಂದ ತೊಂದರೆಯಾಗಿದೆಯೇ ಎಂಬ ನಾಯಕನ ಪ್ರಶ್ನೆಗೆ ಅವರ ಉತ್ತರ:

''ಅವನು ಸುಖವಾಗಿ ಇರುವುದೇ ನಮಗೆ ತೊಂದರೆ ಅಲ್ಲವೇನಯ್ಯ? ಅವನನ್ನು ಕೆಲಸದಿಂದ ತೆಗೆಸಿಹಾಕಿ ಅನ್ನಾನ್ನ ಗತಿಕನ್ನ ಮಾಡಿಸಬೇಕು ನಾನು. ಭಿಕ್ಷೆಬೇಡಬೇಕು ಅವನು. ನಾನು ನೋಡಬೇಕು ಅದನ್ನ''.

ವಾಸ್ತವವಾಗಿ ಈ ಪ್ರಬಂಧದಲ್ಲಿ ವಸ್ತು ಹೆಚ್ಚೇನೂ ಇಲ್ಲ. ಆದರೆ ಅದರ ಸುತ್ತ ಕಾವು ಕೊಡುತ್ತ ಅಡ್ಡಾದಿಡ್ಡಿ ಹರಡಿಕೊಳ್ಳುತ್ತ ಹೋಗುವ 'ಭಾಷಾಮುಖ'ವನ್ನು ಗಮನಿಸಿದರೆ ಅವರ ಶೈಲಿಯ ಪರಿಚಯ ಮಾಡಿ ಕೊಳ್ಳಬಹುದಾಗಿದೆ. ಆ ಮುದುಕ ಬ್ರಾಹ್ಮಣ, ಆಚಾರವಂತ ಅಂತ ಹೇಳಿಕೊಳ್ಳೋ ಬ್ರಾಹ್ಮಣ ನಿಜವಾಗಿ ಅಂದು ತರ್ಪಣ ಬಿಟ್ಟು ಬಂದದ್ದು ತನ್ನ ಮಾನವೀಯ ಗುಣಗಳಿಗೆ ಎಂಬುದನ್ನು ಈ ಪ್ರಬಂಧ ಸ್ಪಷ್ಟವಾಗಿ ಸಾರುತ್ತದೆ. ಬೀಚಿಯವರು ವಸ್ತು ವ್ಯಾಖ್ಯಾನದ ಜೊತೆಗೆ ಪ್ರಾಸಂಗಿಕವಾಗಿ ಬರುವ ಸಂಪರ್ಕದ ಮಾತುಗಳನ್ನು ತಿರುಚಿ ನಾನಾ ಮೂಲೆಗಳಿಗೆ ಎಳೆದೊಯ್ಯುವ ಶಬ್ದವ್ಯಾಖ್ಯಾನವನ್ನೂ ಮಾಡುತ್ತ ಹೋಗುತ್ತಾರೆ. ಅವರ ಬರಹಗಳ ವಿಶಿಷ್ಟ ದ್ರವ್ಯ ಇದೇ. ಉತ್ತಮ ವಾಗ್ಮಿಯೂ ಆಗಿದ್ದ ಬೀಚಿ ಈ ಭಾಷಾ ವೈಶಿಷ್ಟ್ಯವನ್ನೇ ಮೆರೆಸಿ ಜನರ

ಮನಸ್ಸನ್ನು ಗೆದ್ದುಕೊಂಡಿದ್ದರು. ಐವತ್ತಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದ ಬೀಚಿಯವರ ಯಾವ ಪುಸ್ತಕ ತೆರೆದರೂ ಇಂಥ–ಬೀಚಿಯವರದೆಂದು ಗುರುತಿಸಬಲ್ಲಂಥ–ವಿಶಿಷ್ಟಶೈಲಿಯ ದರ್ಶನವಾಗುತ್ತದೆ. (ಉದಾ "ಥೂ ಇದು ವ್ಯಭಿಚಾರದ ಕಥೆ, ಅದು ಕುಡಿತದ ಕಥೆ ಎಂದು ಅರೆದಡ್ಡ ಮಡಿವಂತರು ಮೂಗುಮುರಿದರೆ ಅದು ಕೃತಿಕಾರನ ಅಪರಾಧವೆ? ಇಂದು ಜೀವನದಲ್ಲಿ ವ್ಯಭಿಚಾರವೇ ಇಲ್ಲವೇನು ಹಾಗಾದರೆ? ಆ ದಯಾಮಯನಾದ ದೇವನ ದಯದಿಂದ ವ್ಯಭಿಚಾರ ಇಂದೂ ಇದೆ, ಹಿಂದೂ ಇದ್ದಿತು, ಮುಂದೂ ಇರುತ್ತದೆಂಬುದರಿಂದಲೇ ಪಾತಿವ್ರತ್ಯಕ್ಕೆ ಸದಾ ಬೆಲೆ ಇದೆ....")

(ಶ್ರೀ ಬೀಚಿಯ ಬಗ್ಗೆ ಮಾಹಿತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಸಾಲು ದೀಪಗಳು ಕೃತಿಯಿಂದ ಅ.ರಾ.ಮಿತ್ರ ಅವರ ಲೇಖನವನ್ನು ಯಥಾವತ್ತಾಗಿ ನೀಡಿದೆ)

**ಸರಿತಾ ಕುಸುಮಾಕರ ದೇಸಾಯಿ**: ಇವರು ಹರಪನಹಳ್ಳಿ ತಾಲ್ಲೂಕಿನಲ್ಲಿ ಜನಿಸಿದ್ದು, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದರು ಹಾಗೂ ವಿಧಾನ ಪರಿಷತ್ ಸದಸ್ಯರಾಗಿದ್ದರು. ಇವರು ಕವಯತ್ರಿ ಹರಪನಹಳ್ಳಿಯ ಭೀಮವ್ವ, ಹೀಗಿದ್ದರು ಬೀಚಿ ಎಂಬ ಕೃತಿಗಳನ್ನು ರಚಿಸಿರುತ್ತಾರೆ.

ವೃತ್ತಿಯಿಂದ ವಕೀಲರಾಗಿದ್ದರೂ ಪ್ರವೃತ್ತಿಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಲಲಿತಕಲೆ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ಸರಿತಾ ಕುಸುಮಾಕರ ದೇಸಾಯಿಯವರು (ಮದುವೆಗೆ ಮುಂಚಿನ ಹೆಸರು ಸರಸ್ವತಿ ರಾಯಸಂ) ಹುಟ್ಟಿದ್ದು ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯಲ್ಲಿ ಮಾರ್ಚ್ ೯ರ ೧೯೪೧ರಲ್ಲಿ. ತಂದೆ ರಾಘವೇಂದ್ರ ರಾಯಸಂ, ತಾಯಿ ಸರಸ್ವತಿ, ಪ್ರಾರಂಭಿಕ ಶಿಕ್ಷಣ ಹರಪನಹಳ್ಳಿಯಲ್ಲಿ. ಕಾಲೇಜು ಓದಲು ಹೈದರಾಬಾದಿನ ಆರ್.ಬಿ.ವಿ.ಆರ್.ಆರ್. ರೆಡ್ಡಿಯವರ ಕಾಲೇಜು ಸೇರಿದರೂ ಕಾರಣಾಂತರದಿಂದ ಸೇರಿದ್ದು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಇಂಟರ್ಮೀಡಿಯೇಟ್‌ಗೆ.

ವೈದ್ಯೆಯಾಗಬೇಕೆಂಬ ಹಂಬಲದಿಂದ ವಿಜ್ಞಾನದ ವಿಷಯಗಳನ್ನು ಆಯ್ಕೆ ಮಾಡಿಕೊಂಡರೂ ಇಲ್ಲೂ ವಿದ್ಯೆ ಕೈಗೂಡದೆ ವಾಪಸ್ಸಾದುದು ಹರಪನ ಹಳ್ಳಿಗೆ, ಮನೆಯಲ್ಲಿ ಕುಳಿತು ಕಲಿತದ್ದು ಹಿಂದಿ–ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯಲ್ಲಿ ಬಿ ಗ್ರೇಡ್ ಪಡೆದು ಉತ್ತೀರ್ಣರಾದರು ಪುನಃ ವಿದ್ಯಕಲಿಯಲು ಕಾಲಕೂಡಿಬಂದುದು ಮದುವೆಯ ನಂತರವೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೭೧ರಲ್ಲಿ ಬಿ.ಎ. ಮತ್ತು ೧೯೭೪ರಲ್ಲಿ ಪಡೆದ ಎಲ್.ಎಲ್.ಬಿ. ಪದವಿಗಳು. ಸಮಾಜಸೇವಕ, ವಕೀಲ, ರಾಜಕಾರಣಿ ಗಂಡನೊಡನೆ ವಕೀಲಿ ವೃತ್ತಿ ಪ್ರಾರಂಭ. ಸರಕಾರಿ, ಅರೆಸರಕಾರಿ

ಕಚೇರಿಗಳು, ರೈಲ್ವೆ ಕೆನರಾಬ್ಯಾಂಕ್, ಗುಲಬರ್ಗ ವಿಶ್ವವಿದ್ಯಾಲಯ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ಕರ್ನಾಟಕ ಮಿಲ್ಕ್‌ಫೆಡರೇಷನ್, ಸಿಂಡಿಕೇಟ್ ಬ್ಯಾಂಕ್ ಮುಂತಾದವುಗಳ ಕಾನೂನು ಸಲಹೆಗಾರರಾಗಿಯೂ ಕಾರ್ಯ ನಿರ್ವಹಣೆ. ಬಾಲ್ಯದಿಂದಲೂ ಸಾಹಿತ್ಯದಲ್ಲಿ ಬೆಳೆದ ಒಲವು. ಹರಪನಹಳ್ಳಿಯಲ್ಲಿದ್ದಾಗ ಪ್ರತಿದಿನ ತಾಯಿ ಹೇಳುತ್ತಿದ್ದ ರಾಮಾಯಣ, ಮಹಾಭಾರತದ ಕಥೆಗಳು, ಪುರಾಣದ ಸಂಗತಿಗಳನ್ನು ರೋಚಕವಾಗಿ ವಿವರಿಸುತ್ತಿದ್ದಾಗ ಸರಿತಾ ರವರ ಮನಸ್ಸಿನಲ್ಲಿಯೂ ಕಥೆಗಾರ್ತಿಯೊಬ್ಬಳು ರೂಪ ತಳೆಯತೊಡಗಿದ್ದಳು. ಇದಕ್ಕೆ ನೀರೆರೆದು ಪೋಷಿಸಿದವರು. ಅಣ್ಣನಂತಿದ್ದ ಬೀಚಿಯವರು. ಜೀವನಾನುಭವ, ಸಾಹಿತ್ಯದ ಅನುಭವ ಪಡೆಯಲು ಸತತವಾಗಿ ಓದಿದ್ದು ಕಾರಂತರು, ಗೋಕಾಕರು, ತರಾ.ಸು ಅ.ನ.ಕೃ. ಮುಂತಾದವರುಗಳ ಕಾದಂಬರಿಗಳು. ಹೈದರಾಬಾದಿನ ಡಿ.ಕೆ. ಭೀಮಸೇನರಾಯರ ಮನೆಯಲ್ಲಿ ಬಾಡಿಗೆಗಿದ್ದ ಅಕ್ಕಭಾವರೊಡನೆ ಇದ್ದಾಗ, ಅನೇಕ ಸಾಹಿತಿಗಳು ಭೀಮಸೇನರಾಯರನ್ನು ಕಾಣಲು ಬರುತ್ತಿದ್ದುದರಿಂದ ಇವರಿಗೂ ಆದ ಸಾಹಿತ್ಯದ ಲಾಭ, ಬರೆದದ್ದು ಅನೇಕ ಕಥೆಗಳು. ಹಿರಿಯ ಸಾಹಿತಿಗಳು ಕೊಟ್ಟ ಸಲಹೆ, ಬರೆದ ಕಥೆಗಳು ಸುಧಾ, ಮಯೂರ, ಕಸ್ತೂರಿ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಿತ. 'ಕಾಶಿಯಲ್ಲಿ ಕಂಡದ್ದೇನು' ಕಥಾ ಸಂಕಲನಕ್ಕೆ ಬೀಚಿಯವರು ಮುನ್ನುಡಿ ಬರೆದು ಹಾರೈಸಿದರೆ, 'ನಾನುಲಕ್ಕಿ' (ಕಥಾಸಂಕಲನ) ಹಾಗೂ 'ಸ್ಪಂದನ' (ವೈಚಾರಿಕ ಬರಹಗಳ ಸಂಕಲನ) ಕ್ಕೆ ಎಲ್.ಎಸ್. ಶೇಷಗಿರಿರಾಯರು ಮುನ್ನುಡಿ ಬರೆದು ಶುಭ ಕೋರಿದರು. ಹರಪನ ಹಳ್ಳಿಯ ಟೆಂಟ್ ಸಿನಿಮಾದಿಂದ ಪ್ರಭಾವಿತರಾಗಿ ಕಲಿತದ್ದು ನೃತ್ಯ–ಭರತನಾಟ್ಯ, ಸಂಗೀತ, ಹೀಗೆ ಲಲಿತಕಲೆಗಳಲ್ಲಿಯೂ ಗಳಿಸಿದ ಪ್ರಾವೀಣ್ಯತೆ, ದೂರದರ್ಶನದ ಧಾರವಾಹಿಗಳಾದ 'ಮನೆತನ', 'ಋಣಾನುಬಂಧ' ಮತ್ತು 'ಒಲವು–ಚೆಲುವು' ಧಾರವಾಹಿಯಲ್ಲಿ ದಂಪತಿಗಳಿಬ್ಬರೂ ಅಭಿನಯಿಸಿ ಎಲ್ಲರ ಮೆಚ್ಚುಗೆ ಪಡೆದರು. ಸಾಹಿತ್ಯದಲ್ಲಿ ಅಭಿರುಚಿ ಇದ್ದಂತೆ ಕಲಾವಿದರು, ರಾಜಕಾರಣಿಗಳು ಇವರ ಆತಿಥ್ಯ ಪಡೆದವರು ಬಹುಮಂದಿ ಜಾರ್ಜ್ ಫರ್ನಾಂಡಿಸ್, ಮಧುಲಿಮಯೆ, ಮಧುದಂಡವತೆ, ಪ್ರಮೀಳಾದಂಡವತೆ,ರಾಜನಾರಾಯಣ್,ಜೆ.ಎಚ್.ಪಟೇಲ್,ರಾಮನಾಥಗೋಯಂಕ, ಖಾದ್ರಿ ಶಾಮಣ್ಣ ಮುಂತಾದವರುಗಳೆಲ್ಲರೂ ಈ ದಂಪತಿಗಳಿಂದ ಆತಿಥ್ಯ ಪಡೆದವರೇ. ಸದಾ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿದ್ದ ಸರಿತಾರವರು ಕನ್ನಡ ಕಾನೂನು ಪದಕೋಶ ರಚನಾ ಸಮಿತಿ, ಭಾರತೀಯ ಗೆಜೆಟಿಯರ್ ಕನ್ನಡ ಆವೃತ್ತಿ ಸಮಿತಿ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಸಮಿತಿ, ಕರ್ನಾಟಕ ಸಾಹಿತ್ಯ ಅಕಾಡಮಿ (೧೯೮೦–೮೨) ಮುಂತಾದವುಗಳ ಸದಸ್ಯೆಯಾಗಿ ರಚನಾತ್ಮಕ ಕಾರ್ಯಗಳಲ್ಲಿ ಭಾಗಿ. ಇಂಗ್ಲಿಷ್, ಹಿಂದಿ, ಮರಾಠಿ, ತೆಲುಗು, ತಮಿಳು, ಕನ್ನಡ ಭಾಷೆಗಳ ಮೇಲೆ ಪಡೆದ ಪ್ರಭುತ್ವದಿಂದ ರಚಿಸಿದ ಕೃತಿಗಳು ಹಲವಾರು ಕಾಶಿಯಲ್ಲಿ ಕಂಡದ್ದೇನು ನಾನುಲಕ್ಕಿ, ಧ್ರುವಮಿಲನ, ಮಿಡಿಗಾದ ಮಿಡುಕು ಮುಂತಾದ ಕಥಾ ಸಂಕಲನಗಳು, ಸ್ಪಂದನ–

ವೈಚಾರಿಕ ಲೇಖನಗಳ ಸಂಕಲನ; ಹೀಗಿದ್ದರು ಬೀಚಿ–ಸಂಪಾದಿತ ಕೃತಿ ನಂತರ ಇದರ ವಿಸ್ತೃತ ಆವೃತ್ತಿ 'ಇವರೇ ನಮ್ಮ ಬೀಚಿ' ಕೃತಿಯು ೨೦೦೪ರಲ್ಲಿ ಪ್ರಕಟಿಸಿದ್ದಾರೆ. ಮಹಡಿ ಮನೆ–ಹಿಂದಿ ಸಾಹಿತಿ ಭಗವತಿ ಚರಣ ವರ್ಮ ಮತ್ತು ಮರಾಠಿ ಸಾಹಿತಿ ಶಂಕರರಾವ್ ಖರತ್ ಅವರ ಸಣ್ಣ ಕಥೆಗಳ ಅನುವಾದ; ನೆಲಕಡಲು–ಶ್ರೀಮತಿ ಮನ್ನೂ ಭಂಡಾರಿಯವರ ಜನಪ್ರಿಯ ಕಿರು ಕಾದಂಬರಿ ಮುಂತಾದ ಅನುವಾದಿತ ಕೃತಿಗಳು; 'ಭೀಮೇಶ ಕೃಷ್ಣ' ಹರಿದಾಸ ಸಾಹಿತಿ ಹರಪನಹಳ್ಳಿ ಭೀಮಪ್ಪನವರ ಜೀವನ ಹಾಗೂ ಕೃತಿಪರಿಚಯ; ಹರಪನಹಳ್ಳಿ ಭೀಮಪ್ಪನವರ ಹಾಡುಗಳು; ಒಂದು ಅಧ್ಯಯನ–ಎಲ್ಲ ಹಾಡುಗಳ ವಿಶ್ಲೇಷಣಾತ್ಮಕ ಬರಹ; 'ನಮ್ಮನ್ನು ಸಾಕಿದ ಪ್ರಾಣಿಗಳು' ಪ್ರಾಣಿ ದಯೆಯ ಬಗ್ಗೆ ಬರೆದ ವಿಶಿಷ್ಟ ಕೃತಿ–ಮುಂತಾದವುಗಳಲ್ಲದೆ ಕಾನೂನು ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳು. ಪ್ರಬಂಧಗಳು, 'ಮಹಿಳಾ ಸಮಸ್ಯೆ, ಬಾಲ್ಯವಿವಾಹ ಕುರಿತ ಕಿರುನಾಟಕಗಳು, ದೂರದರ್ಶನಕ್ಕಾಗಿ 'ಕಥೆಗಳಲ್ಲಿ ಕಾನೂನು' ಮುಂತಾದ ಧಾರವಾಹಿಗಳು ಪ್ರಸಾರಗೊಂಡಿವೆ. ಭೀಮೇಶ ಕೃಷ್ಣ ಸಂಗೀತರೂಪಕಕ್ಕೆ ಅಖಿಲಭಾರತ ಆಕಾಶವಾಣಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಕರ್ನಾಟಕ ವಿದ್ಯಾವರ್ಧಕ ಸಂಘದಿಂದ 'ಉತ್ತಮಲೇಖಕಿ' ಕನ್ನಡ ಲೇಖಕಿಯರ ಪರಿಷತ್ತಿನಿಂದ 'ವರ್ಷದ ಲೇಖಕಿ' ಮುಂತಾದ ಪ್ರಶಸ್ತಿಗಳು ದೊರೆತಿವೆ. ಹಿತೈಷಿಗಳು ಅರ್ಪಿಸಿದ ಅಭಿನಂದನ ಗ್ರಂಥ 'ಸಹನಾ' (೨೦೦೩) ವಿದ್ಯೆ ಕಲಿಯಲು ಹಲವಾರು ಬಾರಿ ಅಡೆತಡೆಗಳುಂಟಾಗಿದ್ದರೂ ಛಲಬಿಡದೆ ಸಾಧಿಸಿದ್ದಲ್ಲದೆ, ವಿದ್ಯೆಗಾಗಿ ಹಳ್ಳಿಯಿಂದ ಗುಲಬರ್ಗ ಷಹರಕ್ಕೆ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪೋಷಕರಾಗಿ, ಅಬಲೆಯರಿಗೆ ಆತ್ಮೀಯರಾಗಿ, ಕಾನೂನು ತಿಳುವಳಿಕೆ ನೀಡುವ ಕಾರ್ಯಕರ್ತೆಯಾಗಿ, ನೊಂದ ಹೃದಯಗಳಿಗೆ ಸಾಂತ್ವನ ಹೇಳುವ ಮಾತೆಯಾಗಿ, ಸದಾ ಹೋರಾಟದ ಬದುಕನ್ನೇ ಪ್ರೀತಿಸುತ್ತಿದ್ದ ಸರಿತಾ ಕುಸುಮಾಕರ ದೇಸಾಯಿಯವರು ಸಾಮಾಜಿಕ, ಸಾಂಸ್ಕೃತಿಕ ಜಗತ್ತಿನಿಂದ ದೂರವಾದದ್ದು ೨೦೦೮ರ ಏಪ್ರಿಲ್ ೧೩ರಂದು.

## ಕೊಟ್ರೇಶ್ ಎಸ್. ಉಪ್ಪಾರ್

ಕೊಟ್ರೇಶ್ ಎಸ್. ಉಪ್ಪಾರ್‌ರವರು ಮೂಲತಃ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಬಿ.ಓಬಳಾಪುರ ಗ್ರಾಮದವರು. ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ತಾಳೂರಿನ ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಭಾಷಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಂ.ಎ.ಬಿ.ಇಡಿ ಪದವೀಧರರಾದ ಇವರು ಕಳೆದ ಒಂದೂವರೆ ದಶಕದಿಂದ ಸಾಹಿತ್ಯ ಕ್ಷೇತ್ರದಲ್ಲಿ ಅವಿರತವಾಗಿ ದುಡಿಯುತ್ತಾ ಬಂದಿದ್ದಾರೆ. ಕಾವ್ಯ, ಕಥೆ, ಪ್ರಬಂಧ ಹಾಗೂ ಶಿಕ್ಷಣ ಕ್ಷೇತ್ರದ ಹಲವಾರು ವಿಚಾರಗಳನ್ನು, ವೈಜ್ಞಾನಿಕ ವಿಷಯಗಳ ಕೌತುಕಗಳನ್ನು, ಪ್ರಗತಿಪರ ಚಿಂತನಗಳನ್ನು

ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಬರೆದು ರಾಜ್ಯಾದ್ಯಂತ ಅನೇಕ ಓದುಗರನ್ನು ತಲುಪಿದ್ದಾರೆ.

ಗಣ್ಯ ಆಧುನಿಕ ವಚನಕಾರರಾದ ಇವರು- ವಚನ ದುಂಧುಬಿ (೨೦೦೫), ವಚನ ದೀಪಿಕಾ (೨೦೦೮), ವಚನ ಮಾಣಿಕ್ಯ (೨೦೧೩) ಎಂಬ ಆಧುನಿಕ ವಚನ ಸಂಕಲನಗಳನ್ನು ನೀಡಿದ್ದಾರೆ. ಮುಗಿಲಾಚೆಗಿನ ಮಾತು (೨೦೧೦), ಮೃತ್ಯುವಿನಾಚೆಯ ಬದುಕು (೨೦೧೦), ಮಾತೃ ಮಡಿಲು ಎಂಬ ಕವನ ಸಂಕಲನಗಳು, ವೈಜ್ಞಾನಿಕ ವಿಸ್ಮಯಗಳು (೨೦೧೦), ವಿಶ್ವದ ವೈಚಿತ್ರಗಳು (೨೦೧೦), ವೈಜ್ಞಾನಿಕ ಕೌತುಕಗಳು (೨೦೧೧), ವಿದ್ಯಾರ್ಥಿಗಳಿಗಾಗಿ ವಿಜ್ಞಾನ (೨೦೧೨), ಪರಮಾಣು ಸಂಶೋಧನೆ ಮತ್ತು ವಿಜ್ಞಾನಿಗಳು (೨೦೧೧), ಅನುಗನಾಳಲ್ಲೊಂದು ಔಷಧಿವನ(೨೦೧೧) ಎಂಬ ವಿಜ್ಞಾನ ವಿಚಾರಕ್ಕೆ ಸಂಬಂಧಿಸಿದ ಕೃತಿಗಳು; ಗುಣಾತ್ಮಕ ಶಿಕ್ಷಣದ ಮಜಲುಗಳು (೨೦೧೦), ಶಿಕ್ಷಕ, ಮಗು ಮತ್ತು ಶಿಕ್ಷಣ (೨೦೧೩) ಎಂಬ ಶೈಕ್ಷಣಿಕ ಕೃತಿಗಳು; ಮಂತಣ (೨೦೧೦), ಅವಳ ಮುಖಗಳು(೨೦೧೧), ಮಂಥನ (೨೦೧೨) ವೈಚಾರಿಕ ಕೃತಿಗಳು. 'ನಿಬಂಧಗಳು' (೨೦೧೧), ಪರಿಸರ ಪ್ರೇಮಿ ಅನುಗನಾಳು (೨೦೧೧), ಡಾ|| ರಾಜೇಂದ್ರಸಿಂಗ್ ಮತ್ತು ಇತರ ಲೇಖನಗಳು (೨೦೧೩), ಮಹಾಕವಿ ಕುವೆಂಪು ಮತ್ತು ಇತರ ಲೇಖನಗಳು (೨೦೧೩), ಸಮಷ್ಠಿ (೨೦೧೩), 'ವ್ಯಾಕರಣ ದರ್ಪಣಂ'(೨೦೧೩) ಹೀಗೆ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ.

ಇನ್ನೂ ಐದಾರು ಕೃತಿಗಳು ಅಚ್ಚಿನಲ್ಲಿವೆ. ಕಾವ್ಯ, ಕಥೆ, ಲೇಖನ, ವಚನ ಸಾಹಿತ್ಯ, ವಿಜ್ಞಾನ, ಶಿಕ್ಷಣ ಹೀಗೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಯಶಕಂಡಿದ್ದಾರೆ. ಸೃಜನಾತ್ಮಕ ಲೇಖಕರಾದ ಇವರು ಕನ್ನಡ ಸಾಹಿತ್ಯ ಪರಿಷತ್, ವಚನ ಸಾಹಿತ್ಯ ಪರಿಷತ್, ಶರಣ ಸಾಹಿತ್ಯ ಪರಿಷತ್, ಚುಟುಕು ಸಾಹಿತ್ಯ ಪರಿಷತ್, ಭಾರತ ಜ್ಞಾನ ವಿಜ್ಞಾನ ಸಮಿತಿ, ಮನೆ-ಮನೆ ಕವಿಗೋಷ್ಠಿ ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಇವರ ಸಾಹಿತ್ಯ ಸೇವೆಗಾಗಿ ಡಾ|| ಸಿದ್ಧಯ್ಯ ಪುರಾಣಿಕ ಸ್ಮಾರಕ ಪ್ರಶಸ್ತಿ, ಕರುನಾಡ ಧೃವತಾರೆ ರಾಜ್ಯ ಪ್ರಶಸ್ತಿ, ಶ್ರೀ ರಾಘವೇಂದ್ರ ಸದ್ಭಾವನಾ ಪ್ರಶಸ್ತಿ, ರುಕ್ಮಿಣಿಬಾಯಿ ಸ್ಮಾರಕ ಸಾಹಿತ್ಯ ಪ್ರಶಸ್ತಿಗಳು ಸಂದಿವೆ.

**ಬಡಿಗೇರ ದೇವೇಂದ್ರಪ್ಪನವರು ಹಲುವಾಗಲು**: ಇವರು ಹಲುವಾಗಲು ಎಂಬ ಊರಲ್ಲಿ ಜನಿಸಿದ್ದು, ಇವರು ರಚಿಸಿದಂತಹ ಕೃತಿಗಳು ಹೀಗಿವೆ. ೧) ಮೌನೇಶ್ವರ ಶತಕ ಭಾಮಿನಿ ಷಟ್ಪದಿಯಲ್ಲಿ ಯಕ್ಷಗಾನ ಗೊಂಬೆಯಾಟದ ಕೃತಿಗಳು, ೨) ಸೀತಾ ಸ್ವಯಂವರ, ೩) ಚೂಡಾಮಣಿ ಪ್ರಸಂಗ, ೪) ಗಜಗೌರಿ ವೃತ, ೫) ದ್ರೌಪದಿ ಸ್ವಯಂವರ ಇತ್ಯಾದಿ.

## ಮುದೇನೂರ ಸಂಗಣ್ಣ

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿಗೆ ಹೆಸರು ಬಂದಿರುವುದು ಎರಡು ಕಾರಣಗಳಿಂದಾಗಿ. ಒಂದು – ಅಲ್ಲಿಯ ನಾರದಮುನಿ ದೇವಸ್ಥಾನದಿಂದ. ಎರಡು – ಮುದೇನೂರ ಸಂಗಣ್ಣನವರಿಂದ. ಒಂದು ಸಾಮಾನ್ಯ ಹಳ್ಳಿಯಾಗಿರುವ ಚಿಗಟೇರಿಯು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ತೀರಾ ಪರಿಚಿತವಾಗಿರಲು ಸಂಗಣ್ಣನವರ ವ್ಯಕ್ತಿತ್ವವೇ ಕಾರಣ. ಹುಟ್ಟಿದ ಹಳ್ಳಿಯನ್ನು ಈ ಪರಿಯಲ್ಲಿ ತಮ್ಮ ಜೀವಿತ – ಸಾಧನೆಗಳ ನೆಲೆಯಾಗಿಸಿಕೊಂಡು ಹಳ್ಳಿಗರಾಗಿ ಬದುಕಿದವರು ಅಪರೂಪ. ಗ್ರಾಮೀಣ ಬದುಕಿನೊಂದಿಗೆ ತಮ್ಮನ್ನು ಸಂಪೂರ್ಣ ಸಮನ್ವಯಗೊಳಿಸಿ ಕೊಂಡಿರುವ ಸಂಗಣ್ಣನವರು ಆಧುನಿಕತೆಯನ್ನು ಸಮೃದ್ಧವಾಗಿ ಸ್ವೀಕರಿಸಿದವರು. ಹಳ್ಳಿಯಲ್ಲಿದ್ದುಕೊಂಡೇ ಇಡೀ ನಾಡಿನ ಸಾಂಸ್ಕೃತಿಕ ಲೋಕಕ್ಕೆ ತಮ್ಮನ್ನು ತಾವು ತೆರೆದುಕೊಂಡವರು.

ಸಂಗಣ್ಣನವರು ಕೊಟ್ರಬಸಪ್ಪ ಸಿದ್ಧಮ್ಮ ದಂಪತಿಗಳಿಗೆ ೧೭–೩–೧೯೨೭ರಂದು ಜನಿಸಿದರು. ತಂದೆ ಕೊಟ್ರಬಸಪ್ಪ ಕಟ್ಟಾ ರಾಷ್ಟ್ರೀಯವಾದಿ ಕಾಂಗ್ರೆಸ್ಸಿಗ. ಏಳುನೂರು ಎಕರೆ ಜಮೀನುದಾರರಾಗಿದ್ದರೂ ಸರಳ ಜೀವನ–ವಿನಯ ಸಜ್ಜನಿಕೆಗಳನ್ನು ಮೈಗೂಡಿಸಿಕೊಂಡ ವ್ಯಕ್ತಿ. ತಂದೆಯ ಈ ಗುಣಗಳೆಲ್ಲ ಸಂಗಣ್ಣನವರಿಗೆ ಬಳುವಳಿಯಾಗಿ ಬಂದವು. ಎಂಟು ವರ್ಷದ ಹುಡುಗನಾಗಿದ್ದಾಗಲೇ ಪದ್ಯ ಬರೆಯುವ ಚಟ ಬೆಳೆಸಿಕೊಂಡಿದ್ದ ಸಂಗಣ್ಣನವರ ಓದು ಬರಹಗಳಿಗೆ ಹರಪನಹಳ್ಳಿ ಸರಕಾರಿ ಹೈಸ್ಕೂಲು ಬಹಳಷ್ಟು ಪ್ರೋತ್ಸಾಹ ನೀಡಿತು. ಅಲ್ಲಿ ಸಾಹಿತಿ ಸಂಗಣ್ಣ ರೂಪುಗೊಂಡರು. ಹೈಸ್ಕೂಲಿಗೆ ಭೇಟಿ ನೀಡಿದ ಬೇಂದ್ರೆ, ಬಿ.ಎಂ.ಶ್ರೀ, ಮಾಸ್ತಿ ಮೊದಲಾದವರ ಉಪನ್ಯಾಸಗಳು ಸಾಕಷ್ಟು ಪ್ರಭಾವ ಬೀರಿದವು. ಸಂಗಣ್ಣನವರು ಮಾಸ್ತಿಯವರನ್ನು ಕುರಿತು ಬರೆದ ಪದ್ಯ ಸಾಹಿತಿಗಳ ಮೆಚ್ಚುಗೆ ಪಡೆಯಿತು. 'ಕರ್ನಾಟಕ ಏಕೀಕರಣ'ದ ಬಗ್ಗೆ ಭಾಷಣ ಮಾಡಿ ಪ್ರಥಮ ಬಹುಮಾನ ಪಡೆದ ಸಂಗಣ್ಣನವರು ವಿದ್ಯಾರ್ಥಿ ಸಮುದಾಯದಲ್ಲಿ ಎದ್ದು ಕಾಣುವಂತಾದರು. ಆ ಹದಿವಯದಲ್ಲಿಯೇ ಅವರ ಕವಿತೆಗಳು 'ಜಯಂತಿ'ಯಲ್ಲಿ ಪ್ರಕಟಗೊಂಡಾಗ ಕನ್ನಡನಾಡು ಒಬ್ಬ ಉದಯೋನ್ಮುಖ ಕವಿಯನ್ನು ಗುರುತಿಸಿತು.

ಸಂಗಣ್ಣನವರು ಉನ್ನತ ವ್ಯಾಸಂಗಕ್ಕೆ ಮದನಪಲ್ಲಿಯ ಥಿಯಾಸಫಿಕಲ್ ಕಾಲೇಜ್ ಸೇರಿದರು. ದೇಶದ ತುಂಬ ಆದರ್ಶ–ಉತ್ಸಾಹಗಳ ಗಾಳಿ ಬೀಸುತ್ತಿದ್ದ ಕಾಲವದು. ಉದಾತ್ತ ಜೀವನಶೈಲಿಯನ್ನು ರೂಢಿಸಿಕೊಂಡಿದ್ದ ಪ್ರಾಧ್ಯಾಪಕರ ಬಳಗ ಅಲ್ಲಿತ್ತು. ಆನಂದರಾಯರೆಂಬುವವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್ನರ ಗೆಳೆಯರಾಗಿದ್ದರು. ಕಾಲೇಜಿಗೆ ಸರೋಜಿನಿ ನಾಯ್ಡು, ಜೇಮ್ಸ್ ಎಚ್. ಕಸಿನ್ಸ್ ಮುಂತಾದ ಮಹಾ ಚೇತನಗಳು ಆಗಾಗ ಭೇಟಿ ನೀಡುತ್ತಿದ್ದರು. ಅಂಥವರ ಸಂಪರ್ಕದಿಂದಾಗಿ ಸಂಗಣ್ಣನವರು ತಮ್ಮನ್ನು ಬೆಳೆಸಿಕೊಂಡರು. ತರುಣ ವಿದ್ಯಾರ್ಥಿ ಸಂಗಣ್ಣನವರು

ಅರವಿಂದರ ಪ್ರಭಾವಕ್ಕೊಳಗಾಗಿ ಆಜನ್ಮ ಬ್ರಹ್ಮಚಾರಿಯಾಗಿರಲು ನಿರ್ಧರಿಸಿದರು. ತಂದೆಯ ನಿಷ್ಠುರದ ಆಜ್ಞೆಯ ಮುಂದೆ ಅವರ ನಿರ್ಧಾರ ಕರಗಿತು. ಇಂಟರ್ ಮೀಡಿಯೇಟ್ ಮುಗಿದ ಕೂಡಲೇ ಮನೆಗೆ ಬಂದು ಹರಿಹರದ ಶಾರದಾ ಅವರ ಕೈಹಿಡಿದು ಗೃಹಸ್ಥರಾದರು. ಸಂಗಣ್ಣನವರು ಡಿಗ್ರಿ ಪಡೆಯದೆ ಮನೆಗೆ ಮರಳಿದ್ದರು. ಆದರೆ ಇಡೀ ಬದುಕಿಗಾಗುವಷ್ಟು ಬೌದ್ಧಿಕ ಹಸಿವನ್ನು ತೆಲುಗು, ಕನ್ನಡ, ಇಂಗ್ಲಿಷ್ ಭಾಷೆಗಳ ಅಪಾರ ಜ್ಞಾನಸಂಪತ್ತನ್ನು ಸಂಗಡ ತಂದಿದ್ದರು. ಅದನ್ನೆಲ್ಲ ಮೂಲ ಬಂಡವಾಳವಾಗಿಸಿಕೊಂಡು ಸಾಹಿತ್ಯೋದ್ಯೋಗಿಯಾದರು. ಕೃಷಿ ಮತ್ತು ವ್ಯಾಪಾರದ ವೃತ್ತಿ ಜೀವನಕ್ಕೆ ಸಾಹಿತ್ಯದ ಕೃಷಿ ಮತ್ತು ಅಧ್ಯಯನಗಳು ಪೂರಕವಾದವು.

ಪಕ್ಕಾ ರೈತ ಮನೆತನದ ಸಂಗಣ್ಣನವರು ೧೯೫೨ರಲ್ಲಿ ತಂಬಾಕದ ದಲ್ಲಾಲಿ ವ್ಯಾಪಾರ ಆರಂಭಿಸಿದರು. ಇದರಿಂದಾಗುವ ಆರ್ಥಿಕ ಲಾಭದ ಕಡೆಗೆ ಅವರು ಗಮನ ನೀಡಲಿಲ್ಲ. ವ್ಯಾಪಾರೇತರ ಲಾಭಗಳೇ ಹೆಚ್ಚು. ಕರ್ನಾಟಕ–ಮಹಾರಾಷ್ಟ್ರಗಳ ಗಡಿಯಲ್ಲಿರುವ ನಿಪ್ಪಾಣಿ ತಂಬಾಕು ವ್ಯಾಪಾರದ ಬಹುದೊಡ್ಡ ಕೇಂದ್ರ. ಅಲ್ಲಿಯ ಮರಾಠಿ ವ್ಯಾಪಾರಿಗಳ ಒಡನಾಟದಿಂದಾಗಿ ಮತ್ತು ವ್ಯಾವಹಾರಿಕ ಉದ್ದೇಶಕ್ಕಾಗಿ ಸಂಗಣ್ಣನವರು ಮರಾಠಿ ಕಲಿತರು. ಅವರ ಮರಾಠಿ ಓದು ಕೇವಲ ವ್ಯವಹಾರಕ್ಕೆ ಸೀಮಿತವಾಗಿ ಉಳಿಯದೆ ಅವರನ್ನು ಮರಾಠಿ ಸಾಹಿತ್ಯದ ಅಧ್ಯಯನಕ್ಕೆ ಚಾಚಿಕೊಂಡಿತು. ಮರಾಠಿ ರಂಗಭೂಮಿಯ ಪರಿಚಯವಾಯಿತು.

ಒಂದು ಘಟ್ಟದವರೆಗೆ ಸಂಗಣ್ಣನವರು ಸಕ್ರಿಯ ರಾಜಕಾರಣಿಯಾಗಿದ್ದರು. ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಅವರು ಉತ್ಸಾಹಿ ಕಾರ್ಯಕರ್ತರಾಗಿ ದುಡಿದವರು. ಬಳ್ಳಾರಿ ಹೋರಾಟದಲ್ಲಿ ಮುಂದಾಳತ್ವ ವಹಿಸಿ ಒಂದು ತಿಂಗಳು ಜೈಲು ಶಿಕ್ಷೆ ಅನುಭವಿಸಿದವರು. ಚಿಗಟಗೇರಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಗ್ರಾಮಕ್ಕೆ ಅನೇಕ ಉಪಯುಕ್ತ ಸೌಲಭ್ಯಗಳನ್ನು ಒದಗಿಸಲು ಶ್ರಮಿಸಿದವರು. ತಾಲ್ಲೂಕು ಬೋರ್ಡ್ ಸದಸ್ಯರಾಗಿದ್ದ ಸಂಗಣ್ಣನವರ ಕ್ರಿಯಾಶೀಲತೆ ಅಂದು ಮನೆಮಾತಾಗಿತ್ತು. ಲೋಹಿಯಾ ಅಭಿಮಾನಿ ಸಂಗಣ್ಣನವರು ೧೯೬೨ರಲ್ಲಿ ಪಿಎಸ್‌ಪಿ ಅಭ್ಯರ್ಥಿಯಾಗಿ ವಿಧಾನಸಭೆಗೆ ಸ್ಪರ್ಧಿಸಿ ಸೋತರು. ನಂತರದ ಅವಧಿಯಲ್ಲಿ ರಾಜಕೀಯ ಕ್ಷೇತ್ರವನ್ನು ವ್ಯಾಪಿಸಿದ ಭ್ರಷ್ಟಾಚಾರವನ್ನು ಕಂಡು ಸಂಗಣ್ಣನವರು ಅಸಹಾಯಕರಾದರು. ರಾಜಕೀಯದ ಬಗ್ಗೆ ಅವರಲ್ಲಿ ಜಿಗುಪ್ಸೆ ಉಂಟಾದುದರಿಂದ ರಾಜಕೀಯ ಕ್ಷೇತ್ರದಿಂದ ದೂರಾದರು. ಆದರೆ ಸಾಂಸ್ಕೃತಿಕ ಶೈಕ್ಷಣಿಕ ಸಂಘ ಸಂಸ್ಥೆಗಳ ಸಕ್ರಿಯ ಕಾರ್ಯಕರ್ತರಾಗಿ ತಮ್ಮ ಸೇವಾ ತತ್ಪರತೆಯನ್ನು ವ್ಯಕ್ತಪಡಿಸಿದ್ದಾರೆ. ಚಿಗಟೇರಿಯ ನಾರದಮುನಿ ಹೈಸ್ಕೂಲಿನ ಆಡಳಿತಮಂಡಳಿಯ ಅಧ್ಯಕ್ಷರಾಗಿ, ಉಡುಪಿಯ 'ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ'ದ ಸಲಹೆಗಾರರಾಗಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಜನಪರ ಹೋರಾಟಗಳಿಗೆ ಆರ್ಥಿಕ ನೈತಿಕ ಬೆಂಬಲವಿಟ್ಟು ಪ್ರೋತ್ಸಾಹಿಸಿದ್ದಾರೆ.

ಕೀರ್ತಿ ಪ್ರಚಾರಗಳನ್ನು ಇಷ್ಟಪಡದ ಸಂಗಣ್ಣನವರು ತಮ್ಮಷ್ಟಕ್ಕೆ ತಾವು ಓದು ಬರಹಗಳಲ್ಲಿ ತೊಡಗಿಕೊಂಡವರು. ಹಲವಾರು ಗೌರವ-ಪ್ರಶಸ್ತಿ-ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದಿವೆ. ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್ (೧೯೮೯), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿ (೧೯೯೨), ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ (೧೯೯೩), ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (೨೦೦೩), ಕರ್ನಾಟಕ ಸರಕಾರದ ಏಕೀಕರಣ ಪ್ರಶಸ್ತಿ (೨೦೦೩) ಮುಂತಾದವು ಸಂಗಣ್ಣನವರಿಗೆ ಲಭ್ಯವಾಗಿವೆ. ೧೯೮೪ರಲ್ಲಿ ಹಡಗಲಿಯಲ್ಲಿ ನಡೆದ ಆನೆಯ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ೧೯೯೪ ರಲ್ಲಿ ಧಾರವಾಡದಲ್ಲಿ ನಡೆದ ೨೧ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ೨೦೦೩ರಲ್ಲಿ ಕಾರಿಗನೂರಿನಲ್ಲಿ ನಡೆದ ಮೊದಲನೇ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ-ಮುಂತಾದವುಗಳ ಅಧ್ಯಕ್ಷತೆಯ ಗೌರವ ಸಂಗಣ್ಣನವರದಾಗಿದೆ. ಅವರು ೨೦೦೧ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡಿದ್ದಾರೆ.

ಸಂಗಣ್ಣನವರ ಸಾಹಿತ್ಯ ಕೃಷಿ ಕಾವ್ಯ, ನಾಟಕ, ಸಂಪಾದನೆ ಜೀವನಚರಿತ್ರೆ-ಪದಕೋಶ ಮುಂತಾದವುಗಳಲ್ಲಿ ವ್ಯಾಪಿಸಿದೆ. ಅವರದು ಮೂಲತಃ ಕವಿ ಸ್ವಭಾವ. ಅದು ಎಲ್ಲ ಪ್ರಕಾರಗಳಿಗೆ ಶ್ರುತಿಯಾಗಿದೆ. ಆರೋಗ್ಯಕರವಾದ ಭಾವುಕತನ, ಚಿಕಿತ್ಸಕ ದೃಷ್ಟಿ, ಅಪಾರ ಕುತೂಹಲ, ಬದುಕಿನ ಸಣ್ಣ ದೊಡ್ಡ ಸಂಭವಗಳ ಬಗ್ಗೆ ಸ್ಪಂದನೆ, ಮಾನವೀಯ ಮೌಲ್ಯಗಳ ಬಗ್ಗೆ ಹಪಹಪಿ – ಈ ಅಂಶಗಳು ಕವಿ ಸಂಗಣ್ಣನವರ ವ್ಯಕ್ತಿತ್ವದ ಉಸಿರಾಗಿವೆ. ತರುಣಕವಿ ಸಂಗಣ್ಣನವರು ಕವಿತೆ ಬರೆಯಲು ಆರಂಭಿಸಿದಾಗ ನವೋದಯ ಕಾಲದ ಸಿದ್ಧಿ ಸಾಧನೆಗಳು ಶಿಖರ ಮುಟ್ಟಿದ್ದವು. ಸಹಜವಾಗಿಯೇ ನವೋದಯ ಪಂಥ ಸಂಗಣ್ಣನವರ ಕಾವ್ಯೋದ್ಯೋಗಕ್ಕೆ ಆಕಾರ ಕಲ್ಪಿಸಿತು. ಬಾಲ್ಯಕಾಲದಿಂದ ಬೆಳೆಸಿಕೊಂಡಿದ್ದ ಕವಿತೆ ಬರೆಯುವ ಹಂಬಲ ತಾರುಣ್ಯಕ್ಕೆ ಬಂದಾಗ ಗಂಭೀರ ಹವ್ಯಾಸವಾಯಿತು. ಸಂಗಣ್ಣನವರು ೧೯೪೫ರಿಂದ ಕವಿತೆಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಆರಂಭದ ಬಹಳಷ್ಟು ಕವಿತೆಗಳು 'ಜಯಂತಿ'ಯಲ್ಲಿ ಪ್ರಕಟಗೊಂಡವು. ಜಯಂತಿಯ ಸಂಪಾದಕರಾಗಿದ್ದ ಬೆಟಗೇರಿ ಕೃಷ್ಣಶರ್ಮರು ಮಾರ್ಗದರ್ಶನ-ಪ್ರೋತ್ಸಾಹ ನೀಡಿದರು. ನಡುವೆ ಒಂದೆರಡು ದಶಕ ಸಂಗಣ್ಣನವರು ಕವಿತೆ ಬರೆಯಲಿಲ್ಲ. ಇತ್ತೀಚೆಗೆ ಅವರ ಕಾವ್ಯರಚನೆಗೆ ಹೊಸ ಚೈತನ್ಯ ಪ್ರಾಪ್ತವಾಗಿದೆ. ಹೆಚ್ಚಾಗಿ ಕಥನ ಕವನಗಳನ್ನು ಬರೆದಿದ್ದಾರೆ. ಒಂದು ಸಣ್ಣ ಪ್ರಸಂಗ-ಕಥಾನಕ ಆಯ್ದುಕೊಂಡು ಅದನ್ನು ರಸವತ್ತಾಗಿ ಸರಳ ಶೈಲಿಯಲ್ಲಿ ನಿರೂಪಿಸುತ್ತ ಕೊನೆಯಲ್ಲಿ ಅಗಾಧ ತಿಳುವಳಿಕೆಯನ್ನು ಸ್ಫೋಟಿಸುವ ಸಂಗಣ್ಣನವರು ಕನ್ನಡದಲ್ಲಿ ಅಪರೂಪವಾಗುತ್ತಿರುವ ಕಥನಕವನ ಪ್ರಕಾರಕ್ಕೆ ಮಹತ್ವದ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟಗೊಂಡಿದ್ದ ತಮ್ಮ ಕವಿತೆಗಳನ್ನು ಸಂಗ್ರಹರೂಪದಲ್ಲಿ ಹೊರತರಬೇಕೆಂದು ಸಂಗಣ್ಣನವರು ಯೋಚಿಸಲೇ ಇಲ್ಲ.

ಸ್ನೇಹಿತರ ಒತ್ತಾಯದಿಂದಾಗಿ ಅವರ 'ಆ ಅಜ್ಜ ಈ ಮೊಮ್ಮಗ' ಪ್ರಕಟವಾಗಿದೆ. ಇದು ಅವರ ಆಯ್ದ ಕವಿತೆಗಳ ಸಂಗ್ರಹ. ೧೯೪೫ರಿಂದ ೨೦೦೦ವರೆಗಿನ ಅವಧಿಯಲ್ಲಿ ರಚನೆಗೊಂಡಿರುವ ಕವಿತೆಗಳು ಈ ಸಂಗ್ರಹದಲ್ಲಿವೆ. ಈ ೫೫ ವರ್ಷಗಳ ಅವಧಿಯಲ್ಲಿ ಕನ್ನಡಕಾವ್ಯ ಮಹತ್ವದ ಘಟ್ಟಗಳನ್ನು ದಾಟಿದೆ. ನವೋದಯ ನವ್ಯ ದಲಿತ ಬಂಡಾಯ ಪ್ರವೃತ್ತಿಗಳು ಕನ್ನಡ ಕಾವ್ಯವನ್ನು ಮುನ್ನಡೆಸಿವೆ. ಬಸವಣ್ಣ, ಬುದ್ಧ, ಅರವಿಂದ, ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಮೊದಲಾದವರ ವಿಚಾರಧಾರೆಗಳು ನಮ್ಮ ಕವಿಗಳನ್ನು ಅಲ್ಲಾಡಿಸಿವೆ. ಈ ಎಲ್ಲರ ಚಿಂತನೆಗಳು ಸಂಗಣ್ಣನವರ ಕವಿತೆಗಳ ಮೇಲೆ ಪ್ರಭಾವವನ್ನುಂಟು ಮಾಡಿವೆ. ನವ್ಯ ಬಂಡಾಯ ಧೋರಣೆಗಳಿಗೆ ಅವರು ಸ್ಪಂದಿಸಿದ್ದರೂ ಒಟ್ಟಾರೆ ಅವರದು ನವೋದಯದ ಮನೋಭಾವ. ಅವರ ಜೀವನ ದೃಷ್ಟಿಯನ್ನು ರೂಪಿಸಿದ ನವೋದಯದ ಧೋರಣೆಗಳು ಅವರ ಎಲ್ಲ ಕಾಲದ ಕವಿತೆಗಳ ಹಿಂದೆ ಛಾಯಾರೂಪದಲ್ಲಿವೆ.

ನವೋದಯ ಕಾಲದ ಎಲ್ಲ ಕವಿಗಳಂತೆ ಸಂಗಣ್ಣನವರು ನಿಸರ್ಗದ ಚೆಲುವಿಗೆ ಕೌತುಕಕ್ಕೆ ಮನಸೋತಿದ್ದಾರೆ. ಅದರ ಬೆಡಗು ಬಿನ್ನಾಣಗಳನ್ನು ಅಚ್ಚರಿಯಿಂದ ವರ್ಣಿಸುತ್ತಲೇ ನಿಸರ್ಗ–ಮನುಷ್ಯ ಸಂಬಂಧದ ಅನ್ವೇಷಣೆಗೂ ಅವರು ತೊಡಗಿದ್ದಾರೆ. ಅವರ ಕವಿತೆಗಳಲ್ಲಿ ಅಂತರ್‌ವಾಹಿನಿಯಾಗಿ ಹರಿದು ಬರುವ ಭಾವುಕತನ ವೈಚಾರಿಕತೆಯೊಂದಿಗೆ ಸಂಲಗ್ನಗೊಂಡಿರುವುದನ್ನು ಗುರುತಿಸಬಹುದಾಗಿದೆ. ಸಂಗಣ್ಣನವರು ಭಾವುಕತೆಯಲ್ಲಿ ಮೈಮರೆಯದೆ ಲೌಕಿಕ ಬದುಕನ್ನು ತೆಕ್ಕೆಯಲ್ಲಿ ಹಿಡಿದುಕೊಳ್ಳುತ್ತಾರೆ. ಬದುಕಿನ ವಾಸ್ತವತೆಯನ್ನು ದೃಢೀಕರಿಸುತ್ತ ಅದಕ್ಕೆ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ. ಅವರ ಪಾಲಿಗೆ ಕವಿತೆಯೆಂಬುದು ಬದುಕಿನ ವ್ಯಾಖ್ಯಾನ–ನಿರೂಪಣೆ– ಸಮರ್ಥನೆ–ದರ್ಶನ ಎಲ್ಲವೂ ಆಗಿದೆ. ಅವರ ಕಾವ್ಯ ಕೇವಲ ಲೌಕಿಕದ ಪರಿಧಿಯಲ್ಲಿ ಗಿರಕಿ ಹೊಡೆಯಲಾರದು. ಲೌಕಿಕದಾಚೆಯ ಏನನ್ನೋ ಸ್ಪರ್ಶಿಸುವ ದರ್ಶಿಸುವ ತುಡಿತ ಅಲ್ಲಿ ಎದ್ದು ಕಾಣುತ್ತದೆ. ಸಂಗಣ್ಣನವರ ಕವಿತೆಗಳಲ್ಲಿರುವ ತಣ್ಣನೆಯ ಬಂಡಾಯ ಮನೋಜ್ಞವಾದುದು. ಅವರು ಅಮಾನವೀಯವಾದ ಮೌಢ್ಯಗಳನ್ನು ಧಿಕ್ಕರಿಸುತ್ತ ಪರಂಪರಾಗತ ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆ. ಸಂಗಣ್ಣನವರು ಎಚ್ಚರದಿಂದ ಕೈಕೊಳ್ಳುವ ಮೌಲ್ಯಗಳ ಅನ್ವಯಿಕತೆಯಲ್ಲಿ ಕಂದಾಚಾರವಿರುವುದಿಲ್ಲ.

ಲೋಕಾನುಭವ ಮತ್ತು ಸ್ವಾನುಭವಗಳ ಅಮಿತ ಶಕ್ತಿ ಅವರ ಕವಿತೆಗಳ ಆರೋಗ್ಯ ವರ್ಧಿಸಿದೆ. ಸದಾ ಮಾರ್ದವ ಸಂಬಂಧಗಳಿಗಾಗಿ ಹಂಬಲಿಸುವ ಸಂಗಣ್ಣನವರ ವಿಡಂಬನೆ ನಾಜೂಕಾದುದು, ಸ್ವಗತ ಸಂಭಾಷಣೆಯ ರೂಪದಲ್ಲಿರುವಂಥದು. ಅಸಮಾನತೆ–ಶೋಷಣೆ ಅನೈತಿಕತೆ–ಭ್ರಷ್ಟಾಚಾರ–ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲಿರುವ ಸಂಗಣ್ಣನವರು ತಮ್ಮ ಕವಿತೆಗಳಲ್ಲಿ ಆಶಾವಾದವನ್ನು ಬಿಂಬಿಸುತ್ತಾರೆ. ಅವರು ರಚಿಸಿರುವ ಕಥನ–ಕವನಗಳ ವಸ್ತು ಸುಪರಿಚಿತ. ಆದರೂ ಅವುಗಳನ್ನು ಮೊದಲ ಬಾರಿಗೆ ಪರಿಚಯಿಸುವ ಉತ್ಸಾಹದಿಂದ ನಾವೀನ್ಯತೆಯಿಂದ ನಿರೂಪಿಸುತ್ತಾರೆ.

ಅವುಗಳಿಗೆ ಹೊಸ ಅರ್ಥ ತುಂಬಿ ಆ ಅರ್ಥದ ಮೂಲಕ ಧ್ವನಿಶಕ್ತಿ ಸ್ಥಾಪಿಸುತ್ತಾರೆ. ಅವರ ಕಥನಕವನಗಳು ತಮ್ಮಲ್ಲಿ ಅಡಗಿಸಿಕೊಂಡಿರುವ ನೀತಿ ಬೋಧೆಗಳನ್ನು ತೆರೆದಿಡುತ್ತ ಪುನರ್ಮನನದ ಅನುಭವ ನೀಡುತ್ತವೆ. ನಡುಗನ್ನಡ ಕಾವ್ಯ– ವಚನಸಾಹಿತ್ಯ– ನವೋದಯ ಕಾವ್ಯ – ಜನಪದ ಸಾಹಿತ್ಯ – ಇವೆಲ್ಲವುಗಳ ಆಳವಾದ ಅಧ್ಯಯನದ ಫಲವಾಗಿ ಪಾಕಗೊಂಡಿರುವ ಸಂಗಣ್ಣನವರ ಕಾವ್ಯಭಾಷೆಯ ಸೊಗಸೇ ಬೇರೆ. ಕವಿತೆಗಳ ಸಾಲುಸಾಲುಗಳಲ್ಲಿ ಇದು ವ್ಯಕ್ತವಾಗುತ್ತದೆ.

ಸಂಗಣ್ಣನವರು ಪರಿಶ್ರಮದಿಂದ ಬಂಗಾಲಿ ಭಾಷೆ ಕಲಿತುಕೊಂಡು ಬಂಗಾಲಿ ಕೃತಿಗಳನ್ನು ಮೂಲದಲ್ಲಿ ಓದಿಕೊಂಡಿದ್ದಾರೆ. ಶುಭೋಧ ಘೋಷರ ಕತೆಗಳು ಅವರನ್ನು ಬಹಳ ಆಕರ್ಷಿಸಿದವು. ಅವರ ೧೮ ಕತೆಗಳನ್ನು 'ಭಾರತದ ಪ್ರೇಮಕಥೆಗಳು' ಹೆಸರಿನಲ್ಲಿ ಅನುವಾದಿಸಿದರು. ''ಥಾವೊ ಕಾಹಿಸಿ', 'ಏಕದಾ ನಿಶಾಥ್ ಕಾಲೆ' ಇವು ಸಂಗಣ್ಣನವರಿಂದ ಅನುವಾದಿಸಲ್ಪಟ್ಟ ಇತರ ಬಂಗಾಲಿ ಕೃತಿಗಳು. ರವೀಂದ್ರರ ಕೆಲವು ಕವಿತೆಗಳನ್ನು ಅನುವಾದಿಸಿದ್ದಾರೆ. ಕೆಲವು ಇಂಗ್ಲಿಷ್ ಕವಿತೆಗಳನ್ನು ಅನುವಾದಿಸಿದ್ದುಂಟು. ವಿಜಯ್ ತೆಂಡೂಲ್ಕರ್ ಅವರ ಸುಪ್ರಸಿದ್ಧ ನಾಟಕ 'ಘಾಸಿರಾಮ್ ಕೋತ್ವಾಲ್' ಮರಾಠಿ ನಾಟಕ ಸಂಗಣ್ಣನವರಿಂದ ಕನ್ನಡೀಕರಿಸಲ್ಪಟ್ಟಿದೆ.

ಕಾವ್ಯದ ನಂತರ ಸಂಗಣ್ಣನವರ ಆಸಕ್ತಿ ನಾಟಕ. ತಮ್ಮ ಸಾಹಿತ್ಯಕೃಷಿಯ ಆರಂಭದ ಘಟ್ಟದಲ್ಲಿ 'ಚೌತಿ–ಚಂದ್ರ' 'ಬಂಗಾರದ ತಟ್ಟೆ' 'ಜನ ಅರಣ್ಯ' 'ಮೋಚಿಮಾವ' ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಅವರ 'ಅಂಗುಲಿಮಾಲ' ಹಲವು ಊರುಗಳಲ್ಲಿ ಪ್ರದರ್ಶನಗೊಂಡು ಜನಪ್ರಿಯವಾಗಿತ್ತು. ಸಂಗಣ್ಣನವರು ತಮ್ಮ ಇಳಿವಯಸ್ಸಿನಲ್ಲಿ ರಚಿಸಿರುವ 'ಸೂಳೆ ಸಂಕವ್ವೆ' ಹಲವು ದೃಷ್ಟಿಗಳಿಂದ ಮಹತ್ವದ ನಾಟಕವಾಗಿದೆ. ಈ ನಾಟಕಕ್ಕೆ ೨೦೦೧ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಸೂಳೆ ಸಂಕವ್ವೆ ೧೨ನೇ ಶತಮಾನದ ಒಬ್ಬ ವಚನಕಾರ್ತಿ. ಅವಳದು ಒಂದೇ ಒಂದು ವಚನ ಲಭ್ಯವಿದೆ. ಅದೊಂದರ ಆಧಾರದ ಮೇಲೆ ಸಂಗಣ್ಣನವರು ಅವಳ ಜೀವನಚಿತ್ರ ದೃಶ್ಶೀಕರಿಸಿದ್ದಾರೆ. ಇಲ್ಲಿ ಸಂಗಣ್ಣನವರು ಬಸವಣ್ಣನ ನೇತೃತ್ವದಲ್ಲಿ ನಡೆದ ಸಾಮಾಜಿಕ ಕ್ರಾಂತಿಯನ್ನು ತಮ್ಮದೇ ಆದ ದೃಷ್ಟಿಯಿಂದ ಪರಿಭಾವಿಸಿದ್ದಾರೆ. ಸ್ತ್ರೀ ಸಮಾನತೆ ಮತ್ತು ಜಾತೀಯತೆಯ ನಿರ್ಮೂಲನೆಯ ವಿಷಯಗಳು ಬಸವಣ್ಣ ಭಾವಿಸಿದಷ್ಟು ಸರಳವಾಗಿರಲಿಲ್ಲ. ರೂಢಿಮೂಲ ನಂಬಿಕೆಗಳ ಬೇರನ್ನು ಅಲುಗಾಡಿಸುವುದು ಪ್ರಯಾಸದ ಕಾರ್ಯ. ಬಸವ ತತ್ವಗಳು ಬಸವಾಭಿಮಾನಿಗಳನ್ನು ಆಕರ್ಷಿಸಿದವು. ಆದರೆ ಸಂಪ್ರದಾಯವಾದಿಗಳು ಅವುಗಳನ್ನು ಧಿಕ್ಕರಿಸಿದರು. ಅವಹೇಳನ ಮಾಡಿದರು. ಸೂಳೆತನದ ಕೋಟೆಯನ್ನು ದಾಟಲು ಹಂಬಲಿಸಿದ ಸಂಕವ್ವೆ ಎದುರಿಸಿದ ಪ್ರತಿರೋಧಗಳು ಆಗ ಸಂಭವಿಸಿದ ಘರ್ಷಣೆಗಳು ನಾಟಕದಲ್ಲಿ ಅರ್ಥವತ್ತಾಗಿ ಬಿಂಬಿತವಾಗಿವೆ. ನಾಟಕವು ಓದುಗರನ್ನು ನೋಡುಗರನ್ನು ಆಲೋಚನೆಗೆ ತೊಡಗಿಸುತ್ತದೆ.

'ಅವ್ವಣ್ಣೆವ್ವ' ಒಂದು ಜನಪದ ಗೀತೆಯನ್ನಾಧರಿಸಿ ರಚಿಸಿದ ನಾಟಕ. ಮೂಲಕಥೆಯ ಎಳೆಯನ್ನು ಸಂಗಣ್ಣನವರು ವಿಸ್ತರಿಸಿ ಪೂರ್ಣಾವಧಿ ನಾಟಕ ರಚಿಸಿದ್ದಾರೆ. ಒಂದು ಹಳ್ಳಿಯಲ್ಲಿ ನಡೆದ ಅಂತರ್ಜಾತಿಯ ಪ್ರೇಮ ಪ್ರಕರಣ ವಿವಿಧ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಅವ್ವಣ್ಣೆವ್ವ ಬೇರೆ ಜಾತಿಯ ತರುಣನನ್ನು ಪ್ರೀತಿಸುತ್ತಾಳೆ. ಅವಳ ಅಣ್ಣಂದಿರು ಅವಳ ಪ್ರೀತಿಯನ್ನು ಧಿಕ್ಕರಿಸಿ ಸ್ವಜಾತಿ ವರನೊಂದಿಗೆ ಮದುವೆ ನೆರವೇರಿಸುತ್ತಾರೆ. ಅವ್ವಣ್ಣೆವ್ವನ ಗಂಡ ಅಲ್ಪಾಯುಷಿ. ತರುಣ ವಿಧವೆ ಅವ್ವಣ್ಣೆವ್ವನ್ನು ಮೊದಲಿನ ಪ್ರೇಮಿ ಮದುವೆ ಮಾಡಿಕೊಂಡು ಊರು ಬಿಡುತ್ತಾನೆ. ಇದಿಷ್ಟು ಕಥಾ ಸಂದರ್ಭಕ್ಕೆ ಸಂಗಣ್ಣನವರು ಸಮಕಾಲೀನ ತುಡಿತಗಳನ್ನು ಸೇರಿಸಿದ್ದಾರೆ. ತಮ್ಮ ಪ್ರೇಮ ಜೀವನವನ್ನು ಧಿಕ್ಕರಿಸಿದ ಊರಿಗಿಂತ ನಿರ್ಜನವಾದ ಕಾಡು ಲೇಸೆಂದು ಅವರು ಅಡವಿ ಸೇರುತ್ತಾರೆ. ಮಗು ಹುಟ್ಟಿದ ಮೇಲೆ ಕಾಡಿನ ಜೀವನ ಅವರಿಗೆ ಬೇಸರ ತರಿಸುತ್ತದೆ. ಎಷ್ಟಾದರೂ ಮನುಷ್ಯ ಸಮಾಜಜೀವಿ. ಸಮಾಜವಿಲ್ಲದೆ ಅವನ ಬದುಕು ಅಸಹನೀಯ. ಆದ್ದರಿಂದ ಅವ್ವಣ್ಣೆವ್ವ ಗಂಡ ಮಗನೊಂದಿಗೆ ಊರಿಗೆ ಬರುತ್ತಾಳೆ.

'ಶೀಲಾವತಿ' ಮತ್ತು 'ಬಾಳ ಭಿಕ್ಷುಕ' ಒಂದೇ ಮಾದರಿಯ ನಾಟಕಗಳು. ಗೊಂದಲಿಗರ ಕಥೆಯನ್ನಾಧರಿಸಿ ಈ ರಚನೆಗಳು ಮೇಲ್ನೋಟಕ್ಕೆ ಮೂಲ ಕಥಾನಕದ ಸರಳ ರಂಗ-ರೂಪಗಳೆಂದೆನಿಸಿದರೂ ಇಲ್ಲಿ ಸಂಗಣ್ಣನವರ ಜಾಣ್ಮೆ ವ್ಯಕ್ತವಾಗಿದೆ. ಮೂಲಕಥೆಗಳಲ್ಲಿ ಬೆರೆತುಕೊಂಡಿರುವ ನಾಟಕೀಯ ಅಂಶಗಳನ್ನು ಸಂಯೋಜಿಸಿ ವಿವಿಧ ದೃಶ್ಯಗಳಲ್ಲಿ ಸುಸಂಬದ್ಧಗೊಳಿಸಲಾಗಿದೆ.

'ಕೊಂಡಜ್ಜಿ ಬಸಪ್ಪ' ಸಂಗಣ್ಣನವರು ಬರೆದಿರುವ ಏಕೈಕ ಜೀವನ ಚರಿತ್ರೆ. ಕೊಂಡಜ್ಜಿ ಬಸಪ್ಪನವರು ಈ ನಾಡು ಕಂಡಿರುವ ಅಪರೂಪದ ರಾಜಕಾರಣಿ. ರಾಜಕೀಯದ ಕಲುಷಿತ ವಾತಾವರಣದಲ್ಲಿದ್ದೂ ನೈತಿಕತೆಯನ್ನು ಕಾಪಾಡಿಕೊಂಡು ಬಂದವರು. ಸಂಗಣ್ಣನವರಿಗೆ ಬಸಪ್ಪನವರೊಂದಿಗೆ ನಿಡುಗಾಲದ ಒಡನಾಟವಿತ್ತು. ಅವರ ವ್ಯಕ್ತಿತ್ವದ ಬಗ್ಗೆ ಸಂಗಣ್ಣನವರಿಗೆ ಅಭಿಮಾನ. ಆದರೆ ಈ ಜೀವನ ಚರಿತ್ರೆಯಲ್ಲಿ ಸಂಗಣ್ಣನವರು ತಮ್ಮ ಅಭಿಮಾನ ವೈಭವೀಕರಣಗೊಳ್ಳದಂತೆ-ಎಚ್ಚರ ವಹಿಸಿದ್ದಾರೆ. ಸ್ವಾನುಭವ ಮತ್ತು ಕ್ಷೇತ್ರಕಾರ್ಯಗಳಿಂದ ಸಂಗ್ರಹಿಸಿದ ವಸ್ತುನಿಷ್ಠ ಮಾಹಿತಿಯನ್ನು ಬಳಸಿಕೊಂಡು ಒಂದು ಒಳ್ಳೆಯ ಜೀವನಚರಿತ್ರೆಯನ್ನು ನೀಡಿದ್ದಾರೆ.

ಸಂಗಣ್ಣನವರನ್ನು ಜನ 'ಜಾನಪದ ವಿದ್ವಾಂಸ' 'ಜಾನಪದ ತಜ್ಞ' 'ಜಾನಪದ ಸಾಹಿತಿ' ಎಂದು ಮುಂತಾಗಿ ಪ್ರೀತಿಯಿಂದ ಕರೆಯುತ್ತಾರೆ. ಅವರು ಜಾನಪದ ವಿದ್ವಾಂಸನಾಗಬೇಕೆಂದು ಪರಿಶ್ರಮದಿಂದ ಜಾನಪದ ಅಧ್ಯಯನ ನಡೆಸಿದವರಲ್ಲ. ಮೊಗ್ಗು ಅರಳಿ ಹೂವಾದಂತೆ ಸಹಜವಾಗಿಯೇ ಜಾನಪದ ವಿದ್ವಾಂಸರಾದವರು. ಬಾಲ್ಯಕಾಲದಿಂದಲೂ ಬೀಸುಕಲ್ಲಪದ, ತತ್ವಪದ ಮೊದಲಾದವುಗಳನ್ನು ಕೇಳುತ್ತ ಆಟ ಬಯಲಾಟಗಳನ್ನು ನೋಡುತ್ತ ಬೆಳೆದವರು. ಬಾಲ್ಯ ಸಹಜ ಆಕರ್ಷಣೆ ಯೌವನಕ್ಕೆ ಬಂದಾಗ ಶ್ರದ್ಧೆಯ ವಸ್ತುವಾಯಿತು. ವಿದ್ಯಾವಂತರು ಮೇಲರಿಮೆಯ

ಭ್ರಮೆಯಲ್ಲಿ ಹಳ್ಳಿಯ ಬದುಕನ್ನು ಅಗೌರವದಿಂದ ಕಾಣುತ್ತಿದ್ದ ಸಂದರ್ಭದಲ್ಲಿ ಸಂಗಣ್ಣನವರು ಹಳ್ಳಿಯಲ್ಲಿಯೇ ನೆಲೆನಿಂತು ಪಕ್ಕಾ ಹಳ್ಳಿಗನಾದರು. ಆದ್ದರಿಂದ ಜಾನಪದದ ಅಂತರಂಗ ದರ್ಶನ ಅವರಿಗೆ ಸಾಧ್ಯವಾಯಿತು. ಅವರು ತಮ್ಮ ಬದುಕಿನ ಬಹಳಷ್ಟು ಸಮಯವನ್ನು ಜಾನಪದದ ಸಂಗ್ರಹ, ಪ್ರಕಟಣೆ, ವ್ಯಾಖ್ಯಾನ, ಪ್ರಸಾರಗಳಲ್ಲಿ ವಿನಿಯೋಗಿಸಿದ್ದಾರೆ. ಹದಿಹರೆಯದಲ್ಲಿ 'ಗರತಿ-ಹಾಡು' ಓದಿ ಅದರಿಂದ ತುಂಬಾ ಪ್ರಭಾವಿತರಾದ ಸಂಗಣ್ಣನವರು ಜನಪದ ಸಂಗ್ರಹದ ದೀಕ್ಷೆ ತೊಟ್ಟರು. ತಮ್ಮ ಮನೆಯಲ್ಲಿ ಓಣಿಯಲ್ಲಿ ಊರಲ್ಲಿ ಅಕ್ಕಪಕ್ಕದ ಹಳ್ಳಿಗಳಲ್ಲಿ ನಿರಾಯಾಸವಾಗಿ ಲಭ್ಯವಾದ ಹಾಡುಗಳನ್ನು ಶ್ರದ್ಧೆಯಿಂದ ಸಂಗ್ರಹಿಸಿದರು. ಹಾಗೆ ಸಂಗ್ರಹಿಸಿದ ಜನಪದ ತ್ರಿಪದಿಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿ 'ನವಲು ಕುಣದಾವ' ಸಂಕಲನ ಪ್ರಕಟಿಸಿದರು. ಇದು ಆರು ನೂರು ತ್ರಿಪದಿಗಳ ಸಂಕಲನವಾಗಿದೆ. ಗರತಿ ಹಾಡಿನ ನಂತರ ಬಂದ ಗಮನಾರ್ಹ ಸಂಕಲನವಿದು. ಒಂದು ಅರ್ಥದಲ್ಲಿ ಇದನ್ನು ಗರತಿಹಾಡಿನ ಎರಡನೆಯ ಭಾಗ ಎನ್ನಬಹುದು. ಈ ತ್ರಿಪದಿಗಳೆಲ್ಲ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಹುಟ್ಟಿದಂಥವು. ಹಳ್ಳಿಯ ಗರತಿ ತನ್ನ ಜೀವನಾನುಭವವನ್ನು ನಿರ್ದಿಷ್ಟ ಜೀವನ ದೃಷ್ಟಿಯನ್ನು ಇಲ್ಲಿ ಅಭಿವ್ಯಕ್ತಿಗೊಳಿಸಿದ್ದಾಳೆ. ಅರವತ್ತು ಅಧ್ಯಾಯಗಳಲ್ಲಿ ಈ ತ್ರಿಪದಿಗಳು ವಿಂಗಡಿಸಲ್ಪಟ್ಟಿವೆ. ಸ್ವತಃ ಕವಿಯಾದ ಸಂಗಣ್ಣನವರು ಕಾವ್ಯಾತ್ಮಕವಾದ ಶ್ರೇಷ್ಠ ಗುಣಮಟ್ಟದ ತ್ರಿಪದಿಗಳನ್ನೇ ಇಲ್ಲಿ ಆಯ್ಕೆ ಮಾಡಿದ್ದಾರೆ.

'ಚಿತ್ರಪಟ ರಾಮಾಯಣ' ಸಂಗಣ್ಣನವರು ಸಂಪಾದಿಸಿದ ಬಯಲಾಟ (ದೊಡ್ಡಾಟ). ನಮ್ಮ ಬಯಲಾಟದ ಕತೆಗಳು ನೂರಾರು. ಹಸ್ತಪ್ರತಿಗಳು ಸಾವಿರಾರು. ಆದರೆ ಪ್ರಕಟಗೊಂಡಿರುವವು ಬೆರಳೆಣಿಕೆಯಷ್ಟು ಮಾತ್ರ. ಜಾನಪದ ವಿದ್ವಾಂಸರು ಹಾಡು ಕತೆಗಳ ಸಂಗ್ರಹಕ್ಕೆ ನೀಡಿದಷ್ಟು ಗಮನವನ್ನು ಬಯಲಾಟಗಳಿಗೆ ನೀಡಲಿಲ್ಲ. ಜಾನಪದ ವಲಯದಲ್ಲಿ ನಿರ್ಲಕ್ಷಿತ ಕ್ಷೇತ್ರವಿದು. ಮೊದಲಿನಿಂದಲೂ ರಂಗಭೂಮಿಯ ವಿವಿಧ ಪ್ರಕಾರಗಳ ಬಗ್ಗೆ ತೀವ್ರ ಆಸಕ್ತಿ ಹೊಂದಿರುವ ಸಂಗಣ್ಣನವರು ಬಯಲಾಟ ಪರಂಪರೆ ಕುರಿತು ಶ್ರದ್ಧೆ-ಗೌರವ ಹೊಂದಿದ್ದಾರೆ. ಚಿತ್ರಪಟರಾಮಾಯಣ ಅವರಿಂದ ಅಚ್ಚುಕಟ್ಟಾಗಿ ಸಂಪಾದಿಸಲ್ಪಟ್ಟಿದೆ. ಪರಮ ಪತಿವ್ರತೆ ಎನಿಸಿಕೊಂಡು, ಸೀತೆಯು ರಾವಣನ ಚಿತ್ರವನ್ನು ಮೋಹಿಸುವುದು ಈ ಬಯಲಾಟದ ಕೇಂದ್ರ ವಸ್ತು. ಇದು ಜಾನಪದೀಯವಾದ ಹಾಗೇ ಮಾನವೀಯ ಕಲ್ಪನೆ.

'ಗೊಂಬಿಗೌಡರ ಸೂತ್ರದ ಗೊಂಬೆ ಆಟಗಳು' ಸಂಗಣ್ಣನವರು ಸಂಪಾದಿಸಿರುವ ಇನ್ನೊಂದು ಜನಪದ ನಾಟಕ ಕೃತಿ. ಸೂತ್ರದ ಗೊಂಬೆ ಮೂಲಪಠ್ಯ ಕವಿಲಿಖಿತ. ಆಶು ಸಂಭಾಷಣೆ ಮತ್ತು ದೃಶ್ಯ ನಿರ್ಮಿತಿಗಳು ಜಾನಪದೀಯ. ಈ ಗೊಂಬೆಯಾಟದ ಪ್ರದರ್ಶನ ನೀಡುವ ತಂಡಗಳು ಪರಂಪರಾಗತವಾಗಿ ನಡೆಸಿಕೊಂಡು ಬಂದ ಕೆಲವು ಮನೆತನಗಳು. ಇಂಥ ಮನೆತನಗಳಲ್ಲಿ ಹಾವೇರಿ ಜಿಲ್ಲೆಯ ರಾಣೇಬೆನ್ನೂರ ತಾಲ್ಲೂಕಿನ ಅಂಡರವಳ್ಳಿ ಗ್ರಾಮದ ಗೊಂಬಿಗೌಡರ ಮನೆತನವೂ ಒಂದು.

ಆ ಮನೆತನದ ಹಿರಿಯಕಲಾವಿದರಾಗಿದ್ದ ಹನುಮನಗೌಡರ ಎರಡು ಗೊಂಬೆ ಆಟದ ಪ್ರದರ್ಶನಗಳನ್ನು ಯಥಾವತ್ತಾಗಿ ಬರಹಕ್ಕಿಳಿಸಿದ ಸಂಗಣ್ಣನವರು ಒಂದು ಅಭೂತಪೂರ್ವ ಕಾರ್ಯವೆಸಗಿದ್ದಾರೆ. ಇದು ಸೂತ್ರದ ಗೊಂಬೆಯಾಟದ ಪ್ರಥಮ ರಂಗಪ್ರತಿ. ಇದರಲ್ಲಿರುವ 'ರಾವಣವಧಾ' ಮತ್ತು 'ಅಭಿಮನ್ಯು ಕಾಳಗ' ಈ ಎರಡು ಪ್ರಸಂಗಗಳ ಕರ್ತೃಗಳು ಯಾರೆಂಬುದು ತಿಳಿದಿಲ್ಲ. ಸಾಹಿತ್ಯಕವಾಗಿ ಇವು ಅಂಥ ಗುಣಮಟ್ಟದ ರಚನೆಗಳಲ್ಲ. ಆದರೆ ಇವುಗಳ ಪ್ರದರ್ಶನ ಶಕ್ತಿಯಿರುವುದು ಆಶುಸಂಭಾಷಣೆಗಳಲ್ಲಿ ಮತ್ತು ಸಮಯೋಚಿತ ದೃಶ್ಯ ನಿರ್ಮಿತಿಯಲ್ಲಿ. ಇದು ಮೌಖಿಕವಾಗಿ ಸಾಗಿ ಬಂದ ಜನಪದ ರಂಗಪ್ರತಿಭೆ. ಸಂಗಣ್ಣನವರಿಗೆ ಇದು ಮುಖ್ಯವೆನಿಸಿದ್ದರಿಂದ ಅದನ್ನು ಲಿಪಿಗೊಳಿಸಿ ದಾಖಲೆಗೊಳಿಸಿದ್ದಾರೆ. ಇಂಥ ಪ್ರಯತ್ನ ಇದೊಂದೇ. ಮೌಖಿಕ ರಂಗಪ್ರಕಾರವೊಂದನ್ನು ಸಂಪಾದಿಸಿಕೊಟ್ಟಿರುವ ಸಂಗಣ್ಣನವರು ತನ್ಮೂಲಕ ಜನಪದ ರಂಗಪರಂಪರೆಯ ಅಧ್ಯಯನಕ್ಕೆ ಮಹತ್ವದ ಆಕಾರ ಒದಗಿಸಿದ್ದಾರೆ. ದೀರ್ಘವಾದ ಪೀಠಿಕೆಯಲ್ಲಿ ಸೂತ್ರದ ಗೊಂಬೆ ಆಟದ ಉಗಮ ವಿಕಾಸ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಿದ್ದಾರೆ. ಪ್ರದರ್ಶನದ ವಿವಿಧ ಅಂಗಗಳನ್ನು ಸಹೃದಯತೆಯಿಂದ ವಿಮರ್ಶಿಸಿದ್ದಾರೆ. ಈ ಪೀಠಿಕೆ ಸಂಗಣ್ಣನವರ ಅಗಾಧಪಾಂಡಿತ್ಯ ಮತ್ತು ಸಹೃದಯತೆಗಳಿಗೆ ಸಾಕ್ಷಿಯಾಗಿದೆ. ಹನುಮನಗೌಡರ ಪ್ರಯೋಗಗಳ ವೈಶಿಷ್ಟ್ಯಗಳನ್ನು ಕುರಿತು ಬರೆದಿರುವ ಸಂಗಣ್ಣನವರ ಮಾತುಗಳು ರಂಗಪ್ರದರ್ಶನ ವಿಮರ್ಶೆಗೆ ಮಾದರಿಯಾಗಿದೆ.

'ಲ್ಷಕಾಪತಿ ರಾಜನಕಥೆ'ಯನ್ನು ಸಂಗಣ್ಣನವರು ಡಾ. ಚಂದ್ರಶೇಖರ ಕಂಬಾರ ಅವರೊಂದಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಕಿನ್ನರಿ ಜೋಗಿಗಳು ಹಾಡುವ–ಆಡುವ ಆಟ. ಅವರ ಪ್ರದರ್ಶನದಲ್ಲಿರುವ ಅದ್ಭುತ ನಾಟಕೀಯ ಗುಣಕ್ಕೆ ಸಂಗಣ್ಣನವರು ಮನಸೋತು ಈ ಒಂದು ಕಥೆಯನ್ನು ಸಂಪಾದಿಸಿದ್ದಾರೆ. ಕಿನ್ನರಿಜೋಗಿಗಳ ಪ್ರದರ್ಶನವನ್ನು ಹಳ್ಳಿಗರು 'ಕತೆ ಹೇಳುವುದು' ಎಂದು ಗುರುತಿಸಿದ್ದಾರೆ. ಸಂಗಣ್ಣನವರಿಗೆ ಅದು ಕೇವಲ ಹೇಳುವ ಕತೆಯಾಗಿ ಕಂಡು ಬರದೆ ಆಡುವ ಆಟವೆನಿಸಿತು. ಮುಖ್ಯ ಕಲಾವಿದ ಕತೆಯನ್ನು ನಿರೂಪಿಸುತ್ತಾನೆ. ನಿರೂಪಿಸುವಾಗ ಕಥೆಯಲ್ಲಿಯ ಪಾತ್ರಗಳೇ ತಾನಾಗಿ ಅಭಿನಯಿಸುತ್ತಾನೆ. ಇದೊಂದು ರೀತಿಯ ಏಕಪಾತ್ರಭಿನಯ. ನಿರೂಪಣೆ–ಅಭಿನಯ–ಹಾಡು ನಿರೂಪಣೆ ಹೀಗೆ ಚಕ್ರಾಕಾರವಾಗಿ ಸಾಗುವ ಪ್ರದರ್ಶನದಲ್ಲಿ ಯಾವಾಗ ಯಾವುದು ಮುಗಿದು ಯಾವುದು ಪ್ರಾರಂಭವಾಗುತ್ತದೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಅವುಗಳ ಪರಸ್ಪರ ಜೋಡಣೆ–ಬಂಧ ಆಗಿರುತ್ತದೆ.

ಸಂಗಣ್ಣನವರು ಕಿನ್ನರಿ ಜೋಗಿಗಳ ಕಥಾ ಪ್ರದರ್ಶನವನ್ನು ಯಥಾವತ್ತಾಗಿ ದಾಖಲಿಸಿ ಸಿದ್ಧಗೊಳಿಸಿರುವ ಈ 'ಲಕ್ಷಾಪತಿ ರಾಜನಕತೆ' ನಾಟಕಕಾರರ ಮೇಲೆ ನಾಟಕ ನಿರ್ದೇಶಕರ ಮೇಲೆ ಅದ್ಭುತ ಪ್ರಭಾವವನ್ನುಂಟುಮಾಡಿತು. ಜಾನಪದದ ರಂಗಸತ್ವವನ್ನು ಸಮರ್ಥವಾಗಿ ಬಳಸಿಕೊಳ್ಳಲು ಪ್ರಯತ್ನಿಸುವ ನಿರ್ದೇಶಕರಿಗೆ

'ಲಕ್ಷಾಪತಿ ಕತೆ' ಪ್ರೇರಣೆ ನೀಡಿತು. ಸಂಗಣ್ಣನವರ ಈ ಪಠ್ಯವನ್ನು ಆಧರಿಸಿ ಬಿ.ಜಯಶ್ರೀ ಅವರು ಸಿದ್ಧಪಡಿಸಿದ 'ಲಕ್ಷಾಪತಿ ರಾಜನಕತೆ' ದೇಶ ವಿದೇಶಗಳಲ್ಲಿ ಪ್ರದರ್ಶನಗೊಂಡು ಜನಮೆಚ್ಚುಗೆ ಪಡೆಯಿತು.

'ಗೊಂದಲಿಗರ ದೇವೇಂದ್ರಪ್ಪನ ಆಟಗಳು' ಕೂಡ ಲಕ್ಷಾಪತಿ–ಮಾದರಿಯ ಸಂಪಾದನ ಕೃತಿಯಾಗಿದೆ. ಕಿನ್ನರಿಜೋಗಿಗಳಂತೆ ಗೊಂದಲಿಗರೂ ಕಥಾನಿರೂಪಕ ವೃತ್ತಿಯವರು. ಗೊಂದಲಿಗರ ಸಾಹಿತ್ಯವನ್ನು ಸಂಪಾದಿಸಿರುವ ಸಂಗ್ರಾಹಕರು ಅವರ ಕತೆಗಳನ್ನು ಜನಪದ ಕತೆಗಳ ಗುಂಪಿನಲ್ಲಿ ಸೇರಿಸಿ ಕೈತೊಳೆದುಕೊಂಡಿದ್ದಾರೆ. ಆ ಕತೆಗಳ ನಿರೂಪಣಾ ವಿಧಾನ ಮತ್ತು ಆಗ ನಿರ್ಮಿತಗೊಳ್ಳುವ ರಂಗಕ್ರಿಯೆಯನ್ನು ಸಂಪೂರ್ಣ ಅಲಕ್ಷಿಸಿದ್ದಾರೆ. ಸಂಗಣ್ಣನವರ ದೃಷ್ಟಿಯಲ್ಲಿ ಗೊಂದಲಿಗರು ಕಥೆ ಹೇಳುವುದಿಲ್ಲ, ಕಥೆ ಅಭಿನಯಿಸುತ್ತಾರೆ. ಆದ್ದರಿಂದ ಅವರ ಕಥಾಪ್ರಸಂಗವನ್ನು 'ಆಟ' ಎಂದು ಕರೆದಿದ್ದಾರೆ. 'ಆಟ' ಎಂದರೆ ಬಯಲಾಟ, ಸ್ಟೇಜಿನ ಮೇಲೆ ನಡೆಯುವ ರಂಗಪ್ರಯೋಗ. ಇಂಥ ಒಂದು ಪೂರ್ಣಪ್ರಮಾಣದ ರಂಗಪ್ರಕಾರಕ್ಕಿರುವ ಎಲ್ಲ ಲಕ್ಷಣಗಳು ಗೊಂದಲಿಗರ ಕಥಾಪ್ರಸಂಗಕ್ಕಿರುವುದರಿಂದ ಸಂಗಣ್ಣನವರು ಅದನ್ನು 'ಆಟ'ವೆಂದು ಗುರುತಿಸಿದ್ದಾರೆ ಮತ್ತು ಸಮರ್ಥಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಂಪಾಪಟ್ಟಣದ ಗೊಂದಲಿಗರ ದೇವೇಂದ್ರಪ್ಪ ಒಬ್ಬ ಪ್ರತಿಭಾವಂತ ಕಲಾವಿದ, ಅವರ ಕಥಾಪ್ರಸಂಗಗಳನ್ನು ಯಥಾವತ್ತಾಗಿ ಧ್ವನಿ ಮುದ್ರಿಸಿಕೊಂಡು ಸಂಗ್ರಹಿಸಿರುವ ಎಂಟು ಕಥೆಗಳ ಪಠ್ಯಗಳು ಪ್ರಸ್ತುತ ಸಂಗ್ರಹದಲ್ಲಿವೆ. ಇದಕ್ಕೆ ಸಂಗಣ್ಣನವರು ಬರೆದಿರುವ ವಿಸ್ತೃತವಾದ ಪೀಠಿಕೆ ಹಲವು ಮೌಲಿಕ ವಿಚಾರಗಳನ್ನು ಒಳಗೊಂಡಿದೆ.

ಹಲವಾರು ಒಳನೋಟಗಳು ಇಲ್ಲಿವೆ. ಮುಖ್ಯ ಕಥಾನಿರೂಪಕನ ಪ್ರತಿಭೆ, ವಾಕ್‌ಚಾತುರ್ಯ, ಔಚಿತ್ಯಪ್ರಜ್ಞೆ, ಚಿತ್ರಕಶಕ್ತಿ, ಅಭಿನಯ ಚತುರತೆ ಮುಂತಾದವುಗಳನ್ನು ಕುರಿತು ಕೂಲಂಕಶವಾಗಿ ಚಿತ್ರಿಸಿದ್ದಾರೆ. ಇಂದು ಪ್ರಚಾರಕ್ಕೆ ಬಂದಿರುವ ಸಾಂದರ್ಭಿಕ ಸಿದ್ಧಾಂತ, ಪ್ರದರ್ಶನಾತ್ಮಕ ಸಿದ್ಧಾಂತ ಮುಂತಾದವು ಗೊಂದಲಿಗರ ಆಟದಲ್ಲಿ ಹೇಗೆ ಸಹಜವಾಗಿ ಅಂತರ್ಗತವಾಗಿವೆಯೆಂಬುದನ್ನು ವಿಶ್ಲೇಷಿಸಿದ್ದಾರೆ.

'ಚಿಗಟೇರಿ ಪದಕೋಶ' ಸಂಗಣ್ಣನವರ ಅರ್ಧಶತಕದ ಪರಿಶ್ರಮದ ಫಲ. ಜನಪದ ಬದುಕಿನೊಂದಿಗೆ ತಮ್ಮನ್ನು ಸಂಪೂರ್ಣವಾಗಿ ಬೆರೆಸಿಕೊಂಡಿರುವ ಸಂಗಣ್ಣನವರಿಗೆ ಒಮ್ಮೆ ಹಳ್ಳಿಗರ ಆಡುಮಾತುಗಳಲ್ಲಿರುವ ಪದಗಳ ವಿಶಿಷ್ಟ ಅರ್ಥಗಳತ್ತ ಗಮನ ಹರಿಯಿತು. ಶಿಷ್ಟ–ಗ್ರಾಂಥಿಕ ಪರಂಪರೆಯಲ್ಲಿಲ್ಲದ ಪದಕೋಶಗಳಲ್ಲಿ ಸ್ಥಾನ ಪಡೆದುಕೊಳ್ಳದ ಇಂಥ ಪದಗಳ ಸಂಗ್ರಹಣೆಯನ್ನು ಆವಾಗಲೇ ಪ್ರಾರಂಭಿಸಿದರು. ಸದಾ ಜಾಗೃತರಾಗಿದ್ದುಕೊಂಡು ತಮ್ಮ ಸುತ್ತಮುತ್ತಲಿನ ಭಾಷಾ ಪ್ರಯೋಗಗಳನ್ನು ಪದಪುಂಜಗಳನ್ನು ನುಡಿಗಟ್ಟುಗಳನ್ನು ಕಿವಿದೆರೆದು ಕೇಳುತ್ತ ಸಂಗ್ರಹಿಸುತ್ತ ಬಂದರು. ಈ ಕಾರ್ಯ ಕೆಲವು ದಿನಗಳ ಕ್ಷೇತ್ರಕಾರ್ಯದಿಂದ ಸಾಧ್ಯವಾಗುವಂಥದಲ್ಲ. ಆ

ಕ್ಷೇತ್ರದಲ್ಲಿಯೇ ಇದ್ದು ದಿನನಿತ್ಯದ ಭಾಷಾ ಬಳಕೆಯನ್ನು ಸಹೃದಯತೆಯಿಂದ ಕೇಳುತ್ತ ಗ್ರಹಿಸುತ್ತ ಸಂಗ್ರಹಿಸಿದಾಗ ಮಾತ್ರ ಇಂಥ ಪ್ರಯತ್ನ ಯಶಸ್ವಿಯಾಗಲು ಸಾಧ್ಯ.

ಸಂಗಣ್ಣನವರು ತಮ್ಮ 'ಚಿಗಟೇರಿ' ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಸಂಗ್ರಹಿಸಿದ ಪದಗಳ ಕೋಶವನ್ನು 'ಚಿಗಟೇರಿ ಪದಕೋಶ' ಎಂದು ಕರೆದಿರುವುದು ಸೂಕ್ತವಾಗಿದೆ. ಚಿಗಟೇರಿ ಪರಿಸರದಲ್ಲಿ ಮಾತ್ರ ಬಳಕೆಯಲ್ಲಿರುವ ನೂರಾರು ವಿಶಿಷ್ಟ ಪದಗಳು ಈ ಕೋಶದಲ್ಲಿವೆ. ಕೆಲವು ಸಾಮಾನ್ಯ ಪದಗಳು ಎಲ್ಲಾ ಕಡೆ ಪ್ರಚಾರದಲ್ಲಿದ್ದರೂ ಇಲ್ಲಿ ಅವು ಪಡೆದುಕೊಂಡಿರುವ ಅರ್ಥವೇ ಬೇರೆ. ಉದಾ – ಬೆಮರು (ಇಲ್ಲಿ–ಟಗರಿನ ವೀರ್ಯ) ಮಂಚ (ಇಲ್ಲಿ – ಶೇಕಡಾ ನಾಲ್ಕರ ಬಡ್ಡಿ). ಚಿಗಟೇರಿಯಲ್ಲಿರುವ ಎಲ್ಲ ವೃತ್ತಿಗಳ ಪಾರಿಭಾಷಿಕ ಪದಗಳನ್ನು ಸಂಗಣ್ಣನವರು ಪರಿಶ್ರಮ ಸಹನೆಗಳಿಂದ ಸಂಗ್ರಹಿಸಿದ್ದಾರೆ. ಹಬ್ಬ ಆಚರಣೆ ಮದುವೆ ಆಟ ಮನರಂಜನೆ ಕ್ರೀಡೆ ವೈದ್ಯ ಅಡಿಗೆ ಮನೆ ಹೊಲ – ಈ ಎಲ್ಲವುಗಳಿಗೆ ಸಂಬಂಧಿಸಿದ ಪದಗಳ ಅಪಾರ ಸಂಪತ್ತು ಇಲ್ಲಿದೆ. ಕೃಷಿ ಈ ಪರಿಸರದ ಪ್ರಧಾನ ವೃತ್ತಿಯಾಗಿರುವುದರಿಂದ ಕೃಷಿ ಪದಗಳ ಪ್ರಮಾಣ ಈ ಕೋಶದಲ್ಲಿ ಹೆಚ್ಚಾಗಿದೆ. ಒಂದು ಜನಸಮುದಾಯ ತನ್ನ ಅಗತ್ಯ ಅನಿವಾರ್ಯತೆಗೆ ತಕ್ಕಂತೆ–ಪದಗಳನ್ನು ಹೇಗೆ ಸೃಷ್ಟಿಸಿಕೊಳ್ಳುತ್ತದೆಂಬುದಕ್ಕೆ 'ಚಿಗಟೇರಿ ಪದಕೋಶ'ದಲ್ಲಿರದ ಮಳೆಯ ಪ್ರಮಾಣವನ್ನು ಸೂಚಿಸುವ ಪದಗಳನ್ನು ಗಮನಿಸಬಹುದಾಗಿದೆ. ಆಡು ಹನಿ, ಜಿನುಗು ಮಳೆ, ಪಿಸಿಮಳೆ, ಗುಂಜುಮಳೆ, ಕಾಲಂಟು ಮಳೆ, ವಲ್ಲಿ ತೊಯ್ಯುವ ಮಳೆ, ಕಂಬ್ಳಿ ಜಡವು ಮಳೆ, ಹಸಿಮಳೆ, ಮಿಂಚುನೀರಿನ ಮಳೆ, ನೀರು ಗುಂಪಾಡುವ ಮಳೆ, ಉಂಡಿಕರಗೋ ಮಳೆ, ಒಡ್ಡಿಗೆ ನೀರು ಬರೋ ಮಳೆ, ಕಾರುಮಳೆ, ದೆವ್ವ ಮಳೆ, ಕೇಡು ಮಳೆ, ಅಡ್ಡ ಮಳೆ– ಇತ್ಯಾದಿ. ಮಳೆಯ ನಂತರ ಭೂಮಿ ಹಸಿಯಾಗುವುದನ್ನು (ತೇವವಾಗುವುದನ್ನು) ಎದುರು ದ್ಯಾವ, ಬೇರು ಹದ, ಹಸಿಗೆ ಹಸಿ ಕೂಡಿದ ಹಸಿ, ಅರೆ ಅಡಿ ಹಸಿ, ಹಿಡಿಹತ್ತೋ ಹಸಿ, ನೆಲ ಹಸಿ, ಮೇಲು ಹಸಿ, ತಳ ಹಸಿ, ಕರಿದ್ಯಾವ ಇಷ್ಟು ವಿಧದಲ್ಲಿ ಗುರುತಿಸಲಾಗಿದೆ. 'ಚಿಗಟೇರಿ ಪದಕೋಶ' ನಮ್ಮ ಕೋಶಗಳಲ್ಲಿಯೇ ತೀರಾ ಭಿನ್ನವಾದ ವಿಶೇಷ ಕೃತಿ. ಇದಕ್ಕೆ ಇದೇ ಮಾದರಿ. ಸಂಗಣ್ಣನವರು ಜನಪದ ಭಾಷಾಕ್ಷೇತ್ರಕ್ಕೆ ನಮ್ಮ ಸಾಂಸ್ಕೃತಿಕ ಪರಂಪರೆಯ ತಿಳುವಳಿಕೆಗೆ ನೀಡಿರುವ ಅಪರೂಪದ ಕೊಡುಗೆಯಾಗಿದೆ ಈ 'ಚಿಗಟೇರಿ ಪದಕೋಶ'.

ಸಂಗಣ್ಣನವರು ಕಾವ್ಯ, ನಾಟಕ, ಜನಪದ ಆಸಕ್ತಿಗಳ ಜೊತೆಗೆ ಹಿಂದಿನಿಂದಲೂ ಶಾಸ್ತ್ರೀಯ ಸಂಗೀತದ ಅಭಿರುಚಿ ಬೆಳೆಸಿಕೊಂಡು ಬಂದವರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಅವರಿಗೆ ಪ್ರಿಯವಾದದ್ದು. ಪ್ರಸಿದ್ಧ ಸಂಗೀತಗಾರರ ಬಹು ಅಪರೂಪದ ಧ್ವನಿ ಸುರುಳಿಗಳ ಸಂಗ್ರಹವು ಅವರಲ್ಲಿದೆ. ಸಾಹಿತ್ಯದ ಓದು ಅಧ್ಯಯನ ಚಿಂತನೆಗಳು ಸಂಗಣ್ಣನವರ ವ್ಯಕ್ತಿತ್ವವನ್ನು ಮೃದುಗೊಳಿಸಿವೆ. ಮಾನವೀಯತೆ, ಸ್ನೇಹಗುಣ, ನಿರ್ಮತ್ಸರ ಭಾವ, ನಿರ್ಲಿಪ್ತತೆ – ಇವೆಲ್ಲ ಅವರಲ್ಲಿ ನೆಲೆಗೊಂಡಿವೆ. ವೃದ್ಧಾಪ್ಯ ಮತ್ತು ಅನಾರೋಗ್ಯಗಳನ್ನು ಲೆಕ್ಕಿಸದೆ ಇಂದಿಗೂ ಓದು–ಚಿಂತನೆ–

ಬರಹಗಳಲ್ಲಿ ತೊಡಗಿಕೊಂಡಿರುವ ಸಂಗಣ್ಣನವರದು ಕ್ರಿಯಾಶೀಲ ಚೈತನ್ಯವಾಗಿದೆ. (ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿರುವ 'ಸಾಲು ದೀಪಗಳು' ಗ್ರಂಥದಿಂದ ಶ್ರೀ ಬಸವರಾಜ ಮಲಶೆಟ್ಟಿಯವರ ಲೇಖನವನ್ನು ಯಥಾವತ್ತಾಗಿ ನೀಡಿದೆ)

**ಸದಾಶಿವಪ್ಪ**

ಅಪ್ಪಟ ಗಾಂಧಿವಾದಿ, ಶಿಕ್ಷಣ ತಜ್ಞ, ಸಂಶೋಧಕ ಪ್ರವೃತ್ತಿಯ ಸದಾಶಿವಪ್ಪನವರು ಹುಟ್ಟಿದ್ದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕುಂಚೂರು ಗ್ರಾಮದಲ್ಲಿ ೧೯೩೭ರ ಜುಲೈ ೧ ರಂದು. ತಂದೆ ಹನುಮಂತಪ್ಪ, ತಾಯಿ ತಿಪ್ಪಾಂಬ. ಪ್ರಾರಂಭಿಕ ಶಿಕ್ಷಣ ಕುಂಚೂರು, ಹಿರೇಹಡಗಲಿಗಳಲ್ಲಿ. ಹರದನಹಳ್ಳಿ ಜಿಲ್ಲಾಬೋರ್ಡ್ ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಎಂ.ಎ ಪದವಿ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಪಡೆದ ಬಿ.ಎಡ್. ಪದವಿ. ಉದ್ಯೋಗಕ್ಕಾಗಿ ಸೇರಿದ್ದು ಹರಪನಹಳ್ಳಿಯ ಸರಕಾರಿ ಪ್ರೌಢಶಾಲೆಯಲ್ಲಿ. ಸೇವಾವಧಿ ಪೂರ್ತಾ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ. ಹರಪನಹಳ್ಳಿ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ೧೯೫೩ರ ಸುಮಾರಿನಲ್ಲಿ ಹಂಪಿಯಲ್ಲಿ ನಡೆದ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಎರಡು ದಿವಸಗಳ ಅಧಿವೇಶನದಲ್ಲಿ ವಹಿಸಿಕೊಂಡ ಸ್ವಯಂಸೇವಕರ ಮುಖಂಡತ್ವ. ಎಳವೆಯಿಂದಲೇ ಸಾಹಿತ್ಯದ ಬಗ್ಗೆ ಆಸ್ಥೆ ವಹಿಸಿದಂತೆ ಸಂಶೋಧನ ಮನಸ್ಸಿನಿಂದ ಬರೆದ ಹಲವಾರು ಲೇಖನಗಳು. ಮೊದಲ ಕವನ ಸಂಕಲನ ಪ್ರಕಟವಾದುದು 'ಜೀವನ ಜೋಕಾಲಿ'. ನಂತರ ಪ್ರಕಟವಾದ ಹಾಸ್ಯ ಕಥೆಗಳ ಸಂಕಲನ 'ಉಸಿರ ಕಡಲ ಹೆಸರ ಹಡಗುಗಳು'. ಶಿಕ್ಷಣಕ್ಕೆ ಸಂಬಂಧಿಸಿದಂತೆ ರಚಿಸಿದ ಕೃತಿಗಳಾದ 'ಕನ್ನಡ ಭಾಷಾ ಬೋಧನ ವಿಜ್ಞಾನ–ಬೋಧನಾ ಪದ್ಧತಿ'. ಪರಿಸರ ಮಾಲಿನ್ಯದ ಬಗ್ಗೆ ಬರೆದ ಕೃತಿ 'ಪರಿಸರ ಮಾಲಿನ್ಯ ಮತ್ತು ರಕ್ಷಣೆ'. ಸಾಮಾಜಿಕವಾಗಿ ಹಾದಿ ತಪ್ಪುತ್ತಿರುವ ಯುವಜನತೆಯನ್ನು ಸರಿದಾರಿಗೆ ತರಬೇಕೆಂಬ ಉದ್ದೇಶದಿಂದ ರಚಿಸಿದ ಕೃತಿ 'ಮಾದಕ ಪದಾರ್ಥಗಳ ಸೇವನೆ ? ಒಂದು ಸಾಮಾಜಿಕ ಪಿಡುಗು' ಕರ್ನಾಟಕದ ಬಗ್ಗೆ ಸಮಗ್ರ ಪರಿಚಯ ಮಾಡಿಸುವ ದೃಷ್ಟಿಯಿಂದ ರಚಿಸಿದ ಕೃತಿಗಳು– 'ಕರ್ನಾಟಕ ಕುತೂಹಲ' (ಪ್ರಶ್ನೋತ್ತರಗಳು), ಕರ್ನಾಟಕದ ಸಮಗ್ರ ಪರಿಚಯವಲ್ಲದೆ ತಾವು ಹುಟ್ಟಿದ ಹರಪನಹಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಹರಪನಹಳ್ಳಿಯ ಪಾಳೇಗಾರರು, ಹರಪನಹಳ್ಳಿ ಪಾಳೇಗಾರರ ಇತಿಹಾಸ ದರ್ಶನ, ಹರಪನ ಹಳ್ಳಿಯ ತಾಲ್ಲೂಕು ಪರಿಚಯ ಮುಂತಾದ ಕೃತಿಗಳ ಜೊತೆಗೆ ಬಳ್ಳಾರಿ ಜಿಲ್ಲೆಯ ಪರಿಚಯದ 'ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ ? ಬಳ್ಳಾರಿ ಜಿಲ್ಲಾ ಪ್ರಾಚೀನ ಇತಿಹಾಸ' ಪುಸ್ತಕಗಳ ಜೊತೆಗೆ ವ್ಯಕ್ತಿ ಚಿತ್ರಣದ ಕೃತಿಗಳಾದ, 'ನಾ ಕಂಡ ಸಂಗೀತ ದಿಗ್ಗಜರು' ಗ್ರಂಥದಲ್ಲಿ ಪುರಂದರದಾಸರು, ಪಂಚಾಕ್ಷರಿ ಗವಾಯಿಗಳು, ಮಲ್ಲಿಕಾರ್ಜುನ ಮನ್ಸೂರ್,

ಎಂ.ಎಸ್.ಸುಬ್ಬುಲಕ್ಷ್ಮೀ ಮುಂತಾದವರುಗಳ ಬಗ್ಗೆ ಒಳ ನೋಟವನ್ನು ನೀಡಿದ್ದಾರೆ. ಇದಲ್ಲದೆ 'ವಿಶ್ವದ ವಿಭೂತಿ ಪುರುಷರು' ಗ್ರಂಥದಲ್ಲಿ ಬುದ್ಧ, ಮಹಾವೀರ, ಏಸುಕ್ರಿಸ್ತ, ಪೈಗಂಬರ್, ಬಸವೇಶ್ವರ, ಗಾಂಧೀಜಿ ಮುಂತಾದವರುಗಳಲ್ಲದೆ 'ಶ್ರೀಸಾಮಾನ್ಯರ ಕವಿಗಳು' ಕೃತಿಯಲ್ಲಿ ಕಬೀರ್, ತಿರುವಳ್ಳವರ್, ವೇಮನ ಮತ್ತು ಸರ್ವಜ್ಞರನ್ನು ಪರಿಚಯಿಸಿದ್ದಾರೆ. ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ದೇವೇಂದ್ರಪ್ಪ ಹಾಗೂ ಜಾನಪದ ಕಲೆಗಳು, ಜೋಳಗಿ ತುಂಬಾ ಜಾನಪದ ಹೋಳಿಗಿ, ನಾವ್ ಹಾಡ್ತೇವ ತರಾತರ, ಜಾನಪದ ದೀವಟಿಕೆಗಳು, ಜಾನಪದ ಮುಕ್ತಕಗಳು, ಮುಂತಾದವುಗಳು ಸೇರಿ ಸುಮಾರು ನಲವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಆಂಗ್ಲಮಾಧ್ಯಮ ಶಿಕ್ಷಣಕ್ಕೆ ಸಂಬಂಧಿಸಿದಂತೆ ಟೀಚಿಂಗ್ ಆಫ್ ಇಂಗ್ಲಿಷ್ ಲಾಂಗವೇಜ್, ಗಾಂಧೀಜಿ ಅಂಡ್ ಬೇಸಿಕ್ ಎಜುಕೇಷನ್, ಎಕ್ಸಾಮಿನೇಷನ್ ಅಂಡ್ ಇವಾಲ್ಯುಯೇಷನ್ ಇನ್ ಎಜುಕೇಷನ್ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಶಿಷ್ಟ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡು ವಿದ್ಯಾರ್ಥಿಗಳು ಹಾಗೂ ಜನ ಸಾಮಾನ್ಯರ ಅನುಕೂಲಕ್ಕಾಗಿ ಹಲವಾರು ಕೃತಿಗಳನ್ನು ರಚಿಸಿದಂತೆ ಸಂಶೋಧಕ ಮನಸ್ಸಿನಿಂದ ಸದಾಶಿವಪ್ಪನವರು ವಿವಿಧ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿ ನೂರಾರು ಲೇಖನಗಳನ್ನು ಬರೆದಿದ್ದಾರೆ.

ಬಾಗಳಿ ಕಂಚಿನ ಪತ್ರ, ಹರಪನ ಹಳ್ಳಿ ಪಾಳೆಗಾರರು ಸ್ಥಾಪಿಸಿದ ಸಂಪ್ರದಾಯಗಳು, ಬಳ್ಳಾರಿ ಜಿಲ್ಲೆಯ ಪ್ರಾಚೀನ ಕಾಲದ ಕೆರೆ ಕಟ್ಟೆಗಳು: ಒಂದು ಅಧ್ಯಯನ, ಪ್ರಥಮ ವಿಶ್ವ ಸಮರದಲ್ಲಿ ಮೈಸೂರು ಪ್ರಾಂತ್ಯದ ಪಾತ್ರ, ನೊಳಂಬವಾಡಿ ರಾಜ್ಯ ಹಾಗೂ ಉಚ್ಚಂಗಿ ಪಾಂಡ್ಯರು, ಸವಣೂರು ನವಾಬರ ಇತಿಹಾಸ, ನೊಳಂಬ ಪಲ್ಲವರು ಮತ್ತು ಕಂಚಿನ ಕೆರೆ ಒಂದು ವಿವೇಚನೆ ? ಹೀಗೆ ವೈವಿಧ್ಯಮಯ ಪ್ರಕಾರಗಳ ಸಂಶೋಧನೆಯಲ್ಲಿ ನಿರತರಾಗಿದ್ದು ೩೦ಕ್ಕೂ ಹೆಚ್ಚು ಲೇಖನಗಳನ್ನು ರಾಜ್ಯದ ವಿವಿಧ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದು ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಪರಿಸರ ರಕ್ಷಣೆ, ಕೋಮು ಸೌಹಾರ್ದ, ಮಾದಕ ವಸ್ತುಗಳ ಸೇವನೆ ನಿಷೇಧ, ಬಡರೋಗಿಗಳ ಆರೈಕೆ, ಸುನಾಮಿ ಸಂತ್ರಸ್ತರಿಗೆ ನಿಧಿ ಸಂಗ್ರಹ ಮುಂತಾದ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಇತಿಹಾಸ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಬಳ್ಳಾರಿ ಘಟಕ, ಹರಪನಹಳ್ಳಿ ತಾಲ್ಲೂಕು ಘಟಕ ಮುಖಾಂತರ ದತ್ತಿ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಯಕ್ಷಗಾನ, ಬಯಲಾಟ, ಸೂತ್ರದ ಗೊಂಬೆಯಾಟ, ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಜ್ಯೋತ್ಸವ ಕಾರ್ಯಕ್ರಮಗಳು ಮುಂತಾದವುಗಳನ್ನು ಆಯೋಜಿಸಿದ್ದಾರೆ. ಸಾಹಿತ್ಯ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸದಾಶಿವಪ್ಪನವರಿಗೆ ಉತ್ತಮ ಶಿಕ್ಷಕ ರಾಜ್ಯ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳ ಸನ್ಮಾನ,

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಕಾಸರಗೋಡು ಗಡಿನಾಡ ಉತ್ಸವದಲ್ಲಿ ಪ್ರಶಸ್ತಿ ಸನ್ಮಾನ, ದಾವಣಗೆರೆಯಲ್ಲಿ ಮಹಾಲಿಂಗರಂಗ ಸಾಹಿತ್ಯ ಪ್ರಶಸ್ತಿ, ಬಾಗಲಕೋಟೆಯಿಂದ ಅಪ್ಪಣ್ಣ ಕಲಾಶ್ರೀ ಪ್ರಶಸ್ತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜೈನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ದೊರೆತಿದ್ದು, ಪ್ರಶಸ್ತಿಯ ಜೊತೆ ಬಂದ ಹಣದಿಂದ ಹರಪನಹಳ್ಳಿ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯ ಉತ್ತಮ ನಡತೆಗಾಗಿ, ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಭರಮಪ್ಪ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚಿನ ಅಂಕ ಪಡೆದ ಬಿ.ಎ. ಪದವಿ ವಿದ್ಯಾರ್ಥಿಗಳಗಾಗಿ ಬಹುಮಾನವಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ನಿಧಿ ಸ್ಥಾಪಿಸಿ ಉತ್ತಮ ಹಾಸ್ಯ ಕೃತಿಗಾಗಿ 'ಕುಂಬಾಸ' ಪ್ರಶಸ್ತಿ ಮುಂತಾದವುಗಳನ್ನು ಪ್ರತಿ ವರ್ಷವೂ ನೀಡುತ್ತಾ ಬಂದಿದ್ದಾರೆ.

**ಹೆಚ್.ಎಂ. ವೀರಭದ್ರಯ್ಯ** : ಇವರು ಸೊಂಡೂರು ತಾಲ್ಲೂಕಿನ ಚೋರನೂರು ಗ್ರಾಮದಲ್ಲಿ ಜನಿಸಿರುತ್ತಾರೆ. ಇವರು ಬಿ.ಎ., ಎಲ್.ಎಲ್.ಬಿ ಪದವಿಯನ್ನು ಪಡೆದು ವೃತ್ತಿಯಲ್ಲಿ ನ್ಯಾಯವಾದಿಗಳಾಗಿರುತ್ತಾರೆ. ಇವರು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹರಪನಹಳ್ಳಿ ತಾಲ್ಲೂಕು ಸಮ್ಮೇಳನದ ಅಧ್ಯಕ್ಷರಾಗಿದ್ದರು.

೪) ಶಿವಭಕ್ತ ರಾವಣ ೨) ಆದರ್ಶವಾಗಿ ನಾಟಕಗಳು ೩) ಪಾಟೀ ಸವಾಲು ೪) ಜಿಲ್ಲಾ ಪರಿಷತ್ತು ಮತ್ತು ಗ್ರಾಮ ಪಂಚಾಯಿತಿ ಕಾನೂನು ಅನುವಾದ, ಇವರು ರಚಿಸಿರುವ ಕೃತಿಗಳಾಗಿವೆ.

**ಡಿ.ಬಿ. ಬಡಿಗೇರ**: ಇವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಪಶುಪತಿಹಾಳು ಗ್ರಾಮದಲ್ಲಿ ಜನಿಸಿರುತ್ತಾರೆ. ಇವರು ಬಿ.ಎಸ್‌ಸಿ., ಎಂ.ಎ., ಎಂ.ಇಡಿ ಪದವಿಯನ್ನು ಪಡೆದಿದ್ದು, ವೃತ್ತಿಯಲ್ಲಿ ಹರಪನಹಳ್ಳಿಯ ಶಿಕ್ಷಣ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಒಟ್ಟು ೪ ಕೃತಿಗಳನ್ನು ರಚಿಸಿದ್ದು, ಬಂಡಾಯ ಸಾಹಿತ್ಯದ ಸಂಚಾಲಕರಾಗಿ ಹಾಗೂ ಸ್ಥಳೀಯ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿಗಳಾಗಿ ಜವಾಬ್ದಾರಿಗಳನ್ನು ನಿರ್ವಹಿಸಿರುತ್ತಾರೆ.

**ಎಂ. ಸುಭದ್ರಮ್ಮ** : ಇವರು ಹರಪನಹಳ್ಳಿ ಪಟ್ಟಣದಲ್ಲಿ ಜನಿಸಿದ್ದು, ಎಂ.ಎ., ಬಿ.ಇಡಿ ಶಿಕ್ಷಣವನ್ನು ಮುಗಿಸಿ, ಪ್ರೌಢ ಶಾಲಾ ಶಿಕ್ಷಕಿಯಾಗಿರುತ್ತಾರೆ. ಹರಪನಹಳ್ಳಿ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಜಾನಪದ ಪರಿಷತ್ತುಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ೧) ಜೀವ ಚುಂಬನ, ೨) ಚಿನ್ನರ ಅಂಗಳದ ಸಿರಿನುಡಿ, ೩) ಜಾನಪದ ಕಥಾ ಸಂಕಲನ ಇವರು ರಚಿಸಿರುವ ಕೃತಿಗಳಾಗಿವೆ.

**ಕಬ್ಬಳ್ಳಿ ಗೀತಾರವರು** : ಇವರು ಹರಪನಹಳ್ಳಿ ಪಟ್ಟಣದಲ್ಲಿ ಜನಿಸಿರುತ್ತಾರೆ. ಇವರು ಶಿಕ್ಷಣದಲ್ಲಿ ಎಂ.ಎ. ಕನ್ನಡ ಪದವಿಯನ್ನು ಪಡೆದಿದ್ದು ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿರುತ್ತಾರೆ. ಇವರು ೧) ಭಾವತರಂಗ, ೨) ಭಾವ ಕುಸುಮ ಕವನ ಸಂಕಲನ ೩) ಭಾವದ ಮೊಳಕೆಗಳು ಚುಟುಕು ಸಂಕಲನ ಎಂಬ ಕೃತಿಗಳನ್ನು ರಚಿಸಿರುತ್ತಾರೆ.

**ಭರತ ಭೂಷಣರು** : ಇವರು ಹರಪನಹಳ್ಳಿ ಪಟ್ಟಣದಲ್ಲಿ ಜನಿಸಿರುತ್ತಾರೆ. ಇವರು ಬಿ.ಎಸ್‌ಸಿ., ಎಂ.ಎ., ಎಂ.ಇಡಿ., ಎಂ.ಫಿಲ್ ಪದವಿಯನ್ನು ಪಡೆದಿದ್ದು, ಹರಪನಹಳ್ಳಿ ಪಟ್ಟಣದ ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿರುತ್ತಾರೆ. ಇವರು ಒಟ್ಟು ಏಳು ಕೃತಿಗಳನ್ನು ರಚಿಸಿದ್ದು, ಅದರಲ್ಲಿ ಶಿಕ್ಷಣ ತತ್ವಗಳು ಒಂದಾಗಿರುತ್ತದೆ.

**ಎಂ.ಪಿ.ಎಂ. ಶಾಂತವೀರಯ್ಯ** : ಇವರು ಬಳ್ಳಾರಿ ಜಿಲ್ಲೆ ಹಿರೇಹಡಗಲಿಯಲ್ಲಿ ಜನಿಸಿರುತ್ತಾರೆ. ಇವರು ಎಂ.ಎ. ಕನ್ನಡ ಪದವಿಯನ್ನು ಪಡೆದಿದ್ದು ಕನ್ನಡ ಉಪನ್ಯಾಸಕರಾಗಿರುತ್ತಾರೆ. ೧೯೯೫ ರಿಂದ ೧೯೯೮ ರ ವರೆಗೂ ಹರಪನಹಳ್ಳಿ ತಾಲ್ಲೂಕಿನ ಕ.ಸಾ.ಪ. ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

೧) ಶರಣರ ಕಾಯತತ್ವ, ೨) ತೆಗ್ಗಿನ ಮಠದ ಶ್ರೀ.ಷ.ಬ್ರ. ಚಂದ್ರಶೇಖರಸ್ವಾಮಿ, ೩) ಉಜ್ಜಿನಿ ಪೀಠದ ತ್ರೈಮಾಸಿಕ ಇವರು ರಚಿಸಿರುವ ಕೃತಿಗಳು.

**ಡಾ|| ಎಂ. ಕೊಟ್ರೇಶರವರು** : ಇವರು ಹರಪನಹಳ್ಳಿ ತಾಲ್ಲೂಕಿನ ಮಾಡಲಗೇರಿಯಲ್ಲಿ ಜನಿಸಿರುತ್ತಾರೆ. ಇವರು ಎಂ.ಎ., ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದು, ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಇವರು ಹಂಪಿ ದರ್ಶನ, ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಉಚ್ಚಂಗಿದುರ್ಗ ಎಂಬ ಕೃತಿಗಳನ್ನು ರಚಿಸಿರುತ್ತಾರೆ.

**ಜಿ. ಬಸವಂತಪ್ಪನವರು** : ಇವರು ನೀಲಗುಂದ ಗ್ರಾಮದಲ್ಲಿ ಜನಿಸಿದ್ದು, ಎಂ.ಎ ಸ್ನಾತಕೋತ್ತರ ಪದವಿಯನ್ನು ಹೊಂದಿ, ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿರುತ್ತಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತು ಸಂಚಾಲಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಅನಿವಾರ್ಯ, ಸವಿನೆನಪು, ಉಸಿರು, ಗೋಣಿ ಬಸವೇಶ್ವರ ವಚನ ಮುಂತಾದ ಕೃತಿಗಳನ್ನು ರಚಿಸಿರುತ್ತಾರೆ.

**ತಟ್ಟಿ ವೆಂಕೋಬರಾವ್‌ರವರು** : ಇವರು ಹರಪನಹಳ್ಳಿ ಪಟ್ಟಣದಲ್ಲಿ ಜನಿಸಿರುತ್ತಾರೆ. ಇವರು ಬಿ.ಎಸ್.ಸಿ., ಎಂ.ಎ., ಎಲ್‌ಎಲ್.ಬಿ ಸ್ನಾತಕೋತ್ತರ ಪದವಿಯನ್ನು ಹೊಂದಿ ಮಕ್ಕಳಿಗೆ ಪಾಠ ಬೋಧನೆಯನ್ನು ಮಾಡುತ್ತಾರೆ. ಮರೆಯದೇ ಸಲಹೆನ್ನನು (ಭೀಮವ್ವ

ಹರಪನಹಳ್ಳಿ), ೨) ಜೀವನ ಚರಿತ್ರೆ ಹರಪನಹಳ್ಳಿ ಭೀಮವ್ವಭಾಮಿನಿ ಷಟ್ಪದಿಯಲ್ಲಿ ಕಾವ್ಯ, ೩) ಭಕ್ತಿ ಕುಸುಮಾಂಜಲಿ ಇವರು ರಚಿಸಿರುವ ಕೃತಿಗಳು.

**ಕೆ.ಎಸ್. ವೀರಭದ್ರಪ್ಪನವರು** : ಇವರು ತೆಲಿಗಿ ಗ್ರಾಮದಲ್ಲಿ ಜನಿಸಿರುತ್ತಾರೆ. ಇವರು ಎಂ.ಎ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಾರೆ. ಹುಟ್ಟುತ್ತವೆ ಕವಿತೆಗಳು ಎಂಬ ಕವನ ಸಂಕಲನ ಸಂಪಾದನೆ ಇವರು ರಚಿಸಿರುವ ಕೃತಿಗಳಾಗಿವೆ.

**ಬಸವರಾಜ ಕುಂಚೂರು** : ಇವರು ಹರಪನಹಳ್ಳಿ ತಾಲ್ಲೂಕಿನ ಕುಂಚೂರಿನಲ್ಲಿ ಜನಿಸಿರುತ್ತಾರೆ. ಇವರು ಕನ್ನಡ ಡಿಪ್ಲೊಮಾ ಸಿವಿಲ್ ವಿಭಾಗದಲ್ಲಿ ಎಂ.ಎ ಪದವಿಯನ್ನು ಹೊಂದಿದ್ದು, ಸಹ ಎಂಜಿನಿಯರ್ ಆಗಿ ನಿವೃತ್ತಿ ಹೊಂದಿರುತ್ತಾರೆ. ದಾವಣಗೆರೆ ಜಿಲ್ಲಾ ಲಿಂಗವಂತ ಕುಂಬಾರ ಸಂಘ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

೧) ಗೃಹ ಅಂದಾಜು ೨) ಸಾವಿರ ಹಾಡಿನ ಸರದಾರ ಸಹಯೋಗದಲ್ಲಿ ೩) ಕುಂಬಾರ ಜನಾಂಗ ೪) ಕುಂಭಕಲೆ ೫) ಕುಂಭಕಲೆ ಕ್ವಿಜ್ ೬)ಕುಂಬಾರಿಕೆ ವೃತ್ತಿ ಪದಕೋಶ ಇವರು ರಚಿಸಿದ ಕೃತಿಗಳು.

**ಬಿ.ಹೆಚ್. ಮಲ್ಲಿಕಾರ್ಜುನ ನಾಯಕರು** : ಇವರು ಕೊಮಾರನಹಳ್ಳಿ ತಾಂಡದಲ್ಲಿ ಜನಿಸಿರುವರು. ಇವರು ಬಿ.ಕಾಂ ಪದವಿಯನ್ನು ಮುಗಿಸಿ ಪೋಲೀಸ್ ಪೇದೆಯಾಗಿರು ತ್ತಾರೆ. ಇವರು ಶ್ರೀ ಸೇವಾಲಾಲ್ ಚರಿತ್ರೆ, ಶ್ರೀ ಸೇವಾಲಾಲ್ ಮಹಾತ್ಮೆ ನಾಟಕ ಕೃತಿಗಳನ್ನು ರಚಿಸಿದ್ದಾರೆ.

**ತಟ್ಟಿ ಕೃಷ್ಣ ಮೂರ್ತಿಗಳು** : ಇವರು ಹರಪನಹಳ್ಳಿಯಲ್ಲಿ ಜನಿಸಿದ್ದು, ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ಇವರು “ಯುವಕರಿಗೆ ಭಗವದ್ಗೀತೆಯ ಸಂದೇಶ” ಎಂಬ ಕೃತಿಯನ್ನು ರಚಿಸಿರುತ್ತಾರೆ.

**ಡಾ|| ಕೆ. ರುದ್ರಪ್ಪನವರು** : ಇವರ ಜನ್ಮಸ್ಥಳ ಕೊಂಬಳಿ ಹಡಗಲಿ. ಇವರು ಎಂ.ಎ., ಪಿ.ಹೆಚ್.ಡಿ ಪದವಿ ಪಡೆದಿದ್ದಾರೆ ಹಾಗೂ ಅಂಬ್ಲಿ ದೊಡ್ಡ ಭರ್ಮಪ್ಪ ಪ್ರಥಮ ದರ್ಜೆ ಕಾಲೇಜು, ಹರಪನಹಳ್ಳಿ ಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿರುತ್ತಾರೆ. ೧) ಕರ್ನಾಟಕದ ವ್ಯಾಸನಾಯಕರು ಮಹಾ ಪ್ರಬಂಧ, ೨) ದುರ್ಗದಾಸ, ೩) ಬಳ್ಳಾರಿ ಜಿಲ್ಲಾ ಜನಪದ ಸಾಹಿತ್ಯ, ೪) ವಿಜಯರಥ, ೫) ಕಾವ್ಯ ಸೌರಭ ಇವರು ರಚಿಸಿರುವ ಕೃತಿಗಳು.

**ಡಿ. ರಾಮನ್ ಮಲಿಯವರು**: ಇವರು ತಂಬ್ರಹಳ್ಳಿಯಲ್ಲಿ ಜನಿಸಿರುತ್ತಾರೆ. ಇವರು ಬಿ.ಎ ಪದವಿಯನ್ನು ಹೊಂದಿದ್ದು, ಜಿಲ್ಲಾ ಪಂಚಾಯಿತಿಯಲ್ಲಿ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ.

**ಶ್ರೀ ವಿರೇಶ್ ಬಣಕಾರವರು**: ಇವರು ಕೊಂಗನಹೊಸೂರಿನಲ್ಲಿ ಜನಿಸಿದ್ದು, ಎಂ.ಎ ಪದವಿಯನ್ನು ಹೊಂದಿರುತ್ತಾರೆ. ಇವರು ವಿ.ವಿ ಸಂಸ್ಥೆಯಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಶತಕ ಸಿಡಿಲು-ಕವನ ಸಂಕಲನ, ಮೂಕ ಪ್ರೀತಿಯ ಕನಸುಗಳು ಕಥಾ ಸಂಕಲನ ಇವರು ರಚಿಸಿರುವ ಕೃತಿಗಳು.

**ಶ್ರೀ ಬಣಕಾರ ರಾಜಶೇಖರ**: ಇವರು ಬಾಗಳಿ ಗ್ರಾಮದಲ್ಲಿ ಜನಿಸಿರುವರು. ಇವರು ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು ೧) ಬಾಗಳಿ ದೇವಾಲಯಗಳು, ೨) ದೋಣಿ ಕೆಂಚವ್ವ ಎಂಬ ಕೃತಿಗಳನ್ನು ರಚಿಸಿದ್ದಾರೆ.

**ಕಲೆಗಳು** : ಈ ತಾಲ್ಲೂಕಿನಲ್ಲಿ ಕಂಡುಬರುವ ಪ್ರಮುಖ ಕಲೆಗಳೆಂದರೆ, ಯಕ್ಷಗಾನ-ದೊಡ್ಡಾಟ, ಸೂತ್ರದ ಗೊಂಬೆಯಾಟ, ಸಣ್ಣಾಟಗಳು, ರಿವಾಯತ್ ಪದಗಳು, ಸೋಬಾನೆ ಪದಗಳು, ಮಲಕಿನ ಕೋಲು, ಡೊಳ್ಳು ಕುಣಿತ, ಜೋಕುಮಾರಸ್ವಾಮಿ ಹಾಡು, ಚೌಡಿಕಿ ಪದಗಳು, ಗೊರವರ ಹಾಡು, ದಂಡೀಯಾತ್ರೆ ಭಜನೆ, ದೇವರ ಮೇಲಿನ ಹಾಡು ಭಜನೆ, ನಂದೀಕೋಲು ಕುಣಿತ, ಗೊಂದಲಿಗರ ಪದಗಳು, ಕುದುರೆ ಕುಣಿತ, ಯಲ್ಲಮ್ಮ ಜೋಗಿ ಕುಣಿತ, ಪುರವಂತಿಕೆ ಕುಣಿತ, ಬಹುರೂಪಿಗಳ ವೇಷ, ಕರಪಲ್ಲದಯ್ಯಗಳು, ಅಲಾವಿ ಹೆಜ್ಜೆ ಕುಣಿತ, ಲಾವಣಿ ಪದಗಳ ಹಾಡು, ತೂಗು ತೊಟ್ಟಿಲ ಆಟ, ಲಂಬಾಣಿ ಹಾಡು ಮತ್ತು ಕುಣಿತ, ದುರುಮುರಿಗಿ ಮಾರಮ್ಮ, ಮೋಡಿ ಆಟ, ಹಲಗೆ ಕುಣಿತ, ಹುಲಿ ವೇಷ ಕುಣಿತ, ಹಾರ್ಮೋನಿಯಂ ನುಡಿಸುವಿಕೆ, ಕೊಳಲು ವಾದನ, ಸಂಗೀತ-ನಾಟಕ, ಶಹನಾಯಿ, ತಬಲವಾದನ, ಮೃದಂಗ ನುಡಿಸುವಿಕೆ, ಹಾಗೂ ಜೋಗತಿ ಕುಣಿತ ಇನ್ನೂ ಮುಂತಾದ ಕಲೆಗಳು ಈ ತಾಲ್ಲೂಕಿನಲ್ಲಿ ಕಂಡುಬರುತ್ತವೆ.

ಅಧ್ಯಾಯ–೧೧

# ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಹ**ರಪನಹಳ್ಳಿ ಒಂದು ಕಾಲದಲ್ಲಿ ಆಯುರ್ವೇದ ವೈದ್ಯಕ್ಕೆ ಹೆಸರಾಗಿದ್ದಿತು. ಅದಕ್ಕಾಗಿ ಹರಪನಹಳ್ಳಿ ಗುಳಿಗೆ ಎಂದು ಕರೆಯುತ್ತಿದ್ದರು. ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ಕೊಟ್ಟು ರೋಗ ನಿವಾರಿಸುತ್ತಿದ್ದರು. ಇದು ಹರಪನಹಳ್ಳಿ ಪಾಳೆಯಗಾರರ ಕಾಲದಿಂದಲೂ ಬೆಳೆದು ಬಂದದ್ದು. ಪಾಳೆಯಗಾರರಿಗೆ ಔಷಧಿ ಕೊಟ್ಟು ಗುಣಮುಖ ಮಾಡಿದ್ದಕ್ಕಾಗಿ ಅವರಿಗೆ ಮೂರು ನೂರು (೩೦೦) ಎಕರೆ ಜಮೀನನ್ನು ಕೊಟ್ಟಿರುವರು. ವೈದ್ಯ ಕೊಡುತ್ತಿದ್ದವರು ಬ್ರಾಹ್ಮಣರು. ಅವರಿಗೆ ವೈದ್ಯರೆಂದು ಕರೆಯಲಾಗುತ್ತಿತ್ತು. ಅವರ ಒಂದೆರಡು ಮನೆಗಳು ಈಗಲೂ ಹರಪನಹಳ್ಳಿಯಲ್ಲಿ ಕಾಣುತ್ತವೆ. ಈಗ ಬಾಗಳಿ ಗ್ರಾಮದಲ್ಲಿ ಬಡಮ್ಮರ ಕೆಂಚಪ್ಪ ಎಂಬುವರು ಮೂಳೆ ಮುರಿದರೆ ಗುಳಿಗೆಯಿಂದ ಗುಣಪಡಿಸುವರು. ಆಸ್ಪತ್ರೆ ಮೊದಲು ಜಿಲ್ಲಾ ಕೇಂದ್ರ ಬಳ್ಳಾರಿಯಲ್ಲಿ ಪ್ರಾರಂಭವಾಯಿತು. ಬಳಿಕ ಹರಪನಹಳ್ಳಿ ಪಟ್ಟಣದಲ್ಲಿ ಶುರು ಆಯಿತು. ನಂತರ ಹೋಬಳಿ ಮುಖ್ಯ ಗ್ರಾಮಗಳಲ್ಲಿ ಪ್ರಾರಂಭಿಸಿದರು. ಇವುಗಳಲ್ಲದೆ ಖಾಸಗಿ ಆಸ್ಪತ್ರೆಗಳು ವಿಫುಲವಾಗಿರುತ್ತವೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ೦೧ ತಾಲ್ಲೂಕು ಕೇಂದ್ರದ ಆಸ್ಪತ್ರೆ ಇದ್ದು, ಇದು ೧೦೦ ಹಾಸಿಗೆಗಳನ್ನು ಒಳಗೊಂಡಿದೆ. ಅಲ್ಲದೆ ೨ ಇತರೆ ಆಸ್ಪತ್ರೆಗಳು ಇದರಲ್ಲಿ ೬೦ ಹಾಸಿಗೆಗಳ ಸಾಮರ್ಥ್ಯವಿದೆ.  ಈ ತಾಲ್ಲೂಕಿನಲ್ಲಿ ೨೦ ಸರ್ಕಾರಿ ಆಸ್ಪತ್ರೆ, ೫ ಖಾಸಗಿ ಆಸ್ಪತ್ರೆ, ಒಟ್ಟು ೨೫ ಆಸ್ಪತ್ರೆಗಳಿದ್ದು, ೨೨ ವೈದ್ಯರನ್ನು ಹೊಂದಿದ್ದು, ೨೬೨ ಹಾಸಿಗೆಗಳನ್ನು ಸಹ ಹೊಂದಿರುತ್ತದೆ. ಅಲ್ಲದೆ ೮೬ ಔಷಧಿ ಅಂಗಡಿಗಳನ್ನು ಹೊಂದಿರುತ್ತದೆ.  ೨೦ ಅಲೋಪತಿ ಆಸ್ಪತ್ರೆಗಳು ಮತ್ತು ಇದರಲ್ಲಿ ೨೬೨ ಹಾಸಿಗೆಗಳು, ೫ ಖಾಸಗಿ ಆಸ್ಪತ್ರೆ/ನರ್ಸಿಂಗ್ ಹೋಂಗಳು ಇದ್ದು,  ೧೭ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೧೦೨ ಹಾಸಿಗೆಗಳನ್ನು ಸಹ ಹೊಂದಿದ್ದು, ೨ ಸಮುದಾಯ ಆರೋಗ್ಯ ಕೇಂದ್ರ ಹಾಗೂ ೬೦ ಹಾಸಿಗೆಗಳನ್ನು ಸಹ ಹೊಂದಿರುತ್ತದೆ.  ಅಲ್ಲದೆ ೬ ಸರ್ಕಾರದ ಆಸ್ಪತ್ರೆಗಳು (ಅಲೋಪತಿ/ ಭಾರತೀಯ ವೈದ್ಯ ಪದ್ಧತಿ) ಇವೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ೨೦೧೫-೧೬ನೇ ಸಾಲಿನಲ್ಲಿ ೩೮೩೯ ಪೆಂಟಾವಲೆಂಟ್, ೪,೬೭೫ ಪೋಲಿಯೋ, ೬೦೦೩ ಬಿ.ಸಿ.ಜಿ., ೪೪೭೪ ದಡಾರ, ೫೨೦೭ ಟಿ.ಟಿ. ಲಸಿಕೆಗಳನ್ನು ಸಹ ಹಾಕಿಸಲಾಗಿರುತ್ತದೆ. ಕುಟುಂಬ ಯೋಜನೆಯ ಸಲುವಾಗಿ ೧೩೫೨ ಟ್ಯೂಬೆಕ್ಟಮಿ ಪ್ರಕರಣಗಳು ದಾಖಲಾಗಿದ್ದು, ೧೦೫೧ I.U.D. users, ೨೩೯೨ c.c. user, ೧೩೪೦ O.P.user- ಈ ರೀತಿ ಕುಟುಂಬ ಯೋಜನೆ ವಿಧಾನಗಳನ್ನು ಬಳಸಿಕೊಂಡಿರುತ್ತಾರೆ

ಹರಪನಹಳ್ಳಿ ತಾಲ್ಲೂಕಿನಲ್ಲಿ ಏಡ್ಸ್‌ರೋಗ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ೪೦ ಜನ ಗಂಡಸರು, ೩೭ ಜನ ಹೆಂಗಸರು ಒಟ್ಟು ೭೭ ಜನರನ್ನು ಏಡ್ಸ್ ರೋಗಿಗಳೆಂದು ಗುರುತಿಸಲಾಗಿದೆ. ಇವರಲ್ಲಿ ೪೦ ಜನ ಗಂಡಸರು, ೩೭ ಜನ ಹೆಂಗಸರು ಒಟ್ಟು ೭೭ ಜನರನ್ನು ಗುಣವಾದ ಅಥವಾ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳೆಂದು ಗುರುತಿಸಿದ್ದು, ೧೫ ಜನ ಗಂಡಸರು, ೧೭ ಜನ ಹೆಂಗಸರು ಒಟ್ಟು ೩೨ ಜನ ಮರಣ ಹೊಂದಿರುತ್ತಾರೆಂದು ಗುರುತಿಸಲಾಗಿದೆ.

ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೨೦ ಜನ ಗಂಡಸರು, ೧೬ ಜನ ಹೆಂಗಸರು ಒಟ್ಟು ೩೬ ಜನರನ್ನು ಕುಷ್ಠ ರೋಗಿಗಳೆಂದು ಗುರುತಿಸಿದ್ದು, ೩೦ ಜನ ಗಂಡಸರು, ೧೪ ಜನ ಹೆಂಗಸರು ಒಟ್ಟು ೪೪ ಜನರನ್ನು ಗುಣವಾದ ರೋಗಿಗಳೆಂದು ಗುರುತಿಸಲಾಗಿದೆ. ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೬೨ ಜನ ಗಂಡಸರು, ೨೭ ಜನ ಹೆಂಗಸರು ಒಟ್ಟು ೮೯ ಜನರನ್ನು ಗುರುತಿಸಲಾಗಿದೆ. ಇವರಲ್ಲಿ ೧೬ ಜನ ಗಂಡಸರು. ೧೧ ಜನ ಹೆಂಗಸರು ಒಟ್ಟು ೨೭ ಜನ ಈ ರೋಗದಿಂದ ಗುಣಮುಖ ಹೊಂದಿರುತ್ತಾರೆ ಮತ್ತು ಇಬ್ಬರು ಗಂಡಸರು, ಇಬ್ಬರು ಹೆಂಗಸರು ಒಟ್ಟು ನಾಲ್ಕು ಜನರು ಮರಣ ಹೊಂದಿರುತ್ತಾರೆಂದು ತಿಳಿದು ಬಂದಿರುತ್ತದೆ.

ಈ ತಾಲ್ಲೂಕಿನಲ್ಲಿ ೧೦೮ ಅಂಬ್ಯುಲೆನ್ಸ್‌ಗಳ ಸಂಖ್ಯೆ ೫ ಹೊಂದಿದ್ದು, ಇದರ ಪ್ರಯೋಜನಗಳನ್ನು ೪೧೨೩ ರೋಗಿಗಳು ಪಡೆದಿದ್ದಾರೆ. ಪ್ರತಿದಿನ (೨೪/೭) ಕಾರ್ಯ ನಿರ್ವಹಿಸುವ ಆಸ್ಪತ್ರೆಗಳ ಸಂಖ್ಯೆ ೧೨ ಇದ್ದು, ಇಲ್ಲಾದ ಹೆರಿಗೆಗಳ ಸಂಖ್ಯೆ ೯೪೩. ಈ ತಾಲ್ಲೂಕಿನಲ್ಲಿ ಜನನಿ ಸುರಕ್ಷಾ ಯೋಜನೆ ಪಡೆದ ಫಲಾನುಭವಿಗಳ ಸಂಖ್ಯೆ ೨೨೮೮ ಹಾಗೂ ಮಡಿಲು ಕಿಟ್ ಪಡೆದ ಫಲಾನುಭವಿಗಳ ಸಂಖ್ಯೆ ೨೦೫೮ ಆಗಿದೆ.

ತಾಲ್ಲೂಕಿನಲ್ಲಿರುವ ೧೭ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ಕೆಳಕಂಡ ಸ್ಥಳಗಳಲ್ಲಿವೆ :

| | | |
|---|---|---|
| ೧) ಹಲುವಾಗಲು | ೨) ಗುಂಡಗತ್ತಿ | ೩) ಉಚ್ಚಂಗಿದುರ್ಗ |
| ೪) ಪುಣಭಘಟ್ಟ | ೫) ಮತ್ತಿಹಳ್ಳಿ | ೬) ಸಾಸ್ವೆಹಳ್ಳಿ |
| ೭) ಚಿಗಟೇರಿ | ೮) ಹಾರಕನಾಳು | ೯) ನೀಲಗುಂದ |
| ೧೦) ಕಂಚಿಕೆರೆ | ೧೧) ಬಾಗಳಿ | ೧೨) ಹಿರೇಮೇಗಳಗೆರೆ |

೧೩) ಅಲಗಿಲವಾಡ ೧೪) ಮಾದಿಹಳ್ಳಿ ೧೫) ಬೆಣ್ಣೆಹಳ್ಳಿ

೧೬) ಕಮ್ಮತಹಳ್ಳಿ ೧೭) ನಂದಿಬೇವೂರು.

೨೦೧೧-೧೨ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಕಮ್ಮತಹಳ್ಳಿ ಮತ್ತು ಬಾಗಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನೂತನ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಮಂಜೂರಾತಿ ದೊರೆತಿದ್ದು, ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಕಮ್ಮತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ರೂ.೮೩.೪೦ ಲಕ್ಷ ಮೊತ್ತಕ್ಕೆ ಅನುಮೋದನೆ ದೊರೆತಿದ್ದು, ೨೦೧೧-೧೨ನೇ ಸಾಲಿನಲ್ಲಿ ರೂ.೫೩.೦೯ ಲಕ್ಷ ವೆಚ್ಚವಾಗಿದ್ದು ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಬಾಗಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ರೂ.೮೨.೫೫ ಲಕ್ಷ ಮೊತ್ತಕ್ಕೆ ಅನುಮೋದನೆ ದೊರೆತಿದ್ದು, ೨೦೧೧-೧೨ನೇ ಸಾಲಿನಲ್ಲಿ ರೂ.೪೬.೮೧ ಲಕ್ಷ ವೆಚ್ಚವಾಗಿದ್ದು ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಹರಪನಹಳ್ಳಿ ತಾಲ್ಲೂಕಿನ ಹುಲಿಕಟ್ಟೆ, ಕೂಲಹಳ್ಳಿ, ತಾವರೆಗೊಂದಿ ಗ್ರಾಮಗಳಲ್ಲಿ ಉಪಕೇಂದ್ರ ಕಟ್ಟಡ ನಿರ್ಮಾಣಕ್ಕೆ ಎನ್.ಆರ್.ಹೆಚ್.ಎಂ. ಯೋಜನೆಯಡಿಯಲ್ಲಿ ಮಂಜೂರಾತಿ ದೊರೆತಿದ್ದು, ಹುಲಿಕಟ್ಟೆ ಗ್ರಾಮದಲ್ಲಿ ಉಪಕೇಂದ್ರ ಕಟ್ಟಡ ಮತ್ತು ಕೂಲಹಳ್ಳಿ ಗ್ರಾಮದಲ್ಲಿ ಉಪಕೇಂದ್ರ ಕಟ್ಟಡ ನಿರ್ಮಾಣಕ್ಕೆ ತಲಾ ರೂ. ೧೭.೫೦ ಲಕ್ಷಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಎರಡೂ ಗ್ರಾಮಗಳಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**ಸಿಡುಬು** : ಈ ಹಿಂದೆ ಸಿಡುಬು ಕೂಡಾ ಒಂದು ಪ್ರಮುಖ ಸಾಂಕ್ರಾಮಿಕ ರೋಗವಾಗಿದ್ದಿತು. ಇದಕ್ಕೆ ಚುಚ್ಚುಮದ್ದು ೧೮೦೬ ರ ಹಿಂದೆ ಜರ್ಮನಿಯ ಪಾದ್ರಿ ಅಬ್ಬೆದುಬೆ ಮೈಸೂರು ಸಂಸ್ಥಾನವಿದ್ದಾಗ ಅದನ್ನು ಪರಿಚಯಿಸಿದ. ೧೯೫೯-೬೦ ರ ಸಾಲಿನಲ್ಲಿ ಇದು ಉಗ್ರ ಸ್ವರೂಪದಲ್ಲಿದ್ದಿತು.

ಇದರಿಂದ ಹರಪನಹಳ್ಳಿ ತಾಲ್ಲೂಕಿನ ಕೆಲಹಳ್ಳಿಗರು ತುಂಬಾ ಶ್ರಮಪಟ್ಟರು. ಒಂದು ವರ್ಷದ ಸರ್ವ ಮಕ್ಕಳಿಗೆ ದೇವಿ ಹಾಕುವುದು ನಾಲ್ಕು ವರ್ಷದ ಮರುದೇವಿ ಹಾಕುವ ತೀವ್ರ ಲಸಿಕೆ ಕಾರ್ಯಗಳಿಂದ ೧೯೬೦-೭೦ ರಲ್ಲಿ ನಿಯಂತ್ರಣಕ್ಕೆ ಬಂದು ೧೯೭೮ ರ ನಂತರದ ಕಾಲದಲ್ಲಿ ಸಂಪೂರ್ಣ ನಿಯಂತ್ರಣಕ್ಕೆ ಬಂದಿತು.

**ಡೆಂಗ್ಯು ಜ್ವರ** : ಈಡೀಸ್ ಈಜಿಪ್ಟೆ ಎಂಬ ಜಾತಿಯ ಸೊಳ್ಳೆಗಳ ಮೂಲಕ ಹರಡುತ್ತದೆ. ಡೆಂಗೀ ವೈರಸ್‌ನಿಂದ ಮಕ್ಕಳಿಗೆ ತಗಲುವುದು ೧) ಸಾಮಾನ್ಯ ಡೆಂಗಿ ೨)

ಡೆಂಗೀ ರಕ್ತ ಸ್ರಾವ ಜ್ವರ ೩) ಡೆಂಗೀ ಶಾಕ್ ಸಿಂಡ್ರೋಮ್ ಎಂದು ಮೂರು ವಿಧಗಳು. ವಿಪರೀತ ಜ್ವರ, ತಲೆಶೂಲೆ, ಕೀಲು ಮಾಂಸಖಂಡ ನೋವು ಮತ್ತು ರಕ್ತಸ್ರಾವ ಜ್ವರವು ರೋಗಿಯ ಪ್ರಾಣ ಹರಣಕ್ಕೂ ಕಾರಣವಾಗುವುದು.

**ಮೆದುಳು ಜ್ವರ** : ಪ್ರಾಣಿಗಳಾದ ಹಂದಿಗಳಲ್ಲಿ ಸೇರಿರುವ ವೈರಾಣುಗಳು ಈ ರೋಗ ಹರಡುವಿಕೆಗೆ ಕಾರಣ, ಹಂದಿಗಳನ್ನು ಜನವಾಸ ಸ್ಥಳಗಳಿಂದ ದೂರವಿಟ್ಟಿರಬೇಕು. ಕೀಟನಾಶಕಗಳನ್ನು ಸಿಂಪಡಿಸಬೇಕು. ರೋಗಿಗಳಿಗೆ ಬೇಗ ಚಿಕಿತ್ಸೆ ಕೊಡಿಸಬೇಕು.

ಈ ರೋಗವು 'ಕ್ಯುಲೇಕ್ಸ್' ಎಂಬ ಕೊಚ್ಚೆ ನೀರಿನಿಂದ ಉತ್ಪತ್ತಿಯಾಗುವ ಸೊಳ್ಳೆಯಿಂದ ವೈರಾಣು ಹರಡಲ್ಪಡುತ್ತದೆ. ಸೋಂಕಿತ ಸೊಳ್ಳೆಯು ಹಂದಿ, ಹಂದಿಮರಿಗಳನ್ನು ಕಚ್ಚಿದಾಗ, ಹಂದಿಗಳಲ್ಲಿ ವೈರಾಣುಗಳು ಅಭಿವೃದ್ಧಿ ಹೊಂದುತ್ತವೆ. ಸೋಂಕಿತ ಹಂದಿ, ಹಂದಿಮರಿಗಳನ್ನು ಕಚ್ಚಿದ ಸೊಳ್ಳೆಯು ಮನುಷ್ಯನನ್ನು ಕಚ್ಚಿದಾಗ ರೋಗ ಬರುವ ಸಂಭವವಿರುತ್ತದೆ. ದಾವಣಗೆರೆ ನಗರದ ಪರಿಸರದಲ್ಲಿ ಹಂದಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇದು ಅನೇಕ ಅವಾಂತರಗಳಿಗೆ ಕಾರಣವಾಗಿದೆ. ನಗರ ಪ್ರದೇಶದ ಹಂದಿಗಳ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನಗಳು ನಡೆಯಬೇಕು. ಹಂದಿ, ಹಂದಿ ಮರಿಗಳನ್ನು ವರಾಹ ಶಾಲೆಗಳಲ್ಲೇ ಬೆಳೆಸಬೇಕು. ಅಂತಹ ಶಾಲೆಗಳಲ್ಲಿ ಸೊಳ್ಳೆ ನಿಯಂತ್ರಿತ ಜಾಲರಿಗಳನ್ನು ಅಳವಡಿಸಬೇಕು. ನಾಗರಿಕರೂ ಸಹ ಸೊಳ್ಳೆಗಳಿಂದ ರಕ್ಷಣೆ ಪಡೆಯುವ ವಿವಿಧ ವಿಧಾನಗಳ ಅಳವಡಿಕೆಯಿಂದ ರೋಗ ತಡೆಗಟ್ಟಬಹುದು. ಜಿಲ್ಲಾ ಮಲೇರಿಯಾ ಅಧಿಕಾರಿಗಳ ಪ್ರಕಟಿತ ಕರಪತ್ರದ ಪ್ರಕಾರ ಜಿಲ್ಲೆಯಲ್ಲಿ ಈ ಖಾಯಿಲೆಯ ಪ್ರಕರಣ ವಿರಳವೆಂದು ತಿಳಿದುಬರುತ್ತದೆ.

**ಏಡ್ಸ್** : ಎಚ್.ಐ.ವಿ. ಎಂಬುವ ವೈರಾಣುವಿನಿಂದ ಏಡ್ಸ್ ಉಂಟಾಗುತ್ತದೆ. ಎಲಿಸಾ ಎಂಬ ಪರೀಕ್ಷಾ ವಿಧಾನ ಎಚ್.ಐ.ವಿ. ಸೋಂಕನ್ನು ಪತ್ತೆ ಹಚ್ಚತಕ್ಕದ್ದು. ಇದರ ಬಗ್ಗೆ ಅರಿವು ನೀಡಿ ಆತ್ಮಸ್ಥೈರ್ಯ ತುಂಬಬೇಕು.

ಮನುಕುಲವನ್ನು ಕಾಡುತ್ತಿರುವ ರೋಗಗಳಲ್ಲಿ ಏಡ್ಸ್ ಕೂಡ ಒಂದು. ಹೆಚ್.ಐ.ವಿ. ವೈರಾಣುವಿನ ಸೋಂಕಿನಿಂದ ಏಡ್ಸ್ ಉಂಟಾಗುತ್ತದೆ. ಈ ರೋಗ ಬಂದವರು ನಿಶ್ಯಕ್ತಿಯಿಂದ ಬಳಲುತ್ತಾರೆ. ಶರೀರವು ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ರೋಗವು ಹರಡುವುದು ಪ್ರಮುಖವಾಗಿ ಎರಡು ವಿಧಾನಗಳಿಂದ ಮೊದಲನೆಯದು ಲೈಂಗಿಕ ಸಂಪರ್ಕದಿಂದ, ಎರಡನೆಯದು ರಕ್ತದಾನ ಮಾಡುವುದರಿಂದ. ಹೆಚ್.ಐ.ವಿ. ಸೋಂಕನ್ನು 'ಎಲಿನೌ' ಎಂಬ ಪರೀಕ್ಷೆಯಿಂದ ಪತ್ತೆಹಚ್ಚಬಹುದು. ಸರ್ಕಾರ ೧೯೮೭ರಿಂದಲೇ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕ್ರಮಗಳನ್ನು ಹಂತಹಂತವಾಗಿ ಜಾರಿಗೊಳಿಸಿದೆ. ಸುರಕ್ಷಿತ ಲೈಂಗಿಕ ಸಂಪರ್ಕ,

ರಕ್ತ ನೀಡುವಾಗ ಮತ್ತು ಪಡೆಯುವಾಗ ಸೂಕ್ತ ಪರೀಕ್ಷೆಗಳು ಅವಶ್ಯಕ. ರೋಗ ಹರಡುವುದನ್ನು ತಡೆಯಲು ಈ ಎರಡು ಪ್ರಮುಖ ವಿಧಾನಗಳು. ರೋಗ ಪತ್ತೆಯಾದ ನಂತರ ರೋಗಿಗಳಿಗೆ ಮನೋಸ್ಥೈರ್ಯ ತುಂಬುವುದು, ಅವರನ್ನು ಎಲ್ಲರಂತೆ ನೋಡುವುದು ಪ್ರಸ್ತುತ ಅವಶ್ಯವಿದೆ.

**ಚಿಕೂನ್ ಗುನ್ಯಾ** : ಚಿಕೂನ್‌ಗುನ್ಯಾ ಸಹ 'ಈಡಿಸ್' ಸೊಳ್ಳೆಯಿಂದ ಹರಡುವ ವೈರಲ್ ಜ್ವರವಾಗಿದ್ದು, ಎಲ್ಲಾ ವಯೋಮಿತಿಯವರಲ್ಲೂ ಸಹ ಕಂಡುಬರುತ್ತದೆ. ರೋಗದ ಲಕ್ಷಣದಿಂದ ಬಹುಬೇಗ ಗುರುತಿಸಬಹುದು. ಪ್ರಮುಖ ಲಕ್ಷಣಗಳೆಂದರೆ ತೀವ್ರ ಜ್ವರ ಕಾಣಿಸಿಕೊಳ್ಳುವುದು, ಹಣೆಯ ಮುಂಭಾಗದಲ್ಲಿ ತೀವ್ರ ತಲೆನೋವು, ಕಣ್ಣಿನ ಮುಂಭಾಗದ ನೋವು, ಮೈ–ಕೈ ಮತ್ತು ಕೀಲು ನೋವು, ವಾಕರಿಕೆ ಮತ್ತು ವಾಂತಿಯಾಗುವುದು. "ಈಡಿಸ್" ಸೊಳ್ಳೆಯಿಂದ ಬರುವ ರೋಗವು, ಸೊಳ್ಳೆ ಕಚ್ಚಿದ ೫ ರಿಂದ ೭ ದಿವಸಗಳ ನಂತರ ರೋಗದ ಪ್ರಾಥಮಿಕ ಲಕ್ಷಣಗಳು ಕಂಡುಬರುತ್ತವೆ.

ರೋಗಗಳನ್ನು ತಡೆಯಲು ಸೊಳ್ಳೆ ನಿಯಂತ್ರಣಕ್ಕೆ ಮುಂದಾಗಬೇಕು. ಈ ಸೊಳ್ಳೆಗಳು ನೀರು ಶೇಖರಣೆ ತೊಟ್ಟಿ, ಬ್ಯಾರಲ್, ಡ್ರಮ್‌ಗಳು, ಬಕೆಟ್‌ಗಳು, ಹೂವಿನ ಕುಂಡಗಳಲ್ಲಿ ಬೆಳೆಯುತ್ತವೆ. ಮನೆಯ ಸುತ್ತ ಮುತ್ತ ಎಸೆಯುವ ಪಿಂಗಾಣಿ ವಸ್ತುಗಳು, ಒಡೆದ ಬಾಟಲಿಗಳು, ಬಯಲಿನಲ್ಲಿ ಎಸೆದ ಟೈಯರ್‌ಗಳು, ಒಡೆದ ಎಳೆನೀರಿನ ಚಿಪ್ಪುಗಳು ಮುಂತಾದ ಕಡೆಗಳಲ್ಲಿ ಉತ್ಪತ್ತಿಯಾಗುತ್ತವೆ. ಈ ಉತ್ಪತ್ತಿ ಸ್ಥಳಗಳನ್ನು ಗಮನಿಸಿ ಪರಿಸರವನ್ನು ಸ್ವಚ್ಛತೆಯಿಂದ ಕಾಪಾಡುವ ಪ್ರಯತ್ನ ನಡೆಸಬೇಕು. ಮಕ್ಕಳು ಮತ್ತು ವಯಸ್ಸಾದವರು ಹಗಲು ಮಲಗಿದರೆ ಸೊಳ್ಳೆಪರದೆ ಹಾಗೂ ಎಲ್ಲರೂ ರಾತ್ರಿ ಮಲಗುವಾಗ ಕಡ್ಡಾಯವಾಗಿ ಸೊಳ್ಳೆಪರದೆ ಬಳಸಬೇಕು. ಕಿಟಕಿ ಬಾಗಿಲುಗಳಿಗೆ ಸೊಳ್ಳೆ ಜಾಲರಿಗಳನ್ನು ಅಳವಡಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್ ಹತ್ತಿರ ದನಕರುಗಳನ್ನು ಕಟ್ಟುವುದು, ಮೈತೊಳೆಯುವುದು, ಬಟ್ಟೆ ತೊಳೆಯುವುದು, ಮನೆಯ ಪಕ್ಕದಲ್ಲಿ ತಿಪ್ಪೆಗುಂಡಿ ಹಾಕಿಕೊಳ್ಳುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬಾರದು. ಸಂಜೆ ವೇಳೆ ಬೇವಿನಸೊಪ್ಪಿನ ಹೊಗೆ/ಸಾಂಬ್ರಾಣಿ/ಧೂಪ ಹಾಕಬೇಕು. ಮಲಗುವಾಗ ಬೇವಿನ ಎಣ್ಣೆಯನ್ನು ಮೈಗೆ ಹಚ್ಚಿಕೊಳ್ಳಬೇಕು. ಹೀಗೆ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಂಡರೆ ರೋಗ ನಿಯಂತ್ರಣ ಮಾಡಬಹುದು.

**ಪ್ರಾಥಮಿಕ ಆರೋಗ್ಯ ಘಟಕಗಳು** : ೧೯೭೦ಕ್ಕಿಂತ ಪೂರ್ವದಲ್ಲಿ ವೈದ್ಯ ಚಿಕಿತ್ಸಾಲಯ ಆರೋಗ್ಯ ಘಟಕಗಳಿದ್ದವು. ಇವುಗಳನ್ನು ಮೇಲ್ದರ್ಜೆಗೇರಿಸಲಾಯಿತು. ೧೯೬೩ ಸುಮಾರಿಗೆ ಈ ಘಟಕಗಳಿಗೆ ಓರ್ವ ವೈದ್ಯಾಧಿಕಾರಿ ಮೂವರು ಎ.ಎನ್.ಎಂ., ಓರ್ವ ಔಷಧಿ ವಿತರಕ, ಓರ್ವ ಕಾರ್ಯಕರ್ತ, ಮೂವರು 'ಡಿ' ದರ್ಜೆ ನೌಕರರು ಇದ್ದರು.

೧೯೮೬ ರ ವೇಳೆಗೆ ೧೫೦೦೦, ೨೦೦೦೦, ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಘಟಕಗಳನ್ನು ತೆರೆದರು. ಇವುಗಳನ್ನು ಹಂತ-ಹಂತವಾಗಿ ಪ್ರಾದೇಶಿಕ ಆರೋಗ್ಯ ಕೇಂದ್ರ-ಜನರಲ್ ಆಸ್ಪತ್ರೆಗಳ ದರ್ಜೆಗೆ ಏರಿಸಲಾಗಿದೆ.

**ಸಮುದಾಯ ಆರೋಗ್ಯ ಕೇಂದ್ರಗಳು** : ಹೆಚ್ಚು ಜನ ಸಂಖ್ಯೆಗಳಿರುವ ದೊಡ್ಡ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿರುವರು. ಈ ತಾಲ್ಲೂಕಿನಲ್ಲಿ ಎರಡು ಸಮುದಾಯ ಆರೋಗ್ಯ ಕೇಂದ್ರ ಮತ್ತು ೬೦ ಹಾಸಿಗೆ ಸೌಲಭ್ಯವನ್ನು ಹೊಂದಿರುತ್ತವೆ. ಇವುಗಳಲ್ಲಿ ತಜ್ಞ-ವೈದ್ಯರ ಸೇವೆಯನ್ನು ಹೊಂದಿ, ವಿವಿಧ ರೀತಿಯ ಖಾಯಿಲೆಗಳನ್ನು ಗುಣಪಡಿಸುವರು.

**ಜನನ-ಮರಣ** : ೧೮೭೯ ರಲ್ಲಿ ನೋಂದಣಿ ಅಧಿಕೃತವಾಗಿ ಜಾರಿಗೆ ಬಂದಿತು. ಮೊದಲು ಹಳ್ಳಿಗಳಲ್ಲಿ ಹುಟ್ಟಿದ ಮಗುವಿನ ಹೆಸರನ್ನು ಗೌಡರಲ್ಲಿ ಬರೆಸುತ್ತಿದ್ದರು, ಈಗ ಗ್ರಾಮ ಪಂಚಾಯಿತಿಯಲ್ಲಿ ಬರೆಸುವರು. ಹರಪನಹಳ್ಳಿ ಪಟ್ಟಣದಲ್ಲಿ ಪುರಸಭೆ ಕಾರ್ಯಾಲಯದಲ್ಲಿ ಬರೆಸುವರು. ಈಗ ಗ್ರಾಮ ಲೆಕ್ಕಿಗರು ಈ ಕಾರ್ಯ ನಿರ್ವಹಿಸುವರು. ಈಗ ಕಡ್ಡಾಯವಾಗಿ ಮಕ್ಕಳ ಜನನದ ದಿನವೇ ದಾಖಲಿಸುವ ವ್ಯವಸ್ಥೆ ಆಗಿದೆ. ಈ ಕಾರಣದಿಂದ ಹುಟ್ಟಿದ ಮಕ್ಕಳ ಮತ್ತು ನಿಧನರಾದವರ ಜನನ ಮರಣ ರಿಜಿಸ್ಟರ್‌ಗಳನ್ನು ಪುರಸಭೆಯವರು ನಿರ್ವಹಿಸುವರು.

**ಪ್ಲೇಗ್**: ಔಷದೋಪಚಾರವಿಲ್ಲದೆ, ಕಲುಷಿತ ನೀರು ಬಳಕೆಯಿಂದ ಸಾಂಕ್ರಾಮಿಕ ರೋಗಗಳು ಹರಡುವುವು, ಕ್ಷಾಮ, ಅತಿವೃಷ್ಟಿ, ಅಶುದ್ಧ ಆಹಾರ ಸೇವನೆ ಇತ್ಯಾದಿಗಳಿಂದ ಪ್ಲೇಗು, ಕಾಲರಾ ಮುಂತಾದ ರೋಗಗಳು ಹರಡುತ್ತಿದ್ದವು. ೧೯ನೇಯ ಶತಮಾನದಲ್ಲಿ ಪ್ಲೇಗು ಬೇನೆಯಿಂದ ಹರಪನಹಳ್ಳಿಯಿಂದ ಜನರು ಹೊರ ಹೋಗುತ್ತಿದ್ದರು. ಆಗ ಇಜಾರಿ ವಸುಪಾಲಪ್ಪ ಮದರಾಸಿನಿಂದ ವೈದ್ಯರನ್ನು ಕರೆಯಿಸಿ ಬಡವರಿಗೆ ಉಚಿತ ಔಷದೋಪಚಾರ ಮಾಡಿದರೆಂದು ಹಿರಿಯರು ಹೇಳುವರು. ಈಗ ಔಷಧಿ, ಶುದ್ಧ ನೀರು, ಶುದ್ಧ ಆಹಾರಗಳಿಂದ ಮರಣ ಸಂಖ್ಯೆ ಕಡಿಮೆಯಾಗಿದೆ.

**ಮಲೇರಿಯಾ**: ಮಲೇರಿಯಾ ರೋಗವು ಸಾಮಾನ್ಯವಾಗಿ ನೀರು ನಿಲ್ಲುವ ಪ್ರದೇಶಗಳಲ್ಲಿ ಮಲೆ ನಾಡಿನಲ್ಲಿ ಹರಡುತ್ತದೆ. ಅನಾಫೆಲಿಸ್ ಎಂದು ಕರೆಯುವ ಹೆಣ್ಣು ಸೊಳ್ಳೆಯು ರೋಗ ಹರಡುತ್ತದೆ. ಡಿ.ಡಿ.ಟಿ. ಮೆಲಾಥಿಯನ್ ಮತ್ತು ಫೈರಿಧ್ರಮ್ ಮತ್ತು ಚೆಲುವೆ ಪುಡಿಗಳನ್ನು ಉಪಯೋಗಿಸುವರು. ೧೯೫೩ ರಲ್ಲಿ ಸರಕಾರ ಮಲೇರಿಯಾ ನಿಯಂತ್ರಣವನ್ನು ಆರಂಭಿಸಿ ಸಾರ್ವತ್ರಿಕ ಚುಚ್ಚುಮದ್ದು ಮುಂತಾದ ಕ್ರಮಗಳಿಂದ

ಅದನ್ನು ಹತೋಟಿಗೆ ತಂದರು. ರಕ್ತ ಪರೀಕ್ಷಿಸಿ ರೋಗವನ್ನು ಗುರುತಿಸಿ ರೋಗಿಗಳಿಗೆ ಶುಶ್ರೂಷೆ ನೀಡಿದರು. ಆಗ ಅದರ ಉಪದ್ರವ ಕಡಿಮೆಯಾಯಿತು.

**ಕಾಲರಾ** : ಒಣಭೂಮಿ, ಹೆಚ್ಚು ಬಿಸಿಲಿರುವ ಪರಿಸರ, ನೊಣಗಳ ಹಾವಳಿ, ಜಾತ್ರೆ, ಹಬ್ಬ, ಉತ್ಸವಗಳ ಸಂದರ್ಭಗಳಲ್ಲಿ ಇದರ ಪ್ರಭಾವವಿರುತ್ತದೆ. ಬಹಳ ಹಿಂದಿನ ಕಾಲದಿಂದಲೂ ಕಾಡುತ್ತಿರುವ ರೋಗವಾಗಿದ್ದು, ಇದರ ಪ್ರಭಾವ ಹಿಂದಿನಷ್ಟಿಲ್ಲ. ರೋಗ ನಿರೋಧಕ ಮದ್ದಿನಿಂದ ರೋಗ ನಿಯಂತ್ರಣ ಮಾಡಬಹುದಾಗಿದೆ.

**ಕುಷ್ಠರೋಗ** : ದೇಶದ ಹಲವು ರೋಗಗಳ ಸಾಲಿನಲ್ಲಿ ಕುಷ್ಠರೋಗವೂ ಒಂದು. ೧೯೫೫ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಹಾಗೂ ನಿರ್ಮೂಲನಾ ಕಾರ್ಯಕ್ರಮದ ಅಡಿಯಲ್ಲಿ ರೋಗಿಗಳನ್ನು ಗುರುತಿಸುವುದು, ಚಿಕಿತ್ಸೆ ನೀಡುವುದು, ಅರಿವು ಮೂಡಿಸುವುದು ಮುಂತಾದ ಕಾರ್ಯಕ್ರಮಗಳು ನಡೆದವು.

ಇದನ್ನು ನಿರ್ಮೂಲನಗೊಳಿಸಲು ೧೯೫೫ ರಲ್ಲಿ ವ್ಯಾಪಕ ಕಾರ್ಯಕ್ರಮ ಹಮ್ಮಿಕೊಂಡರು, ಹಲುವಾಗಿಲಲ್ಲಿ ೫೦ ವರ್ಷಗಳ ಹಿಂದೆ ಹೆಚ್ಚಾಗಿದ್ದಿತು. ಅವರನ್ನು ಊರ ಹೊರಗೆ ಇರಿಸಿ ಚಿಕಿತ್ಸೆ ಕೊಡಿಸಲಾಯಿತು.

**ಕ್ಷಯ ರೋಗ** : ಕ್ಷಯರೋಗದ ಲಕ್ಷಣಗಳೆಂದರೆ ಸಂಜೆ ವೇಳೆಗೆ ಚಳಿ ಬಂದು ಜ್ವರ ಬರುತ್ತದೆ. ಹಸಿವು ಆಗುವುದಿಲ್ಲ, ಕ್ರಮೇಣ ತೂಕ ಕಡಿಮೆ ಆಗುತ್ತದೆ. ಸತತ ಒಂದು ವಾರಕ್ಕಿಂದ ಹೆಚ್ಚುಕಾಲ ಕೆಮ್ಮಿರುತ್ತದೆ. ಕೆಮ್ಮಿದಾಗ ಕಫದಲ್ಲಿ ರಕ್ತ ಕಾಣಿಸಿಕೊಳ್ಳುತ್ತದೆ. ರೋಗವನ್ನು ಗುರುತಿಸಿ ಬಿ.ಸಿ.ಜಿ. ಚುಚ್ಚುಮದ್ದು ನೀಡುವ ಕ್ರಮವನ್ನು ಜರುಗಿಸಲಾಗುತ್ತದೆ.

೧೯೫೨ ರಿಂದ ಬಿ.ಸಿ.ಜಿ. ಚುಚ್ಚು ಮದ್ದು ನೀಡಲು ಪ್ರಾರಂಭಿಸಿದರು. ಕ್ಷಯ ರೋಗಿಗಳನ್ನು ಪತ್ತೆ ಹಚ್ಚಿ, ಅವರಿಗೆ ಚುಚ್ಚು ಮದ್ದು ಹಾಕಿಸಿದರು. ಹರಪನಹಳ್ಳಿ ತಾಲ್ಲೂಕಿನಲ್ಲಿ ಈ ರೋಗಿಗಳನ್ನು ಆಸ್ಪತ್ರೆಗೆ ಕಳಿಸಿ ಚಿಕಿತ್ಸೆ ಕೊಡಲಾಯಿತು.

ಮೇಲೆ ವಿವರಿಸಿರುವ ರೋಗಗಳ ಜೊತೆಯಲ್ಲಿ ಮನುಷ್ಯನ ಜೀವನ ಶೈಲಿಯಲ್ಲಾದ ಬದಲಾವಣೆಗಳಿಂದ ಬಹಳಷ್ಟು ರೋಗಗಳು ಆವರಿಸಿಕೊಂಡಿವೆ. ಮಧುಮೇಹ ಇತ್ತೀಚಿಗೆ ಕಾಡುತ್ತಿರುವ ಪ್ರಮುಖ ರೋಗಗಳಲ್ಲಿ ಒಂದು. ಮಧುಮೇಹದ ಜೊತೆಯಲ್ಲಿ ಅಕ್ಕತಂಗಿ ಎನ್ನುವಂತೆ ರಕ್ತದ ಒತ್ತಡ(ಬಿ.ಪಿ) ಕಾಣಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿಬಿಟ್ಟಿದೆ. ಹೃದಯರೋಗವಂತೂ ಬಹಳಷ್ಟು ಜನರನ್ನು ವೈದ್ಯರತ್ತ ತೆರಳುವಂತೆ ಮಾಡುತ್ತಿದೆ.

ಹೆಚ್-೧,ಎನ್-೧ ಕಾಯಿಲೆಯೂ ಸಹ ಜನಸಾಮಾನ್ಯರಲ್ಲಿ ಆತಂಕ ಮೂಡಿಸುತ್ತಿದೆ. ಆಂಥ್ರಾಕ್ಸ್(ಪ್ರಾಣಿಗಳಿಂದ ಬರುವ ಕಾಯಿಲೆ) ರೋಗ ಹಿಂದೆ ಕಾಣಿಸಿಕೊಂಡಿದ್ದು, ರೋಗವು ಗಾಳಿಯಲ್ಲಿ ಪ್ರಸಾರವಾಗುತ್ತದೆಂದು ಜನರನ್ನು ಭೀತಿಗೊಳಿಸಿತ್ತು. ಮೂಳೆಗೆ ಸಂಬಂಧಿಸಿದ ಮಂಡಿನೋವು, ಮುಂತಾದವೂ ಸಾಮಾನ್ಯ ಖಾಯಿಲೆಗಳಾಗಿವೆ. ಸರ್ಕಾರ 'ಯಶಸ್ವಿನಿ' ಯೋಜನೆ ಹಾಕಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಮುಂತಾದ ರೋಗಗಳಿಗೆ ನೆರವು ನೀಡುತ್ತಿದೆ. ಮುಂದಾಲೋಚನೆಯಿರುವ ನಾಗರಿಕರು ವಿವಿಧ ರೀತಿಯ ಹೆಲ್ತ್ ಸ್ಕೀಂಗಳಲ್ಲಿ ಹಣತೊಡಗಿಸಿ ಚಿಕಿತ್ಸೆ ವೇಳೆ ನೆರವು ಪಡೆಯುತ್ತಿದ್ದಾರೆ. ಇದಕ್ಕೆ ಚುಚ್ಚು ಮದ್ದುಗಳ ಕೇಂದ್ರಗಳನ್ನು ತೆರೆದರು. ಆಗ ಇದು ನಿಯಂತ್ರಣಕ್ಕೆ ಬಂದಿತು.

**ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು**: ಕೆಲವು ಮಹಿಳೆಯರು ಸಂಕೋಚದಿಂದ ಅಥವಾ ಮೂಢನಂಬಿಕೆಯಿಂದ ಅಥವಾ ಅವೈಜ್ಞಾನಿಕದಿಂದ, ನಕಲಿ ವೈದ್ಯರಲ್ಲಿ ಗರ್ಭಪಾತಕ್ಕೆ ಒಳಗಾಗಿ, ತಮ್ಮ ಪ್ರಾಣಕ್ಕೆ ಅಪಾಯ ತಂದುಕೊಳ್ಳುವರು. ಇದನ್ನು ತಪ್ಪಿಸಲು ವೈದ್ಯಕೀಯ ಗರ್ಭಪಾತಕ್ಕೆ ಸರ್ಕಾರ ಕಾನೂನನ್ನು ಜಾರಿಗೆ ತಂದಿದೆ. ಅದರ ಪ್ರಕಾರ ೧೯೭೨ ಏಪ್ರಿಲ್ ಒಂದನೇ ದಿನಾಂಕದಿಂದ ಬೇಡವಾದ ಗರ್ಭವನ್ನು ತಜ್ಞ ವೈದ್ಯರಿಂದ ವೈಜ್ಞಾನಿಕ ವಿಧಾನಗಳಿಂದ ಗರ್ಭಪಾತ ಮಾಡಿಸುವರು.

೧) ಮಗುವಿಗೆ ಅಥವಾ ತಾಯಿಗೆ (ಜೀವಕ್ಕೆ) ಅಪಾಯವಿದ್ದಲ್ಲಿ.

೨) ಹುಟ್ಟುವ ಮಗು ಅಂಗವಿಕಲನಾಗುವ ಸಂದರ್ಭದಲ್ಲಿ

೩) ಅತ್ಯಾಚಾರದಿಂದ ಗರ್ಭ ಧರಿಸಿದ್ದರೆ.

೪) ಗರ್ಭ ನಿರೋಧಕ ವಿಫಲವಾಗಿದ್ದರೆ.

ಈ ಸೌಲಭ್ಯ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಒದಗಿಸಲಾಗಿದೆ. ತಾಲ್ಲೂಕಿನ ಆರೋಗ್ಯ ಕೇಂದ್ರಗಳಲ್ಲಿ ಭಾಗ್ಯಲಕ್ಷ್ಮೀ ಫಲಾನುಭವಿಗಳ ಆರೋಗ್ಯ ತಪಾಸಣೆಯನ್ನು ಮಾಡುವರು.

ರಾಷ್ಟ್ರೀಯ ಮಲೇರಿಯಾ ರೋಗ ನಿರೋಧ ಕಾರ್ಯಕ್ರಮಗಳನ್ನು ಈ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಿರುವರು. ೨೦೧೧-೧೨ನೇ ಸಾಲಿನಲ್ಲಿ ೨,೪೨,೫೯೨ ರೋಗಿಗಳನ್ನು ರಕ್ತ ಪರೀಕ್ಷೆಗೆ ಒಳಪಡಿಸಲಾಗಿದೆ. ಇದರಲ್ಲಿ ಒಂದು ಪ್ರಕರಣ ಪಾಸಿಟಿವ್ ಪತ್ತೆಯಾಗಿದ್ದು, ಚಿಕನ್ ಗುನ್ಯಾ ಪ್ರಕರಣ ೫ ಇಲಿ ಜ್ವರ ೫ ಪ್ರಕರಣಗಳು ಪತ್ತೆಯಾಗಿವೆ. ೨೦೧೫-೧೬ನೇ ಸಾಲಿನಲ್ಲಿ 'ಹೆಚ್‌ಐವಿ + ಮರಣ' ಮಾರ್ಚ್ ಅಂತ್ಯದವರೆಗೆ ೭೭ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ೩೨ ಜನ ಮರಣ ಹೊಂದಿರುವುದು ಕಂಡುಬರುತ್ತದೆ ಹಾಗೂ ಒಟ್ಟು ೭೭ ರೋಗಿಗಳು ಗುಣವಾದ ಅಥವಾ ಚಿಕಿತ್ಸೆ ಪಡೆಯುತ್ತಿರುತ್ತಾರೆ.

## ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ:**

೧)ವ್ಯಾಸೆಕ್ಟಮಿ–೧೭ ರಲ್ಲಿ ಶೇ. ೯ ಪ್ರಗತಿಯನ್ನು ಸಾಧಿಸಿದೆ.

೨) ವಂಕಿ ಅಳವಡಿಸಿದ್ದು ೧೧೫ ರಲ್ಲಿ ಶೇಕಡ ೯೩.೭೦ ಪ್ರಗತಿಯನ್ನು ಸಾಧಿಸಿದೆ.

೩) ನಿರೋಧ್– ೩೧೨ ರಲ್ಲಿ ಶೇ. ೭೮.೪೧ ಪ್ರಗತಿಯನ್ನು ಸಾಧಿಸಿದೆ.

೪) ಲೆಪ್ರೋ ಸ್ಕೋಪಿಕ್ –೮೮ ಪ್ರಕರಣಗಳಿದ್ದು ಶೇ. ೧೦.೯೧ ಪ್ರಗತಿ ಸಾಧಿಸಿದೆ.

**ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮ** : ಈ ಕಾರ್ಯಕ್ರಮ ೧೯೭೨ ರಿಂದ ಎಲ್ಲಾ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರಲಾಗಿದೆ. ಇದರ ಪ್ರಕಾರ ಹರಪನಹಳ್ಳಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಆರೋಗ್ಯ ಸಂಸ್ಥೆಗಳು ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಗಂಟಲುಬೇನೆ, ಧನುರ್ವಾಯ ನಿರೋಧಕ ಲಸಿಕೆಗಳನ್ನು ಹಾಕುವರು. ಉಚಿತ ರೋಗ ತಪಾಸಣೆ ಹಾಗೂ ಚಿಕಿತ್ಸೆಯನ್ನು ಶಾಲಾ ಮಕ್ಕಳಿಗೆ ನೀಡುವರು.

**ನೇತ್ರ ಚಿಕಿತ್ಸೆ** : ೨೦೦೮–೦೯ ರಲ್ಲಿ ಈ ತಾಲ್ಲೂಕಿನಲ್ಲಿ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ೧೫೦೦ ಫಲಾನುಭವಿಗಳಿಗೆ ಉಚಿತ ನೇತ್ರ ಪೊರೆ ಶಸ್ತ್ರ ಚಿಕಿತ್ಸೆಯನ್ನು ಆರೋಗ್ಯ ಇಲಾಖೆಯು ಮಾಡಿದ್ದು. ಅದೇ ರೀತಿ ೨೦೦೮–೦೯ ರ ವರ್ಷದಲ್ಲಿ ೮,೩೫೨ ಶಾಲಾ ಮಕ್ಕಳನ್ನು ಪರೀಕ್ಷಿಸಿ ೮೪ ಮಂದಿಗೆ ಉಚಿತ ಕನ್ನಡಕಗಳನ್ನು ವಿತರಿಸಿರುವರು.

**ಔಷಧಿ ನಿಯಂತ್ರಣ**: ತಾಲ್ಲೂಕಿನಲ್ಲಿಯ ಔಷಧ ಅಂಗಡಿಗಳಿಗೆ ಪರವಾನಗಿ ನೀಡುವ ಹಕ್ಕನ್ನು ಜಿಲ್ಲಾ ಕೇಂದ್ರದಲ್ಲಿರುವ ಉಪ ಔಷಧಿ ನಿಯಂತ್ರಣಾಧಿಕಾರಿಯು ಪಡೆದಿದ್ದು, ೧೯೮೭ ರ ಹೊತ್ತಿಗೆ ತಾಲ್ಲೂಕಿನಲ್ಲಿದ್ದ ಆರು ಔಷಧಿ ಅಂಗಡಿಗಳ ಸಂಖ್ಯೆಯು ೧೯೯೭ ರಲ್ಲಿ ಎಂಟಕ್ಕೂ, ೨೦೦೦ ರಲ್ಲಿ ೧೦ ಕ್ಕೂ ೨೦೧೩ರಲ್ಲಿ ೮೩ಕ್ಕೆ ಏರಿದವು.

ಸುವರ್ಣ ಆರೋಗ್ಯ ಚೈತನ್ಯ ಶಾಲಾ ಆರೋಗ್ಯ ಕಾರ್ಯಕ್ರಮ: ಶಾಲಾ ಆರೋಗ್ಯ ಸೇವೆಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಒಂದು ಚಟುವಟಿಕೆಯಾಗಿದೆ. ಮುಂದಿನ ಪೀಳಿಗೆಯ ರಕ್ಷಣೆಗಾಗಿ ಹಾಗೂ ಅವರ ಆರೋಗ್ಯಕ್ಕಾಗಿ ಇದು ಮಹತ್ವವನ್ನು ಪಡೆದಿದೆ. ಸುವರ್ಣ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ೧ ರಿಂದ ೧೦ನೇ ತರಗತಿಯಲ್ಲಿ ಓದುವ ಸರ್ವ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳಿಗೆ ಸರ್ಕಾರಿ ಅನುದಾನಿತ/ ಅನುದಾನ ರಹಿತ ಮತ್ತು ವಸತಿ ಶಾಲೆಗಳ ಮಕ್ಕಳಿಗೆ ವರ್ಷಕ್ಕೆ ಒಂದು

ಸಲ ಆರೋಗ್ಯ ತಪಾಸಣೆ ಮಾಡುವರು. ತಪಾಸಣೆಯ ಕಾಲಕ್ಕೆ ಕಂಡುಹಿಡಿದ ಕಾಯಿಲೆಗಳಿಗೆ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಔಷಧೋಪಚಾರಗಳನ್ನು ಉಚಿತವಾಗಿ ವಿತರಿಸುವರು. ಕೆಲವು ವಿದ್ಯಾರ್ಥಿಗಳಿಗೆ ವಿಶೇಷ ತಜ್ಞ ವೈದ್ಯರಿಂದ ಉಪಚಾರ ಬೇಕಾಗುವುದು. ಅವರುಗಳಿಗೆ ಎನ್.ಆರ್. ಹೆಚ್.ಎಂ. ಅನುದಾನದಡಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆಗಳನ್ನು ಸಂಪೂರ್ಣ ಉಚಿತವಾಗಿ ಒದಗಿಸುವರು.

ಎನ್.ಆರ್.ಹೆಚ್.ಎಂ. ಅಡಿ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ಕೈಕೊಂಡಾಗ–ಉಚಿತ ರೋಗ ತಪಾಸಣೆ, ಉಚಿತ ಇಂಪ್ಲಾಂಟ್ಸ್, ಉಚಿತ ಶಸ್ತ್ರ ಚಿಕಿತ್ಸೆ ಒದಗಿಸುವುದರೊಂದಿಗೆ ನಂತರ ವಿದ್ಯಾರ್ಥಿ ಹಾಗೂ ಒಬ್ಬ ಪಾಲಕರಿಗೆ ಅವರ ಗ್ರಾಮದಿಂದ ಬಂದು ಹೋಗುವ ನಿಗದಿತ ಬಸ್ ಚಾರ್ಜನ್ನು ರೂ.೧೦೦೦/–ಕ್ಕೆ ಮೀರದಂತೆ ಕೊಡುವರು.

**ಕುಟುಂಬ ಕಲ್ಯಾಣ:** 'ಚಿಕ್ಕ ಕುಟುಂಬ ಚೊಕ್ಕ ಕುಟುಂಬ' ಎಂದು ಹೇಳಲಾಗಿದೆ. ಒಂದು ಅಥವಾ ಎರಡು ಮಕ್ಕಳಿದ್ದರೆ ಅವರಿಗೆ ಒಳ್ಳೇ ಆಹಾರ, ಶಿಕ್ಷಣ, ಆರೋಗ್ಯಗಳನ್ನು ಒದಗಿಸಿ ಕುಟುಂಬವನ್ನು ಹೆಚ್ಚು ಸುಖಿಯನ್ನಾಗಿ ಮಾಡಬಹುದು. ಹೆತ್ತ ತಾಯಿ ಆರೋಗ್ಯವಾಗಿ ಇರಬಹುದು. ಇದಕ್ಕೆ ಕುಟುಂಬ ಕಲ್ಯಾಣವೆಂದು ಕರೆಯುವರು. ೧೯೫೨ ರಿಂದ ಅಧಿಕೃತವಾಗಿ ಪ್ರಾರಂಭಗೊಂಡು ಎರಡನೇಯ ಪಂಚವಾರ್ಷಿಕ ಯೋಜನೆ ಪ್ರಕಾರ ಈ ತಾಲ್ಲೂಕಿನ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕುಟುಂಬ ಕಲ್ಯಾಣ ಕಾರ್ಯವನ್ನು ಪ್ರಾರಂಭಿಸಿದರು. ೧೯೭೮ ರ ಹೊತ್ತಿಗೆ ತಾಲ್ಲೂಕು ಆರೋಗ್ಯ ಕಾರ್ಯಕ್ರಮಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ವಹಿಸಲಾಯಿತು. ಜನಸಂಖ್ಯಾ ಬೆಳವಣಿಗೆಯನ್ನು ಹತೋಟಿಗೆ ತರುವುದು, ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಸ್ತ್ರೀ ಮತ್ತು ಪುರುಷರ ಮನವೊಲಿಸಲು ಸರಕಾರ ಯತ್ನಿಸಿತು. ಇದಕ್ಕಾಗಿ ಕುಟುಂಬ ಕೇಂದ್ರಗಳನ್ನು ಪ್ರಾರಂಭ ಮಾಡಿತು. ೧೯೮೫–೧೯೯೦ ರ ವೇಳೆಗೆ ಶಸ್ತ್ರ ಚಿಕಿತ್ಸೆ ಮಾಡಿಸಿ ತಾಲ್ಲೂಕಿನ ಸಂತಾನ ಹರಣ ಕೇಂದ್ರಗಳಲ್ಲಿ ಹಲುವಾಗಲು, ಅರಸೀಕೆರೆ, ಹರಪನಹಳ್ಳಿ ಕೇಂದ್ರಗಳಿಂದ ೧,೩೫೨ (೨೦೧೫–೧೬ರಲ್ಲಿ) ಸಂತಾನ ಹರಣ ಚಿಕಿತ್ಸೆಯನ್ನು ನೆರವೇರಿಸಿದರು.

**ಮಡಿಲು ಯೋಜನೆ** : ಸಾಂಸ್ಥಿಕ ಹೆರಿಗೆಗಳನ್ನು ಉತ್ತೇಜಿಸುವ ಬಗ್ಗೆ ಹೊಸದಾದ 'ಮಡಿಲು' ಯೋಜನೆಯನ್ನು ೨೦೦೭–೦೮ನೇ ಸಾಲಿನಿಂದ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಿದೆ. ಸದರಿ ಯೋಜನೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಎಲ್ಲಾ ಕುಟುಂಬಗಳಿಗೂ ಒದಗಿಸಲಾಗುವುದು. ೨೦೧೫–೧೬ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು ೨,೦೫೮ ಕಿಟ್‌ಗಳನ್ನು ಫಲಾನುಭವಿಗಳಿಗೆ ನೀಡಲಾಗಿದೆ.

## ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು

**ಜನನಿ ಸುರಕ್ಷಾ ಯೋಜನೆ:** ಆರ್ಥಿಕವಾಗಿ ಹಿಂದುಳಿದ ಎಲ್ಲಾ ಕುಟುಂಬಗಳ ಬಾಣಂತಿಯರ (ಎರಡು ಮಕ್ಕಳಿಗೆ ಮಾತ್ರ) ಸುರಕ್ಷತೆಗಾಗಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆ ಅಡಿಯಲ್ಲಿ ಮನೆಯಲ್ಲಿ ಹೆರಿಗೆಯಾದವರಿಗೆ ರೂ. ೫೦೦/- ಗಳನ್ನು, ಗ್ರಾಮೀಣ ಆಸ್ಪತ್ರೆಗಳಲ್ಲಿ ಹೆರಿಗೆ ಆದವರಿಗೆ ರೂ.೭೦೦/- ಗಳನ್ನು, ನಗರ ಪ್ರದೇಶದ ಆಸ್ಪತ್ರೆಗಳಲ್ಲಿ ಹೆರಿಗೆ ಆದರೆ ರೂ. ೬೦೦/- ಗಳನ್ನು ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಸಿಜರಿಯನ್ ಹೆರಿಗೆ ಆದರೆ ರೂ. ೧೫೦೦/- ಗಳನ್ನು ನೀಡುವರು. ೨೦೦೯-೧೦ ನೇ ಸಾಲಿನಲ್ಲಿ ರೂ. ೧೬೪/- ಲಕ್ಷ ವೆಚ್ಚವಾಗಿದೆ. ೨೦೧೫-೧೬ರಲ್ಲಿ ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ೨,೨೮೮.

### ಜಾನಪದ ವೈದ್ಯ ಮತ್ತು ವೈದ್ಯರು

ಪ್ರಾಚೀನ ಕಾಲದಲ್ಲಿ ಅಲೋಪೆಥಿಕ್ ಔಷಧಿ ಗೊತ್ತಿರಲಿಲ್ಲ. ಚುಚ್ಚು ಮದ್ದು ಪ್ರಯೋಗಿಸುತ್ತಿರಲಿಲ್ಲ. ದೇವರಿಗೆ ಹರಕೆ ಹೊರುತ್ತಿದ್ದರು. ಮೀಸಲು ಕಟ್ಟುವ ಪದ್ಧತಿ ಇದ್ದಿತು. ಕಾಲ ಕಳೆದಂತೆ ಗಿಡಮೂಲಿಕೆಗಿಂತ ಔಷಧಿ ತಯಾರಿಸುವ ವಿಧಾನವು ಬಳಕೆಗೆ ಬಂದಿತು. ಭಾರತ ದೇಶದಲ್ಲಿ ಚರಕ, ಶುಶ್ರಿತ, ವಾಗ್ಭಟರೆಂಬ ಪ್ರಸಿದ್ಧ ವೈದ್ಯರು ಕಾಣಿಸಿಕೊಂಡರು. ಇವರು ರಚಿಸಿದ ಗ್ರಂಥಗಳು ಹೀಗಿರುತ್ತವೆ. ವಾಗ್ಭಟರ ಅಷ್ಟಾಂಗ ಹೃದಯ, ಚರಕ ಸಂಹಿತೆ, ಶುಶ್ರಿತರ ಮಾಧವ ಸೂತ್ರ ವಿಧಾನ ಬಳಕೆಗೆ ಬಂದವು. ಗ್ರಾಮೀಣ ಪ್ರದೇಶದಲ್ಲಿ ಗಿಡ ಮೂಲಿಕೆ ಔಷಧಿಗಳನ್ನು ಉಪಯೋಗಿಸುತ್ತ ಬಂದರು.

೧೮ ನೇಯ ಶತಮಾನದಲ್ಲಿ ಆಂಗ್ಲರು ನಮ್ಮ ದೇಶದಲ್ಲಿ ರಾಜಕೀಯ ಪ್ರಭುತ್ವ ಹೊಂದಿದ ಬಳಿಕ, ಅಲೋಪೆಥಿಕ್ ಔಷಧಿಯನ್ನು ವೈದ್ಯರು ನೀಡಲು ಪ್ರಾರಂಭಿಸಿದರು. ಈಗ (೧) ಆಯುರ್ವೇದ ೨) ಹೋಮಿಯೋಪತಿ ೩) ಅಲೋಪತಿ ಹೀಗೆ ಮೂರು ರೀತಿಯಲ್ಲಿ ಔಷಧಿ ಕೊಡುವರು. ಗ್ರಾಮೀಣ ಪ್ರದೇಶದಲ್ಲಿ ಕೆಲವರು ಈಗಲೂ ಇದ್ದಾರೆ, ಅವರನ್ನು ನಾಟಿ ವೈದ್ಯರು/ಜಾನಪದ ವೈದ್ಯರು ಎಂದು ಕರೆಯುವರು. ಇಂಥ ವೈದ್ಯರಲ್ಲಿ ಈ ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿ ಬಡಮ್ಮನವರ ಕೆಂಚಪ್ಪ ವೈದ್ಯರನ್ನು ಹುಡುಕಿಕೊಂಡು ನಿತ್ಯವೂ ಹಲವಾರು ಜನ ರೋಗಿಗಳು ಬಹುದೂರದಿಂದ ಬಾಗಳಿಗೆ ಆಗಮಿಸುವುದು ಕಂಡುಬರುತ್ತದೆ.

ಅಧ್ಯಾಯ–೧೨

# ಪ್ರೇಕ್ಷಣೀಯ ಸ್ಥಳಗಳು

**ಬಾಗಳಿ** : ಹರಪನಹಳ್ಳಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿರುವ ಗ್ರಾಮ. ಬಾಗಳಿ ಕೋಗಳ ನಾಡಿನ ಪ್ರಾಚೀನವೂ, ಪ್ರಸಿದ್ಧವೂ ಆದ ಗ್ರಾಮವಾಗಿದೆ. ಇದರ ಪರಿಸರವು ಜೈನ ಯತಿಗಳ ಪ್ರಭಾವಕ್ಕೆ ಒಳಗಾಗಿದೆ. ಇಲ್ಲಿ ಜೈನ ಯತಿಗಳು ವಾಸವಾಗಿದ್ದರು. ದಿಗಂಬರ ಪಂಗಡಕ್ಕೆ ಸೇರಿದ ಜೈನ ಯತಿಗಳು ಅವರ ಶಿಷ್ಯರು ಅವರ ಧರ್ಮದ ಪ್ರಕಾರ ತಲೆ ಬೋಳಿಸಿಕೊಳ್ಳುತ್ತಿದ್ದರು. ಬೋಳರ + ಉಳಿ = ಬೋಳ್ಗುಳಿ–ಬಾಳ್ಗುಳಿ ಕೊನೆಗೆ ಬಾಗಳಿ ಎಂದಾಗಿದೆ. ಕ್ರಿ.ಶ. ೧೧೨೬ ರ ಒಂದು ಶಾಸನದಲ್ಲಿ ಕಲ್ಯಾಣ ಚಾಲುಕ್ಯ ತ್ರಿಭುವನ ಮಲ್ಲ ಪಾಂಡ್ಯನ ಆಳ್ವಿಕೆಯಲ್ಲಿ ವಿಷ್ಣುವ್ರಿದ್ಧ ಗೋತ್ರದ ಗುಜ್ಜರ ಶಾಂತಿ ಕಬ್ಬೆಯು, ಬಾಗಳಿಯ ಶಿವಶಕ್ತಿ ಪಂಡಿತರ ಕಾಲನ್ನು ತೊಳೆದು ದೇವರ ನೈವೇದ್ಯ, ಪುರಾಣ, ಓದುಗರಿಗೆ ಮೂವತ್ತು ಕಮ್ಮಿ ತೋಟವನ್ನು ದಾನ ಮಾಡಿದಳು ಎಂದಿದೆ. ಬೇರೆ ಶಾಸನಗಳಲ್ಲಿ ಬಾಗಳಿಯನ್ನು ಹರಿಶ್ಚಂದ್ರ ದತ್ತಿಯ ಅಗ್ರಹಾರ ಮಹಾಗ್ರಾಮ ಎಂದು ಕರೆದಿದೆ. ಇಲ್ಲಿ ಪಿರಿಯ ಕೆರೆ, ಮಾಚಿಸೆಟ್ಟಿಯ ಕೆರೆ, ದಾಸೆಯ ನಾಯಕರ ಕೆರೆಗಳು ಇದ್ದವು. ಆದರೆ, ಈಗ ಕಲ್ಲೇಶ್ವರ ದೇವಾಲಯದ ಬಳಿಯಿರುವ ಒಂದೇ ಕೆರೆ ಕಾಣುತ್ತದೆ. ಕಲ್ಯಾಣ ಚಾಲುಕ್ಯರ ಆರನೇಯ ವಿಕ್ರಮಾದಿತ್ಯನು ಕ್ರಿ.ಶ. ೧೦೧೮ ರಲ್ಲಿ ಕಲ್ಲೇಶ್ವರ ದೇವಾಲಯವನ್ನು ಕಟ್ಟಿಸಿದನು.

ಉಚ್ಚಂಗಿಪಾಂಡ್ಯರಿಗೆ ಈ ಗ್ರಾಮ ಉಪ ರಾಜಧಾನಿಯಾಗಿತ್ತು. ಹರಪನಹಳ್ಳಿ ಪಾಳೆಯಗಾರರಿಗೆ ಮೊದಲ ರಾಜಧಾನಿಯಾಗಿದ್ದಿತು. ಕೊಟ್ಟೂರೇಶ್ವರ ಪುರಾಣದಲ್ಲಿ ಪಾಳೆಯಗಾರರಿಗೆ ಬಾಗಳಿ ಭೂಪರೆಂದು ಕರೆದಿರುವರು. ಬಾಗಳಿಯಲ್ಲಿ ಬಹಳ ದೇವಾಲಯಗಳಿರುವುವು. ಮತ್ತು ೬೫ ಶಾಸನಗಳು ಸಿಕ್ಕಿರುತ್ತವೆ. ಕಲ್ಲೇಶ್ವರ ದೇವರ ದೇವಾಲಯದ ಗರ್ಭಗೃಹ ಮತ್ತು ಸಭಾಂಗಣವನ್ನು ಕಲ್ಯಾಣ ಚಾಲುಕ್ಯರು

ನಿರ್ಮಿಸಿದ್ದರೆ, ಹೊರಗಿನ ಪ್ರಾಂಗಣವನ್ನು ಹೊಯ್ಸಳರು ಕಟ್ಟಿಸಿರುವರು. ಈ ಎರಡೂ ಶೈಲಿಗಳಲ್ಲಿ ಈ ದೇವಾಲಯ ನಿರ್ಮಾಣವಾಗಿರುವುದು. ಗರ್ಭಗೃಹದ ಬಾಗಿಲ ಮೇಲೆ ಮಕರ ತೋರಣವಿದೆ. ಗುಡಿಯು ಕೆರೆಯ ಏರಿಗೆ ಹೊಂದಿಕೊಂಡು ಪೂರ್ವ ದಿಕ್ಕಿಗೆ ಮುಖ ಮಾಡಿದೆ. ಇದು ಕಲಾ ಸೌಂದರ್ಯದಿಂದ ಕಂಗೊಳಿಸಿದರೆ ಪಕ್ಕದ ಕೆರೆಯ ನೀರು ನಿಸರ್ಗ ಸೌಂದರ್ಯದಿಂದ ಕೂಡಿ ಪ್ರವಾಸಿಗರಿಗೆ ಹೆಚ್ಚು ಮುದ ನೀಡುತ್ತದೆ. ಇಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳೆಂದರೆ, ಕಲ್ಲೇಶ್ವರ, ಸೂರ್ಯನಾರಾಯಣ, ಉಗ್ರನರಸಿಂಹ, ಲಕ್ಷ್ಮೀನಾರಾಯಣ, ಕನಕೇಶ್ವರ, ಸಂಗಬಸಪ್ಪ, ಚನ್ನಕೇಶವ, ಇಷ್ಟಲಿಂಗದೇವಾಲಯ, ಮಳೆ ಮಲ್ಲಪ್ಪ, ಬ್ರಹ್ಮ ಜಿನಾಲಯ ಹಾಗೂ ಮೈಲಾರ ಲಿಂಗ.

ಪ್ರಾಚೀನ ಕಾಲದಲ್ಲಿ ಬಾಗಳಿ ಕೋಗಳಿ–೫೦೦ ನಾಡಿನಲ್ಲಿದ್ದು ಗಂಗರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ, ಕಲಚೂರಿಗಳ, ಹೊಯ್ಸಳರ, ಯಾದವರ, ವಿಜಯನಗರದ ಹರಪನಹಳ್ಳಿಯ ಪಾಳೆಯಗಾರರ ಆಳ್ವಿಕೆಗೆ ಒಳಗಾಗಿದ್ದಿತು. ಈಗಿರುವ ಮದ್ದಾನೇಶ್ವರ ಮಠ ಹಿಂದೆ ಹರಪನಹಳ್ಳಿ ಪಾಳೆಯಗಾರರ ಅರಮನೆಯಾಗಿತ್ತು.

**ಉಚ್ಚಂಗಿದುರ್ಗ** : ಈ ಗ್ರಾಮ ಹರಪನಹಳ್ಳಿ ಪಟ್ಟಣದಿಂದ ಸುಮಾರು ೨೬ ಕಿ.ಮೀ. ಅಂತರದ ದಕ್ಷಿಣ ದಿಕ್ಕಿನಲ್ಲಿದೆ. ಹೊಲ ಒಂದರಲ್ಲಿಯ ಕ್ರಿ.ಶ. ೧೦೭೦ ರ ಶಾಸನದ ಪ್ರಕಾರ ನೊಳಂಬ ಪಲ್ಲವ ಪೆರ್ಮಾನಡಿ ದೇವನು ಉಚ್ಚಂಗಿದುರ್ಗದ ಮೇಲಿರುವ ತೈಲೇಶ್ವರ ದೇವರಿಗೆ ಗಂಟನಕೆರೆಯನ್ನು ದತ್ತಿ ನೀಡುವನು. ಆಗ ಇವನ ಸಾಮಂತ ಅರಸ ಉಚ್ಚಂಗಿ ಮೂವತ್ತಕ್ಕೆ ಒಡೆಯನಾಗಿದ್ದನು. ಅವನ ಹೆಸರು ದಾಮಪ್ಪಯ್ಯ (ದೇವಪ್ಪಯ್ಯ ಎಂದೂ ಸಹ ಕರೆದಿದೆ) ಈ ದೇವರಿಗೆ ಇಪ್ಪತ್ತಾರು ಮತ್ತರು ನಿರ್ಮಣ್ಣನ್ನು ದಾನ ನೀಡಿದನು. ಬೇರೆ–ಬೇರೆ ಯುಗಗಳಲ್ಲಿ ಉಚ್ಚಂಗಿದುರ್ಗವು ಯಾವ ಸ್ಥಾನ ಹೊಂದಿತ್ತೆಂಬ ಕಥೆಯನ್ನು ತವಕೇಶ್ವರ ದೇವಾಲಯದ ಬಳಿಯಿರುವ ಒಂದು ಶಾಸನ ತಿಳಿಸುತ್ತದೆ.

೧) ಕೃತಯುಗದಲ್ಲಿ ಮೇಘನಾದ.

೨) ತ್ರೇತಾಯುಗದಲ್ಲಿ ಕನಕಗಿರಿ.

೩) ದ್ವಾಪರಯುಗದಲ್ಲಿ ಉತ್ತುಂಗ ಪರ್ವತ.

೪) ಕಲಿಯುಗದಲ್ಲಿ ಉಚ್ಚಂಗಿ ಪರ್ವತ.

ತವಕೇಶ್ವರ ದೇವಾಲಯದ ಬಳಿಯಿರುವ ಶಾಸನದ ಪ್ರಕಾರ ಕ್ರಿ.ಶ. ೪೮೫–೫೧೮ ರಲ್ಲಿ ಕದಂಬರ ರವಿವರ್ಮನ ಸೋದರ ಶಿವರಥನು ಪ್ರಾಂತ್ಯಾಧಿಕಾರಿಯಾಗಿ ಉಚ್ಚಂಗಿದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನು. ಕ್ರಿ.ಶ.೧೧೩೧

ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗೆದ್ದನಾದರೂ ಅದನ್ನು ಮರಳಿ ಅವನಿಗೆ ಬಿಟ್ಟು ಕೊಟ್ಟನು. ವಿಜಯನಗರ ಆಳ್ವಿಕೆ ಕೊನೆಗೊಂಡಾಗ ಈ ಕೋಟೆ ಚಿತ್ರದುರ್ಗದ ಪಾಳೆಯಗಾರರ ಆಳ್ವಿಕೆಗೆ ಒಳಗಾಯಿತು. ಹರಪನಹಳ್ಳಿಯ ಪಾಳೆಯಗಾರ ದಾದಾ ನಾಯಕನಿಗೆ ಮತ್ತಿ ತಿಮ್ಮಣ್ಣನು ತನ್ನ ಮಗಳಾದ ಹೊನ್ನಾ ನಾಗತಿಯನ್ನು ಕೊಟ್ಟು ವಿವಾಹ ನಡೆಸಿ ವರದಕ್ಷಿಣೆಯಾಗಿ ಈ ಕೋಟೆಯನ್ನು ಕೊಟ್ಟನು. ಹೊನ್ನಾ ನಾಗತಿಯು ಚಿತ್ರದುರ್ಗದ ಕೋಟೆಯನ್ನು ರಾತ್ರಿ ವೀಕ್ಷಿಸುತ್ತಿದ್ದ ವೇಳೆಯಲ್ಲಿ ಗಂಡ ಯಾರೋ ಯೋಧರ ಸಂಗಡ ಬರುವುದನ್ನು ಗಮನಿಸಿ ಹಿಂದಿರುಗುತ್ತಿದ್ದ ವೇಳೆಯಲ್ಲಿ ಕತ್ತಲೆ ಇದ್ದ ಕಾರಣ ಕೋಟೆ ಮೇಲಿನಿಂದ ಕೆಳಗೆ ಉರುಳಿ ನಿಧನಳಾದಳು. ಆ ಸ್ಥಳದಲ್ಲಿ ಮಳೆ ಬಂದಾಗ ಮೇಲಿನಿಂದ ನೀರು ಧುಮುಕುತ್ತದೆ. ಅದಕ್ಕೆ ಅಲ್ಲಿಯ ಜನರು ಹೊನ್ನೇಝುರಿ ಎಂದು ಈಗಲೂ ಕರೆಯುವರು. ಈ ದುರ್ಗ ಉತ್ತರ-ದಕ್ಷಿಣ ದಿಕ್ಕುಗಳಿಗೆ ಹಬ್ಬಿದೆ. ಉಚ್ಚಂಗೆಮ್ಮ ದೇವಿಯ ದರ್ಶನಕ್ಕೆ ಹೋದ ಯಾತ್ರಿಕರು ಪರ್ವತದ ಮೇಲಿನಿಂದ ಕೆಳಕ್ಕೆ ನೋಡುವುದು ಒಂದು ಸಂತಸದ ನೋಟ.

ಇದಕ್ಕೆ ತಳ ಬಂಡೆಯಾಗಿದ್ದು. ಏಳು ಸುತ್ತಿನ ಕೋಟೆ, ಏಳು ಬಾಗಿಲುಗಳುಳ್ಳದ್ದು ಮತ್ತು ಹೆಚ್ಚು ಭದ್ರವಾದದ್ದು. ಉಚ್ಚಂಗಮ್ಮ ದೇವಿಯ ದೇವಾಲಯದ ಸುತ್ತಲೂ ಸುಮಾರು ೫೦-೬೦ ಪೂಜಾರಿಗಳ ಮನೆಗಳಿವೆ. ಅದರ ಕೆಳಗೆ ಕೋಟೆಯಲ್ಲಿ ಸುಮಾರು ೩೦೦ ಮನೆಗಳಿರುತ್ತವೆ. ಕೆಳಗೆ ಸುಮಾರು ಏಳು-ಎಂಟು ನೂರು ಮನೆಗಳಿವೆ. ಹೀಗಾಗಿ ಉಚ್ಚೆಂಗಿದುರ್ಗ ಈ ತಾಲ್ಲೂಕಿನಲ್ಲಿ ಹೆಚ್ಚು ಮನೆಗಳನ್ನು ಹೊಂದಿದೆ. ಕನ್ನಡದ ಪ್ರಸಿದ್ಧ ಕವಿ ಮಹಾಲಿಂಗ ರಂಗ ಎಂಬುವವನು ಹದಿನೇಳನೆಯ ಶತಮಾನದಲ್ಲಿ ಇಲ್ಲಿಯೇ ವಾಸವಿದ್ದನು. ಇವನ ಸಮಾಧಿಯು ದಾವಣಗೆರೆ ರೈಲ್ವೆ ಹಳಿಯ ಪಕ್ಕದಲ್ಲಿದೆ ಎಂದು ದಾವಣಗೆರೆ ಜನ ಹೇಳುವರು. ಇವನು ಅನುಭವಾಮೃತ ಎಂಬ ಗ್ರಂಥವನ್ನು ರಚಿಸಿರುವನು. ಇನ್ನು ಇಲ್ಲಿ ಇನ್ನೊಬ್ಬ ಕವಿ ಕಂಡು ಬರುವನು. ಇವನು ಹಯರತ್ನ ಶ್ರೇಣಿ ಗ್ರಂಥವನ್ನು ರಚಿಸಿರುವನು. ಹರಪನಹಳ್ಳಿಯ ಪಾಳೆಯಗಾರ ಬಾಗುಳಿ ಬಸವಪ್ಪ ನಾಯಕರಲ್ಲಿ ಪುರೋಹಿತ ಕಾರ್ಯ ನೆರವೇರಿಸುತ್ತಿದ್ದನು.

**ಧರೆ ಗಧಿಕ ವುತ್ಯಂಗಿ ಗಿರಿಯಲಿ**
**ಮೆರೆವ ದುರ್ಗಾಂಬಿಕೆಯ ಸಿರಿಪದ**
**ಸರಸಿಜ ಭ್ರಮರಾಯ ಮಾನ ಕವೀಂದ್ರ ಹಿರಿಯಣ್ಣ**
**ವಿರಚಿಸಿದ ಹಯರತ್ನ ಶ್ರೇಣಿಯ**
**ತೋರಿದ** . . . . . . . . . . . . ."

**ಶಾಲಿವಾಹನ ಶಕವು ಸಂದೊಂದು ಸಾವಿರದ**
**ಏಳುನೂರು ವರುಷಕ್ಕೆ ವಿಳಂಬ ಸಂವತ್ಸರದವನ**
**ಮೇಲೆ ಪೆಸರಾಂತ ಮಾಸ ಶುಕ್ಲ ಪಂಚಮಿಯ ಭೃಗವಾರಲೀ ಕ್ಷಿತಿಯೊಳು**

**ಲೀಲೆ ಮಿಗೆ ಹರಪುರವನಾವಲ ಬಾಗುಳಿಯ ಭೂ**
**ಪಾಲಮಣಿ ಬಸವೇಂದ್ರ ನೃಪಾಲ ಪುರೋಹಿತಂ**
**ಪೇಳಿದ ಹಯರತ್ನ ಶ್ರೇಣಿಯೆಂಬ ಬತುರಗ ಲಕ್ಷಣ ನರ್ಥಿಯಿಂದಾ ॥**

ಉಚ್ಚಂಗಿದುರ್ಗದಲ್ಲಿ ೨೦ ಶಾಸನಗಳು ದೊರಕಿವೆ.

**ನೀಲಗುಂದ :**

**ನೀಲಗುಂದ ಕೋಗಳಿ ನಾಡಿನಲ್ಲಿ ಪ್ರಮುಖವಾದ ಅಗ್ರಹಾರ.**
**ನಾಡುಗಳೊಳಗೆಲ್ಲ ಗಾಡಿವೆತ್ತ ಸಮದ ನಾಡಗಳ ರಸನತಿ**
**ಚೆಲ್ವ ಕೋಗಳಿ ನಾಡು ನೋಡಲ್ಕೆ ಸೊಗಯಿಕ್ಕುಂ ।**
**ಆ ನಾಡೆಳೆಸುವುದು ನಾನಾ ವಿದ್ವಜ್ಜನ ಸ್ಥಾನಂ ನೀರ್ಗ್ಗುಂದ**
**ವೆನಿಪಗ್ರಹಾರ ವತ್ಯಾನನ್ದಕಾರಿ ಜಗಕ್ಕೆಲ್ಲಂ ।**
**ಆ ಮಹಾ ಗ್ರಾಮದ ಮಹಾಜನಂಗಳು ಯಮ ನಿಯಮ**
**ಸ್ವಧ್ಯಾಹ ಧ್ಯಾನ ಧಾರಣ ಮೌನಾಗುಷ್ಠಾನಣ ಜಪಸಮಾಧಿ**
**ಶೀಳ ಗುಣ ಸಂಪನ್ನರುಂ ಸುಜನ ಪ್ರಸನ್ನ ರುಂ ॥**

ಶಾಸನದಲ್ಲಿ ನೀಲಗುಂದ ಮತ್ತು ಅಲ್ಲಿಯ ಜನರ ನಡೆ ನುಡಿಗಳ ಬಗೆಗೆ ಹೇಳಿರುವುದನ್ನು ಕಾಣಬಹುದು. ಇನ್ನೊಂದು ಕ್ರಿ.ಶ. ೧೧೨೩ ರ ಶಾಸನದಲ್ಲಿ ಮಹಾಮಂಡಲೇಶ್ವರ ಪಲಿತ ಪಾಂಡ್ಯನು ಬ್ರಾಹ್ಮಣರಿಗೆ ನೀರ್ಗುಂದ ಗ್ರಾಮವನ್ನು ದಾನ ನೀಡುವನು. ಈ ಗ್ರಾಮ ಕೋಗಳಿ ಐನೂರರ ಬಿಕ್ಕಿಗ–೭೦ ರಲ್ಲಿದ್ದಿತು. ರಾಜನು ಬನವಾಸಿಯಲ್ಲಿ ಅಲ್ಪ ಕಾಲ ನೆಲೆಸಿದ್ದ ಅವಧಿಯಲ್ಲಿ ಫಲಿತ ಪಾಂಡ್ಯನ ಮಗರಾಯ ಪಾಂಡ್ಯನ ಕೋರಿಕೆಯಂತೆ ಕೃಷ್ಣ ಪಲ್ಲಿಕವನ್ನು ಬ್ರಾಹ್ಮಣರಿಗೆ ದಾನ ನೀಡುವನು ಎಂದಿದೆ. ಪ್ರಾಚೀನ ಕಾಲದಲ್ಲಿ ನೀಲಗುಂದ ಕೆರೆಗೆ ಅಮೃತ ಸರೋವರವೆಂದು ಶಾಸನದಲ್ಲಿ ಕರೆದಿದೆ. ಇಲ್ಲಿನ ಪ್ರಮುಖ ದೇವಾಲಯಗಳು ಹೀಗಿರುತ್ತವೆ.

